ಬದನವಾಳು ನೂಲುವ ಕೇಂದ್ರ



ಸಂಪಾದಕರು : ಡಿ. ರಂಗಶೆಟ್ಟರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ)
ಪರಿಗ್ರಹಣ ಸಂಖ್ಯೆ:
ACC. No.: 533
ಗಾಂಧೀ ಗ್ರಂಥಾಲಯ, ಬೆಂಗಳೂರು-1

ಬದನವಾಳು ನೂಲುವ ಪ್ರಾಂತ್ಯ

ಸಂಪಾದಕರು :

ಡಿ. ರಂಗಶೆಟ್ಟಿ

ಖಾದಿ ಕಾರ್ಯಕರ್ತರು

ಸಂಕಲನ

ಪ್ರಕಾಶಕರು, ೪೦೮, ೧೬ನೇ ಅಡ್ಡ ರಸ್ತೆ

೪ನೇ ಮುಖ್ಯ ರಸ್ತೆ, ವಿದ್ಯಾರಣ್ಯಪುರಂ, ಮೈಸೂರು-೫೭೦ ೦೦೮

BADANAVALU NULUVA PRANTYA—A book on Badanavalu Spinning Centre, edited by D. Ranga Shetty, 12th Cross, Extension Nanjanagud; published by Sankalana, 408, 4th Main, 16th Cross, Vidyaranyapuram, Mysore-570 008; Pages: 220; Rs. 40—1988.

© ಡಿ. ರಂಗಶೆಟ್ಟಿ

ಬೆಲೆ: ನಲವತ್ತು ರೂಪಾಯಿಗಳು

ಮುಖಚಿತ್ರ: ದಿನೇಶ್

ಮುದ್ರಣ:
ರಮ್ಯ ಉದ್ಯಮ
ಚಾಮುಂಡಿಪುರಂ, ಮೈಸೂರು.

ಬದನವಾಳು ನೂಲುವ ಪ್ರಾಂತ್ಯ

ಹಳೇ ಮೈಸೂರು ರಾಜ್ಯ ಸರ್ಕಾರದ ವತಿಯಿಂದ ನಡೆಸಲ್ಪಟ್ಟ ಖಾದಿ ಕೇಂದ್ರ.
ಮಹಾರಾಜ ಕೃಷ್ಣರಾಜ ಒಡೆಯರ ಅನುಮತಿಯಂತೆ 1927
ನವಂಬರ್ 1ನೇ ತಾರೀಖು ಸ್ಥಾಪಿತವಾಯಿತು.

ಪೂಜ್ಯ ಮಹಾತ್ಮಾ ಗಾಂಧಿಯವರ ಆದೇಶದಂತೆ
ನೂಲುವ ಕೆಲಸ ಕಾರ್ಯಗಳನ್ನು ಬದನವಾಳು ರೈಲ್ವೆ ನಿಲ್ದಾಣದ
ಉತ್ತರ ಭಾಗದಲ್ಲಿ ನಿರ್ಮಿಸಲ್ಪಟ್ಟಿರುವ ಬದನವಾಳು ನೂಲುವ ಪ್ರಾಂತ್ಯದ
ಕಾರ್ಯಾಲಯದಲ್ಲಿ ಪ್ರಾರಂಭಿಸಲಾಯಿತು.

ಪರಿವಿಡಿ

ಮುನ್ನುಡಿ

ಖಾದಿಯ ಇತಿಹಾಸದಲ್ಲಿ ಬದನವಾಳು ಖಾದಿ ಕೇಂದ್ರದ ಸ್ಥಾನ ಗಣನೀಯವೂ ಗಮನಾರ್ಹವೂ ಆದುದಾಗಿದೆ. ಇದು ಸ್ಥಾಪಿತವಾದಾಗ್ಗೆ ಗಾಂಧೀಜಿಯವರ ನೇತೃತ್ವದಲ್ಲಿ ಮುಂದುವರೆದ ನಮ್ಮ ನಾಡಿನ ಸ್ವಾತಂತ್ರ್ಯ ಸಮರ ಮತ್ತು ಪುನರುಜ್ಜೀವನ ಪ್ರಯತ್ನ ನಡೆದುಬಂದು ಕೇವಲ ಆರೇಳು ವರ್ಷಗಳಾಗಿತ್ತು. ಖಾದಿ ಧರಿಸುವುದೇ ಬ್ರಿಟಿಷ್ ಆಳರಸರ ದೃಷ್ಟಿಯಲ್ಲಿ ರಾಜದ್ರೋಹವೆಂದಾಗಿದ್ದ ಕಾಲದಲ್ಲಿ ಮೈಸೂರಿನಂಥ ಆಶ್ರಿತ ಸಂಸ್ಥಾನದಲ್ಲಿ, ಅದರಲ್ಲೂ ಸರಕಾರದ ಆಡಳಿತಕ್ಕೆ ನೇರವಾಗಿ ಸೇರಿದಂತೆಯೇ ಈ ಕೇಂದ್ರ ಏರ್ಪಟ್ಟದ್ದು ವಿಶೇಷ ಸಂಗತಿಯೇ ಸರಿ. ಇದಕ್ಕೆ ಅನುಕೂಲ ಸನ್ನಿವೇಶ ಒದಗಿಸಲು ಹಲವು ಅಂಶಗಳು ಒಟ್ಟುಗೂಡಿದುವು. ಗಾಂಧೀಜಿಯವರು 1927ರ ಬೇಸಗೆಯಲ್ಲಿ ಮೈಸೂರು ಸರಕಾರದ ಅತಿಥಿಯಾಗಿ ಅವರ ಆರೋಗ್ಯ ಸುಧಾರಣೆಗಾಗಿ ನಂದೀ ಬೆಟ್ಟದಲ್ಲೂ ಬೆಂಗಳೂರಿನಲ್ಲೂ ಸುಮಾರು ಮೂರು ತಿಂಗಳು ಕಳೆದರು. ಅವರ ಕಾರ್ಯಪ್ರಣಾಲಿಯಲ್ಲಿ ಬಹುಮುಖ್ಯ ಅಂಶಗಳಲ್ಲಿ ಒಂದಾದ ಖಾದಿ ಪ್ರಚಾರದ ಕಡೆ ಗಮನ ಹರಿದುದು ಸ್ವಾಭಾವಿಕವೇ ಸರಿ. ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರೂ ದಿವಾನರಾಗಿದ್ದ ಮಿರ್ಜಾ ಇಸ್ಮೈಲರೂ ದೇಶಪ್ರೇಮಿಗಳಾಗಿದ್ದರಲ್ಲದೆ ಬ್ರಿಟಿಷ್ ಆಳರಸರೊಡನೆ ಧೈರ್ಯದಿಂದಲೂ ಸ್ವಾಭಿಮಾನದಿಂದಲೂ ವ್ಯವಹರಿಸುವ ಛಾತಿಯುಳ್ಳವರಾಗಿದ್ದರು. ಆಗ ಮೈಸೂರು ಮಂತ್ರಿಮಂಡಲದಲ್ಲಿ ಕೈಗಾರಿಕೆ ಖಾತೆಯ ಮಂತ್ರಿಗಳಾಗಿದ್ದವರು ಶ್ರೀ ಎಂ. ಎನ್. ಕೃಷ್ಣರಾಯರು. ಗಾಂಧೀಜಿಯವರ ಆಪ್ತವರ್ಗಕ್ಕೆ ಸೇರಿದ್ದ ಗಂಗಾಧರರಾವ್ ದೇಶಪಾಂಡೆಯವರೂ ಚಕ್ರವರ್ತಿ ರಾಜಗೋಪಾಲಾಚಾರಿಯವರೂ ಅವರ ಮನೆಗೆ ಬಂದು ಈ ರಾಜ್ಯದಲ್ಲಿ ಖಾದಿ ಉದ್ಯಮ ಸ್ಥಾಪನೆ ಬಗ್ಗೆ ಅವರೊಡನೆ ಅನೌಪಚಾರಿಕವಾಗಿ ಮಾತುಕತೆ ನಡೆಸಿದುದು ನನಗೆ ಚೆನ್ನಾಗಿ ಜ್ಞಾಪಕವಿದೆ. ಆ ಕಾಲಕ್ಕೆ ನಾನು ಅವರ ಕುಟುಂಬದವನಾಗಿ ಅವರ ಮನೆಯಲ್ಲೇ ಇದ್ದೆ. ಬದನವಾಳಿನ ಸಮೀಪದಲ್ಲೇ ತಗಡೂರಿನಲ್ಲಿ ದೇಶಭಕ್ತ ತಗಡೂರು ರಾಮಚಂದ್ರರಾಯರು ಅದಕ್ಕೆ ಮುಂಚೆ ನಾಲ್ಕಾರು ವರ್ಷಗಳಿಂದ ಖಾದೀ ಉದ್ಯಮವೇ ಮುಂತಾದ ಗಾಂಧೀ ಪ್ರಣೀತ ರಚನಾತ್ಮಕ ಚಟುವಟಿಕೆಗಳನ್ನು ಆರಂಭಿಸಿ ಸಾಕಷ್ಟುಮಂದಿ ನಿಷ್ಠಾವಂತರು ಆ ಕ್ಷೇತ್ರದಲ್ಲಿ ತೊಡಗಲು ಕಾರಣರಾಗಿದ್ದರು. ಅವರ ಕಡೆಯಿಂದ ಅನುಭವಿಗಳಾದ ಒಂದೆರಡು ಮಂದಿ ಶ್ರದ್ಧಾಳು ಕಾರ್ಯಕರ್ತರಲ್ಲದೆ ಇನ್ನೂ ಹಲವು ಅಂಥವರೇ ಆದ ಇತರ ಮಂದಿ ಬದನವಾಳು ಕೇಂದ್ರವನ್ನು ಸೇರಿದರು.

ತಗಡೂರು, ಬದನವಾಳು ಮತ್ತು ಇದರ ಆಸುಪಾಸಿನಲ್ಲಿ ಕೈರಾಟೆಯಿಂದ ನೂಲುವ ಪ್ರಥೆ ಜೀವಂತವಾಗಿದ್ದಿತು. ಇನ್ನೊಂದು ಅತಿ ಮುಖ್ಯವಾದ ಅಂಶವೇದರೆ, ಈ ಕೇಂದ್ರದ ನಿರ್ವಹಣೆಗೆ ಮುಖ್ಯಸ್ಥರಾಗಿರಲು ಎಸ್. ವಿ. ರಾಜಾರಾಮ್ಯೆಂಗಾರ್ ಅವರು ಬಂದದ್ದು ಮತ್ತು ಪ್ರಾರಂಭದ ಕೆಲವು ತಿಂಗಳು ಉತ್ತರ ಕರ್ನಾಟಕದ ಖಾದಿ ಕ್ಷೇತ್ರದ ಹಿರಿಯರಾದ ಸಿದ್ಧೂ ಪೂಜಾರಿಯವರು ಮಾರ್ಗದರ್ಶನಕ್ಕಾಗಿ ಬಂದು ಜೊತೆಗಿದ್ದುದು. ಈ ಎಲ್ಲ ಅಂಶಗಳೂ ಒಟ್ಟುಗೂಡಿ ಬದನವಾಳು ಕೇಂದ್ರ ಹುಟ್ಟಿ ಯಶಸ್ವಿಯಾಗಿ ಬೆಳೆಯಲು ಅನುಕೂಲ ಸನ್ನಿವೇಶವನ್ನು ಕಲ್ಪಿಸಿದುವು.

ಶ್ರೀ ರಾಜಾರಾಮ್ಯೆಂಗಾರ್ ಅವರನ್ನು ನನ್ನ ಚಿಕ್ಕವಯಸ್ಸಿನಿಂದ ನನ್ನ ಆಪ್ತ ಮಿತ್ರರಾಗಿ ಪಡೆದು ಬಂದುದು ನನ್ನ ದೊಡ್ಡ ಭಾಗ್ಯ. ನಾವು ಕಾಲೇಜಿನಲ್ಲಿ ಓದುತ್ತಿರುವಾಗಲೇ ಅವರ ಜನಸೇವಾ ಮನೋವೃತ್ತಿ ಕಾರ್ಯರೂಪಕ್ಕೆ ಇಳಿದಿದ್ದಿತು. ವಿದ್ಯಾರ್ಥಿ ಸೇವಾ ಸಂಘವೆಂಬ ಸಂಸ್ಥೆ ರೂಪುಗೊಂಡು ಅದಕ್ಕೆ ಅವರು ಕಾರ್ಯದರ್ಶಿಗಳಾಗಿ ದೀನದಲಿತರ ಸೇವಾಕಾರ್ಯದಲ್ಲಿ ತೊಡಗಿದರು. ನಮ್ಮ ಸಂಸ್ಥೆಗೆ ಮಾರ್ಗದರ್ಶಕರು ಪ್ರಾತಃಸ್ಮರಣೀಯರಾದ ದಿ॥ ಕೆ. ಶಂಕರನಾರಾಯಣರಾಯರು. ಆಗ ಅವರು ಸರಕಾರದ ವಕೀಲರಾಗಿದ್ದು ಆ ಮೇಲೆ ಚೀಫ್ ಕೋರ್ಟಿನ ನ್ಯಾಯಾಧೀಶರಾಗಿದ್ದರು. ಗಾಂಧೀಜಿಯವರು ನಂದಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ಅಲ್ಲಿನ ವ್ಯವಸ್ಥೆಯೆಲ್ಲವನ್ನು ನೋಡಿಕೊಳ್ಳುತ್ತಿದ್ದವರು ನಮ್ಮ ರಾಜಾರಾಮ್ ಅವರು. ನಾನೂ ನನ್ನ ಹಿರಿಯ ಮಿತ್ರರೂ ಗುರುಗಳೂ ಆದ ದಿ॥ ಕೋ. ಸಂಪದ್ಗಿರಿರಾಯರೂ ಆ ಅವಧಿಯಲ್ಲಿ ನಂದಿಗೆ ಹಲವಾರು ಬಾರಿ ಹೋಗಿ ಬಂದೆವು. ನಾವುಗಳೆಲ್ಲಾ ಅಲ್ಲಿಯೂ ತದನಂತರ ಗಾಂಧೀಜಿಯವರು ಬೆಂಗಳೂರಿನಲ್ಲಿ ಕುಮಾರಾ ಪಾರ್ಕ್ ಭವನದಲ್ಲಿ ತಂಗಿದ್ದಾಗಲೂ ಗಾಂಧೀ ಬಿಡಾರದಲ್ಲಿ ಹಲವಾರು ಮಂದಿ ಸೇವಾದಲದ ಯುವಕರೊಂದಿಗೆ ಸೇವಾಕಾರ್ಯದಲ್ಲಿ ತೊಡಗಿರುತ್ತಿದ್ದೆವು. ರಾಜಾರಾಮ್ಯೆಂಗಾರ್ ಅವರು ಎಷ್ಟು ಸಮರ್ಥರಾದ ಮತ್ತು ಶ್ರದ್ಧಾಳುಗಳಾದ ಕೆಲಸಗಾರರಾಗಿದ್ದರೋ ಅಷ್ಟೇ ಮಟ್ಟಿಗೆ ಸರಸಿಗಳಾಗಿಯೂ ಪ್ರೇಮಾದರಗಳಿಂದ ನಡೆದುಕೊಳ್ಳುವವರಾಗಿಯೂ ಇದ್ದರು. ಏನಾದರೂ ವಿವಾದ, ಗೊಂದಲ ಎದ್ದರೆ ಅದನ್ನು ತಮ್ಮ ತಾಳ್ಮೆಯಿಂದ, ಒಲವಿನಿಂದ, ತಿಳಿಹಾಸ್ಯದಿಂದ, ಲೋಕಾನುಭವದ ತಿಳಿವಳಿಕೆಯಿಂದ ಪರಿಹರಿಸುತ್ತಿದ್ದರು. ಅವರ ಈ ಗುಣಗಳೇ ಬದನವಾಳು ಕೇಂದ್ರವನ್ನೂ ಅಲ್ಲಿನ ಕಾರ್ಯಕರ್ತರನ್ನೂ ಒಂದು ಕುಟುಂಬವಾಗಿ ಬೆಸೆಯಿತು. ಅವರೊಡನೆ ಅಲ್ಲಿಗೆ ಬಂದು ಸೇರಿ ಸೇವೆ ಗೈದ ಕಾರ್ಯಕರ್ತರ ಶ್ರದ್ಧೆ ಮತ್ತು ಕಾರ್ಯತತ್ಪರತೆಯೂ ನೆನಪಿನಲ್ಲಿಡತಕ್ಕದ್ದು.

ಈ ಸಂಕ್ಷಿಪ್ತ ಇತಿಹಾಸವನ್ನು ರಚಿಸಿರುವವರು ನನ್ನ ಮಾನ್ಯ ಮಿತ್ರರುಗಳಾದ ಶ್ರೀ ಡಿ. ರಂಗಶೆಟ್ಟರು, ಶ್ರೀ ಜಿ. ಆರ್. ಶ್ರೀನಿವಾಸ್ಯೆಂಗಾರ್ ಹಾಗೂ ಶ್ರೀ ಟಿ. ಕೇಶವ

ಬದನವಾಳು ನೂಲುವ ಕೇಂದ್ರ

ಮೂರ್ತಿ ತಗಡೂರು ಇವರುಗಳು. ಶ್ರೀ ರಂಗಶೆಟ್ಟರು ಬದನವಾಳು ಕೇಂದ್ರದಲ್ಲಿ ಪ್ರಾರಂಭದಿಂದ ಸೇವೆ ಸಲ್ಲಿಸುತ್ತಾ ಬಂದು ಅದರ ಚಟುವಟಿಕೆಗಳನ್ನೂ ಆಗುಹೋಗುಗಳನ್ನೂ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳನ್ನೂ ಅವರ ಕುಟುಂಬಗಳನ್ನೂ ಪ್ರತ್ಯಕ್ಷವಾಗಿ ತಿಳಿದವರು. ಶ್ರೀ ಶ್ರೀನಿವಾಸೈಂಗಾರ್ ಅವರು ಮೊದಲಿನಿಂದಲೂ ಖಾದಿಭಕ್ತರು, ಸರ್ವೋದಯ ದರ್ಶನದಲ್ಲಿ ಶ್ರದ್ಧೆಯುಳ್ಳವರು, ಸುಸಂಸ್ಕೃತರು, ಉತ್ತಮ ಬರಹಗಾರರು. ಶ್ರೀ ಟಿ. ಕೇಶವಮೂರ್ತಿಯವರು ವಾರ್ಧಾದ ಗಾಂಧೀ ಆಶ್ರಮದಲ್ಲಿದ್ದು ರಚನಾತ್ಮಕ ಕಾರ್ಯದಲ್ಲಿ ಶ್ರದ್ಧೆಯುಳ್ಳವರೂ ಬದನವಾಳು ಕ್ಷೇತ್ರದಲ್ಲಿ ಕೆಲಸ ಮಾಡಿದವರೂ ಆಗಿದ್ದಾರೆ. ಈ ಇತಿಹಾಸ ರಚನೆಯಲ್ಲಿ ಮೂರು ಜನರ ಸೇರ್ಪಡೆ ಉಚಿತವಾಗಿಯೇ ಇದೆ.

ಈ ಪ್ರಸಂಗದಲ್ಲಿ ಬದನವಾಳು ಕೇಂದ್ರದ ಉಗಮ, ಪ್ರವೃದ್ಧಿ, ಅದರ ಆಗುಹೋಗುಗಳು, ಅಷ್ಟೇ ಅಲ್ಲದೆ ಅದಕ್ಕೆ ಸಂಬಂಧಪಟ್ಟ ವ್ಯಕ್ತಿಗಳ, ಅವರ ಕುಟುಂಬ ಜೀವನದ, ಮಕ್ಕಳು ಮರಿಗಳ ಜೀವಂತ ಚಿತ್ರ ಕಾಣಬರುತ್ತದೆಯಲ್ಲದೆ, ಅಲ್ಲಿಗೆ ಗಣ್ಯ ವ್ಯಕ್ತಿಗಳು ಭೇಟಿಕೊಟ್ಟದ್ದು, ವಿಶೇಷ ಕಾರ್ಯಕ್ರಮಗಳು, ಸ್ಮರಣೀಯ ಘಟನೆಗಳು ನಡೆದದ್ದು, ಕೇಂದ್ರದ ಕಾರ್ಯವ್ಯಾಪ್ತಿ ವಿಸ್ತರಿಸಿ ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಯ ಕೆಲವು ಸ್ಥಳಗಳಿಗೆ ವಿಸ್ತರಿಸಿದುದು, ಇವೆಲ್ಲವೂ ಗೋಚರಕ್ಕೆ ಬರುತ್ತವೆ. ಆಡಳಿತದ ಸಮಸ್ಯೆಗಳು ಮನುಷ್ಯ ಸ್ವಭಾವದ ವೈವಿಧ್ಯದಿಂದ ಒದಗುವ ತೊಡಕುಗಳು, ಸರ್ಕಾರದ ಸಂಬಂಧದಿಂದ ಫಲಿಸುವ ಅನುಕೂಲಕರವಾದ ಮತ್ತು ಅನನುಕೂಲಕರವಾದ ಅಂಶಗಳು ಇವುಗಳ ಸುಳಿಯೂ ಕಾಣಬರುತ್ತದೆ. ಈ ಪುಸ್ತಕದ ಆಕರ್ಷಣೆಯನ್ನು ಹೆಚ್ಚಿಸುವ ಅಂಶವೆಂದರೆ ಈ ಕೇಂದ್ರಕ್ಕೆ ಸಂಬಂಧಪಟ್ಟ ಹಲವಾರು ಕಾರ್ಯಕರ್ತರು ಮತ್ತು ಇತರ ಸಜ್ಜನರು ಬಿತ್ತರಿಸಿರುವ ನೆನಪುಗಳು. ಇವು ಅತ್ಯಂತ ಮನನೀಯವಾಗಿವೆ. ಆ ಕೇಂದ್ರದ ಜೀವಾಳವನ್ನು ಅರಿಯಲು ಅಮೂಲ್ಯ ಸಾಧನಗಳಾಗಿವೆ.

ಇವೆಲ್ಲದರ ಜೊತೆಗೆ ಖಾದಿಯ ಮೂಲದಲ್ಲಿರುವ ತಾತ್ವಿಕಾಂಶಗಳು, ಸರ್ವೋದಯಕ್ಕೆ ಸಂಬಂಧಪಟ್ಟ ವಿಷಯಗಳು, ಇವುಗಳನ್ನು ಕುರಿತ ಶ್ರೇಷ್ಠ ವ್ಯಕ್ತಿಗಳ ಬರವಣಿಗೆಗಳಲ್ಲಿ ಕೆಲವನ್ನು ಉದ್ಧರಿಸಿ ಕೊಡಲಾಗಿದೆ. ಇದರಿಂದ ಈ ಪುಸ್ತಕದ ಉಪಯುಕ್ತತೆ ಹೆಚ್ಚಿದೆ.

ನಮ್ಮ ನಾಡಿನ ಖಾದೀ ಕ್ಷೇತ್ರಕ್ಕೆ ಸಂಬಂಧಪಟ್ಟ ಇತಿಹಾಸ ಸಾಮಗ್ರಿ ತಕ್ಕಮಟ್ಟಿಗೆ ಇದ್ದರೂ ಅದರಲ್ಲಿ ಈ ಕೇಂದ್ರವನ್ನು ಕುರಿತ ವಿಷಯ ಅಲ್ಪಸ್ವಲ್ಪ ಮಾತ್ರ ದೊರಕುತ್ತದೆ. ನಾನು ಮೇಲೆ ತಿಳಿಸಿರುವ ಹಾಗೆ ಈ ಕೇಂದ್ರದ ತಕ್ಕಮಟ್ಟಿನ ಸವಿವರ ಇತಿಹಾಸ ಲಭ್ಯವಾಗುವ ಅಗತ್ಯವಿತ್ತು. ಈ ಕೊರತೆಯನ್ನು ಈ ಪುಸ್ತಕ ಯಶಸ್ವಿಯಾಗಿ ನಿವಾರಿಸುತ್ತದೆ. ಇದಕ್ಕಾಗಿ ನಾವೆಲ್ಲರೂ ಕೃತಜ್ಞರಾಗಿರಬೇಕು.

ಕಟ್ಟಕಡೆಯದಾಗಿ ಒಂದು ಮಾತು : ಖಾದಿಯ ಇತಿಹಾಸದಲ್ಲಿ ಉತ್ತಮ ಸ್ಥಾನವನ್ನು ಗಳಿಸಿ ಹಲವಾರು ವರ್ಷ ಉತ್ತಮವಾಗಿ ನಡೆದು ಬಂದ ಈ ಕೇಂದ್ರದ ಇಂದಿನ ಸ್ಥಿತಿಯು ಚಿಂತಾಜನಕವಾಗಿದೆಯೆಂದು ತಿಳಿದುಬರುತ್ತದೆ. ಅದನ್ನು ಪುನಃ ಉಚ್ಛ್ರಾಯ ಸ್ಥಿತಿಗೆ ತರುವುದು ನಾಡಿನ ಜನರೆಲ್ಲರ ಹೊಣೆ. ಇದು ಶೀಘ್ರದಲ್ಲಿ ನೆರವೇರಲೆಂದು ಮನಸಾರ ಹಾರೈಸುತ್ತೇನೆ.

ನಿಟ್ಟೂರು ಶ್ರೀನಿವಾಸ ರಾವ್

* ಮಾನ್ಯ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಕರ್ನಾಟಕ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು ಹಾಗೂ ಕರ್ನಾಟಕ ರಾಜ್ಯದ ಗೌರ್ನರ್‌ರವರಾಗಿ ನಿವೃತ್ತರಾದವರು.

ಸಂಪಾದಕರ ಮಾತು

ಪೂಜ್ಯ ಮಹಾತ್ಮಾ ಗಾಂಧಿಯವರಿಂದ ವಿಧಾಯಕ ಕಾರ್ಯಕ್ರಮದಲ್ಲಿ ಪ್ರಮುಖ ವಾದ ಅಂಗ ಖಾದಿ ಉದ್ದಿಮೆ. ಇದು ಕೋಟ್ಯಾಂತರ ಬಡಜನರಿಗೆ ಉದ್ಯೋಗಾವ ಕಾಶ ಒದಗಿಸುವ ಏಕಮಾತ್ರ ಸ್ಥಾನ. ಸ್ವಾತಂತ್ರ್ಯ ಸಂಗ್ರಾಮದ ಒಂದು ಮುಖ್ಯ ಅಸ್ತ್ರ ಎಂದು ಸಹ ಗಾಂಧಿಯವರ ಖಚಿತ ಅಭಿಪ್ರಾಯವಾಗಿತ್ತು. ಅಖಿಲ ಭಾರತ ಕಾಂಗ್ರೆಸ್ಸು ಕೂಡ ಇವರ ಕಾರ್ಯಕ್ರಮವನ್ನು ಒಪ್ಪಿಕೊಂಡಿತ್ತು. ಅಲ್ಲದೆ ಪಕ್ಷದ ಧ್ವಜದಲ್ಲಿ ಚರಕದ ಅಂಕಿತವನ್ನು ಅಳವಡಿಸಿಕೊಂಡಿತು. ಬ್ರಿಟಿಷ್ ಆಳರಸರ ವಕ್ರದೃಷ್ಟಿಯನ್ನೆದುರಿಸಿ ದೇಶೀಯ ಸಂಸ್ಥಾನಗಳನ್ನುಳಿದು ಉಳಿದ ಪ್ರದೇಶಗಳಲ್ಲಿ ಈ ಕಾರ್ಯವು ಆಳರಸರ ಪ್ರತಿಭಟನೆಯನ್ನು ಲೆಕ್ಕಿಸದೆ ಮುಂದುವರಿಯುತ್ತಿತ್ತು. ಉತ್ತರ ಕರ್ನಾಟಕದಲ್ಲಿ ಶ್ರೀ ದೇ. ಭ. ಗಂಗಾಧರರಾಯರು, ಶ್ರೀ ಪುಂಡಲೀಕಜಿ, ಹಣಮಂತರಾವ್ ಕೌಜಲಗಿ ಇವರ ಮುಂದಾಳ್ತನದಲ್ಲಿ ಈ ಉದ್ದಿಮೆ ಸ್ಥಾಪಿತವಾಗಿ ಮುನ್ನಡೆದಿತ್ತು.


ದೇಶೀಯ ಸಂಸ್ಥಾನಗಳಲ್ಲಿ ಮಾತ್ರ ಯಾವ ರಾಜ್ಯವೂ ಬ್ರಿಟಿಷರ ಭೀತಿಯಿಂದ ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲು ಹಿಂಜರಿಯುತ್ತಿದ್ದವು. ಇಡೀ ಹಿಂದುಸ್ಥಾನ ದಲ್ಲಿ ಆಗಿನ ಮೈಸೂರು ಸರ್ಕಾರವೇ ಮುಂದೆ ಬಂದು ಈ ಕಾರ್ಯಕ್ರಮವನ್ನು ಕೈಗೆತ್ತಿ ಕೊಂಡು ಮುಂದುವರಿಸಿದ್ದು ಒಂದು ಸಾಹಸದ ಕೆಲಸವೇ ಸರಿ. 1927ರಲ್ಲಿ ಬದನವಾಳದಲ್ಲಿ ನೂಲುವ ಪ್ರಾಂತ್ಯ ಎಂಬ ಹೆಸರಿನಿಂದ ಸ್ಥಾಪಿತವಾದದ್ದು 1958ರ ವರೆಗೂ ಸರ್ಕಾರದ ಸ್ವಾಮ್ಯದಲ್ಲಿಯೇ ನಡೆದು ಬಂದು ಯಶಸ್ಸುಗಳಿಸಿತು—ಈ ಕಾರ್ಯಕ್ರಮದಲ್ಲಿ ಬಹಳಷ್ಟು ದೇಶಾಭಿಮಾನಿಗಳೂ ಸೇವಾನಿರತರೂ ಆದ ಕಾರ್ಯ ಕರ್ತರೂ ಅವರ ಕುಟುಂಬದವರೂ ಶ್ರೀ ರಾಜಾರಾಮಯ್ಯಂಗಾರ್ರವರೊಂದಿಗೆ ಸಹಯೋಗಿಗಳಾಗಿ ಸೇವಾಭಾವದಿಂದ ಅದರ ಅಭಿವೃದ್ಧಿಗಾಗಿ ದುಡಿದಿದ್ದಾರೆ—ಈ ಐತಿಹಾಸಿಕ ನೆನಪುಗಳು ಈಗಿನ ಪೀಳಿಗೆಯವರಿಗೆ ಚೆನ್ನಾಗಿ ಅರಿವಾಗಲೆಂಬ ಉದ್ದೇಶದಿಂದ ಈ ಹೊತ್ತಿಗೆಯನ್ನು ಹೊರತಂದಿದ್ದೇನೆ. ಉತ್ತರ ಕರ್ನಾಟಕದಲ್ಲಿ ಮಾತ್ರ ಅಲ್ಲಿನ ಕಾರ್ಯಕ್ರಮದ ಬಗ್ಗೆ ವಿವರವಾಗಿ ಬರೆದಿರುವ ಪುಸ್ತಕ 'ಖಾದಿ ಇತಿಹಾಸ' ಎಂದಿದೆ. ಆದರೆ ಅದರಲ್ಲಿ ಮೈಸೂರು ಬಗ್ಗೆ ಒಂದೆರಡು ಮಾತುಗಳು ಮಾತ್ರ ಇದೆ. ಈ ಕೊರತೆ ಯನ್ನು ನಿವಾರಿಸಿ ದೇಶೀ ಸಂಸ್ಥಾನವಾದ ಮೈಸೂರು ಸರ್ಕಾರವೂ ಈ ಕಾರ್ಯವನ್ನು

ಹೇಗೆ ಸಾಧಿಸಿತು. ಇದಕ್ಕಾಗಿ ದುಡಿದವರ ಪೂರ್ವೇತಿಹಾಸ ಲಭ್ಯವಾಗಲೆಂದೂ ಈ ಸಾಹಸಕ್ಕೆ ಕೈಹಾಕಿದೆನು.

ಈ ಕಾರ್ಯದಲ್ಲಿ ನನ್ನ ಸಮಕ್ಕೂ ನಿಂತು ಸಹಕರಿಸಿದ ಶ್ರೀ ಶ್ರೀನಿವಾಸಯ್ಯಂಗಾರ್ ರವರಿಗೂ ಹಾಗೂ ಈ ಪುಸ್ತಕದ ಹಸ್ತಪ್ರತಿಯನ್ನು ಆಮೂಲಾಗ್ರವಾಗಿ ಬರೆದುಕೊಟ್ಟ ಶ್ರೀ ಕೇಶವಮೂರ್ತಿ ಇವರಿಗೂ ಧನ್ಯವಾದವನ್ನು ಅರ್ಪಿಸುತ್ತೇನೆ ಹಾಗೂ ಇದೇ ಕ್ಷೇತ್ರದಲ್ಲಿ ದುಡಿದು ಬದನವಾಳ ಕಾರ್ಯಕ್ಷೇತ್ರದ ಬಗ್ಗೆ ತಮ್ಮ ಸವಿನೆನಪುಗಳನ್ನು ಬರೆದುಕೊಟ್ಟ ಶ್ರೀ ವಿ. ಎನ್. ಶರ್ಮ, ಶ್ರೀ ಜಿ. ವಿ. ಸೀತಾರಾಮಯ್ಯ ಮುಂತಾದ ನಿಷ್ಠಾವಂತ ಕಾರ್ಯಕರ್ತರಿಗೂ ನನ್ನ ಅಭಿನಂದನೆಗಳು ಸಲ್ಲುತ್ತದೆ. ಎಲ್ಲಕ್ಕೂ ಕಳಸ ಪ್ರಾಯವಾಗಿ ಪುಸ್ತಕಕ್ಕೆ ಮುನ್ನುಡಿಯನ್ನು ಬರೆದುಕೊಟ್ಟು ಉಪಕರಿಸಿದ ಶ್ರೀ ನಿಟ್ಟೂರು ಶ್ರೀನಿವಾಸರಾಯರಿಗೆ ವಿಶೇಷ ಕೃತಜ್ಞನಾಗಿದ್ದೇನೆ.

ಈ ಹೊತ್ತಿಗೆಯಲ್ಲಿ ಖಾದಿ ಗ್ರಾಮೋದ್ಯೋಗದ ಬಗ್ಗೆ ನಿಷ್ಠಾವಂತ ಅನ್ಯ ಭಾಷೆಯ ಕೆಲವು ಮಹನೀಯರ ಲೇಖನಗಳ ಮುಖ್ಯಾಂಶಗಳನ್ನು ಆಯ್ದು ಪ್ರಕಟಿಸಲಾಗಿದೆ.

ಡಿ. ರಂಗಶೆಟ್ಟಿ



ಶ್ರೀ ಸಿ. ರಾಜಗೋಪಾಲಾಚಾರ್ಯರು ಬದನವಾಳು ಖಾದೀ ಕೇಂದ್ರ ಸ್ಥಾಪನೆಗಾಗಿ
ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡಿದ ಮಹನೀಯರು ಶ್ರೀ ಗಂಗಾಧರರಾವ್
ದೇಶ ಪಾಂಡೆ ಮತ್ತು ಶ್ರೀ ಹನುಮಂತರಾವ್ ಕೌಜಲಗಿಯವರೂ ಸಹ
ಈ ಕೇಂದ್ರದ ಸ್ಥಾಪನೆಗೆ ಶ್ರಮಿಸಿದವರು



ಬದನವಾಳು ಖಾದೀ ಕೇಂದ್ರದ ಸ್ಥಾಪನೆಗೆ ರಾಜಾಜಿಯವರೊಡನೆ
ಕಾರಣರಾದ ಗಂಗಾಧರ ದೇಶಪಾಂಡೆಯವರು ಬದನವಾಳು ಅಲ್ಲದೆ
ದೇವನೂರು, ಚಿಕ್ಕಕೌಲಂದೆ, ಹಾಗೂ ನೇರಳೆಗೂ ಭೇಟಿ ಕೊಟ್ಟಿದ್ದರು.



ಬದನವಾಳು ಖಾದಿ ಕೇಂದ್ರದ ಸ್ಥಾಪನೆಗೆ ಶ್ರಮಿಸಿದ ಶ್ರೀ ಕೌಜಲಗಿ ಹನುಮಂತರಾಯರು. 6 ತಿಂಗಳಿಗೊಮ್ಮೆ ಬದನವಾಳಿಗೆ ಭೇಟಿ ಕೊಡುತ್ತಿದ್ದರು.



ಮಹಾತ್ಮಾ ಗಾಂಧಿಯವರ ಅಭಿಪ್ರಾಯದಂತೆ ಮೈಸೂರು ರಾಜ್ಯದಲ್ಲಿ
ಬದನವಾಳು ಖಾದಿ ಕೇಂದ್ರದ ಸ್ಥಾಪನೆಗೆ ಕಾರಣಕರ್ತರಾದ
ಶ್ರೀ ಮಹಾರಾಜ ನಾಲ್ಮಡಿ ಕೃಷ್ಣರಾಜ ಒಡೆಯರು. ಖಾದಿ ಪ್ರೇಮಿಗಳಾಗಿದ್ದರು


ಅರಮನೆಯಲ್ಲಿ ಅನೇಕ ಖಾದಿ ರೇಷ್ಮೆ ಮತ್ತು ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. 1935ರಲ್ಲಿ ವಕ್ಕಲಿಗರ ಸಂಘದ ಆವರಣದಲ್ಲಿ ಸರ್ದಾರ್ ವೆಂಕಟರಾಮಯ್ಯನವರು ವಸ್ತು ಪ್ರದರ್ಶನ ಏರ್ಪಡಿಸುತ್ತಿದ್ದರು. ಬದನವಾಳು ನೂಲುವ ಕೆಲಸಗಾರರೂ ಆಂಧ್ರದ ಖಾದಿ ಕೆಲಸಗಾರರೂ ಪಾಲ್ಗೊಂಡಿದ್ದರು,—ದೇಶಪಾಂಡೆ ಗಂಗಾಧರರಾಯರು ಉದ್ಘಾಟಿಸಿದರು, ಸ್ವರಾಜ್ಯ ನಮ್ಮ ಆಜನ್ಮ ಸಿದ್ಧಹಕ್ಕು ಎಂದು ಹೇಳಿದರು, ಖಾದಿ ಅಹಿಂಸಾ ಪ್ರತೀಕ ಹಾಗೂ ಸ್ವಾವಲಂಬನೆ ಸಾಧನೆ ಹಾಗೂ ಸ್ವಾತಂತ್ರಯೋಧರ ಸಮವಸ್ತ್ರ ಎಂತಲೂ ಹೇಳಿದರು.



ಬದನವಾಳು ಖಾದಿ ಕೇಂದ್ರ ಪೋಷಕರಾದ
ಶ್ರೀ ಮಹಾರಾಜಾ ಜಯಚಾಮರಾಜ ಒಡೆಯರವರು, ಇವರು ಬದನವಾಳಕ್ಕೆ
ಭೇಟಿಇತ್ತು, ಕೇಂದ್ರದ ಕೆಲಸಕಾರ್ಯಗಳನ್ನು ವೀಕ್ಷಿಸಿದ್ದರು.
ಮತ್ತು ಪ್ರೋತ್ಸಾಹಿಸಿದ್ದರು.



ಮೈಸೂರು ಸಂಸ್ಥಾನದ ದಿವಾನರಾದ ಸರ್ ಮಿರ್ಜಾ ಅಮಿನ್ ಉಲ್
ಮುಲ್ಕ ಸರ್ ಮಿರ್ಜಾ ಎಂ. ಇಸ್ಮೈಲ್ ಸಾಹೇಬರು. ಇವರು ಬದನವಾಳು
ನೂಲುವ ಪ್ರಾಂತ್ಯಕ್ಕೆ ಭೇಟಿನೀಡಿ ಕೇಂದ್ರದ ಪ್ರಗತಿಯನ್ನು ವೀಕ್ಷಿಸುತ್ತಿದ್ದರು.
ಸೂಕ್ತ ಸಲಹೆ ನೀಡುತ್ತಿದ್ದರು, ಇವರು ಮಹಾತ್ಮರಲ್ಲಿ ಅಪಾರ ಗೌರವವಿತ್ತು
ಬದನವಾಳಕ್ಕೆ ವರ್ಷಕ್ಕೊಮ್ಮೆ ಭೇಟಿಕೊಡುತ್ತಿದ್ದರು.




ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗಡೆಯವರು
ಹಿಂದೆ ಜಿ. ಎಸ್. ಶಾನುಭೋಗ್ ಅವರೊಂದಿಗೆ ಖಾದಿಯನ್ನು
ಮಾರಾಟ ಮಾಡುತ್ತಿದ್ದರು.




ರಾಜಕಾರ್ಯ ಪ್ರಸಕ್ತ ದಿವಾನ್ ಬಹದ್ದೂರ್ ಸರ್ ಎಂ. ಎನ್. ಕೃಷ್ಣರಾಯರು.
ಕೈಗಾರಿಕಾ ಮಂತ್ರಿ ಆಗಿದ್ದ ಇವರು ಬದನವಾಳು ಖಾದಿ ಕೇಂದ್ರದ ಸ್ಥಾಪನೆಗೆ
ಅವಕಾಶ ಕಲ್ಪಿಸಿ ಮಹಾರಾಜರು ದಿವಾನರ ಮಂಜೂರಾತಿಯನ್ನು ಪಡೆದರು.
1-11-1927 ರಂದು ಬದನವಾಳು ನೂಲುವ ಪ್ರಾಂತ್ಯವು ಸ್ಥಾಪನೆಯಾಯಿತು.



ದಿವಾನ್ ಮಾಧವರಾಯರು 1945-47ರ ಬರಗಾಲದ ಪರಿಹಾರ ನಿಧಿಗೆ ಸುಮಾರು 7–8 ಲಕ್ಷ ರೂಪಾಯಿ ಖರ್ಚು ಮಾಡಲು ಅನುಮತಿ ನೀಡಿ ಸ್ವತಃ ಪರಿಸ್ಥಿತಿ ಪರಿಶೀಲಿಸಲು ಆಗಿನ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿದ್ದ ಕೊಂಡಜ್ಜಿ ಬಸಪ್ಪನವರೊಂದಿಗೆ ತುರುವನೂರು ಖಾದೀ ಕೇಂದ್ರಕ್ಕೂ ಭೇಟಿಕೊಟ್ಟರು. ಚಿತ್ರದುರ್ಗದಲ್ಲಿ ಒಂದು ರಿಲೀಫ್ ಕೇಂದ್ರವನ್ನು ಸ್ಥಾಪನೆ ಮಾಡಿ ಸುತ್ತ ಮುತ್ತಲ 50-60 ಹಳ್ಳಿಗಳಿಗೆ 1946ರಿಂದ47 ನವೆಂಬರ್‌ವರೆಗೂ ಚರಕಾ ರಿಲೀಫ್ ಕೇಂದ್ರಗಳನ್ನು ಸ್ಥಾಪಿಸುವಂತೆ ಮಾಡಿ ಬಡನೂಲುವವರಿಗೆ 8-10 ಲಕ್ಷ ರೂಗಳನ್ನು ರಿಲೀಫ್ ಕಂತಿನಿಂದ ಮಂಜೂರು ಮಾಡಿಕೊಟ್ಟಿದ್ದ ದಿವಾನರು.



ಬದನವಾಳು ಮೊದಲ ಮ್ಯಾನೇಜರ್ ರಾಜಾರಾಮಯ್ಯಂಗಾರ್ ಮತ್ತು ಅವರ
ಪತ್ನಿ ಶ್ರೀಮತಿ ಪಂಕಜಮ್ಮನವರು 1927 ರಿಂದ 27 ವರ್ಷಗಳ ಕಾಲ ಆಗಿನ
ಮೈಸೂರು ರಾಜ್ಯದಲ್ಲಿ ಖಾದೀ ಪ್ರಚಾರ ಮಾಡಿದವರು,
ಬದನವಾಳ ನೂಲುವ ಪ್ರಾಂತ್ಯದ ಸಂಸ್ಥಾಪಕರಾಗಿದ್ದು, ವ್ಯವಸ್ಥಾಪಕರೂ
ಆಗಿದ್ದು 27 ವರ್ಷಗಳ ಅವಿರತ ಸೇವೆ ಸಲ್ಲಿಸಿದ
ಶ್ರೀ|| ಎಸ್. ವಿ. ರಾಜಾರಾಮಯ್ಯಂಗಾರ್, ಇವರು ಕುಟುಂಬ ಸಮೇತ
ಗಾಡಿಯಲ್ಲಿ ಎರಡು ವರ್ಷ ಪರ್ಯಂತ ಕೈರಾಟೆಯಿಂದ ನೂಲುವ ಪ್ರಚಾರ
ಕಾರ್ಯವನ್ನು ನಿರ್ವಹಿಸಿದ್ದರು.



ಶ್ರೀಮತಿ ಪಂಕಜಮ್ಮ ರಾಜಾರಾಮಯ್ಯಂಗಾರ್



ಕೂತಿರುವವರು : (ನಂಜನಗೂಡು ಬಣ್ಣದ ಮನೆಯ ಸಂಚಾಲಕ ಮಂಡಳಿ,
ಶ್ರೀಯುತರುಗಳಾದ ದಾಸ್. ವೆಂಕಟಗಿರಿರಾಯರು, ಎಸ್. ವಿ. ರಾಮಸ್ವಾಮಿ ಅವರು
ಹೆಚ್. ಡಿ. ರಂಗಣ್ಣನವರು, ಗೋಪಾಲಯ್ಯನವರು ಮತ್ತು ಅವರ ಶಿಬ್ಬಂದಿ ವರ್ಗದವರು



ಗವರ್ನರ್ ಜನರಲ್ ಶ್ರೀ ರಾಜಾಜಿಯವರು ಬೆಂಗಳೂರಿಗೆ ಭೇಟಿಕೊಟ್ಟಾಗ ಶ್ರೀ ಜಯಚಾಮರಾಜ ಒಡೆಯರ್‌ರವರೂ ಇದ್ದಾರೆ. ಶ್ರೀ [illegible] ರವರನ್ನು ಕರೆಸಿ ಬದನವಾಳ ಕಾರ್ಯ[illegible]ಗಳನ್ನು ವಿಚಾರಿಸಿ ತಿಳಿದುಕೊಂಡ [illegible]



ಮಹಾತ್ಮಾಗಾಂಧಿಯವರು ಬದನವಾಳು ಕೇಂದ್ರದಕಛೇರಿಗೆ ಬೇಟಿಕೊಟ್ಟು.
ಸುತ್ತಲೂ ಸುತ್ತಾಡಿ ವೀಕ್ಷಿಸುತ್ತಿರುವುದು.



ಬದನವಾಳಿನಲ್ಲಿ ಮಹಿಳೆಯರು ನೂಲುತ್ತಿರುವುದನ್ನು ಗಾಂಧೀಜಿಯವರು ನೋಡುತ್ತಿದ್ದಾರೆ



ಮಹಾತ್ಮಗಾಂಧಿಯವರು ಜನವರಿ ಐದು 1934 ರಂದು ಬದನವಾಳು ಕೇಂದ್ರಕ್ಕೆ ಭೇಟಿಕೊಟ್ಟಾಗ ಶ್ರೀ ಪ್ಯಾರೇಲಾಲ್, ಶ್ರೀ ವೆಂಕಟಪನವರು ಸಹ ಇದ್ದಾರೆ. ಶ್ರೀ ರಂಗಶೆಟ್ಟರು ಮಹಾತ್ಮರಿಗೆ ನಿಧಿ ಅರ್ಪಿಸುತ್ತಿದ್ದಾರೆ. ಪ್ಯಾರೇಲಾಲರು ಕುಳಿತ್ತಿದ್ದಾರೆ.



ಬದನವಾಳು ಖಾದೀ ಕೆಲಸಗಾರರ ಜೊತೆಯಲ್ಲಿ ಶ್ರೀ ರಾಜಾರಾಮೈಯ್ಯಂಗಾರರು

ಕುಳಿತಿರುವವರು : 1. ಶ್ರೀ ರಾಮಚಂದ್ರಚಾರ್ಯ 2. ಶ್ರಿ ರಾಜಾರಾಮಯ್ಯಂಗಾರ್ರವರು
3. ಶ್ರೀ ಡಿ. ರಂಗಶೆಟ್ಟರು 4. ಶ್ರೀ ಟಿ. ಆರ್. ಗೋವಿಂದರಾವ್
[redacted]. 5. ಎನ್. ಶಿವಯ್ಯ 6. ಶ್ರೀ ಶಿವಬಸಪ್ಪ
7. ಶ್ರೀ ಎಮ್. ಶ್ರೀಕಂಠಯ್ಯ.

ನಿಂತಿರುವವರು : ಶ್ರೀ ಆರ್. ವಿ. ನರಸಿಂಗರಾವ್ 2. ಶ್ರೀ ಜಾನ್ 3. ಶ್ರೀ ಶಿವಪ್ಪ



ದಿವಂಗತ ವೆಂಕಟಗಿರಿರಾಯರೊಂದಿಗೆ ಶ್ರೀ ರಾಜಾರಾಮಯ್ಯಂಗಾರ್,
ಶರ್ಮ, ರಂಗಶೆಟ್ಟಿ ಇವರು



ಬದನವಾಳು ಕೇಂದ್ರದ ಬೆಳ್ಳಿ ಹಬ್ಬದ
ಮುಖ್ಯಅತಿಥಿ. ಶ್ರೀ ಸತೀಶದಾಸ್ ಗುಪ್ತರು
ಶ್ರೀಮತಿ ಕುಮುದಮ್ಮನವರು ಇವರ
ಜೊತೆ ಇದ್ದಾರೆ.



ಭಾರತದ ಗೌರ್ನರ್ ಜನರಲ್ ಆಗಿದ್ದ ಶ್ರೀ ರಾಜಾಜಿಯವರು ಮೈಸೂರಲ್ಲಿ.
ಖಾದೀ ಗ್ರಾಮೋದ್ಯೋಗದ ಪ್ರದರ್ಶನಕ್ಕೆ ಭೇಟಿಕೊಟ್ಟಾಗ ಶ್ರೀ ಕೆ. ಸಿ. ರೆಡ್ಡಿಯವರು
ಶ್ರೀ ಹೆಚ್. ಸಿ. ದಾಸಪ್ಪನವರು ಮತ್ತು ಮಲ್ಲಾರಾಧ್ಯರನ್ನೂ ನೋಡಬಹುದು.



ಬದನವಾಳು ಖಾದೀ ಕೇಂದ್ರದಲ್ಲಿ ಅಖಿಲ ಭಾರತ ಚರಖಾ ಸಂಘದ ಸೆಕ್ರೆಟರಿ ಶ್ರೀ ಶಂಕರಲಾಲ್ ಬ್ಯಾಂಕರರು ಶಿಕ್ಷಣಾರ್ಥಿಗಳೊಂದಿಗೆ ಮತ್ತು ಕೇಂದ್ರಗಳ ಸಿಬ್ಬಂದಿಯೊಂದಿಗೆ. ಮಧ್ಯದಲ್ಲಿರುವವರೇ ಶ್ರೀ ಶಂಕರ್‌ಲಾಲ್ ಬ್ಯಾಂಕರ್‌ರವರು

ಖಾದಿಯ ವಿಚಾರ ಪ್ರಣಾಲಿ

ಗೊರೂರು ಶ್ರೀನಿವಾಸಯ್ಯಂಗಾರ್
ಶ್ರೀ ಗೊರೂರು ಕೃಷ್ಣಯ್ಯಂಗಾರರ ಮಕ್ಕಳು
ಡಾ॥ ಶ್ರೀ ಗೊರೂರು ರಾಮಸ್ವಾಮಯ್ಯಂಗಾರರ ತಮ್ಮ

ಖಾದಿ ಎಂದರೆ ಏನೆಂಬುದು ಈಗ ಪ್ರತಿಯೊಬ್ಬನಿಗೂ ಚಿರಪರಿಚಿತ. 1920ರ ಮೊದಲು ಯಾರಾದರೂ ಖಾದಿ ತೊಟ್ಟರೆ ಕೊಡೇ ಅರಿವೆ ತೊಟ್ಟ ಹಳ್ಳಿಯ ಕೆಂಚನೆಂದು ಹೀನಾಯವಾಗಿ ಕಾಣುತ್ತಿದ್ದರು. ಅವರಿಗೆ ಸಮಾಜದಲ್ಲಿ ಮನ್ನಣೆಯಿರಲಿಲ್ಲ. ಆದರೆ ಈಚೆಗೆ ಕಾಲ ಬದಲಾಗಿದೆ. ಈಗ ಖಾದಿ ತೊಡುವುದು ಸಭ್ಯತೆಯ ಲಕ್ಷಣ. ಮೊದಲು ಜರಿ ರುಮಾಲು ಮ್ಯಾಂಚೆಸ್ಟರ್ ಧೋತರಗಳಿಗೆ ಇದ್ದ ಮರ್ಯಾದೆ, ಈವತ್ತು ಖಾದಿಗೆ ಇದೆ. ಇದು ಈಗ ಎಲ್ಲ ವರ್ಗಗಳ ಮೈಮೇಲೂ ಇದೆ. ಕೇವಲ ವಸ್ತ್ರವಿದಿಭಾವದಿಂದ ಮಾಡುತ್ತಿದ್ದ ವರ್ಗಭೇಧಗಳು ಈಗ ಅಳಿದಿದೆ. ಪರದೇಶಕ್ಕೆ ಹೋಗುತ್ತಿದ್ದ ಹಣದ ಪ್ರವಾಹ ಕಡಿಮೆಯಾಗಿ ಅರೆಹೊಟ್ಟೆಗಿಲ್ಲದವರ ಬಾಯಲ್ಲಿ ಒಂದು ತುತ್ತು ಅನ್ನ ಹೆಚ್ಚು ಬೀಳುತ್ತಿದೆ.

ಇದು ಈಗಿನ ಖಾದಿಯ ಬಾಹ್ಯ ಸ್ವರೂಪವಾಯಿತು. ಆದರೆ ಖಾದಿ ಎಂದರೆ ಕೇವಲ ಬಟ್ಟೆಯಲ್ಲ, ಅದೊಂದು ವಿಚಾರ. ಅದರ ಹಿಂದೆ ಮಹಾ ವಿಚಾರಗಳಿವೆ. ಅವನ್ನು ತಿಳಿದುಕೊಳ್ಳುವುದು ಅವಶ್ಯ. ಅದರ ಅಂತರ್ಗತ ವಿಚಾರಗಳನ್ನು ಅರಿಯುವುದು ಹೆಚ್ಚು ಮಹತ್ವದ್ದು.

ಖಾದಿಯು ಸ್ವರಾಜ್ಯ ಪ್ರಾಪ್ತಿಗೆ ಬೇಕಾಗುವ ಗುಣಗಳನ್ನು ಆತ್ಮಸಾತ್ ಮಾಡಿಕೊಳ್ಳುವ ಮಾರ್ಗವಾಗಿದೆ. ಈಗ ಜಗತ್ತಿನಲ್ಲಿ ಅರ್ಥಶಾಸ್ತ್ರದ ಹೆಸರಿನಲ್ಲಿ ಅನಾಹುತಗಳು ನಡೆದು ಇದರಿಂದ ಸಕಲರಿಗೂ ಕಾರ್ಯಕಾರಿಯಾದ ಅರ್ಥಶಾಸ್ತ್ರವನ್ನು ರೂಪಿಸುವ ಪ್ರಯತ್ನ ನಡೆದಿದೆ. ಖಾದಿಯು ಸ್ವಾತಂತ್ರ್ಯದ ಅಹಿಂಸೆಯ ಅಶೋಷಣೆಯ ಕುರುಹು ಆಗಿದೆ. ಸ್ವರಾಜ್ಯದ ಸಲುವಾಗಿ ನೂಲಿರಿ. ಅರಿತು ನೂಲಿರಿ, ಅರಿತು ಖಾದಿ ಧರಿಸಿರಿ ಎಂದು ಗಾಂಧೀಜಿ ಹೇಳುವಾಗ ಖಾದಿ ಮುಖಾಂತರ ಸ್ವರಾಜ್ಯದ ಸಲುವಾಗಿ ಬೇಕಾಗುವ ಗುಣಗಳನ್ನು ಆತ್ಮಸಾತ್ ಮಾಡಿಕೊಂಡು ಅವನ್ನು ಕೃತಿಯಲ್ಲಿ ತನ್ನಿರಿ ಎನ್ನುತ್ತಿದ್ದರು. ಗಾಂಧೀಜಿ ಖಾದಿ ಕಡೆಗೆ ತಾತ್ವಿಕ ದೃಷ್ಟಿಯಿಂದ ನೋಡುತ್ತಿದ್ದರು. ಅಹಿಂಸೆ, ಸಾದಾ ಮತ್ತು ಸರಳ ಜೀವನ ಕಾಯಕ, ಎಲ್ಲ ಕಾರ್ಮಿಕಗಳ ಬಗ್ಗೆ ಸಮಭಾವ, ಮಾನವೀ ಜೀವನ ಮೌಲ್ಯ, ಸ್ವದೇಶಿ – ಈ ಏಳು ತತ್ವಗಳ ಮೇಲೆ ಖಾದಿಯು ಅಧಿಷ್ಠಿತವಾಗಿದೆ.

ಅಹಿಂಸೆ :

ಅಹಿಂಸೆಯು ತಮ್ಮ ಜೀವನದ ಜೀವವೆಂದು ಗಾಂಧೀಜಿ ನಂಬಿದ್ದರು. ಅದರಂತೆ ಆಚರಿಸುತ್ತಿದ್ದರು. ಖಾದಿಯು ಅಹಿಂಸೆಯ ಪ್ರತೀಕವೆಂದು ಗಾಂಧೀಜಿ ಹೇಳಿದ್ದಾರೆ. ಕೆಲವು ಧರ್ಮಗಳು ಹೇಳುವಂತೆ ಅವರ ಅಹಿಂಸೆ ಕೇವಲ ವೈಯಕ್ತಿಕ ಮೋಕ್ಷಸಾಧನೆಯಲ್ಲ. ಅದು ಸಕ್ರಿಯ ಸತ್ಕಾರ್ಯ ಕರ್ಮಯೋಗ ಪ್ರಯೋಗವೂ ಆಗಿದೆ. ಇದರಿಂದ ಇತರ ಶಾರೀರಕ ಹಿಂಸೆಯೂ ಇಲ್ಲ. ಯಾವುದೇ ಕೆಟ್ಟ ವಿಚಾರ, ಮಿತಿಮೀರಿದ ಅವಸರ, ಇತರರಿಗೆ ಕೇಡು ಬಗೆಯುವುದು, ಇವುಗಳಿಂದ ಅಹಿಂಸೆಗೆ ಭಂಗ ಬರುತ್ತದೆ. ಪರರಿಗೆ ಬೇಕಾದ್ದನ್ನು ನಾವು ಸ್ವಾರ್ಥಕ್ಕಾಗಿ ಸಂಗ್ರಹಿಸುವುದು ಅಹಿಂಸಾವ್ರತಭಂಗವು. ಅನ್ಯರ ಅರ್ಥ ಶೋಷಣೆ, ಅಧಿಕಾರ ಶೋಷಣೆ, ಶ್ರಮ ಶೋಷಣೆ, ದುಡಿಯುವ ಶಕ್ತಿ ಇರುವವರೆಗೆ ಕಾರ್ಯ ಮಾಡದೆ ಉಣ್ಣುವುದು ಇವೆಲ್ಲಾ ಹಿಂಸೆಯ ಪ್ರಕಾರಗಳೇ.

ಅಹಿಂಸೆ ಎಂದರೆ ಕೇವಲ ಹಿಂಸೆಯಿಂದ ದೂರವಿದ್ದ ಮಾತ್ರಕ್ಕೆ ಅಹಿಂಸೆಯ ಪೂರ್ಣಪಾಲನೆ ಎಂದು ಭಾವಿಸಬಾರದು. ಅಹಿಂಸೆ ಎಂದರೆ ಹಿಂಸೆಮಾಡದಿರುವುದು ಎಂಬುದಷ್ಟೇ ಅಲ್ಲ. ಅದು ಕೇವಲ ನಕಾರಾತ್ಮಕವಲ್ಲ, ಕ್ರಿಯಾತ್ಮಕ. ಅಹಿಂಸೆ ಎಂದರೆ ಸಕಲ ಪ್ರಾಣಿಮಾತ್ರವನ್ನು ಪ್ರೇಮದೃಷ್ಟಿಯಿಂದ ನೋಡುವುದು, ಸರ್ವಭೂತ ಹಿತರಕ್ಷಕನಾಗಲು ಪ್ರಯತ್ನಿಸುವುದು. ನಿರ್ಭಯನಾಗಿ ತನ್ನ ಸುತ್ತಲೂ ಇದ್ದ ಅಸತ್ಯ, ಅನ್ಯಾಯ, ಜುಲುಮುಗಳನ್ನು ದೂರಮಾಡಲಿಕ್ಕೆ ಪ್ರಯತ್ನಿಸುವುದು. ಅಹಿಂಸಾವಾದಿಯು ಅನ್ಯಾಯಗಳನ್ನು ಆಧ್ಯಾತ್ಮಿಕ ಬಲದಿಂದಲೇ ಎದುರಿಸಬಲ್ಲನು.

ಮನುಷ್ಯನಿಂದ ಆತ್ಮಶುದ್ಧಿಮಾಡಿಕೊಳ್ಳುವುದು ಎಷ್ಟು ಸಾಧ್ಯವೋ ಅಷ್ಟು ಆತ್ಮಶುದ್ಧಿಯನ್ನು ಮಾಡಿಕೊಳ್ಳುವುದೇ ಅಹಿಂಸೆಯ ಅರ್ಥ. ಅಹಿಂಸೆಯು ಮನಸ್ಸಿನ ಒಂದು ವೃತ್ತಿ. ಯಾವ ವೃತ್ತಿಯಲ್ಲಿ ಎಲ್ಲಿ ದ್ವೇಷ ಇರುವುದಿಲ್ಲವೋ ಅದೇ ಅಹಿಂಸೆ.

ಗಾಂಧೀಜಿಯವರ ಅಭಿಪ್ರಾಯದಲ್ಲಿ ಅಹಿಂಸೆಯ ಸಾರ ಈ ಕೆಳಗೆ ಕಂಡಂತೆ ಇದೆ.

1) ಅಹಿಂಸೆ ಮಾನವ ಜಾತಿಧರ್ಮ, ಇದು ಪಾಶವೀ ಶಕ್ತಿಗಿಂತ ಶ್ರೇಷ್ಠವಾದದ್ದು.
2) ಅಹಿಂಸೆಯನ್ನು ಪಾಲಿಸುವ ವ್ಯಕ್ತಿ ಅಥವಾ ರಾಷ್ಟ್ರ ತ್ಯಾಗಮಾಡಲು ಸಿದ್ಧವಾಗಿರಬೇಕು. ಇತರ ರಾಷ್ಟ್ರಗಳ ಅಥವಾ ವ್ಯಕ್ತಿಗಳ ಸಂಪತ್ತನ್ನು ಅಪಹರಿಸುವುದು ಇದಕ್ಕೆ ವಿಸಂಗತವಾದುದು.
3) ಅಹಿಂಸಾಪಾಲಕನಿಗೆ ಪ್ರೇಮಮಯಿಯಾದ ದೇವರಲ್ಲಿ ಜೀವಂತ ಶ್ರದ್ಧೆ ಇರಬೇಕು. ಅದೊಂದು ಜೀವನಧರ್ಮವಾಗಬೇಕು. ಈ ಹೊತ್ತು ಜಗತ್ತಿನಲ್ಲಿ ನಡೆಯುತ್ತಿರುವ ಹಿಂಸೆ, ಅಸತ್ಯ, ಅನ್ಯಾಯ, ಶೋಷಣೆ, ಇವನ್ನು ನಿವಾರಿಸಿ ಶೋಷಣರಹಿತ ಸಮಾಜವನ್ನು ಸ್ಥಾಪಿಸುವುದೇ ಸ್ವರಾಜ್ಯ ಸ್ಥಾಪನೆಯ ಗುರಿ. ಅಹಿಂಸಕ ರಾಜ್ಯ, ಶೋಷಣರಹಿತ ಸಮಾಜ, ಗ್ರಾಮರಾಜ್ಯ, ಗ್ರಾಮಸ್ವರಾಜ್ಯ ಇವೆಲ್ಲಾ ಪರ್ಯಾಯ ಪದಗಳು.

ಸಾದಾ ಸರಳ ಜೀವನ

ಖಾದಿಯಲ್ಲಿ ಎರಡನೇ ತತ್ವ ಸಾದಾ ಸರಳ ಜೀವನ. ಅಂದರೆ ಧ್ಯೇಯವು ಜೀವನದಲ್ಲಿ ಉದಾತ್ತವಾಗಿರಬೇಕು. ಆಧುನಿಕ ಪಾಶ್ಚಾತ್ಯ ಜೀವನ ಪದ್ಧತಿಯು ಜೀವನಾವಶ್ಯಕ ವಸ್ತುಗಳನ್ನು ಬೆಳೆಸುವ ಪಾಶವೀಶಕ್ತಿಗೇ ಆದ್ಯತೆ ಕೊಡುವ ಕಡೆಗೆ ಇದೆ. ಇಲ್ಲಿ ಹಣವೇ ದೇವರು, ಐಹಿಕ ಸುಖ ಸಾಧನೆಯೇ ಮುಖ್ಯ.

ಇದರಿಂದ ನಮಗೆ ತಿಳಿಯುವುದೇನೆಂದರೆ. ಸತ್ಯ, ಅಹಿಂಸೆ ಮೊದಲಾದ ಸಾತ್ವಿಕ ಗುಣಗಳು ಭಾರತೀಯರ ಸಂಸ್ಕೃತಿಯ ಮೂಲಾಧಾರ. ಸರ್ವೋದಯ ಸಮಾಜ ಸ್ಥಾಪನೆಗೆ ಈ ಗುಣಗಳ ಪ್ರಾದುರ್ಭಾವ ಅವಶ್ಯಕ. ರಾಟೆಯ ಮೂಲಕ ಅಹಿಂಸಾ ಸಮಾಜ ರಚಿಸುವುದು ಗಾಂಧೀಜಿಯವರ ಉದ್ದೇಶವಾಗಿತ್ತು.

ಖಾದಿಗೆ ಮೊದಲು ಭಾರತದಲ್ಲಿ ಬಟ್ಟೆಯ ಉದ್ಯೋಗ

ಭಾರತದಲ್ಲಿ ಬಟ್ಟೆಯ ಉದ್ಯೋಗ ಪುರಾತನವಾಗಿದ್ದು ವೇದಕಾಲದಿಂದಲೂ ಪ್ರಚಲಿತವಿದೆ ಎಂದು ಹೇಳುತ್ತಾರೆ. ಔಂಧ್ ಸಂಸ್ಥಾನದ ಪಂಡಿತ ಸಾತ್ವೇಳಕರ್‌ರವರು ವೇದದಲ್ಲಿ ಚರಕ ಎಂಬ ಒಂದು ಪುಸ್ತಕ ಬರೆದು ಅದರಲ್ಲಿ ಅವರ ಕೈಯಿಂದ ನೆಯ್ದ ಬಟ್ಟೆಯನ್ನು ಯಾರು ತಯಾರು ಮಾಡುತ್ತಿದ್ದರೆಂಬುದನ್ನು ಸವಿಸ್ತಾರವಾಗಿ ವಿವೇಚಿಸಿದ್ದಾರೆ. ಋಗ್ವೇದ (10-53) ದಲ್ಲಿ ನೂಲಿರಿ, ಈ ನೂತ ನೂಲಿಗೆ ಮೆರಗು ಬಣ್ಣ ಕೊಟ್ಟು ಗಂಟಿಲ್ಲದೆ ಮಾಡಿ. ಚೆನ್ನಾಗಿ ವಿಚಾರಮಾಡಿ. ನಿಮ್ಮ ವಂಶಜರನ್ನು ದೈವೀ ಪ್ರಕಾರದಲ್ಲಿ ನಡೆಸಿ ಎಂದು ಇದೆ. ಇನ್ನೊಂದು ಮಂತ್ರದಲ್ಲಿ ಹೀಗೆ ಹೇಳಿದೆ: ಯಜ್ಞದಲ್ಲಿ 101 ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಯಜ್ಞವು ಅಸಂಖ್ಯ ತಂತುಗಳಿಂದ ಪೃಥ್ವಿಯನ್ನು ಆಚ್ಛಾದಿಸಿದೆ. ರಕ್ಷಕರಾದ ಹಿರಿಯರು ಪ್ರಕೃತಿಯನ್ನು ನೋಡುತ್ತ ಇಲ್ಲಿ ನೇಯಿರಿ, ಇಲ್ಲಿ ನೆಲೆಮಾಡಿರಿ ಎಂದು ಹೇಳುತ್ತಿದ್ದಾರೆ. ಇದರಿಂದ ನಮಗೆ ತಿಳಿಯುತ್ತಿರುವ ಅಂಶವೇನೆಂದರೆ ಪ್ರಾಚೀನ ಕಾಲದಲ್ಲಿ ಸಹ ನೂಲುವುದು ಯಜ್ಞರೂಪವಾಗಿತ್ತು.

ವೈದಿಕಕಾಲದಲ್ಲಿ ತಾಯಂದಿರು ತಮ್ಮ ಮಕ್ಕಳ ಸಲುವಾಗಿ ಪತಿಯ ಸಲುವಾಗಿ ಬಟ್ಟೆಯನ್ನು ನೇಯುತ್ತಿದ್ದರೆಂದು ಮಂತ್ರವಿದೆ. ಅಥರ್ವಣ ವೇದ ಮತ್ತು ವೇದಕಾಲದಲ್ಲಿ ಬಟ್ಟೆಯ ಉದ್ಯೋಗದ ಊರ್ಜಿತಾವಸ್ಥೆಯ ವಿವರಣೆಯಿದೆ. ಆ ಕಾಲದಲ್ಲಿ ಜನರು ಬೇಸಾಯವನ್ನು ಪ್ರಾಮುಖ್ಯವಾಗಿ ಮಾಡುತ್ತಿದ್ದರು. ಹಳ್ಳಿಗಳಲ್ಲಿ ವಾಸ ಮಾಡುತ್ತಾ ನೆಯ್ಗೆ ಕಸುಬು ಮಾಡುತ್ತಾ ತಮ್ಮ ಬಟ್ಟೆಯನ್ನು ತಾವೇ ತಮ್ಮ ನೂತ ನೂಲಿಂದ ನೇಯಿಸಿಕೊಂಡು ತೊಡುತ್ತಿದ್ದರು.

ಬಟ್ಟೆ ಉದ್ಯೋಗದ ಪ್ರಾಚೀನತೆಯ ಕಲ್ಪನೆಯು ರಾಮಾಯಣದ ಕಾಲದಿಂದಲೂ ಪ್ರಚಲಿತವಿದೆ. ರಾಮಾಯಣದ ಕಾಲದಲ್ಲಿ ಜನರು ರೇಶಿಮೆ ಬಟ್ಟೆಯನ್ನು ಉಪಯೋಗಿಸುತ್ತಿದ್ದರು. ಮಹಾಭಾರತದ ಕಾಲದಲ್ಲಿ ತಮಿಳುನಾಡು ನೂಲಿನ ಬಟ್ಟೆಗೆ ಪ್ರಸಿದ್ಧವಾಗಿತ್ತು.

ರಾಜಸೂಯ ಯಜ್ಞದ ಕಾಲಕ್ಕೆ ಚೋಳ ಮತ್ತು ಪಾಂಡ್ಯ ದೇಶದ ರಾಜರು ನೂಲಿನ ನಯವಾದ ಬಟ್ಟೆಗಳನ್ನು ಕಾಣಿಕೆಯಾಗಿ ಕೊಡುತ್ತಿದ್ದರು. ಮೌರ್ಯರ ಕಾಲದಲ್ಲಿ ರಾಜ್ಯ ಕಾರಭಾರವು ಸುವ್ಯವಸ್ಥಿತವಾಗಿ ನಡೆಯಲು ಅನೇಕ ಇಲಾಖೆಗಳನ್ನು ತೆರೆದಿದ್ದರು. ಈ ಪೈಕಿ ನೇಯುವ ಮೇಲ್ವಿಚಾರಣೆಗೆ ಪ್ರತ್ಯೇಕವಾದ ಇಲಾಖೆಯಿತ್ತು. ಈ ಮೇಲ್ವಿಚಾರಕ ನಿಗೆ ಸೂತ್ರಾಧ್ಯಕ್ಷ ಎಂಬ ಹೆಸರಿತ್ತು. ಮನೆಯಿಂದ ಹೊರಗೆ ಹೋಗದಿರುವ ಹೆಂಗಸರು, ಗಂಡಂದಿರು ವಿದೇಶಕ್ಕೆ ಹೋದವರ ಹೆಂಗಸರು, ವಿಧವೆಯರು ಮತ್ತು ಹೆಣ್ಣುಮಕ್ಕಳು ಜೀವನಕ್ಕೆ ದುಡಿಯಬೇಕಾಗಿ ಬಂದಾಗ ಅವರನ್ನು ನೂಲು ತೆಗೆಯುವ ಕೆಲಸಕ್ಕೆ ಹಚ್ಚು ತ್ತಿದ್ದರು. ಇದು ಸೂತ್ರಾಧ್ಯಕ್ಷನ ಕೆಲಸ.

ಔರಂಗಜೇಬನ ಮಗಳು ಏಳು ಮಡಕೆಯ ಢಾಕಾಮಸ್ಲಿನ್ ಬಟ್ಟೆಯನ್ನು ತೊಟ್ಟು ಔರಂಗಜೇಬನ ಮುಂದೆ ಬಂದಾಗ ಔರಂಗಜೇಬನು ಅವಳು ಬಟ್ಟೆಯನ್ನೇ ತೊಟ್ಟಿಲ್ಲ ವೆಂದು ಅವಳು ಬಟ್ಟೆಯನ್ನು ಹಾಕಿಕೊಳ್ಳಬೇಕೆಂದು ಹೇಳಿದಾಗ, ಅವಳು ತಾನು ಢಾಕಾಮಸ್ಲಿನ್ ಬಟ್ಟೆಯನ್ನು ತೊಟ್ಟಿರುವುದಾಗಿ ಹೇಳಿದಳು ಎಂಬ ಕತೆಯು ನಮ್ಮ ದೇಶದ ಕೈನೂಲು ಕೈಮಗ್ಗದ ಬಟ್ಟೆಯ ನವಿರುತನವನ್ನು ತಿಳಿಸುತ್ತದೆ.

ಪರದೇಶದಲ್ಲಿ ಭಾರತದ ಬಟ್ಟೆಯ ಪ್ರಸಾರ ಮತ್ತು ವ್ಯಾಪಾರ

ಅತಿ ಪ್ರಾಚೀನ ಕಾಲದಿಂದ ಹಿಂದುಸ್ತಾನದ ಕೈನೂಲಿನ ನೇಯ್ದ ಮಲ್‌ಮಲ್ ಮತ್ತು ಬೇರೆ ಬೇರೆ ಪ್ರಕಾರದ ನೂಲಿನ ಬಟ್ಟೆಗಳು ಭೂಮಾರ್ಗ ಮತ್ತು ಜಲಮಾರ್ಗ ದಿಂದ ಏಷ್ಯಾಖಂಡದ ಪಶ್ಚಿಮ ಭಾಗ, ಸಿರಿಯಾ, ಬೇಬಿಲೋನ್, ಇರಾನ್, ಈಜಿಪ್ಟ್ ಮುಂತಾದ ದೇಶಗಳಿಗೆ ರಫ್ತಾಗುತ್ತಿತ್ತು. ಸಿಂಧೂನದಿಯ ಉಗಮಸ್ಥಾನದ ಪಂಜಾಬ, ಕರಾಚಿ, ಉಜ್ಜಯಿನಿ, ದೇವಗಿರಿ, ಸೂರತ್, ನವಸಾರಿ, ಕನ್ಯಾಕುಮಾರಿ, ಮಚಲಿಪಟ್ಟಣ, ಕಾವೇರಿಪಟ್ಟಣ ಮುಂತಾದವು ನೂಲನ್ನು ನಿರ್ಯಾತಮಾಡುವ ದೊಡ್ಡ ಬಂದರುಗಳು ಮತ್ತು ಪಟ್ಟಣಗಳೂ ಆಗಿದ್ದವು.

ಹಿಂದೂಸ್ತಾನದಿಂದ ನಿರ್ಯಾತವಾದ ಬಟ್ಟೆಯ ಪ್ರಮಾಣ 1862ರಲ್ಲಿ ಕೇವಲ ಸೂರತ್ ಬಂದರೊಂದರಲ್ಲಿಯೇ 30 ಲಕ್ಷ ಥಾನುಗಳು.

ಭಾರತಕ್ಕೆ ಬಟ್ಟೆಯ ಮೇಲಿನ ಲಾಭ ಹೆಚ್ಚಾಗಿದ್ದು ಬ್ರಿಟಿಷರ ರಾಜ್ಯದ ಆಡಳಿತ ಕ್ಕಿಂತ ಇದು ಹೆಚ್ಚಾಗಿದ್ದಿತೆಂದು ಹೇಳುತ್ತಾರೆ. ಈಪೈಕಿ ಕೈನೂಲು ಕೈನೇಯ್ಗೆ ಸೇರಿ ದಂತೆ ಬಟ್ಟೆಯೂ ಸೇರಿದೆ. ಭಾರತದ ಬಟ್ಟೆ ಬೆಲೆಯು ಅಗ್ಗವಾಗಿದ್ದು ಭಾರತದಿಂದ 2 ಷಿಲಿಂಗ್ ಮಾರಾಟವಾದ ಬಟ್ಟೆ ಇಂಗ್ಲೆಂಡಿನಲ್ಲಿ 1 ಪೌಂಡಿಗೆ ಮಾರಾಟವಾಗುತ್ತಿತ್ತು. ಆ ಕಾಲದ ಬಟ್ಟೆ ವ್ಯಾಪಾರಿಯು ಈ ರೀತಿ ಬರೆಯುತ್ತಾನೆ.

ಹಿಂದುಸ್ತಾನದ ಬಟ್ಟೆ ವ್ಯಾಪಾರದಿಂದ ನಮಗೆ ಹೆಚ್ಚು ದೊರೆಯುತ್ತಿರುವುದೇ ನಾವು ಹಿಂದುಸ್ತಾನದ ಮೇಲೆ ರಾಜ್ಯ ಮಾಡುತ್ತಿರುವುದರ ಕಾರಣ. 1662ರಲ್ಲಿ

ನಾವು ಹಿಂದುಸ್ತಾನದಿಂದ 3,56288 ಪೌಂಡುಗಳ ಬಟ್ಟೆ ಖರೀದಿಮಾಡಿ ಅದನ್ನು ಇಂಗ್ಲೆಂಡಿನಲ್ಲಿ 19,14,900 ಪೌಂಡಿಗೆ ಮಾರಾಟ ಮಾಡಿದೆವು. ಸರ್ ಚಾರಲ್ಸ್ ಹೆವಿನಿಟ್ ಬರೆಯುತ್ತಾರೆ: ಪೆರು ಮತ್ತು ಮೆಕ್ಸಿಕೋಗಳ ಮೇಲೆ ರಾಜ್ಯ ಮಾಡುವು ದರಿಂದ ಬರುವ ರಾಜಕೀಯ ಆದಾಯಕ್ಕಿಂತ 60 ಲಕ್ಷ ಪೌಂಡ್ ಹೆಚ್ಚು ಆದಾಯ ಭಾರತದ ವ್ಯಾಪಾರದಿಂದ ಬರುತ್ತದೆ.

ಈ ರೀತಿ ನಮ್ಮ ದೇಶದಲ್ಲಿ ಉಛ್ರಾಯ ಸ್ಥಿತಿಯಲ್ಲಿದ್ದ ಬಟ್ಟೆ ಉದ್ಯೋಗವು ಬ್ರಿಟಿಷರು ವ್ಯಾಪಾರಕ್ಕೆಂದು ಹಿಂದುಸ್ತಾನಕ್ಕೆ ಬಂದ ಮೇಲೆ ಕಂಪನಿಯ ನೌಕರರು ಮಾಡಿದ ಅತ್ಯಾಚಾರಗಳ ಮೂಲಕ ಈ ಉದ್ಯೋಗವು ನಾಶವಾದದ್ದು ಒಂದು ರೀತಿಯದಾದರೆ, ಬ್ರಿಟಿಷ್ ಸರ್ಕಾರ ನಾಶಮಾಡಿದ ರೀತಿ ಇನ್ನೊಂದು ಬಗೆಯದು. ಕಂಪನಿಯ ನೌಕರರು ನಮ್ಮ ಕೈಗಾರಿಕೆಗಳನ್ನು ಐದು ರೀತಿಯಲ್ಲಿ ಹಾಳು ಮಾಡಿದರು.

(1) ದೇಶೀಯ ವ್ಯಾಪಾರಸ್ಥರನ್ನು ನಾಶಮಾಡಿದರು.

(2) ಸರ್ಕಾರಿ ಅಧಿಕಾರಿಗಳ ಮೇಲೆ ದಬ್ಬಾಳಿಕೆ ನಡೆಸಿದರು.

(3) ಜನರ ಮೇಲೆ ಬಲಾತ್ಕಾರದಿಂದ ತಮ್ಮ ಸರಕುಗಳನ್ನು ಹೇರಿದರು.

(4) ನೇಕಾರರ ಮೇಲೆ ಅತ್ಯಾಚಾರ ನಡೆಸಿ ಅವರು ತಮ್ಮ ಕಸುಬನ್ನು ಮುಂದು ವರಿಸಲು ಅಡಚಣೆ ಒಡ್ಡಿದರು.

(5) ನಮ್ಮ ದೇಶದ ಒಕ್ಕಲು ಮಕ್ಕಳನ್ನು ಕಂಪನಿಯ ನೌಕರರು ತಮ್ಮ ಸಣ್ಣತನ ಮತ್ತು ದರ್ಪದಿಂದ ಹಾಳುಮಾಡಿದರು.

1757ರಿಂದ ಕ್ಲೈವನ ಪ್ಲಾಸೀ ಕಾಳಗದ ಕಾಲದಿಂದ 1761ರಲ್ಲಿ ಬ್ರಿಟಿಷರು ಫ್ರೆಂಚರನ್ನು ಭಾರತ ದೇಶದಿಂದ ಹೊರದೂಡುವ ವರೆಗೆ, ಈ ಐದು ವರ್ಷಗಳಲ್ಲಿ ಇಂಗ್ಲೆಂಡು ಪ್ರಪಂಚದ ಆಧಿಪತ್ಯವನ್ನು (World Power) ಸ್ಥಾಪಿಸಿತು. ಪ್ಲಾಸೀ ಯುದ್ಧದಿಂದ ವಿಕ್ಟೋರಿಯಾ ರಾಣಿಗೆ ಹಿಂದುಸ್ತಾನದ ಆಧಿಪತ್ಯವನ್ನು ಒಪ್ಪಿಸುವ ವರೆಗೆ ಬ್ರಿಟಿಷ್ ಸಾಮ್ರಾಜ್ಯವು ವಿಸ್ತಾರಗೊಳ್ಳುತ್ತಾಹೋಯಿತು.

18ನೇ ಶತಮಾನದಲ್ಲಿ ರಹದಾರಿಯಿಂದ ಅಥವಾ ಹಡಗುಗಳ ಮುಖಾಂತರ ಸಾಗಾಣಿಕೆ ಸರಕುಗಳ ಮೇಲೆ ಸುಂಕ ಹಾಕಲಾಗುತ್ತಿತ್ತು. ಆಗ ಈಸ್ಟ್ ಇಂಡಿಯಾ ಕಂಪನಿಗೆ ಆಯಾತ ನಿರ್ಯಾತ ಸರಕುಗಳ ಸುಂಕದಿಂದ ಮುಕ್ತಿ ಇದ್ದಿತು. ಪ್ಲಾಸೀ ಕದನದ ನಂತರ ಬ್ರಿಟಿಷರ ವರ್ಚಸ್ಸು ಹೆಚ್ಚಿ ದೇಶದೊಳಗೆ ಕಂಪನಿಯ ನೌಕರರು ಸ್ವತಂತ್ರ ವ್ಯಾಪಾರ ಮಾಡಲಾರಂಭಿಸಿದರು. ಪರದೇಶದೊಂದಿಗೆ ತಾವೇ ಸ್ವತಂತ್ರವಾಗಿ ಆಯಾತ ನಿರ್ಯಾತ ಮಾಡುತ್ತಾ ಕಂಪನಿಯ ಸ್ಥಾನವನ್ನು ಆಕ್ರಮಿಸಿದರು. ಈ ರೀತಿಯ ಕಂಪನಿಯ ನೌಕರರ ವರ್ತನೆಯಿಂದ ದೇಶೀ ವ್ಯಾಪಾರಸ್ತರು ನಾಶವಾದರು. ಇದಲ್ಲದೆ

ಕಂಪನಿಯ ನೌಕರರು ತಮ್ಮ ಉದ್ಧಟತನದಿಂದ ವ್ಯಾಪಾರಸ್ತರ ಮೇಲೆ ಕೈಮಾಡಿದರೂ ಇವರ ಅಹವಾಲನ್ನು ಕೇಳುವವರಿರಲಿಲ್ಲ.

ಈ ರೀತಿ ಕಂಪನಿಯ ನೌಕರರು ನಮ್ಮ ದೇಶದ ವರ್ತಕರನ್ನೂ ಇಲ್ಲಿ ತಯಾರಾದ ಸಾಮಾನುಗಳನ್ನೂ ನಾಶಮಾಡಿ ಇಂಗ್ಲೆಂಡಿನಿಂದ ಬಂದ ಸರಕುಗಳನ್ನು ದುಬಾರಿ ಬೆಲೆಗೆ ಮಾರಹತ್ತಿದರು. ನವಾಬನ ಅಧಿಕಾರಿಗಳನ್ನು ದಬ್ಬಾಳಿಕೆಯಿಂದ ಅವಮಾನಮಾಡುತ್ತಿದ್ದರು. ಈ ರೀತಿಯ ಕಂಪನಿ ನೌಕರರ ದುರಾಸೆಯಿಂದ ದೇಶೀಯ ಕೋಟಿ ಕೋಟಿ ಜನರು ಹಿಂಸೆಗೊಳಗಾದರೂ ತನ್ನದು ಸುಧಾರಿಸಿದ ರಾಜ್ಯ ಪದ್ಧತಿ ಎಂದುಕೊಳ್ಳುತ್ತಿದ್ದ ಬ್ರಿಟಿಷ್ ಸರ್ಕಾರ ಇವರ ಸಹಾಯಕ್ಕೆ ಬರಲಿಲ್ಲ.

ಕಂಪನಿಯ ನೌಕರರು ನೇಕಾರರ ಮೇಲೂ ಅತ್ಯಾಚಾರ ನಡೆಸುತ್ತಿದ್ದರು. ಜನರು ಈ ಹಿಂಸೆಯನ್ನು ಅನುಭವಿಸಬೇಕಾಗುತ್ತಿತ್ತು. ನೇಕಾರರನ್ನು ಒಂದುಕಡೆ ಸೇರಿಸಿ ಅವರಿಂದ ಬಲವಂತವಾಗಿ ಬಟ್ಟೆ ಕೊಂಡು ಸರಿಯಾದ ಧಾರಣೆ ಕೊಡದೆ ಹಿಂಸಿಸಲಾಗುತ್ತಿತ್ತು. ಈ ರೀತಿಯ ಹಿಂಸೆಯಿಂದ ಪ್ರತಿಯೊಬ್ಬ ನೇಕಾರನೂ ಭಯದಿಂದ ಅವರು ಹೇಳಿದಂತೆ ಕೇಳಬೇಕಾಗಿ ಬಂದು ಕೈಗಾರಿಕೆಯು ನಶಿಸಿತು.

ಕಂಪನಿಯ ಈ ರೀತಿಯ ದುರಾಡಳಿತದಿಂದ ಒಕ್ಕಲುತನವೂ ಹಾಳಾಯಿತು. ಸರಿಯಾಗಿ ಬೆಳೆ ಬೆಳೆಯಲು ಅವಕಾಶವಿಲ್ಲದೆ ಕಂದಾಯ ಪಾವತಿಮಾಡಲಾಗದೆ ಅನೇಕ ಒಕ್ಕಲುಗಳು ಕಂದಾಯದ ಬಾಕಿಗೆ ತಮ್ಮ ಮಕ್ಕಳನ್ನು ಮಾರಬೇಕಾದ ಅಥವಾ ತಾವೇ ನಾಶವಾಗುವ ಪರಿಸ್ಥಿತಿ ಒದಗಿತು. ಜನರನ್ನು ಮಾತ್ರವಲ್ಲ ನವಾಬ ಮೀರ್ ಜಾಫರನನ್ನು ಕಂಪನಿಯವರು ಅವಮಾನಪಡಿಸಿ ಕೋಟ್ಯಾಂತರ ರೂಪಾಯಿ ನಜರಾನಾ ಪಡೆದರು. ಆಗ ರೂಪಾಯಿಗೆ 160 ಊಟ ಇದ್ದರೂ ಈ ರೀತಿ ಸುಲಿಗೆ ನಡೆಸಿತು.

ಬಟ್ಟೆ ಕೈಗಾರಿಕೆ ನಾಶ

ಈ ಕಂಪನಿಯ ಮುಖಾಂತರ ಬ್ರಿಟಿಷ್ ಸರ್ಕಾರ ತನ್ನ ರಾಜ್ಯದ ಪ್ರಗತಿಗೆ ಬೇಕಾದ ಹಣದ ಹೊಳೆಯನ್ನೇ ಪಡೆಯಿತು. 1767ನೇ ಪ್ಲಾಸಿ ಕದನದ ನಂತರ ಇಂಗ್ಲೆಂಡಿನ ಉದ್ಯೋಗ ಪ್ರಗತಿಯು ಭಾರತ ದೇಶದಿಂದ ಆ ದೇಶದೊಳಕ್ಕೆ ಹರಿಯತೊಡಗಿತು. ಹೆಚ್ಚು ಹಣದಿಂದಾಗಿ 1760ರ ಸುಮಾರಿನಲ್ಲಿ ವಟಲ್ ಮಗ್ಗದ ಜನನವಾಗಿ ಕಲ್ಲಿದ್ದಿಲು ಬಳಕೆಗೆ ಬಂದಿತು. ಇಂಗ್ಲೆಂಡಿನ ಕ್ಷಿಪ್ರ ಆರ್ಥಿಕ ಪ್ರಗತಿಯು 1760ರ ಮುಂದೆ 1895ರ ವರೆಗೆ ರಭಸದಿಂದ ಮತ್ತು ಆಶ್ಚರ್ಯಕರ ರೀತಿಯಲ್ಲಿ ಸಾಗಿತು. ಹಿಂದುಸ್ಥಾನದ ದಶಕ ದಶಕಗಳ ಸುಲಿಗೆಯಿಂದ ಇಂಗ್ಲೆಂಡಿನ ಐಶ್ವರ್ಯ, ಕೈಗಾರಿಕೆಯು ಅದ್ಭುತವಾಗಿ ಪ್ರಗತಿ ಹೊಂದಿತು. ಇವೆಲ್ಲದರ ಪರಿಣಾಮ ಎಂದರೆ ಇಂಗ್ಲೆಂಡಿನಲ್ಲಿ ಬಟ್ಟೆಯ ಉತ್ಪಾದನೆಯು ಹೆಚ್ಚಿ ಈ ಮಾಲಿನ ಮಾರಾಟಕ್ಕೆ ಭಾರತ ದೇಶವನ್ನೇ ಉದ್ದೇಶಿಸಿದರು. ಇದರ ಪರಿಣಾಮವೆಂದರೆ ಅವರು ಹಿಂದುಸ್ಥಾನದ

ಬಟ್ಟೆ ಕೈಗಾರಿಕೆ ಪ್ರಗತಿಗೆ ಮತ್ತು ಅದರ ನಾಶಕ್ಕೆ ಪ್ರಯತ್ನ ಮಾಡಿದರು. ಈ ಕ್ರಮಗಳು ಈ ರೀತಿ ಇದ್ದವು.

1) ಹಿಂದುಸ್ತಾನದ ಬಟ್ಟೆ ಇಂಗ್ಲೆಂಡಿನಲ್ಲಿ ಬಾರದಂತೆ ಪ್ರತಿಬಂಧಕಾಜ್ಞೆ.
2) ಈ ದೇಶದ ಬಟ್ಟೆ ಉಪಯೋಗಿಸುವವರಿಗೆ ದಂಡ ವಿಧಿಸುವುದು.
3) ಹಿಂದುಸ್ತಾನದಿಂದ ನಿರ್ಮಿತವಾದ ಬಟ್ಟೆಯ ಮೇಲೆ ಅಧಿಕ ತೆರಿಗೆ.
4) ಮುಕ್ತ ವ್ಯಾಪಾರದ ನೆವದಿಂದ ನಮ್ಮ ಬಟ್ಟೆಯ ಮಾರಾಟಕ್ಕೆ ಅಡಚಣೆ.

16ನೇ ಶತಮಾನ ಪೂರ್ತಾ (1680) ಇಂಗ್ಲೆಂಡಿನೊಳಗೆ ಹಿಂದುಸ್ತಾನದ ಬಟ್ಟೆ, ಆದರೆ 1680ರ ನಂತರ ಇಂಗ್ಲೆಂಡು ಭಾರತದ ಮಾಲಿನ ಪ್ರವೇಶಕ್ಕೆ ಸುಂಕಹಾಕಲು ಪ್ರಾರಂಭಿಸಿತು. 1700ರಲ್ಲಿ ಇಂಗ್ಲೆಂಡು ಭಾರತದ ಬಣ್ಣದ ಬಟ್ಟೆ ಮೇಲೆ ಸುಂಕ ವಿಧಿಸಿತು. ಆದ್ದರಿಂದ ಅಲ್ಲಿಗೆ ಬರೀ ಬಿಳಿ ಬಟ್ಟೆ ಮಾತ್ರ ಹೋಗತೊಡಗಿತು. ಸ್ವಲ್ಪ ಕಾಲಾನಂತರ ಇದರ ನಿರ್ಮಾಣಕ್ಕೂ ಅಡಚಣೆಯೊಡ್ಡಿ ಹಿಂದುಸ್ತಾನದ ಬಟ್ಟೆಗೆ ಬಹಿಷ್ಕಾರ ಹಾಕಿದರು. ಆ ಕಾಲಕ್ಕೆ ಇಂಗ್ಲೆಂಡಿಗೆ ಭಾರತ ದೇಶದಿಂದ ಅಗ್ಗವಾದ ಸುಂದರ ನೂಲಿನ ಬಟ್ಟೆಗಳು, ಮಲ್‌ಮಲ್‌ಗಳು ಮತ್ತು ಬಣ್ಣದ ಬಟ್ಟೆ ದೊಡ್ಡ ಪ್ರಮಾಣದಲ್ಲಿ ಇಂಗ್ಲೆಂಡಿಗೆ ರಫ್ತಾಗುತ್ತಿತ್ತು. ಇವು ಜನಪ್ರಿಯವಾಗಿ ಮಾರಾಟವಾಗುತ್ತಿತ್ತು. ಅಲ್ಲಿಯ ಬಟ್ಟೆ ತಯಾರಕರಿಗೆ ಮಾರಾಟಕ್ಕೆ ಧಕ್ಕೆ ತಗುಲಿತು. ಆದ್ದರಿಂದ 1720ರ ಸುಮಾರು ಕಾನೂನು ಮೂಲಕ ಅಚ್ಚಾದ ಬಣ್ಣದ ಬಟ್ಟೆ ಭಾರತದಿಂದ ರಫ್ತಾಗುವುದನ್ನು ನಿಷೇಧಿಸಲಾಯಿತು.

ನಿಷೇಧಾಜ್ಞೆ ಇದ್ದರೂ ನೂಲು ಬೇಡಿಕೆ ಇಂಗ್ಲೆಂಡಿನೊಂದಿಗೆ ನಡೆದೇ ಇದ್ದಿತು. ಇದನ್ನು ತಡೆಯಲು 1700ರಲ್ಲಿ ಇಂಗ್ಲೆಂಡಿನ ರಾಜನು ಹಿಂದುಸ್ತಾನದ ಬಟ್ಟೆಯನ್ನು ಉಪಯೋಗಿಸುವವರಿಗೆ 200 ಪೌಂಡು ದಂಡ ವಿಧಿಸುವ ಕಾನೂನು ಹೊರಡಿಸಿದನು. ಈ ಕಾನೂನು ಎಷ್ಟು ಕ್ರೂರವಾಗಿ ಜಾರಿಯಾಯಿತೆಂದರೆ. ಒಂದು ಸಲ ಮ್ಯಾಂಚೆಸ್ಟರಿನಲ್ಲಿ ಒಬ್ಬ ಹೆಂಗಸು ಹಿಂದುಸ್ತಾನದ ನೂಲಿನ ಬಟ್ಟೆ ಧರಿಸಿದ್ದಳೆಂದು ದಂಗೆಯಾಗಿ ಆ ಹೆಂಗಸಿನ ಮೇಲೆ ಕೈಮಾಡಿ ಮಾನಭಂಗ ಮಾಡಿದರು.

ಈ ಕಾನೂನಿನಿಂದ ಹಿಂದುಸ್ತಾನದ ಬಟ್ಟೆ ನಿರ್ಯಾತ ಇಂಗ್ಲೆಂಡಿಗೆ ನಿಲ್ಲಲಿಲ್ಲ. ಸುಮಾರು 18ನೇ ಶತಮಾನದ ಕಡೆವರೆಗೆ ಹಿಂದುಸ್ತಾನದ ಬಟ್ಟೆಯು ಇಂಗ್ಲೆಂಡಿಗೆ ಹೆಚ್ಚಿಗೆ ನಿರ್ಯಾತವಾಗುತ್ತಿತ್ತು. ಇದನ್ನು ತಡೆಗಟ್ಟಲು ಇಂಗ್ಲೆಂಡ್ ಸರ್ಕಾರವು ಹಿಂದುಸ್ತಾನದಲ್ಲಿ ತಯಾರಾದ ಬಿಳಿ ನೂಲು ಮತ್ತು ಮಲ್‌ಮಲ್ ಬಟ್ಟೆ ಮೇಲೆ ಸುಂಕವನ್ನು ಹೆಚ್ಚು ಹೆಚ್ಚಾಗಿ ವಿಧಿಸುತ್ತಾ 1813ರ ವೇಳೆಗೆ ಸುಂಕವು ಬಟ್ಟೆಯ ಬೆಲೆಯ ಅರ್ಧದಷ್ಟು ಬೀಳುತ್ತಿತ್ತು. ಈ ದುಬಾರಿ ಸುಂಕದಿಂದ ಇಂಗ್ಲೆಂಡಿಗೆ ಭಾರತದ ಬಟ್ಟೆ ನಿರ್ಯಾತವು ಸುಮಾರು 1816–33 ಅವಧಿಯಲ್ಲಿ 160 ಕೋಟಿಯಿಂದ 8 ಲಕ್ಷಕ್ಕೆ ಇಳಿಯಿತು. 1833ರಲ್ಲಿ ಈಸ್ಟ್ ಇಂಡಿಯಾ ಕಂಪನಿಗೆ ವ್ಯಾಪಾರಕ್ಕಾಗಿ ಕೊಟ್ಟ

ಸನ್ನದನ್ನು ರದ್ದು ಮಾಡಿ ಹೊಸ ಸನ್ನದನ್ನು ಕೊಡುವಾಗ ಇನ್ನು ಮುಂದೆ ಸರ್ಕಾರವೇ ಹಿಂದುಸ್ತಾನದ ಆಡಳಿತಗಾರರಾಗಿ ಪ್ರಭುಗಳಾಗಿ ಇರಬೇಕು ಎಂದು ಗೊತ್ತು ಮಾಡಿದ್ದ ರಿಂದ ವ್ಯಾಪಾರದ ಗುತ್ತಿಗೆಯನ್ನೆಲ್ಲಾ ಬ್ರಿಟಿಷ್ ಸರ್ಕಾರವೇ ವಹಿಸಿಕೊಂಡಿತು. 1794ರಿಂದ 1828–29ರ ಅವಧಿಯಲ್ಲಿ ಬ್ರಿಟನ್ನಿನಿಂದ ಹಿಂದುಸ್ತಾನಕ್ಕೆ ಆಮದಾಗುವ ಬಟ್ಟೆ ಪ್ರಮಾಣ ಹೆಚ್ಚಾಗುತ್ತಾ ಹೋಯಿತು.

ವರ್ಷ	ಹಿಂದುಸ್ತಾನಕ್ಕೆ ಆಮದಾದ ಬಟ್ಟೆಯ ಬೆಲೆ
1794	ರೂ. 2,340
1802	2,42,865
1806	3,27,875
1810	17,19,735
1824-25	52,96,816
1828-29	79,96,383

ಈ ರೀತಿಯಾಗಿ ಹಿಂದುಸ್ತಾನದಲ್ಲಿ ವರ್ಷೇ ವರ್ಷ ಬಟ್ಟೆಯ ಉತ್ಪಾದನೆ ವ್ಯಾಪಾರ ಕುಗ್ಗುತ್ತಾ ನಶಿಸಿ ಹೋಯಿತು. ಬ್ರಿಟಿಷ್ ರಾಜ್ಯದಿಂದ ಆಯಾತವಾದ ಹೆಚ್ಚು ಹೆಚ್ಚು ಬಟ್ಟೆಯಿಂದಾಗಿ ನಮ್ಮ ದೇಶವು ಬಡವಾಗುತ್ತಾ ಹೋಯಿತು.

ಈ ರೀತಿಯ ಬ್ರಿಟಿಷ್ ಸರ್ಕಾರದ ನೀತಿಯಿಂದ ಭಾರತದ ನೆಯ್ಗೆ ಬಟ್ಟೆ ಉದ್ಯೋಗದ ಜತೆಗೆ ಇತರೇ ಉದ್ಯೋಗಗಳು, ಅಂದರೆ ಬಣ್ಣ ತಯಾರಿಕೆ, ಬಣ್ಣ ಹಾಕುವುದು, ಚರ್ಮ ಹದ ಮಾಡುವುದು, ಅದಕ್ಕೆ ಬೇಕಾದ ಪದಾರ್ಥಗಳ ತಯಾರಿಕೆ ಶಾಲು ಮತ್ತು ಜಮಖಾನ ತಯಾರಿಕೆ ನಾಶವಾದುವೆಂದು ಶ್ರೀ ರಾಮೇಶದತ್ತರು ಬರೆಯುತ್ತಾರೆ. ಈ ಗ್ರಾಮೋದ್ಯೋಗಗಳಿಂದ ಭಾರತದ ಕೋಟ್ಯಾಂತರ ಜನರು ತಮ್ಮ ಉಪಜೀವನ ಸಾಗಿಸುತ್ತಿದ್ದರು. ಆದರೆ ಈಗಲಾದರೋ ಜನರು ಹೊಟ್ಟೆ ಹೊರೆಯುವುದಕ್ಕೆ ಉಳಿದ ಒಂದೇ ಒಂದು ಸಾಧನವಾದ ಒಕ್ಕಲುತನವನ್ನೇ ಅವಲಂಬಿಸ ಬೇಕಾಗಿದೆ.

ದಾದಾಭಾಯಿ ನವರೋಜಿಯವರು ಹಿಂದುಸ್ತಾನದ ಬಡತನಕ್ಕೆ ಈ ಕೆಳಗಿನ ಕಾರಣವನ್ನು ಕೊಡುತ್ತಾರೆ.

1) ಪೂರ್ವ ಸಂಚಿತ ಹಣ ಸಂಗ್ರಹವನ್ನು ಬರಿದು ಮಾಡುವುದು.
2) ಹಿಂದುಸ್ತಾನದ ಉತ್ಪನ್ನದ ಬಹು ಭಾಗ ದೇಶದ ಏಳಿಗೆಗೆ ವಿನಿಯೋಗವಾಗದೆ ಹಣದ ಪ್ರವಾಹ ಇಂಗ್ಲೆಂಡಿಗೆ ಹರಿಯುವುದು.
3) ಬ್ರಿಟಿಷ್ ಸರ್ಕಾರದ ಅಧಿಕಾರಿಗಳ ಸೇವೆಗಾಗಿ ಪೆನ್ಶನ್ ಮುಂತಾದ ಬಾಬು ಗಳಿಗಾಗಿ ಹೆಚ್ಚು ಹಣ ಖರ್ಚಾಗುವುದು.

) ವಿನಿಮಯದ್ವಾರ ಭಾರತದ ಐಶ್ವರ್ಯ ಪಲಾಯನ.

) ಬ್ರಿಟಿಷರು ಇಲ್ಲಿಟ್ಟಿದ್ದ ಸೈನ್ಯದ ಖರ್ಚು.

) ಇವುಗಳ ಜೊತೆಗೆ ಇಂಗ್ಲೆಂಡು ಬಟ್ಟೆಯೇ ಮುಂತಾದ ವ್ಯಾಪಾರದಿಂದ ಗಳಿಸಿದ ಲಾಭ.

ಈ ರಿತೀ ಮೇಲೆ ಹೇಳಿದ ಕಾರಣಗಳಿಂದ ಭಾರತ ದೇಶದ ಬಟ್ಟೆ ಕೈಗಾರಿಕೆಯೂ ುತ್ತು ಇತರೇ ಗ್ರಾಮ ಕೈಗಾರಿಕೆಗಳೂ ನಾಶವಾದವು ಮತ್ತು ಜನರು ಒಕ್ಕಲುತನ ಂದಲೇ ಜಮೀನಿನ ಮೇಲೆ ಅವಲಂಬನೆ ಮಾಡಲು ಪ್ರಾರಂಭಿಸಿದ್ದರಿಂದ ದೇಶದಲ್ಲಿ ೇಗಾಗ್ಗೆ ಬರಗಾಲ ಪ್ರಾಪ್ತವಾಗಿ ಜನರಲ್ಲಿ ಆಹಾರ ಧಾನ್ಯ ಕೊಳ್ಳಲು ಹಣವಿಲ್ಲದೆ ೋಟಿ ಕೋಟಿ ಜನರು ಸತ್ತರು. ಜನರ ವಾರ್ಷಿಕ ಉತ್ಪನ್ನವೂ ಕಡಿಮೆಯಾಗುತ್ತಾ ೋಯಿತು.

	ದೇಶದ ಹೆಸರು	ಪ್ರತಿಯೊಬ್ಬನ ಸರಾಸರಿ ವಾರ್ಷಿಕ ಉತ್ಪನ್ನ
)	ಕೆನಡಾ ಮತ್ತು ಇತರ ಕಾಲೋನಿಗಳು	48 ಪೌಂಡು
)	ಇಂಗ್ಲೆಂಡ್	42 "
)	ಹಿಂದುಸ್ಥಾನ	2 "

ಇಂಗ್ಲೆಂಡಿನ ಕಾರ್ಖಾನೆಗಳಿಗೆ ಕಚ್ಚಾ ಮಾಲು ಪೂರೈಸಲು ಹಿಂದುಸ್ಥಾನದಲ್ಲಿ ಚ್ಚಾ ಮಾಲು ಉತ್ಪಾದನೆ ಮಾಡುವುದು ಮತ್ತು ಇಂಗ್ಲೆಂಡಿನಲ್ಲಿ ತಯಾರಾದ ಸರಕು ಾರತದಲ್ಲಿ ಮಾರುವುದರಲ್ಲಿ ದೇಶದ ಬಡತನವು ನಾಲ್ಕು ಪಟ್ಟು ಹೆಚ್ಚಿತು.

1850ರಿಂದ 1900ರ ವರೆಗೆ ಭಾರತ ದೇಶದಲ್ಲಿ 24 ಬರಗಾಲಗಳು ಬಿದ್ದು ಕೋಟಿ ಜನರು ಸತ್ತರು. ಹಿಂದುಸ್ಥಾನದಿಂದ ಪರದೇಶಕ್ಕೆ ಸತತವಾಗಿ ಹರಿಯುತ್ತಿದ್ದ ಣದ ಹೊಳೆಯೇ ಈ ಬರಗಾಲಗಳಿಗೆ ಕಾರಣ. ಆಹಾರದ ಕೊರತೆಯು ಆಹಾರದ ಭಾವದಿಂದ ಉಂಟಾದುದಲ್ಲ, ಜನರಲ್ಲಿ ಆಹಾರ ಕೊಳ್ಳುವ ಶಕ್ತಿ ಇಲ್ಲದೆ ಅನೇಕರು ಬಲಿಗೀಡಾದರು.

ದಾದಾಭಾಯಿ ನವರೋಜಿ ಮತ್ತು ಮದನಮೋಹನ ಮಾಳವೀಯರು ಈ ರೀತಿ ೇಳುತ್ತಾರೆ: ಇತ್ತೀಚೆಗೆ 42 ವರ್ಷಕ್ಕೆ ಒಮ್ಮೆ ಬರಗಾಲವು ಬರಹತ್ತಿದೆ. ಯಾಕೆಂದರೆ ಹಾರದ ಬಹುಭಾಗ ವಿದೇಶಕ್ಕೆ ನಿರ್ಯಾತವಾಗುತ್ತಿದೆ. ಇದರಿಂದ ಜನರಿಗೆ ಆಹಾರ ಸ್ಸಾನು ಇಡಲು ಅಶಕ್ಯವಾಗುತ್ತಿದೆ. ಅದೂ ಅಲ್ಲದೆ ಬೆಳೆ ಬಂದಾಗ ಕಟ್ಟಬೇಕಾದ ಾಕಂದಾಯ ಮುಂತಾದ ತೆರುವಿಕೆಗೆ ಧಾನ್ಯವನ್ನು ಹೋದ ಬೆಲೆಗೆ ಮಾರ ಕಾಗುತ್ತದೆ.

ಈ ಹಿಂದೆ ಸರ್ಕಾರಗಳು ಬರಗಾಲ ನಿವಾರಣೆಗೆ ಕ್ರಮಬದ್ಧವಾದ ಏರ್ಪಾಡು ಾಡಿದ್ದರು. ಆದರೆ ಕಂಪನಿ ಸರ್ಕಾರದವರು ಈ ರೀತಿ ಏರ್ಪಾಡುಮಾಡದೆ ಬೆಳೆದ

ಬೆಳೆಯನ್ನೆಲ್ಲಾ ಕಚ್ಚಾರೂಪದಲ್ಲೇ ನಿರ್ಯಾತ ಮಾಡಿ ದೇಶವಲ್ಲಿ ಬರಗಾಲ ಪ್ರಾಪ್ತವಾಗಲು ಕಾರಣರಾದರು. ಈ ರೀತಿ ಭಾರತ ದೇಶವು ಬ್ರಿಟಿಷ್ ರಾಣಿಯ ಆಡಳಿತ ಕಾಲದಲ್ಲಿ ಆರ್ಥಿಕವಾಗಿ ಹಿಂದುಳಿದ ರಾಷ್ಟ್ರವಾಗಿದ್ದು ವಸಾಹತುಷಾಹಿಯಾದ ಭಾರತ ದೇಶದ ಬಹುಭಾಗದ ಐಶ್ವರ್ಯವು ಇಂಗ್ಲೆಂಡಿಗೆ ರವಾನೆಯಾಗುತ್ತಾ ಹೋಯಿತು.

ಭಾರತಕ್ಕೆ ಗಾಂಧೀಜಿ ಆಗಮನ

ದಕ್ಷಿಣ ಆಫ್ರಿಕಾದ ದೀರ್ಘ ಪ್ರವಾಸದ ನಂತರ ಗಾಂಧೀಜಿಯವರು ಭಾರತ ದೇಶಕ್ಕೆ 9-1-1915ರಲ್ಲಿ ವಾಪಸ್ಸು ಬಂದರು. ಅವರು ಬಂದ ಮೇಲೆ ಕೆಲವೇ ದಿವಸದಲ್ಲಿ ಅಹಮದಾಬಾದ್ ಹತ್ತಿರ ಕೋಚರಬ್ ಎಂಬಲ್ಲಿ ಒಂದು ಆಶ್ರಮ ಸ್ಥಾಪಿಸಿದರು. ಸ್ವಲ್ಪ ಕಾಲದ ನಂತರ ಸಬರ್ಮತಿಗೆ ಸ್ಥಳಾಂತರ ಹೊಂದಿ ಈ ಆಶ್ರಮವು ಸತ್ಯಾಗ್ರಹಾಶ್ರಮವೆಂದು ಪ್ರಸಿದ್ಧವಾಯಿತು.

ಗಾಂಧಿಯವರು ಆಫ್ರಿಕಾ ದೇಶದಲ್ಲಿದ್ದಾಗ ಅವರಿಗೆ ರಾಟೆಯ ದರ್ಶನವು ಮಾನಸಿಕವಾಗಿದ್ದಿತು. ಅವರು ರಾಟೆಯನ್ನು ಅಥವಾ ಮಗ್ಗವನ್ನು ನೋಡಿರಲಿಲ್ಲ. ಅವರು ಆಶ್ರಮ ಸ್ಥಾಪಿಸಿದ ಮೇಲೆ ಆಶ್ರಮ ವಾಸಿಗಳೆಲ್ಲಾ ಕೈಯಿಂದ ನೇಯ್ದ ಬಟ್ಟೆಗಳನ್ನೇ ಉಡಬೇಕೆಂದು ನಿರ್ಧರಿಸಿ ಕೆಲವು ಕೈಮಗ್ಗಗಳನ್ನು ಹಾಕಿದರು. ಮತ್ತು ಬಟ್ಟೆ ಶಿಕ್ಷಕರನ್ನು ನೇಮಿಸಿಕೊಂಡು ಮಗನ್‌ಲಾಲ್ ಗಾಂಧಿಯವರ ಸಹಾಯದಿಂದ ಈ ಕಸುಬನ್ನು ಮುಂದುವರಿಸಿದರು. ಮೊದ ಮೊದಲು ಗಿರಣಿಯ ನೂಲು ತಂದು ಕೈಮಗ್ಗದ ಮೇಲೆ ನೇಯುವುದು ಮತ್ತು ಆ ಬಟ್ಟೆಯನ್ನು ಉಡಲೂ ಪ್ರಾರಂಭಿಸಿದರು. ಆಗ ಗಾಂಧೀಜಿಯವರಿಗೆ ನೇಕಾರರ ಪರಿಸ್ಥಿತಿ ಮತ್ತು ಗಿರಣಿ ಮಾಲೀಕರ ವಿಚಾರ ಅಭ್ಯಾಸ ಮಾಡಲಿಕ್ಕೆ ಅವಕಾಶ ದೊರೆಯಿತು. ಇದರಿಂದ ಗಾಂಧೀಜಿಯವರಿಗೆ ಅರಿವಾದದ್ದೇನೆಂದರೆ ಈ ರೀತಿಯ ಬಟ್ಟೆಯನ್ನು ಉಡುವುದರಿಂದ ಯಾವ ವಿಧವಲ್ಲೂ ದೇಶಸೇವೆ ಮಾಡಿದಂತಾಗುವುದಿಲ್ಲ ಎಂಬುದು. ಆಗ ಅವರು ರಾಟೆಯ ಮೇಲೆ ನೂತ ನೂಲಿನಿಂದ ಕೈಮಗ್ಗದಿಂದ ನೇಯ್ದ ಬಟ್ಟೆ ಉಡಬೇಕೆಂದು ನಿಶ್ಚಯಿಸಿದರು. ಆಗ ಅವರಿಗೆ ಸುಮಾರು 1917ರಲ್ಲಿ ಶ್ರೀಮತಿ ಗಂಗಾ ಬೆಹನ್ ಮಜುಂದಾರ್ ಎಂಬ ಮಹಿಳೆಯ ಸಹಾಯದಿಂದ ಗಾಂಧೀಜಿಗೆ ಬಡೋದೆಯ ವಿಜಾಪುರ ಎಂಬಲ್ಲಿಂದ ರಾಟೆ ದೊರೆಯಿತು. ಗಿರಣಿಯಿಂದ ತಂದ ನೂಲಿನ ಹಂಜಿಯಿಂದ ಸ್ವಲ್ಪ ಕಾಲದೊಳಗೆ ನೂಲು ರಾಶಿ ರಾಶಿಯಾಗಿ ಬರತೊಡಗಿತು. ಆಗ ಗಾಂಧೀಜಿಗೆ ಇನ್ನೊಂದು ಯೋಚನೆ ಬಂತು. ಜನರು ತಾವೇ ಏಕೆ ಹತ್ತಿಯಿಂದ ಹಂಜಿಮಾಡಿಕೊಂಡು ಇದರಿಂದ ನೂಲು ತೆಗೆಯಬಾರದು ಎಂದು. ಅದರಂತೆ ಪಿಂಜಾರನಿಂದ ಅರಳೆ ಎಕ್ಕಿಸಿ ಹಂಜಿ ತಯಾರಿಸಿ ರಾಟೆಯಿಂದ ನೂಲುವುದನ್ನು ಆರಂಭಿಸಿದರು. ಈ ನೂಲನ್ನು ನೇಯಲು ಕೆಲವು ನೇಕಾರರನ್ನು ನೇಮಕಮಾಡಿದರು. ಹೀಗೆ ವಿಜಾಪುರ ಖಾದಿ ಕೇಂದ್ರವು ಪ್ರಾರಂಭವಾಯಿತು. ಕಾಲಕ್ರಮೇಣ ರಾಟೆಗಳ ಸುಧಾರಣೆ, ರಾಟೆಗಳ ಮಾಡುವಿಕೆಗೆ ಬೇಕಾದ

ಉಪಕರಣಗಳ ಉತ್ಪಾದನೆ ಆಶ್ರಮದಲ್ಲಿ ತಯಾರಾಗಹತ್ತಿದವು. ಆದರೆ ಆಗ ಕೇವಲ 30" ಅಗಲದ ಖಾದಿ ತಯಾರಾಗುತ್ತಿದ್ದು ಇದಕ್ಕೆ ಗಜಕ್ಕೆ 17 ಆಣೆ ಬೀಳುತ್ತಿತ್ತು. ಮುಂದೆ ಇನ್ನೂ ಹೆಚ್ಚು ಅಗಲದ ಬಟ್ಟೆ ತಯಾರಿಸಲು ಪ್ರಯತ್ನ ನಡೆದು ಶ್ರೀಮತಿ ಅವಂತಿಬಾಯಿ ಮತ್ತು ಶ್ರೀ ಶಂಕರಲಾಲ್ ಬ್ಯಾಂಕರ್ ಮುಂತಾದವರು ಹೆಚ್ಚು ಅಗಲದ ಬಟ್ಟೆ ತಯಾರಿಸತೊಡಗಿದರು.

ಇದರ ಬಗ್ಗೆ ಗಾಂಧೀಜಿಯವರು ಹೀಗೆ ಹೇಳುತ್ತಾರೆ: ರಾಟೆ ನನ್ನ ಕೋಣೆಯಲ್ಲಿ ಇಂಪಾದ ಧ್ವನಿ ಮಾಡಲು ಪ್ರಾರಂಭಿಸಿತು. ಇದರಿಂದ ನನ್ನ ಆರೋಗ್ಯ ಉತ್ತಮ ವಾಗಲು ಬಹಳ ಸಹಾಯವಾಯಿತು. ನಾನೂ ನೂಲಲು ಪ್ರಾರಂಭಿಸಿದೆ.

ಬೊಂಬಾಯಿನಲ್ಲಿ ಗಾಂಧೀಜಿಯವರು ತಮ್ಮ ಮನೆ ಮುಂದೆ ಓಡಾಡುತ್ತಿದ್ದ ಓರ್ವ ಪಿಂಜಾರನಿಂದ ಹಂಜಿ ಮಾಡಿಸಲು ಪ್ರಾರಂಭಿಸಿದರು. ಹೀಗೆ ಕೈಯಿಂದ ಮಾಡಿದ ಹಂಜಿಗಳಿಂದಲೇ ನೂಲುವುದು ಪ್ರಾರಂಭವಾಯಿತು.

ಈಗ ಗಾಂಧೀಜಿ ತಮ್ಮ ಬಟ್ಟೆಗಳೆಲ್ಲಾ ಪೂರ್ಣ ಖಾದಿ ಇರಬೇಕೆಂದು ಆತುರ ಪಡುತ್ತಿದ್ದರು. ಗಂಗಾ ಬೆಹನ್ನರು ಇವರ ರಾಟೆ ಸೇವೆಯನ್ನು ಪೂರೈಸಿಕೊಳ್ಳಲು ಸಹಾಯ ಮಾಡಿದರು. ಗಾಂಧೀಜಿಯವರು 1916ರಲ್ಲೂ ಪೂರ್ಣ ಖಾದಿ ವ್ರತ ಕೈಗೊಂಡರು.

ಖಾದಿಯು ಪ್ರಾರಂಭವಾದದ್ದು ಸ್ವದೇಶದ ದೃಷ್ಟಿಯಿಂದ. ಸ್ವದೇಶಿ ಆಂದೋಲನವು ಈ ಮೊದಲು 15–20 ವರ್ಷಗಳ ಹಿಂದೆ ಮಹಾರಾಷ್ಟ್ರದಲ್ಲಿ ಹುಟ್ಟಿ ಬಂಗಾಲಕ್ಕೂ ಹಬ್ಬಿತು. ಗಾಂಧೀಜಿಯವರ ಸ್ವದೇಶಿ ಅಂದರೆ ಕೈನೂಲಿನಿಂದ ಕೈಮಗ್ಗದ ಮೇಲೆ ನೇಯ್ದ ಬಟ್ಟೆಯೇ ಎಂದು ರೂಢವಾಯಿತು.

1920ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ಅದರ ನೇತೃತ್ವದಲ್ಲಿ ಖಾದಿ ವಿಭಾಗ ಪ್ರಾರಂಭಮಾಡಿ, 1923ರಲ್ಲಿ ಕಾಕಿನಾಡದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ದಲ್ಲಿ ಖಾದಿ ವಿಭಾಗಗಳ ಮುಖಾಂತರ ಖಾದಿ ಕಾರ್ಯಗಳ ಮೇಲ್ವಿಚಾರಣೆಗೆ, ನಿಯಂತ್ರಣಕ್ಕೆ ಶ್ರೀ ಜಮನಾಲಾಲ್ ಬಜಾಜರ ಅಧ್ಯಕ್ಷತೆಯಲ್ಲಿ ಅಖಿಲ ಭಾರತ ಖಾದಿ ಮಂಡಲಿ ಎಂಬ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ಖಾದಿ ಮಂಡಳಿಯ ಸ್ಥಾಪನೆಯಾದ ನಂತರ ಖಾದಿ ಬೆಳವಣಿಗೆ ಕ್ರಮಕ್ಕೆ ಮಂಡಲದ ಸದಸ್ಯರು ಬೇರೆ ಬೇರೆ ಪ್ರಾಂತ್ಯಗಳಲ್ಲಿ ಪ್ರವಾಸ ಮಾಡಬೇಕೆಂದು ಗೊತ್ತು ಮಾಡಲಾಯಿತು. ಈ ಪ್ರಕಾರ ಒಂದು ಗುಂಪಿನ ಸದಸ್ಯರು ಆಂಧ್ರ, ತಮಿಳುನಾಡಿನಲ್ಲಿ ಪ್ರವಾಸಮಾಡಿ ಫೆಬ್ರವರಿ 4ನೇ ತಾರೀಖು ಕರ್ನಾಟಕಕ್ಕೆ ಬಂದರು. ಇಲ್ಲಿಗೆ ಬಂದವರಲ್ಲಿ ಬೆಳಗಾವಿಯ ಅವಂತಿಕಾಬಾಯಿ ಗೋಖಲೆ, ಚಕ್ರವರ್ತಿ ರಾಜಗೋಪಾಲಾಚಾರಿ, ಶ್ರೀ ಶಂಕರಲಾಲ್ ಬ್ಯಾಂಕರ್ ಇದ್ದರು. ಇದರ ಮಾರ್ಗದರ್ಶನ ಮಾಡಲು ಕರ್ನಾಟಕದ ಶ್ರೀ ಗಂಗಾಧರ ದೇಶಪಾಂಡೆಯವರೂ ಇದ್ದರು. ಇವರ ಪ್ರವಾಸ ಕರ್ನಾಟಕದಲ್ಲಿ ಎತ್ತಿನ ಗಾಡಿಯಲ್ಲೇ ಸಾಗಿತು.

ಇವರು ತಮ್ಮ ಪ್ರವಾಸಕಾಲದಲ್ಲಿ ಪಾಚ್ಛಾಪುರಕ್ಕೆ ಬಂದರು. ಅಲ್ಲಿ ಪ್ರತಿ ಮನೆಯಲ್ಲೂ ರಾಟೆಯು ಇದ್ದು ಅವರು ನೂಲುತ್ತಿದ್ದರು. ಅಲ್ಲಿ 175 ನೇಕಾರರು ಸಹಾ ಇದ್ದರು. ಈ ಪೈಕಿ ಬಹುಮಂದಿ ಖಾದಿ ತೊಡುತ್ತಿದ್ದರು. ಸಂತೆಯಲ್ಲಿ ಖಾದಿ ಮಾರಾಟವಾಗುತ್ತಿತ್ತು. ಅಲ್ಲಿಂದ ಅವರು ಬೆಳಗಾವಿಗೆ ಬಂದರು. ಅವರು ಬಂದ ದಿನವೇ ಗಾಂಧಿಯವರು ಅನಾರೋಗ್ಯದ ನಿಮಿತ್ತ ಸೆರೆಮನೆಯಿಂದ ಬಿಡುಗಡೆ ಹೊಂದಿದ್ದರು. ಬೆಳಗಾವಿಯಲ್ಲಿ ಅನೇಕರು ಖಾದಿ ತೊಡುತ್ತಿದ್ದರು.

1924ರಲ್ಲಿ ಖಾದಿಮಂಡಲದ ಶಾಖೆಗಳು ಸ್ಥಾಪಿಸಲ್ಪಟ್ಟವು. ಪ್ರತಿ ಮಂಡಲಿಗೂ ಒಬ್ಬ ಅಧ್ಯಕ್ಷ ಮತ್ತು ಕಾರ್ಯದರ್ಶಿ ಇದ್ದರು. ಇದೇ ಕಾಲದಲ್ಲಿ ಖಾದಿಯ ಮೇಲೆ ಪುಸ್ತಕಗಳು ಸಹ ಪ್ರಕಟವಾದವು. ಶ್ರೀ ಪಡವಿಯವರು 'ಬಡವರ ಭಾಗ್ಯ' ಎಂಬ ಪುಸ್ತಕವನ್ನು ಬರೆದರು. ಶ್ರೀ ಹರ್ಡೇಕರರು ಮತ್ತು ದಿವಾಕರರು ಕೂಡಿ 'ಖಾದಿ ಸಂದೇಶ' ಎಂಬ ಪುಸ್ತಕವನ್ನು ಬರೆದರು. ಸಣ್ಣ ಪುಟ್ಟ ಪತ್ರಿಕೆಗಳೂ ಬರತೊಡಗಿದವು.

ಕರ್ನಾಟಕದಲ್ಲಿ 1925ರಲ್ಲಿಯೇ ಚರಖಾ ಸಂಘದ ಶಾಖೆಯು ಪ್ರಾರಂಭವಾಯಿತು. ಶ್ರೀ ಗಂಗಾಧರರಾವ್ ದೇಶಪಾಂಡೆ ಪ್ರತಿನಿಧಿ ಅಥವಾ ಏಜೆಂಟ್ ಎಂದೂ ಶ್ರೀ ವಿ. ಎಸ್. ಸೋಮಯ್ಯ ಎಂಬುವರು ಕಾರ್ಯದರ್ಶಿ ಎಂದೂ ನಿಯುಕ್ತರಾದರು. ಶ್ರೀ ಹಣಮಂತರಾವ್ ಕೌಜಲಗಿಯವರು ನಂತರ ಕಾರ್ಯದರ್ಶಿಗಳಾದರು.

ಖಾದಿ ಕೆಲಸಗಾರರ ಜೀವನ ನಿರ್ವಹಣೆಗೆ ಸಾಕಷ್ಟು ಗಮನಕೊಡಬೇಕಿತ್ತು. ಈ ಉದ್ದೇಶದ ಜತೆಗೆ ಖಾದಿ ಉತ್ಪತ್ತಿ ಕ್ರಿಯೆ ಇವುಗಳಲ್ಲಿ ಒಂದು ಆದರ್ಶವನ್ನು ಸ್ಥಾಪಿಸುವುದು ಅವಶ್ಯಕವಿತ್ತು. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ, ಮನೆಯಲ್ಲಿ ಹೊರಗೆ ಸಮಾಜದಲ್ಲಿ ಆರ್ಥಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಸತ್ಯವನ್ನು ಪ್ರತಿಷ್ಠಾಪಿಸುವುದಿತ್ತು. ಧ್ಯೇಯವು ಉನ್ನತವಾದರೆ ಅಷ್ಟೇ ಕಠಿಣವಾಗಿತ್ತು. ಇದು ರಾಟೆಯ ಮೂಲಕ ಸ್ಥಾಪಿತವಾಗಬೇಕೆಂದು ಚರಕಾ ಸಂಘದ ಉದ್ದೇಶವಿತ್ತು. ಖಾದಿ ಕಾರ್ಯಕರ್ತರ ಜವಾಬ್ದಾರಿ ಇದರಲ್ಲಿ ವಿಶೇಷವಾಗಿದ್ದು ಇವರು ಕೆಲವು ಸಾವಿರ ಮಂದಿ ಇದ್ದು ಇವರು ದೇಶದ ಮೂಲೆ ಮೂಲೆಯಲ್ಲಿ ಹರಡಿದ್ದರು. ಕಾಂಗ್ರೆಸ್ ಹೊರತು ಬೇರಾವ ಸಂಸ್ಥೆಯೂ ಇಷ್ಟು ಸಂಪರ್ಕ ಬೆಳೆಸಿರಲಿಲ್ಲ. ಸಾದಾ ಜೀವನ ನಡೆಸಲು ಖಾದಿ ಕಾರ್ಯಕರ್ತರಿಗೆಲ್ಲಾ ಸಾಮಾನ್ಯ ಸವಲತ್ತು ಒದಗಿಸಬೇಕಾದ್ದೂ ವೇತನದ ವ್ಯತ್ಯಾಸ ಆದಷ್ಟು ಕಡಿಮೆ ಆಗಿರಬೇಕೆಂದೂ ತೀರ್ಮಾನಿಸಲಾಯಿತು. ನೆಯ್ಗೆಯವರಿಗೆ ರಿಯಾಯ್ತಿ ತೋರಿಸಲಾಗುತ್ತಿತ್ತು. ಮಧ್ಯಮ ವರ್ಗದ ಹೆಣ್ಣು ಮಕ್ಕಳಿಗೆ ದುಡಿಯಲು ಪ್ರೋತ್ಸಾಹವಿತ್ತು.

* * * *

ಗಾಂಧೀಜಿ ಮತ್ತು ಖಾದಿ

ದಿ|| ವೈಕುಂಠಲಾಲ ಮೆಹತಾ
ಖಾದಿ ಆಯೋಗದ ಪ್ರಥಮ ಅಧ್ಯಕ್ಷರು
ಗಾಂಧೀಜಿಯ ನಿಷ್ಠಾವಂತ ಅನುಯಾಯಿಗಳು

ನಾವು ಪ್ರತಿ ವರುಷ ಗಾಂಧಿ ಜಯಂತಿ ಆಚರಿಸುತ್ತೇವೆ. ಗಾಂಧೀಜಿ ಪಾರತಂತ್ರ್ಯ ದಿಂದ ಭಾರತವನ್ನು ಮುಕ್ತ ಮಾಡಿದರೆಂಬುದೊಂದೇ ಕಾರಣವಲ್ಲ. ಆದರೆ ಅವರ ಜೀವನದಿಂದ ನಮಗೆ ಅಖಂಡ ಸ್ಫೂರ್ತಿ ದೊರೆಯುವುದುಂಟು. ಅವರ ಜಯಂತಿ ಆಚರಿಸುವುದರಿಂದ ನಮ್ಮ ವಿಧಾಯಕ ಕಾರ್ಯನಿಷ್ಠೆ ಹೆಚ್ಚುವುದುಂಟು. ಗಾಂಧೀಜಿ ರಾಷ್ಟ್ರಕ್ಕೆ ಅನೇಕ ವಿಧಾಯಕ ಕಾರ್ಯಗಳನ್ನು ಕೊಟ್ಟರು. ಅದರಲ್ಲಿ ಖಾದಿ ಕಾರ್ಯಕ್ರಮ ಒಂದು ಮುಖ್ಯವಾದುದು. ಇದೆಲ್ಲದಕ್ಕೂ ಒಂದು ಮೂಲ ಉದ್ದೇಶವೆಂದರೆ ಸತ್ಯ ಮತ್ತು ಅಹಿಂಸೆ ಆಧಾರಿತ ಸಮಾಜ ರಚನೆ ಮಾಡುವುದು. ಗಾಂಧೀಜಿ ಸಮಯಕ್ಕಿಂತ ಈಗ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿಯಲ್ಲಿ ಎಷ್ಟೇ ಬದಲಾವಣೆಯಾಗಿದ್ದರೂ ಆ ಉದ್ದೇಶದ ಮಹತ್ವ ಎಳ್ಳಷ್ಟೂ ಕಡಿಮೆಯಾಗಿಲ್ಲ.

ಗಾಂಧೀಜಿ ದೇಶಕ್ಕೆ ಕೊಟ್ಟ ಅನೇಕ ವಿಧಾಯಕ ಕಾರ್ಯಕ್ರಮಗಳಲ್ಲಿ ಖಾದಿ ಒಂದು ಕಾರ್ಯಕ್ರಮವಿದ್ದರೂ ಖಾದಿಗೆ ಒಂದು ವಿಶೇಷ ಮಹತ್ವವಿದೆ ಎಂಬುದನ್ನು ಅವರು ಅರಿತಿದ್ದರು. ಆ ಕಾರಣವೆಂದರೆ ಆರ್ಥಿಕ ಸಮಾನತೆಯ ಸಂದೇಶವನ್ನು ಬೀರುವ 'ಚರಖಾ' ಬಡವರಿಗೆ ಜೀವನೋಪಾಯದ ಆಧಾರವಾಗಿದೆಯಲ್ಲದೆ, ಅಹಿಂಸೆಯ ಮಾರ್ಗದಿಂದ ಕ್ರಾಂತಿ ನಿರ್ಮಾಣಮಾಡಿ, ಸಮಾಜದಲ್ಲಿ ಸಮಾನತೆ ಮತ್ತು ಆರ್ಥಿಕ ಸಮತೆ ಯನ್ನು ನಿರ್ಮಾಣಮಾಡುವ ಸಾಧನವೆಂದು ಅವರು ಮನಗಂಡಿದ್ದರು. ಹಿಂದೂ ತತ್ವಜ್ಞಾನದ ಒಂದು ಮಹತ್ವದ ಸಿದ್ಧಾಂತವೆಂದರೆ – ಎಲ್ಲ ಜನರೂ ಸರಿಸಮಾನರು. ಇದೇ ಸಿದ್ಧಾಂತವನ್ನು ಅವರು ನಮ್ಮ ಮುಂದೆ ಬೇರೆ ರೂಪದಲ್ಲಿ ಇಟ್ಟರು. ವ್ಯಕ್ತಿಯ ಲಾಭವು ಸಮಾಜದ ಲಾಭವಾಗಬೇಕು. ಆದ್ದರಿಂದ ವ್ಯಕ್ತಿಗಳಿಂದ ಮತ್ತು ಸಮಾಜ ದಿಂದ ಇತರ ವ್ಯಕ್ತಿಗಳ ಮತ್ತು ಸಮಾಜದ ಶೋಷಣೆಯನ್ನು ನಿಲ್ಲಿಸಲೇಬೇಕು. ಅಂದರೆ ಸಮಾಜ ಮತ್ತು ವ್ಯಕ್ತಿ ಇವು ತಮ್ಮ ಜೀವನದ ಮಹತ್ವದ ಅವಶ್ಯಕತೆಗಳನ್ನು ಪೂರೈಸಿ ಕೊಳ್ಳುವುದರಲ್ಲಿ ಸ್ವಾವಲಂಬಿಯಾದಾಗ ಮಾತ್ರ ಇದು ಸಾಧ್ಯ. ಇದರ ಅರ್ಥವೇನೆಂದರೆ ಸ್ವತಃ ಪರಿಶ್ರಮದಿಂದಲೇ ಅವರಿಗೆ ತಮ್ಮ ರೊಟ್ಟಿ ದೊರೆಯಬೇಕು. ಅದಕ್ಕಾಗಿ ಪರಾವಲಂಬಿಗಳಾಗಬಾರದು. ದಕ್ಷಿಣ ಆಫ್ರಿಕೆಯಿಂದ ಬಂದ ನಂತರ ಗಾಂಧೀಜಿ

ಇಲ್ಲಿಯ ಪರಿಸ್ಥಿತಿಯನ್ನು ಪರಿಶೀಲಿಸಿದರು; ಮತ್ತು ಈ ಶ್ರಮದ ರೊಟ್ಟಿ ದೊರೆಯುವ ಮಹತ್ವದ ಸಾಧನವೇ 'ಚರಖಾ' ಎಂದು ಕಂಡುಹಿಡಿದರು.

ದೇಶದ ಆರ್ಥಿಕ ಪರಿಸ್ಥಿತಿ ಹದಗೆಟ್ಟಿತ್ತು. ದೇಶದಲ್ಲಿ ಬಡತನ ಹೆಚ್ಚಾಗಿತ್ತು. ಇದರ ಮೂಲಕಾರಣವೆಂದರೆ ನಮ್ಮ ದೇಶದ ಮೂಲ ಉದ್ಯೋಗ–ದಂಧೆಗಳೆಲ್ಲ ಪರಕೀಯ ಆಳ್ವಿಕೆಯಲ್ಲಿ ನಾಶವಾಗಿದ್ದವೆಂದು ಅಂದಿನ ಮುಖಂಡರ ಅಭಿಪ್ರಾಯವಿತ್ತು. ಬ್ರಿಟಿಷರು ತಳೆದ ಧೋರಣೆಯಿಂದ ಇಂಗ್ಲೆಂಡಿನ ಆರ್ಥಿಕ ಸ್ಥಿತಿಯು ಸುಧಾರಿಸಿದರೆ ಭಾರತದ ಆರ್ಥಿಕ ಮತ್ತು ಸಾಮಾಜಿಕ ವಿಷಮತೆ ಬೆಳೆಯಿತು. ಈ ಘಟನೆಯ ವಿಶ್ಲೇಷಣೆಯನ್ನು ಗಾಂಧೀಜಿ ಅವರು ಇತರ ಮುಖಂಡರಿಗಿಂತ ಬೇರೆ ಪದ್ಧತಿಯಿಂದ ಮಾಡಿದರು. ಔದ್ಯೋಗಿಕ ಕ್ರಾಂತಿಯ ದುಷ್ಪರಿಣಾಮ ಪಟ್ಟಣಗಳಿಗಿಂತ ಹಳ್ಳಿಗಳ ಮೇಲೆ ವಿಪರೀತವಾಯಿತೆಂದೇ ಅವರ ಅಭಿಪ್ರಾಯ. ಈ ದೇಶದ ಎಂಬತ್ತು ಪ್ರತಿಶತ ಜನರು ಗ್ರಾಮವಾಸಿಗಳು. ಗ್ರಾಮದಲ್ಲಿಯ ಆರ್ಥಿಕ ಸಮತೋಲನವನ್ನು ಕಾಯ್ದು ಕೊಳ್ಳಲು ಗ್ರಾಮೀಣ ಅರ್ಥ ವ್ಯವಸ್ಥೆಯ ಸುಧಾರಣೆಯ ಕಡೆಗೇ ನಾವು ಗಮನ ಕೊಡಬೇಕು. ಪರಕೀಯ ಆಡಳಿತೆಯ ಮೂಲಕ ಕಳೆದ ನೂರು ವರುಷಗಳಲ್ಲಿ ಅನುಸರಿಸಿದ ವಿಪರೀತ ಧೋರಣೆಯ ಮೂಲಕ ದೇಶದಲ್ಲಿ ನಿತ್ಯ ಜೀವನೋಪಾಯದ ವಸ್ತುಗಳು ಹೆಚ್ಚು ಪ್ರಮಾಣದಿಂದ ಪರದೇಶದಿಂದ ಬರಹತ್ತಿದವು. ಆದ್ದರಿಂದ ನಿತ್ಯ ಬೇಕಾಗುವ ವಸ್ತುಗಳ ಉತ್ಪಾದನೆ ನಮ್ಮ ದೇಶದಲ್ಲಿಯೇ ಆಗಬೇಕೆಂದು ಅಂದಿನ ಕಾಂಗ್ರೆಸಿನ ಮತ್ತು ಇತರ ಮುಖಂಡರು ಅಭಿಪ್ರಾಯಪಟ್ಟರು. ಆದರೆ ಗಾಂಧೀಜಿ ಅಭಿಪ್ರಾಯವೇ ಬೇರೆಯಾಗಿತ್ತು. ಆರ್ಥಿಕ ಸ್ವರಾಜ್ಯವನ್ನು ಸ್ಥಾಪಿಸಲು ಈ ಮಾರ್ಗ ಪರಿಪೂರ್ಣವಾದುದಲ್ಲವೆಂದು ಅವರ ಸ್ಪಷ್ಟ ಅಭಿಪ್ರಾಯ. ಈ ಔದ್ಯೋಗೀಕರಣದ ಭೂತವೇ ಗ್ರಾಮೀಣ ಕಲಾಕೌಶಲ್ಯವನ್ನು ನುಂಗಿತ್ತು. ಮತ್ತು ಗ್ರಾಮಾಂತರದಲ್ಲಿದ್ದ ಹೆಚ್ಚಿನ ಕಸುಬುದಾರರಿಗೆ ತಮ್ಮ ಉಪಜೀವನಕ್ಕಾಗಿ ಉದ್ಯೋಗವೇ ಉಳಿಯದಂತಾಯ್ತು. ಅಂದರೆ ಜನತೆಯ ಮೇಲೆ ಒತ್ತಾಯದಿಂದ ಈ ದಾರಿದ್ರ್ಯವನ್ನು ಹೇರಿದಂತಾಯ್ತು.

ದೇಶದ ಜನಸಂಖ್ಯೆ ಹೆಚ್ಚಾದಂತೆ ಭೂಮಿ ಬೆಳೆಯುವುದಿಲ್ಲ. ಆದರ ಉತ್ಪತ್ತಿ ತೀರ ಕಡಿಮೆ ಇತ್ತು. ಕಾರಣ ಈ ನಿರುದ್ಯೋಗೀ ಗ್ರಾಮೀಣ ಜನರಿಗೆ ಉದ್ಯೋಗ ಕೊಡುವುದು ಅತ್ಯಂತ ಅಗತ್ಯವಾದದ್ದೆಂದು ಅವರು ಭಾವಿಸಿದರು. ಈ ನಿರುದ್ಯೋಗಿಗಳು ತಮ್ಮ ವೇಳೆಯ ಸದುಪಯೋಗ ಮಾಡಿಕೊಂಡು ಸ್ವಾವಲಂಬಿಯಾಗುವ ದೃಷ್ಟಿಯಿಂದ ಕೈಕೊಳ್ಳಬೇಕಾದ ಕೆಲಸವೆಂದರೆ ಈ ಬಟ್ಟೆ ಉತ್ಪಾದನೆಯು. ಮತ್ತು ಬಟ್ಟೆಯು ಮನುಷ್ಯನಿಗೆ ಅತ್ಯಂತ ಅವಶ್ಯವಾಗಿ ಬೇಕಾದ ಮಹತ್ವದ ವಸ್ತು.

ಈ ದೇಶದಲ್ಲಿ ಬಹುಭಾಗದಲ್ಲಿ ಈ ಬಟ್ಟೆ ಉತ್ಪತ್ತಿಗೆ ಬೇಕಾಗುವ ಕಚ್ಚಾಮಾಲು, ನೂಲುವ–ನೇಯುವ ಸಾಧನ ಮತ್ತು ಇದನ್ನು ಸಿದ್ಧಮಾಡುವ ಕುಶಲತೆ ಎಲ್ಲವೂ

ಹಳ್ಳಿಗಳಲ್ಲಿತ್ತೆಂದೂ ಇದರಿಂದ ಎರಡು ರೀತಿಯ ಲಾಭಗಳೀಗುವವೆಂದೂ ಅವರ ವಿಚಾರ. ಮೊದಲನೆಯದಾಗಿ ಕೆಲಸವಿಲ್ಲದವರ ಕೈಗೆ ಕೆಲಸ ಕೊಟ್ಟಂತಾಯಿತು. ಮತ್ತು ಎರಡನೆಯದೆಂದರೆ ತಮಗೆ ಬೇಕಾದ ಬಟ್ಟೆ ಉತ್ಪಾದನೆ ಮನೆಯಲ್ಲಿಯೇ ಆದುದರಿಂದ ಅಷ್ಟರಮಟ್ಟಿಗೆ ಆರ್ಥಿಕ ಲಾಭವಾದಂತಾಯಿತು.

ಖಾದಿ ಕಾರ್ಯಕ್ರಮವು ಸ್ವಾತಂತ್ರ್ಯ ಸಂಗ್ರಾಮದ ಒಂದು ಭಾಗವಾಗಿತ್ತು. ಆದರೆ ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಅದರ ಮಹತ್ವ ಎಳ್ಳಷ್ಟೂ ಕಡಿಮೆಯಾಗಿರುವುದಿಲ್ಲ. ಇದರಿಂದ ನಮ್ಮ ದೇಶದಲ್ಲಿ ಬೇರೂರಿದ ಬ್ರಿಟಿಷರ ಅಧಿಕಾರ ಹೋಯಿತು. ಆದರೆ ಇದರಿಂದ ಸ್ವದೇಶಿ ಮಹತ್ವ ಕಡಿಮೆಯಾಗಬಲ್ಲದೇ ? ಸ್ವಾತಂತ್ರ್ಯ ಪ್ರಾಪ್ತಿಯ ನಂತರವೂ ಸ್ವದೇಶಿಯ ಪುರಸ್ಕಾರ ಮಾಡುವುದು ಅತ್ಯಂತ ಅವಶ್ಯವಾಗಿದೆ. ಸ್ವದೇಶಿಯ ಪ್ರತೀಕವೆಂದರೆ 'ಖಾದಿ'. ಖಾದಿ ಮಾತ್ರ ನೂರಕ್ಕೆ ನೂರು ಸ್ವದೇಶಿ ಎಂದು ಗಾಂಧಿ ಅನೇಕ ಸಲ ಹೇಳಿದ್ದುಂಟು. ಖಾದಿಯಲ್ಲಿ ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷ ಪರದೇಶಿ ಏನೂ ಇರುವುದಿಲ್ಲ. ಖಾದಿಯ ಇನ್ನೊಂದು ಮಹತ್ವವೆಂದರೆ ಇದರಿಂದ ಲಕ್ಷಾವಧಿ ಜನರಿಗೆ ಉದ್ಯೋಗ ದೊರೆಯುತ್ತದೆ. ಕಾರಣ ಪಟ್ಟಣವಾಸಿಗಳು ಬೇರೆ ಯಾವ ಬಟ್ಟೆಯನ್ನೂ ಉಪಯೋಗಿಸದೆ ಕೇವಲ ಖಾದಿ ಬಟ್ಟೆಯನ್ನೇ ಉಪಯೋಗಿಸಿ ಈ ಉದ್ಯೋಗಕ್ಕೆ ಪ್ರೋತ್ಸಾಹ ಕೊಡಬೇಕೆಂದು ಗಾಂಧೀಜಿ ಆಗ್ರಹಪಡಿಸುತ್ತಿದ್ದರು. ಈ ಪ್ರಕಾರ ಪಟ್ಟಣಿಗರು ಖಾದಿ ಬಟ್ಟೆಯನ್ನು ಕೊಂಡು ಹಳ್ಳಿಯ ಕಸುಬುದಾರರೊಡನೆ ಸಂಪರ್ಕ ಬೆಳೆಸಬೇಕು. ಗಾಂಧಿ ಕಾಲದಲ್ಲಿ ಇದರ ಅವಶ್ಯಕತೆ ಎಷ್ಟಿತ್ತೋ ಇಂದೂ ಅಷ್ಟೇ ಇದೆ. ಈಗ ದೇಶದಲ್ಲಿ ಖಾದಿ ಉತ್ಪತ್ತಿ ಬೆಳೆಯುತ್ತಲಿದೆ. ಕಸುಬುದಾರರ ಗಳಿಕೆಯೂ ಹೆಚ್ಚಾಗಿದೆ. ಆದರೆ ಯಾವಾಗಲೂ ಖಾದಿ ಧರಿಸುವವರ ಸಂಖ್ಯೆ ಮಾತ್ರ ಹೆಚ್ಚಾಗಿಲ್ಲ. ಖಾದಿ ಮಾರಾಟ ಬೆಳೆಯಬೇಕಾದರೆ ಖಾದಿ ಹೆಚ್ಚು ಆಕರ್ಷಕವಾಗುವಂತೆ ನಾವು ಮಾಡಬೇಕು. ಖಾದಿ ಮಹತ್ವವನ್ನು ಜನತೆಗೆ ತಿಳಿಸಿಕೊಡಲು ಗಾಂಧಿ ಜಯಂತಿ ಯಂಥ ಸಮಯ ಬೇರೊಂದಿಲ್ಲ. ಈಗ ನಮ್ಮ ಪಂಚವಾರ್ಷಿಕ ಯೋಜನೆಯ ಮೇರೆಗೆ ದೇಶದ ಉತ್ಪತ್ತಿ ಬೆಳೆದಿದ್ದರೂ ದೇಶದ ಬಡತನ ನಿರುದ್ಯೋಗ ಹಿಂಗಿಲ್ಲ. ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಲೇ ಇದೆ. ಇತ್ತ ನಾವು ದುರ್ಲಕ್ಷ್ಯ ಮಾಡುವಂತಿಲ್ಲ. ಕಾರಣ ಈ ಯೋಜನೆಯನ್ನು ಹಾಕುವವರು ಇತರ ದೊಡ್ಡ ಉದ್ಯೋಗಗಳೊಡನೆ ತಮ್ಮ ಯೋಜನೆಯಲ್ಲಿ ಖಾದಿಗೂ ಸ್ಥಾನ ಕೊಟ್ಟಿದ್ದಾರೆ. ಇದಕ್ಕೆ ಮುಖ್ಯ ಕಾರಣವೆಂದರೆ ಗ್ರಾಮೀಣ ಭಾಗದಲ್ಲಿ ಉತ್ಪಾದನೆಯ ಕಾರ್ಯದಲ್ಲಿ ಹೆಚ್ಚು ಉದ್ಯೋಗ ಕೊಡಬಲ್ಲ ಉದ್ಯೋಗವೆಂದರೆ ಖಾದಿ ಗ್ರಾಮೋದ್ಯೋಗವೆಂದೇ ಹೇಳಬೇಕು.

ಒಕ್ಕಲುತನದ ಜೊತೆಗೆ ಹೆಚ್ಚು ಪ್ರತಿಫಲ ಕೊಡಬಲ್ಲ ಇತರ ಚಿಕ್ಕಪುಟ್ಟ ಉದ್ಯೋಗಗಳ ಕಡೆಗೆ ನಾವು ಗಮನಕೊಡಬೇಕು. ಈ ದೃಷ್ಟಿಯಿಂದ ಗ್ರಾಮೀಣ ಔದ್ಯೋಗೀಕರಣಕ್ಕೆ ಪ್ರಾಧಾನ್ಯತೆ ಕೊಡುವುದು ಅಗತ್ಯವಾಗಿದೆ. ಆದರೆ ಇಂಥ ಔದ್ಯೋಗೀಕರಣದಲ್ಲಿ ಕೇವಲ ಪಾರಂಪರಿಕ ಉದ್ಯೋಗಗಳಿಗಷ್ಟೇ ಪ್ರೋತ್ಸಾಹ ಕೊಟ್ಟರೆ

ಸಾಲದು. ಇಲ್ಲಿ ಖಾದಿಗೆ ಮಹತ್ವದ ಸ್ಥಾನ ಕೊಡಲೇಬೇಕು. ಐವತ್ತು ವರುಷಗಳ ಹಿಂದೆ ಸರ್ ಎಮ್. ವಿಶ್ವೇಶ್ವರಯ್ಯ ಅವರು ಗ್ರಾಮೀಣ ಭಾಗದಲ್ಲಿ ಲಕ್ಷಾವಧಿ ಜನರಿಗೆ ಉದ್ಯೋಗ ಕೊಡಬೇಕಾದಲ್ಲಿ ಗೃಹೋಪಯೋಗೀ ವಸ್ತುಗಳನ್ನು ಹೆಚ್ಚು ಹೆಚ್ಚು ನಿರ್ಮಾಣ ಮಾಡಬೇಕು ಎಂದು ಹೇಳಿದ್ದರು. ಈ ದೃಷ್ಟಿಯಿಂದ ವಿಚಾರಮಾಡಿದರೂ ಖಾದಿಯ ಹೊರತು ಬೇರೆ ಯಾವ ಉದ್ಯೋಗವೂ ನಿಲ್ಲಲಾರದು ಎಂದು ಗಾಂಧಿ ಅರವತ್ತು ವರುಷಗಳ ಹಿಂದೆಯೇ ಹೇಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿರುವ ಲಕ್ಷಾವಧಿ ಜನರಿಗೆ ಖಾದಿ ಉತ್ಪಾದನೆಯ ಕಾರ್ಯದಲ್ಲಿಯೇ ಜೀವನೋಪಾಯ ದೊರೆಯುತ್ತದೆ ಎಂಬ ಮಾತಿನಲ್ಲಿ ಏನು ಸಂಶಯವಿದೆ ?

* * * *

ವಿದೇಶೀ ಅಧಿಕಾರ ಹೋಗುವುದು ಸ್ವರಾಜ್ಯ ; ಪ್ರತಿಯೊಂದು ಗ್ರಾಮದಲ್ಲೂ ಸ್ವಯಮಾಡಳಿತ ಬಂದರೆ, ಗ್ರಾಮರಾಜ್ಯ ; ಗ್ರಾಮದ ಜನರೆಲ್ಲಾ ಬುದ್ಧಿವಂತರಾಗಿ ಅವರ ಮೇಲೆ ಯಾರೂ ಅಧಿಕಾರ ದರ್ಪ ಚಲಾಯಿಸುವ ಅಗತ್ಯ ಹೋದಾಗ ಅದು ರಾಮರಾಜ್ಯ ; ಗ್ರಾಮಸ್ಥರಾಗಿ ಜನತೆಯ ಸಂಸ್ಕೃತಿಯನ್ನು ಮೈಗೂಡಿಸಿಕೊಂಡ ರಾಜ್ಯಶಾಸ್ತ್ರ ಪ್ರವೀಣರು, ಆರ್ಥಿಕ ತಜ್ಞರು, ಮೇಧಾವಿ ಬುದ್ಧಿಜೀವಿಗಳು, ಶ್ರಮಜೀವನದ ಔನ್ನತ್ಯವನ್ನೆತ್ತಿಹಿಡಿದಾಗ ಅದು ಗ್ರಾಮ ಸ್ವರಾಜ್ಯ.

—ವಿನೋಬಾ

ಖಾದಿ ಮಿಶನ್ ರೂಪರೇಷೆ

ಶ್ರೀ ಬಾಳ ವಿಜಯ

ಪೂ॥ ವಿನೋಬಾ ಅವರ ಕಾರ್ಯದರ್ಶಿಗಳಾಗಿದ್ದರು

ಈಗ 'ಖಾದಿ ಮಿಶನ್'ನ ಸಂಯೋಜಕರು.

ಅರವತ್ತು ವರ್ಷಗಳ ಹಿಂದಿನಿಂದಲೂ ಖಾದಿ ಗ್ರಾಮೋದ್ಯೋಗ ಕಾರ್ಯ ನಡೆದಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಚೈತನ್ಯ, ತ್ಯಾಗ, ಸರ್ವಾರ್ಪಣ ಅದರ ಗುರುತಾಗಿದ್ದವು. ಆಗ ಖಾದಿ ಆತ್ಮವಿಶ್ವಾಸ, ಬಡವರ ಬಂಧು, ಸರಳ ಜೀವನ, ಆರ್ಥಿಕ ಸ್ವಾತಂತ್ರ್ಯ, ಮಾನವೀಯ ಸೇವಾರ್ಪಣ ಇವುಗಳ ಸಂಕೇತವೂ ಆಗಿತ್ತು. 1925ರಲ್ಲಿ ಚರಖಾ ಸಂಘದ ಸ್ಥಾಪನೆಯಾಯಿತು. ಸ್ವಾತಂತ್ರ್ಯದ ತರುವಾಯ ಮೊದಲಿನ ಚೇತನ ಉಳಿಯಲಿಲ್ಲ. ಮೊದಲನೆಯ ಪಂಚ ವಾರ್ಷಿಕ ಯೋಜನೆಯಲ್ಲಿ ಖಾದಿಯ ಸ್ಥಾನ ಭದ್ರ ಪಡಿಸಲು 1953 ಫೆಬ್ರುವರಿಯಲ್ಲಿ ಅಖಿಲ ಭಾರತ ಖಾದಿ ಮಂಡಲಿ ಸ್ಥಾಪನೆಯಾಯಿತು. ಇದಕ್ಕೆ ವಿನೋಬಾರ ಒಪ್ಪಿಗೆಯಿಲ್ಲದೆ ಸರ್ವಸೇವಾ ಸಂಘದ ಸಹಕಾರವೂ ಇತ್ತು. ಆದರೂ ಬಾಬಾರ (ವಿನೋಬಾ) ಇಚ್ಛೆ 'ಖಾದಿ ಮಿಶನ್' ಸ್ಥಾಪನೆಯಾಗಬೇಕೆಂದಿತ್ತು. ಇದಕ್ಕಾಗಿ ಸರಕಾರದೊಡನೆ ಸ್ನೇಹಹಸ್ತ ಚಾಚು ವಾಗ ತಮ್ಮ ಪ್ರಥಮ ಕರ್ತವ್ಯವಾದ ಖಾದಿ ಮಿಶನ್ ಮರೆಯಬಾರದೆಂದು ತಮ್ಮ ಸ್ನೇಹಿತರಿಗೆ ಬಾಬಾ ಎಚ್ಚರಿಕೆ ನೀಡಿದ್ದರು. ಕಳೆದ ಎರಡು ದಶಕಗಳಲ್ಲಿ ಆದ ಖಾದಿ ಗ್ರಾಮೋದ್ಯೋಗ ಕೆಲಸದ ಅನುಭವ ನೋಡಿದರೆ ಅವರ ಈ ಎಚ್ಚರಿಕೆ ಸಕಾಲಿಕ ವಾಗಿತ್ತು. ಹುಟ್ಟುವಳಿ ಮತ್ತು ಮಾರಾಟ ರೂಪದಲ್ಲಿ ಖಾದಿಯ ಮುನ್ನಡೆ ಯಾಗಿದ್ದರೂ, ಗಾಂಧೀಜಿ ಉದ್ದೇಶಗಳು ದೂರ ಸರಿದವು.

ಎಲ್ಲ ಪ್ರಮುಖರೊಡನೆ ವಿಚಾರ ವಿನಿಮಯ ನಡೆದಾಗ ಬಾಬಾ (ವಿನೋಬಾ) ಖಾದಿ ಪ್ರೇಮಿಗಳು ಮುಂದೇನು ಮಾಡಬೇಕೆಂಬುದನ್ನು ವಿಚಾರ ಮಾಡಲಿ ಎಂದು ಹೇಳಿದರು ಗ್ರಾಮಗಳ ಮೇಲಿನ ನಗರಗಳ ಪ್ರಭುತ್ವ ಕಿತ್ತೆಸೆಯಲು ಖಾದಿ ಚೈತನ್ಯ ಅವಶ್ಯವಿತ್ತು. 1981 ಸೆಪ್ಟಂಬರದಲ್ಲಿ ಮೊದಲನೆಯ ಸಭೆ ನಡೆಯಿತು. 1981 ಅಕ್ಟೋಬರ ಎರಡರಂದು ಖಾದಿ ಮಿಶನ್ ಸ್ಥಾಪನೆಯಾಯಿತು. ಖಾದಿ ಗ್ರಾಮೋ ದ್ಯೋಗದಲ್ಲಿ ತೊಡಗಿದ ಎಲ್ಲ ಸಣ್ಣ-ದೊಡ್ಡ ಸಂಸ್ಥೆಗಳು, ಖಾದಿ ಪ್ರೇಮಿಗಳು ಇದರ ಸದಸ್ಯರಾದರು. ಈ ಖಾದಿ ಕುಟುಂಬ ಸಾವಿರಾರು ವಿಧಾಯಕ ಕಾರ್ಯಕರ್ತರು, ಸೋದರ-ಸೋದರಿಯರು — ವಿಶೇಷವಾಗಿ ಗ್ರಾಮೀಣ ಜನಪದ ಸೇವಕರನ್ನು

ಒಳಗೊಂಡಿದೆ. ಖಾದಿಯಲ್ಲಿ "ಗ್ರಾಮೋದ್ಯೋಗ" ಶಬ್ದವು ಅಡಕವಾಗಿದೆ. ಇದರ ಉದ್ದೇಶಗಳು :

1) ಖಾದಿ ಅಹಿಂಸೆಯ ಪ್ರತೀಕವಾಗಬೇಕು.
2) ಗ್ರಾಮ ಸ್ವರಾಜ್ಯ ಆದರ ಗುರಿ.
3) ಕಾರ್ಯ ವಿಧಾನದ ನಿರ್ದೇಶನ – ಸರಕಾರದ ಮೇಲೆಯೇ ಅವಲಂಬನವಿರಬಾರದು. ಜನಶಕ್ತಿ, ವಿದ್ವಜ್ಜನ ಶಕ್ತಿ, ಮಹಾಜನ (ಉದ್ಯೋಗಪತಿ) ಶಕ್ತಿ, ಸಜ್ಜನ ಶಕ್ತಿ ಮತ್ತು ಶಾಸನ ಶಕ್ತಿ ಇವುಗಳಲ್ಲಿ ಒಂದು ಇಲ್ಲವೆ ಐದೂ ಕೂಡಿ ಕೆಲಸ ಕೈಕೊಳ್ಳಬೇಕು.
4) ಖಾದಿ ಚೈತನ್ಯ ಬೆಳಸುವುದು ಮತ್ತು ಕಾರ್ಯಕರ್ತರಿಗೆ ಮಿಶನರಿ ಚೇತನದ ತರಬೇತಿ ಕೊಡುವುದು.
5) ಸಂಘ-ಸಂಸ್ಥೆಗಳ ನಡುವೆ, ಸಂಘ ಸಂಸ್ಥೆಗಳು ಮತ್ತು ಸರಕಾರದ ನಡುವೆ ಒಳ್ಳೆಯ ಸಂಬಂಧ ಬೆಳೆಸುವುದು. ಈ ಐದು ಖಾದಿ ಮಿಶನ್‌ನ ನಿರ್ದೇಶಕ ತತ್ತ್ವಗಳು. ಈ ನೆಲಗಟ್ಟಿನ ಮೇಲೆ ಇಲ್ಲಿಯ ವರೆಗೆ ನಾಲ್ಕು ಸಭೆಗಳು ಜರುಗಿವೆ. ಖಾದಿ ಕೆಲಸದ ಎಷ್ಟೋ ಸ್ವರೂಪಗಳ ಮತ್ತು ಸಮಸ್ಯೆಗಳ ಚರ್ಚೆ ನಡೆದಿವೆ. ಆದರೂ ಖಾದಿ ಮಿಶನ್‌ನ ಸಂಘಟನೆಯ ರೂಪ-ರೇಷೆ ಇನ್ನೂ ನಿಶ್ಚಿತವಾಗಿಲ್ಲ. ಕಾಲಕ್ಕೆ ತಕ್ಕ ವಿಕಾಸ ನಡೆಯಬೇಕಾಗಿದೆ.

ನಮ್ಮ ರೂಪ ರೇಷೆ: ಸ್ವಾತಂತ್ರ್ಯದ ತರುವಾಯ ವಿಧಾಯಕ ಕಾರ್ಯದ ಅವಶ್ಯಕತೆ ಹೆಚ್ಚಾಗಿದೆ. ಎರಡು ತರದ ವಿಧಾಯಕ ಕಾರ್ಯಕ್ರಮಗಳಿವೆ.

1) ಯಥಾಸ್ಥಿತಿ ಕಾಯ್ದುಕೊಂಡು, ಕಲ್ಯಾಣಕಾರಕ ವಿಧಾಯಕ ಕಾರ್ಯಕ್ರಮಗಳನ್ನು ನಡೆಸುವುದು.
2) ಸಾಮಾಜಿಕ ಮಾರ್ಪಾಡು — ಸಮಾಜ ರೂಪಾಂತರ ಮತ್ತು ಚಾರಿತ್ರ್ಯ ಬೆಳವಣಿಗೆಗಳ ಸಾಧನವಾಗಿ ಗಾಂಧೀಜಿ ನೀಡಿದ ವಿಧಾಯಕ ಕಾರ್ಯಕ್ರಮಗಳು.

ನಮ್ಮ ಸೇವೆ: ಸಾಮೂಹಿಕ ಪ್ರಯತ್ನ— ಎಷ್ಟೋ ವರ್ಷಗಳಿಂದ ಸಮಾಜದ ಒಂದು ತರದ ಸೇವೆಯಲ್ಲಿ ನಾವು ನಿರತರಾಗಿದ್ದೇವೆ. ಇದು ಕೇವಲ ಭೌತಿಕ ಪ್ರಗತಿ. ಇದು ತೃಪ್ತಿಕರ ಸೇವೆಯಲ್ಲ. ಭೌತಿಕ, ನೈತಿಕ ಮತ್ತು ಆಧ್ಯಾತ್ಮಿಕ ಪ್ರಗತಿ ಮಾತ್ರ ಉದ್ದೇಶಿತ ಸೇವೆಯ ಪೂರ್ಣಾಂಗವಾಗುತ್ತದೆ ಎಂದು ಬಾಬಾ ಹೇಳುತ್ತಿದ್ದರು. ಇದಕ್ಕೆ ಸಾಧನ ಅಂದರೆ ನಿರಂತರ ಸಮರ್ಪಣ ಪ್ರಯತ್ನಬೇಕು. ಸಾಮೂಹಿಕ ಸೇವೆಗೆ ಸಾಮೂಹಿಕ ಪ್ರಯತ್ನ ಬೇಕೆಂದು ಬಾಬಾರ ಬಯಕೆ ಇತ್ತು. ಈ ಉದ್ದೇಶಕ್ಕಾಗಿಯೇ 'ಖಾದಿ ಮಿಶನ್'ನ ಅವತಾರವಾಯಿತು. ಈ ವಿಜ್ಞಾನ ಯುಗದಲ್ಲಿ ಇದೊಂದು ಅಮೂಲ್ಯ ಕಾಣಿಕೆ. ಇದೊಂದೇ ಜಗತ್ತಿನ ಸ್ಥಿರಶಾಂತಿ ಮತ್ತು ಬೆಳವಣಿಗೆಗೆ ದಾರಿಯಾಗಬಲ್ಲದು.

ಸತ್ಯ, ಪ್ರೇಮ, ಕರುಣೆ ಈ ಮೂರು ಸಾಧನೆಯ ಪೂಜಾ ದೇವತೆ—ತ್ರಿಮೂರ್ತಿ, ಪ್ರೇಮ ಸೌಹಾರ್ದ ಚಿಹ್ನೆ. ಪ್ರೇಮ ಸಾಧನೆ ನಮ್ರತೆಯಲ್ಲಿದೆ. ವಿಧಾಯಕ ಕಾರ್ಯ ಕ್ರಮವೆಂದರೆ ಪ್ರೇಮ ಪ್ರಸಾರ. ಉಳಿದ ಚಟುವಟಿಕೆಗಳ ದೃಷ್ಟಿಯಿಂದ ನಮ್ಮ ವಿಧಾಯಕ ಕಾರ್ಯಕ್ರಮ ಬೇರೆ. ಇದು ಕೇವಲ ಕಲ್ಯಾಣಕಾರಿ ಚಟುವಟಿಕೆಯಾಗಿರದೆ ಪ್ರೇಮ ಪ್ರಸಾರದ ಪ್ರಯತ್ನವಾಗಿದೆ. ಇದು ವಿಧಾಯಕ ಕಾರ್ಯಕ್ರಮದ ತಳಹದಿ. ಆದ್ದರಿಂದ ಪ್ರೇಮ ಸಾಧನೆ ಅತ್ಯಂತ ಅವಶ್ಯ. ಈಗ ಭೂದಾನ ಮೂಲಕ ಗ್ರಾಮೋ ದ್ಯೋಗ ಪ್ರಧಾನ – ಅಹಿಂಸಕ ಕ್ರಾಂತಿಯಾಗಬೇಕೆಂದು ಬಾಬಾರ ಇಚ್ಛೆ ಇತ್ತು.

ಔದ್ಯಮೀಕರಣದ ಇತಿ ಮಿತಿಗಳು : ವಿಜ್ಞಾನ ಬೆಳವಣಿಗೆ ಮೂಲಕ ಪ್ರತಿಯೊಂದು ದೇಶದಲ್ಲಿ ಔದ್ಯಮೀಕರಣ ಅಭಿವೃದ್ಧಿಯ ಅವಿಭಾಜ್ಯ ಅಂಗವಾಗಿದೆ. ಕೆಲಮಟ್ಟಿಗೆ ಇದು ಲಾಭಕರವೂ ಹೌದು. ಆದರೆ ಭಾರತದಂತಹ ಕೃಷಿ ಪ್ರಧಾನ ದೇಶಗಳಿಗೆ ಲಾಭಕರವಲ್ಲ. ನಗರಗಳ ಶೀಘ್ರ ಬೆಳವಣಿಗೆ, ನಿರುದ್ಯೋಗ ಹೆಚ್ಚಳ, ಗ್ರಾಮೀಣ ಭಾಗಗಳ ಬರಡುತನ, ಪ್ರಾದೇಶಿಕ ಅಸಮಾನತೆ ಇವೆಲ್ಲ ಔದ್ಯೋಗೀಕರಣದ ಅಭಿಶಾಪ ಗಳು. ಮಾನವಪ್ರಾಣಿ, ವಾತಾವರಣ, ಕೃಷಿ, ಪ್ರಾಣಿಲೋಕ ಎಲ್ಲವೂ ಔದ್ಯಮೀಕರಣ ದಿಂದುಂಟಾದ ಪರಿಸರಕ್ಕೆ ಬಲಿಯಾಗಿವೆಯೆಂದು ವಿಶ್ವಸಂಸ್ಥೆಯ ವರದಿ ಇದೆ. ಈ ಜಗತ್ತಿನಲ್ಲಿ ಮುಂದುವರಿದ ತಂತ್ರಜ್ಞಾನದಿಂದ ಮೇಲ್ನೋಟಕ್ಕೆ ಆರೋಗ್ಯ, ಬೆಳವಣಿಗೆ ಮತ್ತು ಸಂತೋಷಗಳು ಕಂಡುಬರುತ್ತವೆ. ಆದರೆ ನಿಜಚಿತ್ರವೇ ಬೇರೆ. ಅಲ್ಲಿರುವುದು ಆರ್ಥಿಕ ಹಿನ್ನಡೆಯ ಭೂತ, ಬಡತನ, ನಿರುದ್ಯೋಗ, ರೋಗ-ರುಜಿನಗಳು ಮತ್ತು ಹಿಂಸೆಯ ತಾಂಡವ. ವಿಜ್ಞಾನವು ಜಗತ್ತಿನ ವರವಾಗದೆ ಶಾಪವಾಗಿದೆ. ಇದು ವಿಜ್ಞಾನದ ತಪ್ಪಲ್ಲ. ಅದರ ಹಿಂದಿರುವ ತಲೆಯ ತಪ್ಪು. ಆಲ್ಬರ್ಟ್ ಐನ್‌ಸ್ಟೀನರಿಗೆ ಒಬ್ಬರು ಕೇಳಿದರು : "ವಿಜ್ಞಾನ ನಮಗೆ ಒಳಿತು ಮಾಡಿದೆಯೆ ?" ಅವರ ಉತ್ತರ : "ನಾವು ವಿಜ್ಞಾನದ ಬಳಕೆಯಲ್ಲಿ ಜಾಣತನ ತೋರಿಲ್ಲ". ಬಾಬಾರ ಅಭಿಪ್ರಾಯವೂ ಇದೇ.

ಪರಕೀಯ ಅನುಕರಣೆ ಘಾತಕ : ನಮ್ಮ ದೇಶದ ಸಾಮಾಜಿಕ ಮತ್ತು ಆರ್ಥಿಕ ಪರಿಸರ ಬೇರೆ. ಪರರ ತತ್ತ್ವಗಳು, ಇಲ್ಲವೆ ಆರ್ಥಿಕ ವ್ಯವಸ್ಥೆಯ ಮಾನದಂಡದಿಂದ ನಮ್ಮ ಪರಿಸ್ಥಿತಿ ಅಳೆಯಬಾರದು. ಕಳೆದ ಎರಡು ದಶಕಗಳಲ್ಲಿ ಗ್ರಾಮಾಭಿವೃದ್ಧಿಯ ಬಗ್ಗೆ ತುಂಬಾ ಚರ್ಚೆ ನಡೆದಿದೆ. ಇದಕ್ಕಾಗಿ ಆರನೆಯ ಯೋಜನೆಯಲ್ಲಿ 30 ಸಾವಿರ ಕೋಟಿ ರೂಪಾಯಿಗಳ ಪ್ರಸ್ತಾಪವಿದೆ. ಅಂತ್ಯೋದಯವಾಗಬೇಕೆಂಬುದು ಇದರ ಉದ್ದೇಶ. ಪ್ರಸ್ತಾಪಿಸಿದ ನೀರಾವರಿ ಕ್ಷೇತ್ರ ಇಮ್ಮಡಿಯಾಗಬೇಕು. ಟ್ರಾಕ್ಟರ್, ರಸಗೊಬ್ಬರಗಳು ಮತ್ತು ಕೀಟನಾಶಕಗಳ ಮೇಲಿನ ಕರ ಕಡಿಮೆ ಮಾಡುವುದು ಇವೆಲ್ಲ ಇವೆ. ಎಷ್ಟೋ ಕಡೆ ಕಾಳಿನ ಉಗ್ರಾಣಗಳೂ ಸಿದ್ಧವಾಗಿವೆ.

ಕೃಷಿ ಅವಲಂಬಿತರಲ್ಲಿ ನೂರಕ್ಕೆ 36.5 ಜನರು ಹೊಲದಲ್ಲಿ ದುಡಿವ ಕೂಲಿಕಾರರು. ಗ್ರಾಮೀಣ ಪ್ರದೇಶದ ಜನಸಂಖ್ಯೆಯ 1/3 ಜನರು ತಮ್ಮ ದುಡಿಮೆ ಮಾರಿಕೊಂಡು ಉಪಜೀವನ ಸಾಗಿಸುತ್ತಾರೆ. ಈ ಯೋಜನೆ ಯಾರಿಗಾಗಿ ಮಾಡಲಾಗಿದೆಯೊ, ಆ ಜನರಿಗೆ ಇದು ತಲುಪಿಲ್ಲ. ಹುಟ್ಟುವಳಿ ಹೆಚ್ಚಲು ಕಾರಣರಾದವರೆಲ್ಲರೂ ಬಡವರಾಗಿಯೇ ಇರುವರು. ಶ್ರೀಮಂತರು ಹೆಚ್ಚು ಶ್ರೀಮಂತರಾಗಿದ್ದಾರೆ. ಆ ಬಡಜನರಿಗೆ ಸಾಮಾನ್ಯ ಸೌಕರ್ಯಗಳೂ ಇಲ್ಲ. ಅಂತ್ಯೋದಯಕ್ಕಾಗಿ ಮಾಡಿದ ಯೋಜನೆ ಸುಲಿದವರನ್ನು ಸುಲಿಗೆ ಮಾಡುವುದಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಅಮಾನುಷ ಅನಾಗರಿಕ ಕ್ರೂರನಡತೆ ಮತ್ತು ಹಿಂಸೆಯ ಹೆಚ್ಚಳಕ್ಕೆ ಇದೂ ಒಂದು ಕಾರಣ.

ಸ್ವದೇಶಿ ಯೋಜನೆ: ನಮ್ಮ ದೇಶದ ಜನಪದಕ್ಕೆ ತಕ್ಕ ಸಾಮಾಜಿಕ, ಆರ್ಥಿಕ ತಳಪಾಯದ ಯೋಜನೆ ಬೇಕು. ನೂರಕ್ಕೆ 80ರಷ್ಟು ಇರುವ ಗ್ರಾಮೀಣ ಜನಸಂಖ್ಯೆ ಒಳಗೊಳ್ಳುವ, ನಿತ್ಯದ ಬೇಡಿಕೆಗಳನ್ನು ಪೂರೈಸುವ ಯೋಜನೆ ಬೇಕು. ನಮ್ಮ ದೇಶದ ಸ್ಥಿರತೆ ಈ ತೃಪ್ತಿಯ ಮೇಲೆಯೇ ಅವಲಂಬಿಸಿದೆ. ಪಶು ಸಂಪತ್ತು ಮತ್ತು ಗ್ರಾಮೋದ್ಯೋಗ ತಳಹದಿಯ ಸ್ವಾವಲಂಬಿ ಸಾಮಾಜಿಕ ಮತ್ತು ಆರ್ಥಿಕ ಕ್ರಮ ನಮ್ಮ ದೇಶದ ಸ್ಥಿರತೆಯನ್ನು ಬಲಗೊಳಿಸಿವೆ. ಗ್ರಾಮಜೀವಿಗಳು ತಾವೇ ಸಿದ್ಧಗೊಳಿಸಿದ ನಿತ್ಯ ಬಳಕೆಯ ವಸ್ತುಗಳಲ್ಲಿ ಮತ್ತು ಉಪಕರಣಗಳಲ್ಲಿ ಸ್ವಾವಲಂಬಿತ್ವ ಬರದಿದ್ದರೆ, ಗ್ರಾಮೀಣ ಜೀವನ ಕಷ್ಟದಾಯಕ ಮತ್ತು ಅನಭಿವೃದ್ಧವಾಗುತ್ತದೆ. ನಮಗೆ ಅಂತ್ಯೋದಯ ಬೇಕಾಗಿದ್ದರೆ ಮತ್ತು ಸುಲಿಗೆ ನಿಲ್ಲಬೇಕಾಗಿದ್ದರೆ, ವಿಕೇಂದ್ರೀಕರಣ ಅರ್ಥವ್ಯವಸ್ಥೆ, ಗ್ರಾಮೋದ್ಯೋಗಗಳು, ಸ್ವಯಂ ಉದ್ಯೋಗ ಮತ್ತು ಗ್ರಾಮ ಸ್ವಾವಲಂಬನೆಗಳೇ ತಾರಕ. ಖಾದಿ ಮತ್ತು ಗ್ರಾಮೋದ್ಯೋಗಗಳು ಉಪಕಸುಬುಗಳಲ್ಲ. ಅವು ನಿರುದ್ಯೋಗ ನಿವಾರಣೆ ಮತ್ತು ಗ್ರಾಮೀಣ ಅರ್ಥವ್ಯವಸ್ಥೆಗೆ ಬಲ ತರುವ ಸಾಧನಗಳು. ದೊಡ್ಡ ಉದ್ದಿಮೆಗಳಿಗೆ ಹಣ ಬಹಳ ಬೇಕು. ಈ ಸಣ್ಣ ಉದ್ಯೋಗಗಳಿಗೆ ತುಸು ಬಂಡವಾಳ ಸಾಕು. ಹಳ್ಳಿಯ ಕಡುಬಡವನೂ ಇದನ್ನು ಮಾಡಬಹುದು. ಆದ್ದರಿಂದ ಖಾದಿ–ಗ್ರಾಮೋದ್ಯೋಗಗಳೇ ಗ್ರಾಮ ಸಮಾಜಕ್ಕೆ ತಾರಕವೆನಿಸುವವು. ಇವುಗಳಿಗೆ ತೋರುವ ಮಲತಾಯಿ ಧೋರಣೆ ಬದಲಾಗಬೇಕು. 1946ರಲ್ಲಿ ಗಾಂಧೀಜಿ ಬಟ್ಟೆ ಗಿರಣಿಗಳ ರಾಷ್ಟ್ರೀಕರಣ ಮತ್ತು ಖಾದಿ ಸಂರಕ್ಷಣೆಗೆ ಹೇಳಿದ್ದರು. ಗ್ರಾಮ ಸ್ವಾವಲಂಬನೆ ಸರಕಾರದ ನೀತಿಯಾಗಲೆಂದು ಚರಖಾ ಸಂಘ ಗೊತ್ತುವಳಿ ಮಾಡಿತ್ತು.

ಕರ್ತವ್ಯದ ಎಚ್ಚರ: ಗ್ರಾಮ ಸ್ವಾವಲಂಬನದ ಕಡೆಗೆ ನಾವು ಹೆಜ್ಜೆ ಹಾಕಬೇಕು. ನಮ್ಮ ಕೆಲಸದ ರೀತಿಯಲ್ಲಿ ಬದಲಾವಣೆ ಬೇಕು. ಗ್ರಾಮದ ಜನರಲ್ಲಿ ಖಾದಿ ಸಂಸ್ಥೆ ತಮ್ಮದೆಂಬ ಭಾವನೆ ಮೂಡಬೇಕು. ಪ್ರೇಮ ಸೌಹಾರ್ದತೆ ಬೇಕು. ಗ್ರಾಮ ಸಮಸ್ಯೆಗಳ ಪರಿಹಾರ ಹುಡುಕಬೇಕು. ಈ ರೀತಿಯಾಗಿ ಸೋದರತ್ವ ಬೆಳೆಯಬೇಕು. ಖಾದಿ

ಮತ್ತು ಗ್ರಾಮೋದ್ಯೋಗಗಳ ಮೂಲಕವೇ ಉದ್ಯೋಗಾವಕಾಶವೆಂಬುದನ್ನು ಜನ ಅರಿಯಬೇಕು. ಗ್ರಾಮ ಸ್ವರಾಜ್ಯ ಸ್ಥಾಪನೆ, ಶೋಷಣ-ರಹಿತ ಅಹಿಂಸಕ-ಸರ್ವೋದಯ ಸಮಾಜ ರಚನೆ ನಮ್ಮ ಗುರಿಯಾಗಬೇಕು.

ಸಾಮೂಹಿಕ ನಿರ್ಣಯ: ಸ್ವಾತಂತ್ರ್ಯಪೂರ್ವದಲ್ಲಿ ವಾತಾವರಣ ಸ್ವಾತಂತ್ರ್ಯ ವಿಚಾರದಿಂದಲೇ ತುಂಬಿ ತುಳುಕುತ್ತಿತ್ತು. ಸ್ವಾತಂತ್ರ್ಯ ಪ್ರಾಪ್ತಿಗಾಗಿ ಇದರ ಅವಶ್ಯಕತೆ ಬಹಳವಿತ್ತು. ಈಗ ಗ್ರಾಮಸ್ವರಾಜ್ಯಕ್ಕಾಗಿ ಅಂತಹ ವಾತಾವರಣ ಸೃಷ್ಟಿಸಬೇಕಾಗಿದೆ. ಬಾಬಾ ಖಾದಿ ಮಿಶನ್‌ನ ಮೇಲೆ ಆ ದೊಡ್ಡ ಹೊಣೆ ಹೊರಿಸಿದ್ದಾರೆ. ಖಾದಿ ಮಿಶನ್ ಮತ್ತು ಖಾದಿ ಆಯೋಗಗಳು ಪರಸ್ಪರ ಸಹಾಯದೊಡನೆ ಈ ಹೊಣೆಗಾರಿಕೆಯನ್ನು ಹೊರಬೇಕಾಗಿದೆಯೆಂದು ಬಾಬಾ ಮೇಲಿಂದ ಮೇಲೆ ಹೇಳುತ್ತಿದ್ದರು. ಪ್ರಾರಂಭ ದಿಂದಲೂ ಖಾದಿ ಆಯೋಗದ ಸಹಕಾರ ಇದ್ದೇ ಇದೆ. ಗಾಂಧೀಜಿ ಮತ್ತು ವಿನೋಬಾಜಿಯಿಂದ ಬಳುವಳಿಯಾಗಿ ಬಂದ ಈ ಹೊಣೆಗಾರಿಕೆಯನ್ನು ನಾವೆಲ್ಲ ಕೂಡಿಕೊಂಡು ನಿಷ್ಠೆ ಮತ್ತು ಜಾಣತನದಿಂದ ಕಾರ್ಯಮಾಡಬೇಕು.

* * * *

ಗಾಂಧಿವಾಣಿ

ಚರಕದ ಸಂದೇಶ, ಅದರ ರಾಟೆಯ ಸುತ್ತಳತೆಗಿಂತ ಮಿಗಿಲು. ಸರಳತೆ, ಮಾನವ ಸೇವೆ, ಇತರರನ್ನು ನೋಯಿಸದ ಬದುಕು. ಬಡವ ಶ್ರೀಮಂತರ ನಡುವೆ ಅವಿನಾಶಿಯಾದ ಬಾಂಧವ್ಯ. ದುಡಿಮೆ ಮತ್ತು ಬಂಡವಾಳಗಳ ಮೈತ್ರಿ. ರಾಜರಂತರಸಖ್ಯ — ಇವು ಖಾದಿಯ ಸಂದೇಶ.

ಚರಖಾ ಮತ್ತು ಮಗ್ಗ
(ಒಂದು ಸಿಂಹಾವಲೋಕನ)

ಶ್ರೀ ದ್ವಾರಕಾನಾಥ ಲೇಲೆ

ಶ್ರೀ ಲೇಲೆ ಅವರು ನಿಷ್ಠಾವಂತ ಖಾದಿ ಧುರೀಣರು. ಗಾಂಧಿ ಗರಡಿಯಲ್ಲಿ ತಯಾರಾದವರು, ಗಾಂಧಿ ಮತ್ತು ವಿನೋಬಾ ಅವರ ನಿಕಟವರ್ತಿಗಳು. ಖಾದಿ ಆಯೋಗದ ಪ್ರಾರಂಭವಾದಾಗ ಖಾದಿ ಸದಸ್ಯ ಪ್ರಮುಖರೆಂದು ಅಮೂಲ್ಯ ಸೇವೆ ಸಲ್ಲಿಸಿದರು. ಚರಖಾ ಸಂಘದಲ್ಲಿಯೂ ದುಡಿದವರು. ಈಗ ಸೇವಾಗ್ರಾಮದಲ್ಲಿ ಖಾದಿ ಕಾರ್ಯನಿರತರಾಗಿದ್ದಾರೆ.

ಖಾದಿ ಎಂದರೆ ಕೈಯಿಂದ ನೂತ ಮತ್ತು ಕೈಯಿಂದ ನೇಯ್ದ ಬಟ್ಟೆ. ಇದರ ಅರ್ಥ ಕೈಯಿಂದ ನೂಲುವುದು ಎಷ್ಟು ಮಹತ್ವವೋ ಅಷ್ಟೇ ಮಹತ್ವ ಕೈಯಿಂದ ನೇಯುವುದು. ಕಳೆದ ಐವತ್ತು ವರುಷಗಳಲ್ಲಿ ನಾವು ಚರಖದ ಸುಧಾರಣೆಯ ಬಗ್ಗೆ ಸಾಕಷ್ಟು ಚಿಂತನೆ ಮಾಡಿ ಪ್ರಗತಿಯನ್ನು ಸಾಧಿಸಿದ್ದೇವೆ. ಆದರೆ ಆ ಪ್ರಮಾಣದಲ್ಲಿ ನೇಯ್ಗೆಯ ಸುಧಾರಣೆಯಾಗಿಲ್ಲ ಎಂಬುದನ್ನು ಧಾರಾಳವಾಗಿ ಹೇಳಬಹುದು. ನೂಲು ನೂತು ನೇಯ್ಗೆಯ ಬಗ್ಗೆ ನಾವು ಲಕ್ಷ್ಯವೀಯದಿದ್ದರೆ ಖಾದಿ ಕಾರ್ಯಕ್ಕೇ ತೊಂದರೆ ಬರುವುದು. ಇಂಥ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರದ ಕೆಲವು ಭಾಗಗಳಲ್ಲಿ ನೂಲುವುದನ್ನೇ ಬಂದ್ ಮಾಡಬೇಕಾಗಿ ಬಂತು. ಆದುದರಿಂದ ಈ ಮಗ್ಗಗಳ ಕಡೆಗೆ ಪೂರ್ತಿ ಲಕ್ಷ್ಯ ಕೊಡುವುದು ಅಗತ್ಯ.

ಇತ್ತಲಾಗಿ ನಾವು ನೂಲುವುದಕ್ಕೆ ಅಂಬರ ಚರಖದ ಬೆನ್ನು ಹತ್ತಿದ್ದೇವೆ. ನಿಜವಾಗಿ ನೋಡಿದರೆ ಅದು ಚರಖವೇ ಅಲ್ಲ. ಆದರೆ ಅದು ಗಿರಣಿಗಳಲ್ಲಿಯ ರಿಂಗ್ ಸ್ಪಿನ್ನಿಂಗ್ ಫ್ರೇಮ್ ಇರುತ್ತದೆ. ಇನ್ನು ಅಂಬರ ಚರಖದ ಬೆಲೆಯನ್ನು ನೋಡಿದರಂತೂ ಅಂತ್ಯೋದಯಕ್ಕಾಗಿ ಅದು ಮನೆ ಮನೆಗೆ ಹಂಚುವ ಸಾಧನವಾಗಲಾರದೆಂದು ತೋರುತ್ತದೆ. ಅಲ್ಲದೆ ಈ ಅಂಬರದ ಮೇಲೆ ನೂಲಲು ಒಂದು ಮಧ್ಯವರ್ತಿ ಸ್ಥಳವೇ ಬೇಕು. ಹಂಜಿಗಳೆಂದು ಹೇಳುವ 'ರೋವಿಂಗ್' ಕೊಡಬೇಕಾಗುವುದು. ಇದರ ಬೆಲೆಯೇ ಹೆಚ್ಚಾದುದರಿಂದ ಇದನ್ನು ಸಾರ್ವತ್ರಿಕ ಮಾಡುವುದು ಕಠಿಣ. ಆದುದರಿಂದ ಮತ್ತೆ ಪರಂಪರಾಗತ ಚರಖದ ವಿಚಾರಗಳೇ ಮುಂದೆ ಬರುವುದುಂಟು. ಆದರೆ ಉತ್ಪಾದನೆಯ ದೃಷ್ಟಿಯಿಂದ ಅಂಬರದೊಡನೆ ತುಲನೆ ಮಾಡಿದರೆ ಅದು ತೀರ ಕಡಿಮೆ. ನೂಲಿನ ನಂಬರಿನಲ್ಲಿಯೂ ಸಮಾನತೆ ಇರುವುದಿಲ್ಲ. ನೂಲುವವರಿಗೆ ಸಾಕಷ್ಟು

ಪ್ರತಿಫಲವೂ ಗಿಟ್ಟುವುದಿಲ್ಲ. ಆದರೆ ವಸ್ತ್ರ ಸ್ವಾವಲಂಬನ ದೃಷ್ಟಿಯಿಂದ ಮನೆಮನೆಗೆ ಹಂಚಲು ಯೋಗ್ಯವಾಗಿದೆ. ಅಲ್ಲದೇ ಈ ಚರಖದ ಮೇಲೆ ಮಕ್ಕಳಿಂದ ಮುದುಕರ ವರೆಗೆ ಯಾರೂ ನೂತು ವಸ್ತ್ರ ಪೂರ್ತಿಯಲ್ಲಿ ನೆರವಾಗಬಲ್ಲರು. ಅಲ್ಲದೆ ಬರಗಾಲ, ನೆರೆಹಾವಳಿ, ಭೂಕಂಪ ಇತ್ಯಾದಿ ನಿಸರ್ಗ ಪ್ರಕೋಪಗಳು ಸಂಭವಿಸಿದಾಗಂತೂ ಈ ಪರಂಪರಾಗತ ಚರಖ ಅತ್ಯಂತ ಪ್ರಭಾವಿಯಾದ ಸಾಧನೆಯೆಂಬುದು ನಿರ್ಧಾರಿತವಾದ ಮಾತು. ಇದು ಗ್ರಾಮ ಸ್ವರಾಜ್ಯದ ದೃಷ್ಟಿಯಿಂದ ವಸ್ತ್ರ ಪೂರ್ತಿಯ ಅಮೋಘ ಸಾಧನವಾಗಬಲ್ಲದು. ಭಾರತ ಬಡವರ ನಾಡು. ಬಡವರು ಬಿಡುವಿನ ವೇಳೆಯಲ್ಲಿ ನೂಲಲು ಪರಂಪರಾಗತ ಚರಖಾದಂಥ ಬೇರೆ ಸಾಧನ ದೊರೆಯಲಾರದು. ಕಳೆದ ಐವತ್ತು ವರುಷಗಳಲ್ಲಿ ಈ ಚರಖದ ಬಗ್ಗೆ ಅನೇಕ ಪ್ರಯೋಗಗಳಾಗಿವೆ. ಆದರೆ ಆದರ ಪೂರ್ವಪ್ರಕ್ರಿಯೆಗಳ ಬಗ್ಗೆ ಅಷ್ಟೊಂದು ಆಗಿರುವುದಿಲ್ಲವೆಂಬುದು ಸತ್ಯ. ಧುನಾಯಿಯ ಬಗ್ಗೆ ದಿ. ಮಥುರಾದಾಸ ಭಾಯಿ, ಲಕ್ಷ್ಮೀದಾಸ ಭಾಯಿ ಮತ್ತು ಕೃಷ್ಣದಾಸಭಾಯಿ ಸಾಕಷ್ಟು ಪರಿಶ್ರಮವಹಿಸಿದ್ದರೂ ನೂಲು ಸರಿಯಾಗಿ ಬರುತ್ತಿಲ್ಲ. ಮೇಲಿಂದ ಮೇಲೆ ಹರಿಯುತ್ತದೆ. ಸಮಾನತೆ ಕಡಿಮೆ. ಹೀಗಾಗಿ ಈ ಧುನಾಯಿ ಕಡೆಗೆ ಹೆಚ್ಚು ಗಮನ ಅವಶ್ಯಕತೆ ಇದೆ.

ಅಂಬರದ ಆಗಮನದ ನಂತರ ಪರಂಪರಾಗತ ಚರಖಾ ಹಿಂದೆ ಬಿದ್ದಂತೆಯೇ. ಯಂತ್ರದ ಧುನಾಯಿ ಸಾಧನಗಳು ಬಂದನಂತರ ಕೈಧುನಾಯಿ ಹಿಂದೆ ಬಿದ್ದಿದೆ. ಆದರೆ ಈ ಕೈಧುನಾಯಿ ಮತ್ತು ಪರಂಪರಾಗತ ಚರಖದಲ್ಲಿ ಮನುಷ್ಯನ ಸಾಂಸ್ಕೃತಿಕ ಮಟ್ಟ ಖಂಡಿತ ಬೆಳೆಯುವುದುಂಟು. ಈ ಸಂಸ್ಕೃತಿಯ ಮಟ್ಟ ಬೆಳೆಯದೇ ಮನುಷ್ಯನ ಉನ್ನತಿ ಮತ್ತು ವಿಕಾಸ ಸಾಧ್ಯವೇ ಇಲ್ಲ.

ಅಂಬರ ಚರಖ ಬಂದನಂತರ ಇತ್ತಲಾಗಿ ರೋವಿಂಗ್ (ಹಂಜಿ) ಮಾಡಲು ವಿದ್ಯುಚ್ಛಕ್ತಿ ಉಪಯೋಗಿಸಲ್ಪಡುತ್ತದೆ. ಒಂದೆಡೆ ರೋವಿಂಗ್ ಸಿದ್ಧಮಾಡಿದರೆ ಇನ್ನೊಂದೆಡೆಗೆ ನೂಲುವುದು ನಡೆಯುತ್ತಿದೆ. ಕೇವಲ ನೂಲುವ ಕ್ರಿಯೆ ಮಾತ್ರ ಕೈಯಿಂದ ನಡೆಯುತ್ತಲಿದೆ. ಆದರೆ ಜಿನುಗು ನೂಲು ತಯಾರಿಸಲು ಸಂಯುಕ್ತ ಕತಾಯಿಯೇ ಯೋಗ್ಯವೆಂಬುದು ಅನುಭವದ ಮಾತು. ಅಂಬರದಲ್ಲಿ ಪೂರ್ವಪ್ರಕ್ರಿಯೆಗಳೆಲ್ಲ ಶಕ್ತಿ (ವಿದ್ಯುಚ್ಛಕ್ತಿ) ಮೇಲೆಯೇ ನಡೆಯುತ್ತವೆ. ಇದರಲ್ಲಿ ಅನೇಕ ದೋಷಗಳಿರುವುದರಿಂದ ನೂಲು ದೋಷಯುಕ್ತವಾಗಿಯೇ ಹೊರಡುವುದು. ಕಾರಣ ಈ ಪೂರ್ವಪ್ರಕ್ರಿಯೆಯ ಯಂತ್ರಗಳ ಬಗ್ಗೆ ಪುನರ್ ಯೋಚನೆ ಅಗತ್ಯವಾಗಿದೆ. ಪೂರ್ವಪ್ರಕ್ರಿಯೆಗಳ ಎಲ್ಲ ಪ್ರತಿಫಲವನ್ನೂ ಅವರು ಕೆಲಸಮಾಡಿದ ನೂಲಿನ ತೂಕದ ಮೇಲೆಯೇ ಕೊಡಲಾಗುತ್ತದೆ. ಕಾರಣ ಆತನ ಲಕ್ಷ್ಯ ಕೇವಲ ತೂಕ ಹೆಚ್ಚುಮಾಡುವುದರ ಕಡೆಗೇ ಸ್ವಾಭಾವಿಕವಾಗಿ ಪಾಲುತ್ತದೆಯೇ ಹೊರತು, ಮಾಲಿನ ಗುಣದ ಕಡೆಗೆ ಹೊರಳುವುದಿಲ್ಲ. ಹೀಗಾಗಿ ದೋಷಗಳು ಉಳಿಯುವುದು ಅಪರಿಹಾರ್ಯ. ಈ ಪೂರ್ವಪ್ರಕ್ರಿಯೆಗಳಲ್ಲಿಯ ದೋಷಗಳನ್ನು ಪರಿಹರಿಸಲು ಪುನರ್ ವಿಮರ್ಶೆಯ ಅಗತ್ಯ ಕಾಣುತ್ತದೆ. ಈ

ಪ್ರಯೋಗಗಳು ಯಶಸ್ವಿಯಾಗದಿದ್ದರೆ "ಸುಮ್ಮನೇ ಮಿಲ್‌ನೊಳಗಿನ ರೋವಿಂಗ್ ತಂದು ಯಾಕೆ ಉಪಯೋಗಿಸಬಾರದು ?" ಎಂಬ ವಿಚಾರ ಸರಣಿಯು ಇತ್ತಲಾಗಿ ಕೇಳಬರುತ್ತಿದೆ. ಇದು ಕಾರ್ಯಗತವಾದರೆ ನಿಜವಾಗಿಯೂ ದುರ್ದೈವದ ಮಾತು. ನಾವು ಸದ್ಯ ಈ ಪೂರ್ವ ಪ್ರಕ್ರಿಯೆಯಲ್ಲಿ ಮನುಷ್ಯ ಶಕ್ತಿಯ ಮಹತ್ವವನ್ನು ಹೊಡೆದು ಹಾಕಿದ್ದೇವೆ. ಈ ಪ್ರಕಾರ ಯಂತ್ರದಿಂದ ಸಿದ್ಧವಾಗುವ ರೋವಿಂಗ್‌ನ ಮೂಲಕ ನೋಡಲು ಗಟ್ಟಿ ನೂಲು ಹೊರಟರೂ ಅದರ ಸಮಾನತೆ ಸರಿಯಾಗಲಾರದು. ಅದರಂತೆ ಬಟ್ಟೆಯೂ ಅತ್ಯುತ್ತಮ ದರ್ಜೆಯದಾಗಲಾರದಲ್ಲದೇ ತಡಿಕೆಯೂ ಕಡಿಮೆಯಾಗುವ ಸಂಭವವಿದೆ.

ಸದ್ಯ 'ಪಾವರಿ'ನ ಮೇಲೆ ಪೂರ್ವ ಪ್ರಕ್ರಿಯೆ ಮಾಡಿಕೊಳ್ಳಲಿ. ಆದರೆ ಅದರೊಳಗಿನ ದೋಷಗಳನ್ನಾದರೂ ಪೂರ್ತಿ ತೆಗೆದುಹಾಕಲು ಪ್ರಯತ್ನಿಸಬೇಕು. ಇದರ ಪೂರ್ತಿ ವಿಚಾರವಾಗಲೇಬೇಕು. ಪುನಃ ರೋವಿಂಗ್‌ಗಳನ್ನು ಪಾವರ ಸಹಾಯವಿಲ್ಲದೆ ಕೈಯಿಂದ ಮಾಡುವುದೇ ಯೋಗ್ಯವೆಂದು ನನ್ನ ಮತ. ಯಾಕೆಂದರೆ ನೂಲಿನ ಗುಣಮಟ್ಟ ಸಂಪೂರ್ಣ ರೋವಿಂಗಿನ ಮೇಲೆಯೇ ಅವಲಂಬಿಸಿದೆ. ಆದುದರಿಂದ ಈ ಪೂರ್ವ ಪ್ರಕ್ರಿಯೆ ಮತ್ತು ನೂಲುವುದು, ಕೈಯಿಂದಲೇ ಆಗಬೇಕು. ಇದರಲ್ಲಿ ಪಾವರಿನ ಸ್ಪರ್ಶವಾಗಬಾರದು.

ಸಂಯುಕ್ತ ಕತಾಯಿಯಿಂದ ಲಾಭಗಳೇನು ? : ಇದರಲ್ಲಿ ನೂಲುವ ಹೆಣ್ಣುಮಗಳೇ ರೋವಿಂಗ್‌ಮಾಡಿಕೊಳ್ಳುವಳು. ಅವು ಉತ್ತಮವಾಗುವವಲ್ಲದೇ ಅವಳಿಗೆ ಒಂದೇ ಸಮನೆ ನೂಲುವುದರಿಂದ ಆಗುವ ದಣಿವು ಈ ರೋವಿಂಗ್ ಮಾಡುವುದರಿಂದ ಕಡಿಮೆಯಾಗುತ್ತದೆ. ಆದುದರಿಂದ ಸಂಯುಕ್ತ ಕತಾಯಿ ಅಂಬರ ಚರಖವನ್ನು ಬಿಡುವಂತಿಲ್ಲ. ಅಂಬರಾವತಾರದಿಂದ ನೂಲುವುದು ಸುಲಭವಾಗಿದೆ. ಅದರಂತೆ ನೇಯ್ಗೆ ಸುಲಭವಾಗಲು ಯೋಜನೆ ಹಾಕಲೇಬೇಕು. ಚರಖದ ಬಗ್ಗೆ ಮಾಡಿದಷ್ಟು ವಿಚಾರವನ್ನು ನಾವು ಮಗ್ಗದ ಬಗ್ಗೆ ಮಾಡಿಲ್ಲ. ಈ ಬಗ್ಗೆ ಯೋಗ್ಯ ವಿಚಾರವಾಗುವ ಅಗತ್ಯವಿದೆ. ನೇಯ್ಗೆಯಲ್ಲಿ ಆದ ಸುಧಾರಣೆಯೆಂದರೆ 'ಲಂಬಾತಾನಾ' (Long Warping). ಇದು ಮಿಲ್ಲುಗಳಲ್ಲಿ ನಡೆಯುತ್ತಿದ್ದು ಕೈಮಗ್ಗಗಳು ಇದನ್ನು ಅನುಸರಿಸುವುದು ಉತ್ತಮವಾಗಿದೆ. ಆ ದೃಷ್ಟಿಯಿಂದ ಕಾರ್ಯಕರ್ತರನ್ನು ಸಿದ್ಧ ಮಾಡಬೇಕು.

ನಮ್ಮ ದೇಶದ ಇಂದಿನ ಸ್ಥಿತಿಯಲ್ಲಿ ಬಡತನದಲ್ಲಿ ಮುಡಿಯುವರ ಸಂಖ್ಯೆ ಹೆಚ್ಚಾಗಿದೆ. ಅವರೆಲ್ಲರಿಗೆ ಉದ್ಯೋಗ ಕೊಡಬಲ್ಲ ಏಕಮೇವ ಸಾಧನ 'ನೂಲುವುದು' ಎಂಬ ಮಾತು ಇಂದು ಎಲ್ಲರೂ ಒಪ್ಪುವುದುಂಟು. ಈಗ ಇಪ್ಪತ್ತು ಅಂಶಗಳ ಕಾರ್ಯಕ್ರಮದ ಮೇರೆಗೆ ಅಂತ್ಯೋದಯವಾಗಬೇಕಾದರೆ, ನಮಗೆ ಪರಂಪರಾಗತ ಚರಖದ ಹೊರತು ಬೇರೆ ಸಾಧನ ತೋರುವುದಿಲ್ಲ.

ಹಾಗೆ ನೋಡಿದರೆ 'ನೂಲೂ' ಒಂದು ವಿಧವಾದ ಕಚ್ಚಾಮಾಲೆಂದೇ ಹೇಳಬಹುದು. ಅದು ನೇಯ್ದ ನಂತರ ಪಕ್ಕಾಮಾಲು ಸಿದ್ಧವಾಗುವುದು. ಆ ದೃಷ್ಟಿಯಿಂದ ನೇಕಾರನ ಅಡಚಣೆಗಳ ಬಗ್ಗೆ ಸಂಪೂರ್ಣ ಆಲೋಚನೆ ಅಗತ್ಯ. ದೇಶದಲ್ಲಿ ಲಕ್ಷಾವಧಿ ಕೈಮಗ್ಗದ ಮೇಲೆ ನೇಯುವ ನೇಕಾರರಿದ್ದಾರೆ. ನೇಯುವುದನ್ನು ಇನ್ನೂ ಹೆಚ್ಚು ಸುಲಭ ಮಾಡಿ ಕೊಡುವುದು ನಮ್ಮ ಕರ್ತವ್ಯವಾಗಿದೆ. ಕೈನೂಲು ಕೈಮಗ್ಗ ಇವು ನಮ್ಮ ದೇಶದ ಮೂಲಾಧಾರ.

ನೇಕಾರನ ಎಲ್ಲ ಅಡಚಣೆಗಳನ್ನು ಲಕ್ಷ್ಯದಲ್ಲಿಟ್ಟು ಈಗ ಮಾಡಿದ ಸೇವಾಗ್ರಾಮ ಮಗ್ಗವು ಎಲ್ಲ ದೃಷ್ಟಿಯಿಂದ ಶ್ರೇಷ್ಠವಾಗಿದೆ. ಅದು ನೇಕಾರನ ಅನೇಕ ತೊಂದರಗಳನ್ನು ದೂರಮಾಡುತ್ತಿದೆ.

ಇನ್ನು ಕೊನೆಯ ಒಂದು ಮಾತು – ಅರಳೆ, ಉಣ್ಣೆ ಅಥವಾ ರೇಶ್ಮೆ ನೂಲುವವರಿಗೆ ಅವರು ಸಿದ್ಧಮಾಡುವ ಲಡಿಗಳ ಮೇಲೆಯೆ ಅವರಿಗೆ ಪ್ರತಿಫಲ ಗಿಟ್ಟುವುದು ಯೋಗ್ಯವಾದದ್ದು. ಇದರಿಂದ ಕಚ್ಚಾ ಮಾಲಿನ ಹೆಚ್ಚೆಚ್ಚು ಉಪಯೋಗವಾಗುವುದುಂಟು. ಖಾದಿ ಕಾರ್ಯಕರ್ತರು ನೂಲುವವರ ಬಗ್ಗೆ ಹೆಚ್ಚು ಸಹಾನುಭೂತಿಯಿಂದ ಮಾತನಾಡುತ್ತಾರೆ. ಅದು ಇಂದು ಕೃತಿಗಿಳಿಯಬೇಕಾಗಿದೆ. ನೂಲುವವನಿಗೆ ತೀರ ಕಡಿಮೆ ಪ್ರತಿಫಲವಿದ್ದರೂ ಅದು ಪೂರ್ತಿ ಆತನ ಕೈ ಸೇರುವಂತೆ ಮಾಡುವುದು ಪ್ರತಿಯೊಬ್ಬ ಖಾದಿ ಕಾರ್ಯಕರ್ತನ ಕರ್ತವ್ಯವಾಗಿದೆ.

* * * *

ಆದರ್ಶ ಇಟ್ಟುಕೊಳ್ಳದ ಮಾನವನು ಚುಕ್ಕಾಣಿ ಇಲ್ಲದ ಹಡಗಿನಂತೆ.

ವರ್ಗರಹಿತ ಸಮಾಜವೆಂಬದು ಕೊನೆಯವರೆಗೂ ಆದರ್ಶವಾಗಿಯೇ ಉಳಿಯಬಾರದು. ಅದು ಕಾರ್ಯಗತವಾದಾಗಲೇ ಅದರ ನಿಜಾರ್ಥವಾದಂತೆ.

ದಾನಧರ್ಮಗಳು ಮನೆಯಿಂದಲೇ ಪ್ರಾರಂಭವಾಗುವಂತೆ, ಅಹಿಂಸೆಯು ಮನೆಯಿಂದಲೇ ಪ್ರಾರಂಭವಾಗಬೇಕು.

—ಗಾಂಧೀಜಿ

ಕರ್ನಾಟಕದಲ್ಲಿ ಖಾದಿ ಉದ್ಯಮದ ಹುಟ್ಟು ಮತ್ತು ಬೆಳವಣಿಗೆ

ಶ್ರೀ ಬಿ. ಹ. ಇನಾಮದಾರ

ಶ್ರೀ ಇನಾಮದಾರರು ಸ್ವಾತಂತ್ರ್ಯಯೋಧರು, ನಿರತ ಖಾದಿ ಕಾರ್ಯಕರ್ತರು, ಹೈದರಾಬಾದ್ ಕರ್ನಾಟಕದಲ್ಲಿ ಖಾದಿ ಕಾರ್ಯ ಸಂಘಟಿಸಿದರು. ಕರ್ನಾಟಕ ಖಾದಿ ಮಂಡಳಿಯ ಸದಸ್ಯರಾಗಿ ಅದೇ ವರುಷ ಸೇವೆ ಸಲ್ಲಿಸಿದ್ದು ಈಗ ಪುನಃ ಅದರ ಸದಸ್ಯರಾಗಿದ್ದಾರೆ.

ಕೈನೂಲು ಮತ್ತು ಕೈಮಗ್ಗದ ಉದ್ಯಮವು (ಖಾದಿ ಉದ್ಯಮವು) ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಎಲ್ಲ ಗ್ರಾಮೋದ್ಯೋಗಗಳಿಗೆ ಕೇಂದ್ರ ಬಿಂದುವಾಗಿತ್ತು. ಮತ್ತು ಸರ್ವತ್ರ ವ್ಯಾಪಿಸಿತ್ತು. ಪರಂಪರಾಗತ ರಾಟೆಗಳಿಂದ ನೂಲು ನೂತು ಕೈಮಗ್ಗಗಳಿಂದ ನೇಯ್ದ ಬಟ್ಟೆಯನ್ನೇ ಎಲ್ಲರೂ ಧರಿಸುತ್ತಿದ್ದರು. ಕರ್ನಾಟಕದಲ್ಲಿಯು ಈ ಉದ್ಯಮವು ಸುಸ್ಥಿತಿಯಲ್ಲಿತ್ತು. ಬಂಗಾಲದಲ್ಲಿ (ಈಗಿನ ಬಂಗ್ಲಾದೇಶ) ಢಾಕಾ ಮಲ್‌ಮಲ್ ಎಂಬ ಶ್ರೇಷ್ಠ ದರ್ಜೆಯ ಖಾದಿ ಭಾರತದಲ್ಲಿ ಅಷ್ಟೇ ಅಲ್ಲ ಪರದೇಶದಲ್ಲಿಯೂ ಪ್ರಸಿದ್ಧಿಯಾಗಿತ್ತು. ಅದರಂತೆ ಸಣ್ಣ ಗಡೆಗಡೆಗಳಿಂದ ರೇಶ್ಮೆ ನೂಲು ತೆಗೆದು ತಯಾರಿಸಿದ ರೇಶ್ಮೆ ವಸ್ತುಗಳು (ಪೀತಾಂಬರ ವಗೈರೆ) ಈ ದೇಶದಲ್ಲಿ ಪ್ರಸಿದ್ಧವಾಗಿದ್ದವು. ಢಾಕಾ ಮಲ್‌ಮಲ್ ಬಟ್ಟೆಯು ನಯ ನಾಜೂಕಿನಲ್ಲಿ ಶ್ರೇಷ್ಠವಾಗಿತ್ತು. ಮುಂದೆ ಬ್ರಿಟಿಷರು ಇಲ್ಲಿ ವ್ಯಾಪಾರಕ್ಕೆಂದು ಬಂದು ಇಲ್ಲಿಯ ಹತ್ತಿಯನ್ನು ಖರೀದಿಸಿಕೊಂಡು ತಮ್ಮಲ್ಲಿಯ ಗಿರಣಿಗಳಲ್ಲಿ ತಯಾರಿಸಿದ ಬಟ್ಟೆಯನ್ನು ಈ ದೇಶಕ್ಕೆ ತಂದು ಮಾರಹತ್ತಿದರು. ಬ್ರಿಟಿಷರ ಆಳಿಕೆ ಪ್ರಾರಂಭವಾದ ಮೇಲೆ ಇಲ್ಲಿ ಗಿರಣಿಗಳನ್ನು ಸ್ಥಾಪಿಸಲು ಕೋಟ್ಯಾಧಿಪತಿಗಳಿಗೆ ನೆರವಾದದ್ದರಿಂದ ಇಲ್ಲಿಯ ಗಿರಣಿ ಬಟ್ಟೆಯು ಸಾಕಷ್ಟು ಉತ್ಪಾದನೆಯಾಗಹತ್ತಿತ್ತು. ಅದು ಖಾದಿ ಬಟ್ಟೆಗಿಂತ ತೆಳ್ಳಗೆ, ಅಧಿಕ ಗುಣಮಟ್ಟದ್ದು ಇದ್ದದ್ದರಿಂದ ಎಲ್ಲರೂ ಗಿರಣಿ ಬಟ್ಟೆಯನ್ನೇ ಧರಿಸಲು ಪ್ರಾರಂಭ ಮಾಡಿದರು. ಇದರಿಂದ ಕೈನೂಲು ಕೈಮಗ್ಗದ ಖಾದಿ ಬಟ್ಟೆಗೆ ಬೇಡಿಕೆಯೇ ಇಲ್ಲವಾದ್ದರಿಂದ ಪರಂಪರಾಗತ ರಾಟೆಗಳು ಮೂಲೆ ಗುಂಪಾಗಿ ಖಾದಿ ಉದ್ಯಮವು ಮೂರ್ಛಾವಸ್ಥೆಯಲ್ಲಿ ಪರಿಣಮಿಸಿತು.

ಸ್ವರಾಜ್ಯ ಆಂದೋಲನದ ನೇತಾರರಾದ ಲೋಕಮಾನ್ಯ ತಿಲಕರು 1920 ಜುಲೈ 31ರಂದು ದಿವಂಗತರಾದ ಮೇಲೆ ಈ ಆಂದೋಲನದ ನೇತೃತ್ವವನ್ನು ಮಹಾತ್ಮಾ

ಗಾಂಧೀಜಿಯವರು ವಹಿಸಿಕೊಂಡು ಭಾರತದಲ್ಲಿ ಎಲ್ಲ ಕಡೆಗೂ ಆಂದೋಲನವನ್ನು ಉದ್ದೀಪನಗೊಳಿಸುವಾಗ ಖಾದಿ ಪ್ರಚಾರವನ್ನು ರಭಸದಿಂದ ಮಾಡಿದರು. "ಖಾದಿಯೇ ಸ್ವರಾಜ್ಯದ ಹಾದಿ" ಎಂದೂ, ಖಾದಿ ಉದ್ಯಮವು ಆಕಾಶದಲ್ಲಿಯ ಸೂರ್ಯನಿದ್ದಂತೆ ಉಳಿದ ಎಲ್ಲಾ ಗ್ರಾಮೋದ್ಯೋಗಗಳು ಸೂರ್ಯನ ಸುತ್ತ ತಿರುಗುವ ಗ್ರಹಗಳೆಂದು ತಮ್ಮ ಎಲ್ಲ ಭಾಷಣಗಳಲ್ಲಿ ಒತ್ತಿ ಹೇಳುತ್ತಿದ್ದರು. ಇದರಿಂದಾಗಿ ಎಲ್ಲ ಕಡೆಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಸ್ಥಾಪಿತವಾಗಿದ್ದವು. ಇಂಥ ಕಮಿಟಿಗಳ ಪದಾಧಿಕಾರಿಗಳು ತಮ್ಮ ತಮ್ಮ ಜಿಲ್ಲೆಗಳಲ್ಲಿ ಖಾದಿ ಉದ್ಯಮವನ್ನು ಪುನರುಜ್ಜೀವನಗೊಳಿಸಲು ಸ್ವಯಂ ಸೇವಕರನ್ನು ನೇಮಿಸಿ ಪ್ರಚಾರಮಾಡಲು ಪ್ರಾರಂಭಿಸಿದರು. ಮೂಲೆಗುಂಪಾಗಿ ಕುಳಿತ ಪರಂಪರಾಗತ ರಾಟೆಗಳು ಮತ್ತೆ ನೂಲು ಉತ್ಪಾದನೆಯನ್ನು ಕೈಕೊಂಡವು. ಈ ನೂಲನ್ನು ಆಯಾ ಸ್ಥಳೀಯ ಕೈಮಗ್ಗಗಳಲ್ಲಿ ನೇಯಿಸಿ ತಯಾರಾದ ಬಟ್ಟೆಯನ್ನೇ ಎಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಧರಿಸಬೇಕೆಂದು ಕಡ್ಡಾಯಮಾಡಿದರು. ಇದರಿಂದಾಗಿ ಖಾದಿ ಉದ್ಯಮಕ್ಕೆ ಮತ್ತೆ ಚಾಲನೆ ದೊರೆಯಿತು. ಅದಲ್ಲದೆ ಕಾಂಗ್ರೆಸ್ ಕಾರ್ಯಕರ್ತರಿಗೆ ತಮ್ಮ ಕ್ಷೇತ್ರದಲ್ಲಿಯ ಎಲ್ಲ ಹಳ್ಳಿ ಪಟ್ಟಣಗಳಿಗೆ ಖಾದಿ ಬಟ್ಟೆಯನ್ನು ಒಯ್ದು ಮಾರಾಟ ಮಾಡುವ ಕೆಲಸವನ್ನು ಒಪ್ಪಿಸಲಾಯಿತು. ಗಿರಣಿ ಬಟ್ಟೆಗಳನ್ನು ಸುಡುವುದು ಮುಂತಾದ ಆಂದೋಲನವು ಎಲ್ಲ ಕಡೆಗೆ ಪ್ರಾರಂಭವಾದವು.

ಈ ಖಾದಿ ಉದ್ಯಮದ ಆಂದೋಲನವನ್ನು ವ್ಯವಸ್ಥಿತಗೊಳಿಸಲು 1926ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮ್ಮೇಲನದಲ್ಲಿ ಇಡೀ ಭಾರತದಲ್ಲಿ ಒಂದು ಸುಸಂಘಟಿತ ಖಾದಿ ಸಂಸ್ಥೆಯನ್ನು ಸ್ಥಾಪಿಸಬೇಕೆಂಬ ಗೊತ್ತುವಳಿಯನ್ನು ಅಂಗೀಕರಿಸಲಾಯಿತು. ಅದಕ್ಕನುಗುಣವಾಗಿ ಅಖಿಲ ಭಾರತ ಚರಕಾ ಸಂಘವೆಂಬ ಸಂಸ್ಥೆಯು ಸ್ಥಾಪಿತವಾಯಿತು. ಮಹಾತ್ಮಾ ಗಾಂಧೀಜಿಯವರೇ ಇದರ ಅಧ್ಯಕ್ಷರಾದರು. ಇದರ ಶಾಖೆಗಳು ಆಯಾ ಭಾಷೆಯ ಪ್ರತಿಯೊಂದು ಪ್ರಾಂತದಲ್ಲಿಯೂ ಸ್ಥಾಪಿತವಾದವು. ಕರ್ನಾಟಕ ಚರಕಾ ಸಂಘ, ತಮಿಳುನಾಡು ಚರಕಾ ಸಂಘ, ಮಹಾರಾಷ್ಟ್ರ ಚರಖಾ ಸಂಘ ಹೀಗೆ ಸ್ಥಾಪಿಸಲ್ಪಟ್ಟವು.

ಈ ಕರ್ನಾಟಕ ಚರಕಾ ಸಂಘದ ವ್ಯಾಪ್ತಿಯು ನಿಪ್ಪಾಣಿಯಿಂದ ಬೆಂಗಳೂರಿನವರೆಗೂ ಉತ್ತರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಿಂದ ಆಗಿನ ಹೈದರಾಬಾದ್ ಸಂಸ್ಥಾನದಲ್ಲಿದ್ದ ರಾಯಚೂರು, ಕಲಬುರ್ಗಿ, ಬೀದರ್‌ಗಳ ವರೆಗೂ ಇದ್ದಿತು. ಈ ಚರಕಾ ಸಂಘದ ಶಾಖಾ ಕಚೇರಿಯು ಮೊದಲು ಬೆಳಗಾವಿಯಲ್ಲಿ 1927ರಲ್ಲಿ ಪ್ರಾರಂಭವಾಯಿತು. ಶ್ರೀ ಗಂಗಾಧರ ರಾವ ದೇಶಪಾಂಡೆಯವರು ಅದರ ಪ್ರತಿನಿಧಿಯಾಗಿದ್ದರು. ಶ್ರೀ ಬಾಬಾಸಾಹೇಬ ಸೋಮಣ್ಣ ಎಂಬವರು ಕಾರ್ಯದರ್ಶಿಗಳಾಗಿದ್ದರು. ಆದರೆ, ಇಷ್ಟೊಂದು ದೊಡ್ಡ ಶಾಖೆಯ ವ್ಯವಹಾರವನ್ನು ಸಾಗಿಸಿಕೊಂಡು ಹೋಗಲು, ಈ ಕಚೇರಿಯಲ್ಲಿ ಸಾಕಷ್ಟು ಸಿಬ್ಬಂದಿ ಇರಲಿಲ್ಲವಾದ್ದರಿಂದ ಶ್ರೀ ಬಾಬಾಸಾಹೇಬ ಸೋಮಣ್ಣ ಇವರಿಗೆ ವೃದ್ಧಾಪ್ಯದ ಮೂಲಕ ಕೆಲಸವು ಅಷ್ಟು ವ್ಯವಸ್ಥಿತವಾಗಿ ನಡೆಯಲಿಲ್ಲವಾದ್ದ

ರಿಂದಲೂ 1928ರಲ್ಲಿ ಆಗಿನ ಅಖಿಲ ಭಾರತ ಚರಕಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಶಂಕರಲಾಲ ಬ್ಯಾಂಕರ ಇವರು ಬೆಳಗಾವಿಗೆ ಬಂದು ಒಂದು ವ್ಯವಸ್ಥಿತ ಕಚೇರಿಗೆ ಶೋಭಿಸುವಂತೆ ತಕ್ಕ ವ್ಯವಸ್ಥೆ ಮಾಡಿ ಶ್ರೀ ಹಣಮಂತರಾವ ಕೌಜಲಗಿಯವರನ್ನು ಕಾರ್ಯದರ್ಶಿಗಳನ್ನಾಗಿ ನೇಮಿಸಿದರು. ಶ್ರೀ ಹಣಮಂತರಾಯರು ನಿಷ್ಠಾವಂತ ಕಾಂಗ್ರೆಸ್ಸಿಗರು, ಒಳ್ಳೇ ಆಡಳಿತಗಾರರು, ಸೌಮ್ಯ ಸ್ವಭಾವದವರು. ಎಲ್ಲ ಖಾದಿ ಕಾರ್ಯಕರ್ತರನ್ನು ತಮ್ಮ ಕುಟುಂಬದ ಬಳಗದವರಂತೆ ತಿಳಿಯುತ್ತಿದ್ದರು. ಅವರು ಕೇಂದ್ರಗಳ ಹಳ್ಳಿ ಹಳ್ಳಿಗಳಿಗೆ ಕಾಲ್ನಡಿಗೆಯಿಂದ ಹೋಗುತ್ತಿದ್ದರು. ರೇಲ್ವೆ ಪ್ರವಾಸ ಮಾಡುತ್ತಿದ್ದಾಗ ಮೂರನೆಯ ತರಗತಿಯ ಡಬ್ಬಿಗಳಲ್ಲಿಯೇ ಪ್ರವಾಸವನ್ನು ಮಾಡುತ್ತಿದ್ದರು. ಇವರ ಆಡಳಿತದ ಅವಧಿಯಲ್ಲಿ 1928ರಿಂದ 1942ರ ವರೆಗೆ ಖಾದಿ ಕಾರ್ಯವು ವರ್ಷ ವರ್ಷಕ್ಕೆ ಪ್ರಗತಿಯನ್ನು ಹೊಂದಿತು. ಚರಕಾ ಸಂಘದ ಲೆಕ್ಕ ಪತ್ರಗಳನ್ನು ಇಡುವ ಮಾದರಿಯು ಮೇಲ್ತರಗತಿಯದಾಗಿತ್ತು. 1928ರಿಂದ 1932ರ ಅವಧಿಯಲ್ಲಿ ಚರಕಾ ಸಂಘದಿಂದ ನೂಲುವ ಮತ್ತು ನೇಯುವ ಕೇಂದ್ರಗಳೂ, 12 ಮಾರಾಟ ಭಂಡಾರಗಳೂ ಇದ್ದವು. ಅವುಗಳಲ್ಲಿ ಉಪ್ಪಿನಬೆಟಗೇರಿ ಮತ್ತು ಗುರ್ಲಹೊಸೂರು ಕೇಂದ್ರಗಳು ದೊಡ್ಡ ಖಾದಿಹುಟ್ಟುವಳಿ ಕೇಂದ್ರಗಳಾಗಿದ್ದವು. ಬೆಂಗಳೂರು ಖಾದಿ ವಸ್ತ್ರಾಲಯವು 1929ರ ಸೆಪ್ಟೆಂಬರ ವರೆಗೆ ತಮಿಳುನಾಡು ಚರಕ ಸಂಘದಿಂದ ನಡೆಸಲ್ಪಡುತ್ತಿತ್ತು. ಮುಂದೆ ಅದನ್ನು ಕರ್ನಾಟಕ ಚರಕ ಕೇಂದ್ರಕ್ಕೆ ಹಸ್ತಾಂತರಿಸಲಾಯಿತು. 1931ರಲ್ಲಿ ಕೆಂಭಾವಿಯಲ್ಲಿ ಖಾದಿ ಕೇಂದ್ರವು ಸ್ಥಾಪಿತವಾಯಿತು. ಹುದಲಿಯಲ್ಲಿ ಕುಮರಿ ಆಶ್ರಮವೆಂಬ ಸಂಸ್ಥೆಯಿಂದ ಖಾದಿ ಕೇಂದ್ರವು ನಡೆಸಲ್ಪಡುತ್ತಿತ್ತು. ಹೊಸರಿತ್ತಿಯಲ್ಲಿ ಸ್ಥಾನಿಕ ಖಾದಿ ಸಂಘವು ಕೆಲಸಮಾಡುತ್ತಿತ್ತು. 1932ರಲ್ಲಿ ಚಿಕ್ಕಮಗಳೂರು, ಹಾಸನ ಮತ್ತು ಹಾವೇರಿ ಇವುಗಳಲ್ಲಿ ಖಾದಿ ಭಂಡಾರಗಳು ತೆರೆಯಲ್ಪಟ್ಟವು. (ಚರಕ ಸಂಘದಿಂದ) ಬದನವಾಳ ಖಾದಿ ಕೇಂದ್ರ ಮತ್ತು ಐಮಂಗಲ ಖಾದಿ ಕೇಂದ್ರವು ಮೈಸೂರು ಸಂಸ್ಥಾನದಿಂದ ನಡೆಸಲ್ಪಡುತ್ತಿದ್ದವು. ಮೆದಕೇರಿಪುರ ಚಿತ್ರದುರ್ಗದಲ್ಲಿ ಸ್ಥಾನಿಕ ಸಂಸ್ಥೆಯೊಂದು ಖಾದಿ ಕಾರ್ಯವನ್ನು ಮಾಡುತ್ತಿತ್ತು. 1931ರ ಜುಲೈ ತಿಂಗಳಿನಲ್ಲಿ ಬೆಳಗಾವಿಯಲ್ಲಿದ್ದ ಶಾಖಾ ಕಚೇರಿಯನ್ನು ಹುಬ್ಬಳ್ಳಿಗೆ ಸ್ಥಳಾಂತರಿಸಲಾಯಿತು. ಅಲ್ಲಿ ಒಂದು ಖಾದಿ ಕೇಂದ್ರ ಮಳಿಗೆಯನ್ನು ತೆರೆಯಲಾಯಿತು. ಖಾದಿ ಹುಟ್ಟುವಳಿ ಕೇಂದ್ರಗಳಲ್ಲಿಯ ಮಾಲನ್ನು ಇಲ್ಲಿ ಇರಿಸಿ, ಇಲ್ಲಿಂದ ಎಲ್ಲ ಖಾದಿ ಭಂಡಾರಗಳಿಗೆ ಅವುಗಳ ಬೇಡಿಕೆಯಂತೆ ಮಾಲನ್ನು ಪೂರೈಸಲಾಗುತ್ತಿತ್ತು. ಅದರಂತೆ ನೂಲುವ ಕೇಂದ್ರಗಳಲ್ಲಿ ತಯಾರಾದ ನೂಲನ್ನು ಸ್ಥಳೀಯವಾಗಿ ನೇಯಿಸಲಿಕ್ಕೆ ಬೇಕಾಗುವಷ್ಟು ನೂಲನ್ನು ಬಿಟ್ಟು ಉಳಿದ ನೂಲನ್ನು ಖಾದಿ ಹುಟ್ಟುವಳಿ ಕೇಂದ್ರಗಳಿಗೆ ಕಳಿಸಲಾಗುತ್ತಿತ್ತು.

1920ರಿಂದ 1938ರ ವರೆಗೆ ಚರಕ ಸಂಘದ ವತಿಯಿಂದ ನಡೆಯುತ್ತಿದ್ದ ಖಾದಿ ಹುಟ್ಟುವಳಿ ಕೇಂದ್ರಗಳಿಂದಲೂ ಮತ್ತು ಬದನವಾಳ ಮತ್ತು ಐಮಂಗಲ

ಮುಂತಾದ ಕೇಂದ್ರಗಳಿಂದ ಐವತ್ತು ಸಾವಿರ ವರೆಗೆ ಖಾದಿ ಉತ್ಪತ್ತಿಯಾಗುತ್ತಿತ್ತು. 1938ರಲ್ಲಿ ಮುಂಬೈ, ಕರ್ನಾಟಕದಲ್ಲಿ ಚುನಾಯಿತ ಪ್ರಾಂತೀಯ ಸರಕಾರವು ಸ್ಥಾಪನೆ ಆದ ನಂತರ, ಖಾದಿಗೆ ಸ್ವಲ್ಪ ಪ್ರೋತ್ಸಾಹ ದೊರೆಯಿತು. ಆದರೆ ಈ ಪ್ರೋತ್ಸಾಹ ಬಹಳ ದಿನಗಳ ವರೆಗೆ ನಡೆಯಲಿಲ್ಲ. ಪ್ರಾಂತೀಯ ಸರಕಾರವು ರಾಜೀನಾಮೆ ಕೊಟ್ಟು ಮಂತ್ರಿಪದದಿಂದ ಹೊರಗೆ ಬಂದ ನಂತರ ಖಾದಿ ಕೆಲಸಕ್ಕೆ ಮೊದಲಿನ ಸ್ಥಿತಿಯೇ ಪ್ರಾಪ್ತವಾಯಿತು.

ಖಾದಿ ಕೆಲಸ ಹೆಚ್ಚಾಗಿ ಮುಂಬೈ, ಕರ್ನಾಟಕದಲ್ಲಿ ನಡೆಯುತ್ತಿತ್ತು. ಹಳೆ ಮೈಸೂರಲ್ಲಿ ಬದನವಾಳ ಮತ್ತು ಐಮಂಗಲ ಕೇಂದ್ರಗಳನ್ನು ಮೈಸೂರು ಸರಕಾರ ನಡೆಸುತ್ತಿತ್ತು. ಬೆಂಗಳೂರು ಖಾದಿ ವಸ್ತ್ರಾಲಯ ಮತ್ತು ಚಿಕ್ಕಮಗಳೂರು ಖಾದಿ ಭಂಡಾರ ಕರ್ನಾಟಕ ಚರಕ ಸಂಘ ನಡೆಸುತ್ತಿತ್ತು. 1941ರಲ್ಲಿ ರಾಯಚೂರು ಖಾದಿ ಭಂಡಾರವನ್ನು ಪ್ರಾರಂಭಿಸಲಾಯಿತು. ಹೈದರಾಬಾದ್ ಕರ್ನಾಟಕದಲ್ಲಿ ತಾವರಗೇರಾ, ಕೆಂಭಾವಿ ಮತ್ತು ಗದ್ವಾಲ (ಸದ್ಯದಲ್ಲಿ ಆಂಧ್ರಪ್ರದೇಶದಲ್ಲಿ ಇದೆ) ಈ ಸ್ಥಳಗಳಲ್ಲಿ ಖಾದಿ ಉತ್ಪತ್ತಿಯು ನಡೆಯುತ್ತಿತ್ತು. ತಾವರಗೇರಾ ಮತ್ತು ಕೆಂಭಾವಿಯಲ್ಲಿ ನೇಯ್ಗೆ ಕೆಲಸವು ನಡೆಯುತ್ತಿತ್ತು.

ಪೂಜ್ಯ ಮಹಾತ್ಮಾ ಗಾಂಧೀಜಿಯವರು 1944ರಲ್ಲಿ ಚಳವಳಿಯ ನಂತರ ಜೇಲಿನಿಂದ ಹೊರಗೆ ಬಂದ ಮೇಲೆ, ಚರಕ ಸಂಘಕ್ಕೆ ಹೊಸ ರೂಪ ಕೊಡಲು ನಿರ್ಧರಿಸಿದರು. ಆ ಪ್ರಕಾರ ವಿಕೇಂದ್ರೀಕರಣ ಧೋರಣೆಯನ್ನು ಅನುಸರಿಸಲು ಹಳ್ಳಿಗಳಲ್ಲಿ ಖಾದಿ ಕೆಲಸವನ್ನು ಕತಾಯಿ ಮಂಡಲಿಗಳ ಮೂಲಕ ಗ್ರಾಮ ಸ್ವಾವಲಂಬನೆ ಕಾರ್ಯ ಕೈಕೊಂಡರು. ಕಲಾದಗಿಯಲ್ಲಿ ನೂಲುವ ಮಂಡಳಿಗಳಿಗೆ ಶ್ರೀ ರಘುವೀರಜಿ ಯವರನ್ನು ಸಂಚಾಲಕರನ್ನಾಗಿ ಮಾಡಿದರು. ಚರಕ ಸಂಘದ ಕಾರ್ಯದರ್ಶಿಗಳಾದ ಶ್ರೀ ವೆಂಕಟರಾಮಯ್ಯ ಇವರ ಪ್ರಯತ್ನದಿಂದ ಹೈದರಾಬಾದ ಕರ್ನಾಟಕ ಗ್ರಾಮ ಸೇವಾ ಸಂಘ ಎಂಬ ಸಂಸ್ಥೆಯನ್ನು ಡಾ. ಮೇಲ್ಕೋಟೆಯವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿ ಸ್ವಾವಲಂಬನೆಯ ಕೆಲಸವನ್ನು1946ರಲ್ಲಿ ಪ್ರಾರಂಭಿಸಲಾಯಿತು. ಈ ಅವಧಿಯಲ್ಲಿ ಕರ್ನಾಟಕ ಚರಕ ಸಂಘದಿಂದ ಎಂಟು ನೂಲುವ ಮತ್ತು ನೇಯುವ ಕೇಂದ್ರಗಳು, ಹನ್ನೆರಡು ಮಾರಾಟ ಭಾಂಡಾರಗಳು ನಡೆಯುತ್ತಿದ್ದವು. ಅವುಗಳಲ್ಲಿ ಪ್ರಮುಖ ಊರುಗಳೆಂದರೆ, ಉಪ್ಪಿನಬೆಟಗೇರಿ, ಗುರ್ಲಹೊಸೂರು, ತಾವರಗೇರಾ, ಕೆಂಭಾವಿ, ಗದ್ವಾಲ. ಗದ್ವಾಲದಲ್ಲಿ ವಿಶೇಷವಾಗಿ ಜಿನುಗು ನೂಲು ಖಾದಿ ಉತ್ಪತ್ತಿ ಆಗುತ್ತಿತ್ತು. 1946ರ ಸುಮಾರಿಗೆ ಹಳೇ ಮೈಸೂರಿನಲ್ಲಿ ಮೈಸೂರು ಚರಕ ಪ್ರಚಾರ ಸಂಘ ಮೇದಕೇರಿಪುರ, ಈ ಸಂಸ್ಥೆಯು ಪ್ರಾರಂಭವಾಗಿ ಸ್ವಾವಲಂಬನೆ ಕಾರ್ಯವನ್ನು ಪ್ರಾರಂಭಿಸಿದವು.

ಭಾರತವು 1947ರಲ್ಲಿ ಸ್ವತಂತ್ರವಾದ ನಂತರ ಖಾದಿ ಕೆಲಸದಲ್ಲಿ ಬದಲಾವಣೆ ಅವಶ್ಯವೆಂದು ಪರಿಗಣಿಸಲಾಯಿತು. 1947ರ ಸ್ವಾತಂತ್ರ್ಯ ಹೋರಾಟದಲ್ಲಿ ದೇಶೀ

ಸಂಸ್ಥಾನಗಳು ತಮ್ಮ ಸ್ವಾತಂತ್ರ್ಯಕ್ಕೆ ಹೋರಾಡುತ್ತಿದ್ದಾಗ ಖಾದಿ ಕೆಲಸವು ಕುಂಠಿತವಾಯಿತು. ದೇಶೀ ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾದ ನಂತರ ಖಾದಿ ಕೆಲಸಕ್ಕೆ ಹೊಸ ಹುರುಪು ಬಂದಿತು. 1948ರಲ್ಲಿ ಮಹಾತ್ಮಾ ಗಾಂಧೀಜಿಯವರ ಮರಣದ ನಂತರ ಎಲ್ಲ ವಿಧಾಯಕ ಕಾರ್ಯಕರ್ತರು ಒಂದೆಡೆ ಸೇರಿ ವಿಧಾಯಕ ಕೆಲಸವನ್ನು ಯಾವ ರೀತಿ ನಡೆಸಿಕೊಂಡು ಹೋಗಬೇಕೆಂಬುದನ್ನು ಚರ್ಚಿಸಿ, ಸರ್ವ ಸೇವಾ ಸಂಘ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಅದರಲ್ಲಿ ಮಹಾತ್ಮಾ ಗಾಂಧೀಜಿಯವರು ಸ್ಥಾಪಿಸಿದ ಅಖಿಲ ಭಾರತ ಚರಕ ಸಂಘ, ಗ್ರಾಮೋದ್ಯೋಗ ಸಂಘ, ನಯೀ ತಾಲಿಮ್ ಸಂಘ, ಮುಂತಾದ ಸಂಸ್ಥೆಗಳನ್ನು ಸರ್ವ ಸೇವಾ ಸಂಘದಲ್ಲಿ ವಿಲೀನಗೊಳಿಸಬೇಕೆಂದು ನಿರ್ಣಯಿಸಲಾಯಿತು. ಆ ಪ್ರಕಾರ ಸರ್ವ ಸೇವಾ ಸಂಘವು ಗಾಂಧೀಜಿಯವರ ತತ್ತ್ವಜ್ಞಾನ ಮತ್ತು ಪ್ರಯೋಗಗಳಿಗೆ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ವ್ಯಾವಹಾರಿಕ ಖಾದಿ ಉತ್ಪಾದನೆಯನ್ನು ಬಂದುಮಾಡಿ ಸ್ಥಳೀಯ ರಿಜಿಸ್ಟರ್ಡ್ ಸಂಸ್ಥೆಗಳಿಗೆ ವರ್ಗಾಯಿಸಬೇಕೆಂದು ನಿರ್ಣಯಿಸಲಾಯಿತು. ಈ ವೇಳೆಗೆ ಹೈದರಾಬಾದ್ ಕರ್ನಾಟಕದಲ್ಲಿ ನಡೆಯುತ್ತಿದ್ದ ಗದ್ವಾಲ, ಕೆಂಭಾವಿ, ತಾವರಗೇರಾ, ಖಾದಿ ಕೇಂದ್ರಗಳನ್ನು ಮತ್ತು ಖಾದಿ ಭಾಂಡಾರ ರಾಯಚೂರು ಮತ್ತು ಗುಲ್ಬರ್ಗಾ ಭಾಂಡಾರವನ್ನು ಮುಚ್ಚಲು ಕರ್ನಾಟಕ ಚರಕಾ ಸಂಘವು ನಿರ್ಧರಿಸಿತು. ಈ ಕೇಂದ್ರಗಳು ಬಂದಾಗಿ ನೂಲುವ ಮತ್ತು ನೇಯುವವರಿಗೆ ತೊಂದರೆಯಾಗಬಾರದೆಂಬ ದೃಷ್ಟಿಯಿಂದ ಹೈದರಾಬಾದ್ ಕರ್ನಾಟಕ ಗ್ರಾಮ ಸೇವಾ ಸಂಘವು ಈ ಎಲ್ಲ ಕೇಂದ್ರಗಳನ್ನು ನಡೆಸುವ ಜವಾಬ್ದಾರಿಯನ್ನು ಹೊರಲು ಸಿದ್ಧವಾಯಿತು. ಕರ್ನಾಟಕ ಚರಕಾ ಸಂಘವು ಈ ಕೇಂದ್ರ ಮತ್ತು ಭಾಂಡಾರಗಳನ್ನು 1–10–1949ರಂದು ಹಸ್ತಾಂತರಿಸಿತು.

ಈ ಮೊದಲೇ ತಿಳಿಸಿದ ಪ್ರಕಾರ ಮೈಸೂರು ಚರಕಾ ಪ್ರಚಾರ ಸಂಘ ಮೆದಕೇರಿಪುರ ಖಾದಿ ಕೆಲಸವನ್ನು ಪ್ರಾರಂಭಿಸಿತ್ತು. ಮುಂಬೈ ಕರ್ನಾಟಕದಲ್ಲಿ ರಚಿತವಾದ ಕಾಂಗ್ರೆಸ್ ಸರಕಾರವು ಬಾಂಬೆ ವಿಲೇಜ್ ಇಂಡಸ್ಟ್ರೀಸ್ ಬೋರ್ಡ್ ಸ್ಥಾಪಿಸಿ ಅದರ ಮುಖಾಂತರ ಧಾರವಾಡ ಜಿಲ್ಲೆಯ ರೋಣದಲ್ಲಿ ಖಾದಿ ಕೆಲಸವನ್ನು ಶ್ರೀ ವೆಂಕಟರಾಮಯ್ಯ ಇವರ ಸಂಚಾಲಕತ್ವದಲ್ಲಿ ಪ್ರಾರಂಭಿಸಿತು. ಇದೇ ಪ್ರಕಾರ ಗ್ರಾಮೋದ್ಯೋಗ ಕೆಲಸವನ್ನು ಶ್ರೀ ಎಸ್. ಕೆ. ಕಲ್ಲಾಪುರ ಇವರ ಮುಖಾಂತರ ಕಾರ್ಯಾರಂಭಿಸಿತು. ಆದರೆ ಖಾದಿ ಕೆಲಸವು ಕರ್ನಾಟಕ ಚರಕಾ ಸಂಘದಿಂದಲೇ ನಡೆಯುತ್ತಿತ್ತು. ಈ ಖಾದಿ ಕೆಲಸವನ್ನು ಸಹ ಮುಂದೆ, ಬಾಂಬೆ ವಿಲೇಜ ಇಂಡಸ್ಟ್ರೀಸ್ ಬೋರ್ಡಿಗೆ ವರ್ಗಾಯಿಸಲಾಯಿತು.

ವಿಕೇಂದ್ರೀಕೃತ ಧೋರಣೆಗೆ ಅನುಕೂಲವಾಗಿ ಕರ್ನಾಟಕದಲ್ಲಿ ಬೇರೆ ಬೇರೆ ಸಂಸ್ಥೆಗಳು ಖಾದಿ ಕೆಲಸದ ಜವಾಬ್ದಾರಿಯನ್ನು ಹೊರಲು ಮುಂದೆ ಬಂದವು. ಆ ಪ್ರಕಾರ ಬೆಳಗಾವಿ ಜಿಲ್ಲಾ ಖಾದಿ ಗ್ರಾಮೋದ್ಯೋಗ ಸಂಘಕ್ಕೆ ಬೆಳಗಾವಿ ಜಿಲ್ಲೆಯ ಖಾದಿ ಗ್ರಾಮೋದ್ಯೋಗ ಕೆಲಸವನ್ನು, ಧಾರವಾಡ ಜಿಲ್ಲಾ ಖಾದಿ ಗ್ರಾಮೋದ್ಯೋಗ

ಸಂಘ ಮತ್ತು ಧಾರವಾಡ ತಾಲೂಕು ಸೇವಾ ಸಂಘ ಮತ್ತು ಉಪ್ಪಿನಬೆಟಗೇರಿ ನೇಕಾರರ ಸಹಕಾರ ಸಂಘಕ್ಕೆ ಆ ಭಾಗದ ಖಾದಿ ಕೆಲಸವನ್ನು ಒಪ್ಪಿಸಲಾಯಿತು. ಹಳೇ ಮೈಸೂರು ನಡೆಸುತ್ತಿದ್ದ ಖಾದಿ ಕೆಲಸವನ್ನು ಕರ್ನಾಟಕ ಸರ್ವೋದಯ ಸಂಘಕ್ಕೆ ವರ್ಗಾಯಿಸಲಾಯಿತು. ವಿಜಾಪುರ ಜಿಲ್ಲೆಯ ಕೆಲಸವನ್ನು ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ ವಿಜಾಪುರಕ್ಕೂ ಕಾರವಾರ ಜಿಲ್ಲೆಯ ಖಾದಿ ಕೆಲಸವನ್ನು ಗ್ರಾಮಸೇವಾ ಸಮಿತಿ ಅಂಕೋಲಾಕ್ಕೂ ವರ್ಗಾಯಿಸಲಾಯಿತು. ಈ ರೀತಿಯಾಗಿ ಖಾದಿ ಕೆಲಸವನ್ನು ಕರ್ನಾಟಕದಲ್ಲಿ ಬೇರೆ ಬೇರೆ ಸಂಸ್ಥೆಗಳಿಗೆ ಹಂಚಲಾಯಿತು. ಕೇಂದ್ರ ಸರಕಾರದವರು ಖಾದಿ ಗ್ರಾಮೋದ್ಯೋಗ ಮಂಡಲ ಮತ್ತು ಕೆಲವು ವರುಷಗಳ ನಂತರ ಖಾದಿ ಗ್ರಾಮೋದ್ಯೋಗ ಆಯೋಗ ರಚಿಸಿದ ನಂತರ ಖಾದಿ ಕೆಲಸಕ್ಕೆ ಚಾಲನೆ ದೊರಕಿತು. ಹೊಸ ಹೊಸ ಸಂಸ್ಥೆಗಳು ಖಾದಿ ಕೆಲಸದ ಜವಾಬ್ದಾರಿಯನ್ನು ಹೊರಲು ಮುಂದೆ ಬಂದವು. ಈ ಸಮಯದಲ್ಲಿ ಕರ್ನಾಟಕದ ಖಾದಿ ವರ್ಕರ್ಸ್ ಅಸೋಸಿಯೇಶನ್ ನರಗುಂದ, ಖಾದಿ ಉತ್ಪಾದಕ ಸಹಕಾರಿ ಸಂಘ ಹುದಲಿ ಮುಂತಾದ ಅನೇಕ ಸಂಸ್ಥೆಗಳು ಹುಟ್ಟಿದವು. ಈಗ ಕರ್ನಾಟಕದಲ್ಲಿ ಒಟ್ಟು ಇಪ್ಪತ್ತೈದಕ್ಕೂ ಹೆಚ್ಚು ಖಾದಿ ಸಂಸ್ಥೆಗಳು ಕೆಲಸ ಮಾಡುತ್ತಿವೆ.

ಕರ್ನಾಟಕದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಜಿಲ್ಲಾ ಮತ್ತು ಸಣ್ಣ ಸಣ್ಣ ಖಾದಿ ಸಂಸ್ಥೆಗಳು ಸ್ಥಾಪಿತವಾದನಂತರ, ಖಾದಿ ಮಾರಾಟವನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಖಾದಿ ಕೆಲಸಕ್ಕೆ ಮಾರ್ಗ ದರ್ಶನ ಮಾಡುವ ಉದ್ದೇಶದಿಂದ ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಯುಕ್ತ ಸಂಘ (ಫೆಡರೇಶನ್) 1957ರಲ್ಲಿ ಸ್ಥಾಪಿತ ವಾಯಿತು. ಈ ಸಂಸ್ಥೆಯು ಕರ್ನಾಟಕದಲ್ಲಿಯ ಸಣ್ಣ ಸಣ್ಣ ಸಂಸ್ಥೆಗಳಿಂದ ಖಾದಿ ಖರೀದಿ ಮಾಡಿ ಅವರಿಗೆ ಆರ್ಥಿಕ ನೆರವನ್ನು ಒದಗಿಸುತ್ತದೆ. ಇದು ದಿನ ದಿನಕ್ಕೆ ಅಭಿವೃದ್ಧಿ ಆಗುತ್ತಿದ್ದು ತನ್ನ ಬೆಳ್ಳಿಹಬ್ಬವನ್ನು ಆಚರಿಸುತ್ತಿದೆ. ಶ್ರೀ ವೆಂಕಟೇಶ ಮಾಗಡಿಯವರು ಸಂಸ್ಥಾಪಕ ಅಧ್ಯಕ್ಷರಾಗಿ ಕಳೆದ ಇಪ್ಪತ್ತೈದು ವರ್ಷಗಳಿಂದ ಕರ್ನಾಟಕಕ್ಕೆ ಸೇವೆಯನ್ನು ಸಲ್ಲಿಸುತ್ತಿದ್ದಾರೆ.

ಕರ್ನಾಟಕ ಚರಕಾ ಸಂಘದ ಸಮಯದಲ್ಲಿ ಖಾದಿ ಉತ್ಪತ್ತಿಯು ಸುಮಾರು ಒಂದು ಲಕ್ಷ ಇತ್ತು. ಈಗ ಖಾದಿ ಉತ್ಪತ್ತಿಯು ಆರೂವರೆ ಕೋಟಿಯಷ್ಟು ಇದೆ. ಹೊಸ ಮಾದರಿಯ ಕಬ್ಬಿಣದ ಚರಂಗಳು ವ್ಯಾಪಕವಾಗಿ ಹಳ್ಳಿ ಹಳ್ಳಿಗಳಲ್ಲಿ ನಡೆಯುತ್ತವೆ. ಎಲ್ಲ ಸಣ್ಣ ಸಣ್ಣ ಸಂಸ್ಥೆಗಳು ಖಾದಿಯ ಪಾವಿತ್ರ್ಯವನ್ನು ಕಾಯ್ದು ಕೊಂಡು ಮುನ್ನಡೆಯುತ್ತಿವೆ. ಖಾದಿಗೆ ಕರ್ನಾಟಕದಲ್ಲಿ ಉಜ್ವಲ ಭವಿಷ್ಯವಿದೆ ಎಂದರೆ ತಪ್ಪಾಗಲಾರದು.

* * * *

ಖಾದಿ ಮಹೋನ್ನತ ಆದರ್ಶದ ದಾರಿ

ಶ್ರೀ ವಿ. ಎಸ್. ನಾರಾಯಣರಾವ್

ಸ್ವಾತಂತ್ರ್ಯ ಯೋಧರು. ಒಳ್ಳೇ ಬರಹಗಾರರೂ ಹೌದು.
ರಚನಾತ್ಮಕ ಕಾರ್ಯದಲ್ಲಿ ತುಂಬಾ ಅಭಿರುಚಿಯುಳ್ಳವರು.
ಕರ್ನಾಟಕ ಸರ್ವೋದಯ ಸಂಘದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಅರವತ್ತು ವರ್ಷಗಳ ಹಿಂದಿನ ವಿಷಯ. ಆಗತಾನೆ ಖಾದಿ ಬಳಕೆಗೆ ಬರುತ್ತಿತ್ತು, ಕೆಲವು ದೇಶಭಕ್ತರಲ್ಲಿ ಮಾತ್ರ. ಉತ್ತರ ಕರ್ನಾಟಕದಿಂದ ಬರುತ್ತಿದ್ದ ಮುದವೀಡು ಕೃಷ್ಣರಾವ್, ಕಡಪಾ ರಾಘವೇಂದ್ರರಾವ್, ಗಂಗಾಧರ ರಾವ್ ದೇಶಪಾಂಡೆ ಮೊದಲಾದವರು ಖಾದಿ, ಸ್ವರಾಜ್ಯದ ಪ್ರಚಾರ ಮಾಡುತ್ತಿದ್ದರು. ಬೆಂಗಳೂರಿನ ಮಿಂಟೊ ಕಣ್ಣಾಸ್ಪತ್ರೆ ಬಳಿಯ ಅಪ್ಪಾಜಪ್ಪ ಅಗ್ರಹಾರದಲ್ಲಿ ನಮ್ಮ ವಾಸ. ಆಗ ಅಪೆಕ್ಸ್ ಬ್ಯಾಂಕ್, ಗ್ರೇನ್ ಮರ್ಚಂಟ್ಸ್ ಬ್ಯಾಂಕ್, ಬೆಂಗಳೂರು ಸಿಟಿ ಕೊ-ಆಪರೇಟಿವ್ ಬ್ಯಾಂಕ್, ಕನ್ನಡ ಸಾಹಿತ್ಯ ಪರಿಷತ್ತು ಕಟ್ಟಡಗಳು ಇರಲಿಲ್ಲ, ಮೈದಾನವಾಗಿತ್ತು. ಅಂಚಿನಲ್ಲಿ ಹೊಂಗೆಮರಗಳಿದ್ದವು. ಇಲ್ಲಿ ಕಾಲ್ಚೆಂಡಾಟ, ಜೀಪು-ದಾಂಡು, ಮರಕೋತಿ ಇತ್ಯಾದಿ ಆಟವಾಡುತ್ತಿದ್ದೆವು. ಬೆಂಚು, ಕುರ್ಚಿ, ಮೇಜು ಇವನ್ನು ನೆರೆಯುವರ ಮನೆಗಳಿಂದ ತಂದು ಸಭೆ ಕೂಡಿಸುವುದು ನಮ್ಮ ಕೆಲಸವಾಗಿತ್ತು.

ಈ ಭಾಷಣಗಳಿಂದ ಸ್ಫೂರ್ತಿಗೊಂಡ ನಮ್ಮ ತಂದೆ, ನಮ್ಮ ಇಬ್ಬರು ಸಹೋದರರು ಮತ್ತು ನಾನು ಖಾದಿ ತೊಡಲು ಪ್ರಾರಂಭಿಸಿದೆವು. ತುಂಡು ಪಂಚೆ, ಷರಟು, ಟೋಪಿ ಧರಿಸುತ್ತಿದ್ದೆವು. ತಂದೆಯವರು ಪೇಟಾ ಸುತ್ತುತ್ತಿದ್ದರು. ನಾವು ಉಡುತ್ತಿದ್ದುದು ನಾಲ್ಕು ಮೊಳದ ಲುಂಗಿ, ಒರಟು ಖಾದಿ, ಜಾಳು. ಪಂಚೆಯ ಅಂಚನ್ನು ಹೊಲಿಗೆ ಯಂತ್ರದಲ್ಲಿ ಹೊಲಿಸಿ ಉಡುತ್ತಿದ್ದೆ. ನಡೆಯುವಾಗ ಅಂಚು ಪಟ್ಟನೆ ಬಿಡಿಯುವುದು. ಪೈಜಾಮ ಹೊಲಿಸಿದೆ. ಅದನ್ನು ತೊಟ್ಟು ಕುಳಿತರೆ ತೊಡೆಯ ಮೇಲಿನ ಕೂದಲು ಹೊರಗೆ ಕಾಣುವುದು. ಇದು ಅಂದಿನ ಖಾದಿಯ ಸ್ಥಿತಿ.

ಮರದ ಹಳೆಯ ಬಗೆಯ ರಾಟೆ ಕೊಂಡು, ಹಂಜಿಯನ್ನೂ ಕೊಂಡು ತಂದು ನೂಲುತ್ತಿದ್ದೆ. ಶಾ ಜವರೇಚಂದ ಎಂಬ ಮಾರವಾಡಿ ಬಟ್ಟೆಯ ವ್ಯಾಪಾರಿ ವಿಕ್ಟೋರಿಯ ಆಸ್ಪತ್ರೆ ಉತ್ತರಕ್ಕೆ ಒಂದು ಶೆಡ್ ಕಟ್ಟಿಸಿ ನೂಲುವುದನ್ನು ಕಲಿಸುವ ವ್ಯವಸ್ಥೆ ಮಾಡಿದ್ದರು. ನಾವು ಆಗ ನೂಲುತ್ತಿದ್ದದು 10-12ನೆಯ ನಂಬರು. ಹುರಿ ಕೊಡುವುದು

ತಿಳಿದಿರಲಿಲ್ಲ. ಲಡಿ ಸುತ್ತುವಾಗ, ನೂಲುವಾಗ ಹರಿದು ಹೋಗುವುದು. ನೂಲುವುದನ್ನು ಪ್ರೋತ್ಸಾಹಿಸಿ ಲಡಿಗೆ ಅರ್ಧ ಅಣೆಯಿಂದ ಎರಡು ಅಣೆಯವರೆಗೆ ಅದರ ಯೋಗ್ಯತೆಗೆ ಅನುಸಾರ ಕೊಳ್ಳುತ್ತಿದ್ದರು. ಕ್ರಮ ಕ್ರಮೇಣ ಎಲ್ಲವೂ ಸುಧಾರಿಸುತ್ತ ಬಂತು. ಈಗಂತೂ ಕೃತಕ ನೈಲಾನ್ ನಾರು ಬೆರಸಿ, ನೈಲಾನ್ ಖಾದಿ ತಯಾರಿಕೆಯೂ ನಡೆದಿದೆ. ಆದರೆ ನಾನು ಈ ಬಟ್ಟೆ ಬಳಸುವುದಿಲ್ಲ. ಅರವತ್ತು ವರ್ಷಗಳಿಂದಲೂ ಸತತ ಸಂಪೂರ್ಣ ಖಾದಿ ಧರಿಸಿದ್ದೇನೆ. ಶಾ ಜವರೇಚಂದ ಖಾದಿ ವ್ಯಾಪಾರ ಮಾತ್ರ ಮಾಡುವ ದೀಕ್ಷೆ ತೊಟ್ಟು ಗಿರಣಿ ಜವಳಿ ವ್ಯಾಪಾರ ಬಿಟ್ಟರು. ಈ ಪ್ರಯೋಗದಲ್ಲಿ ಗಳಿಸಿದ್ದ ಹಣವನ್ನೆಲ್ಲ ಕಳೆದುಕೊಂಡು, ಕಡೆಗೆ ದಿವಾಳಿಯಾದರು. ಇಂಥ ದೇಶಭಕ್ತರನ್ನು ಯಾರಾದರೂ ಇಂದು ಸ್ಮರಿಸುತ್ತಾರೆಯೇ ? ಅವರ ಕುಟುಂಬ ವರ್ಗದಲ್ಲಿ ಯಾರು ಎಲ್ಲಿದ್ದಾರೋ ಏನೂ ತಿಳಿಯದು.

ಮೊಟ್ಟ ಮೊದಲು ಖಾದಿ ಉತ್ಪನ್ನ ಕೇಂದ್ರ ಸ್ಥಾಪಿತವಾದುದು ನಂಜನಗೂಡು ತಾಲೂಕಿನ ತಗಡೂರಿನಲ್ಲಿ. ಸಂಸ್ಥಾಪಕರು ಅದ್ವಿತೀಯ ಹುಟ್ಟು ಹೋರಾಟಗಾರ ತಗಡೂರು ರಾಮಚಂದ್ರರಾವ್. ಸಾರ್ವಜನಿಕರಿಂದ ಅಲ್ಪ ಪ್ರಮಾಣದಲ್ಲಿ ಚಂದಾ ಕೂಡಿಸಿ ಸುಮಾರು 1925ರಲ್ಲಿ ಕೇಂದ್ರ ಸ್ಥಾಪಿಸಿದರು. ಉತ್ಪನ್ನ ಮತ್ತು ಮಾರಾಟದಲ್ಲಿ ಪಡಬಾರದ ಕಷ್ಟ ಅನುಭವಿಸಿದರು. ಕೋಟೆಯಲ್ಲಿ ಅಧಿಕೃತ ಮಾರಾಟದ ಖಾದಿ ಅಂಗಡಿ ಸ್ಥಾಪಿತವಾಗಿತ್ತು. ಜಗತ್ ಪ್ರಸಿದ್ಧ ಮಧುರ ಕಂಠದ ಗಾಯಕಿ ಸುಬ್ಬಲಕ್ಷ್ಮಿಯವರ ಪತಿ ಟಿ. ಸದಾಶಿವಂ ಕೆಲವು ವರ್ಷಗಳ ಕಾಲ ಈ ಮಳಿಗೆಯ ಮ್ಯಾನೇಜರ್ ಆಗಿದ್ದರು. ಇಲ್ಲಿ ದೊರೆಯುತ್ತಿದ್ದುದು ತಮಿಳುನಾಡು ಮತ್ತು ಆಂಧ್ರದ ಖಾದಿ. ಅನಂತರ ಬಂತು ಬದನವಾಳ ಖಾದಿ. ಆದರೆ ಅದೇಕೋ ತಗಡೂರು ಖಾದಿ ಮಾರಲು ನಿರಾಕರಿಸುತ್ತಿದ್ದರು. ತಗಡೂರ ರಾಮಚಂದ್ರರಾಯರು ತಗಡೂರು ಖಾದಿಯ ಗಂಟು ಹೆಗಲ ಮೇಲೆ ಹೊತ್ತು ತಂದು; ಅದನ್ನು ಕೊಂಡು, ಮಾರುವಂತೆ ಉಪವಾಸ ಸತ್ಯಾಗ್ರಹ ನಡೆಸಬೇಕಾಯಿತು.

ತಗಡೂರಿನ ಸಮೀಪದಲ್ಲೇ ಬದನವಾಳದಲ್ಲಿ ಮೈಸೂರು ಸರಕಾರ ಖಾದಿ ಉತ್ಪನ್ನ ಕೇಂದ್ರ ಸ್ಥಾಪಿಸಿತು. ಭಾರತೀಯ ವಿಜ್ಞಾನ ಮಂದಿರದಲ್ಲಿ, ವಿಜ್ಞಾನ ಪ್ರಯೋಗದಲ್ಲಿ ತೊಡಗಿದ್ದ ರಾಜಾರಾಮ ಅಯ್ಯಂಗಾರರು ಇದರ ಮೊದಲ ವ್ಯವಸ್ಥಾಪಕರಾಗಿದ್ದರು. ಮೈಸೂರು ಮಹಾರಾಜರು ಬ್ರಿಟಿಷ್ ಪ್ರಭುತ್ವದ ಅಡಿಯಾಳಾಗಿದ್ದರು. ಗಾಂಧೀಜಿ ಬ್ರಿಟಿಷ್ ಪ್ರಭುತ್ವದ ವಿರೋಧಿ, ಅಹಿಂಸಕ, ಬಂಡಾಯಗಾರ. ಮಹಾತ್ಮರ ಮಹತ್ವ ಅರಿತ ಚತುರ ಆಡಳಿತಗಾರ ಸರ್ ಮಿರ್ಜಾ ಇಸ್ಮಾಯಿಲ್, ಅವರ ವಿಶ್ವಾಸಕ್ಕೂ ಪಾತ್ರರಾಗಲು ಬದನವಾಳ ಖಾದಿ ಕೇಂದ್ರ ಸ್ಥಾಪಿಸಿದ್ದರು. ಅವರು ಖಾದಿ ಧರಿಸುತ್ತಿರಲಿಲ್ಲ. ಸರಕಾರಿ ನೌಕರರು ಖಾದಿ ಧರಿಸಲು ಹೆದರುತ್ತಿದ್ದರು. ಖಾದಿ ಧರಿಸಲು ಅಭ್ಯಂತರವಿಲ್ಲ ಎಂದು ದಿವಾನರು ಹೇಳುತ್ತಿದ್ದರೂ ಖಾದಿ ಧರಿಸುತ್ತಿದ್ದವರ ಮೇಲೆ ಪೊಲೀಸರ ನಿಗಾ ಸದಾ ಇರುತ್ತಿತ್ತು.

ನೂತ ನೂಲಿಗೆ ಗಂಜಿಪಾಕಿ ಅರಿವೆ ನೇಯುತ್ತಿದ್ದವರು ಸಿರಿಗುಂದದ ಅಸ್ಪೃಶ್ಯರು. ಹೊಲೆಯರು ಗಂಜಿಹಾಕಿದ ವಸ್ತ್ರವನ್ನು ಮುಟ್ಟುವುದರಿಂದ ಮೈಲಿಗೆ ಆಗುತ್ತೆ. ಇದು ಗ್ರಾಮದ ಮಡಿವಂತರ ವಾದ. ರಾಮಚಂದ್ರರಾಯರು ಇದೇ ಖಾದಿ ಧರಿಸುತ್ತಿದ್ದುದರಿಂದ ಅವರು ಅಸ್ಪೃಶ್ಯರಾದರು. ಒಂದು ಸಣ್ಣ ಸಭೆಯಲ್ಲಿ ಮುಟ್ಟಲು ಯೋಗ್ಯವಲ್ಲದ ಖಾದಿ ಹಾಸಿ, ಅನ್ಯಮಾರ್ಗವಿಲ್ಲದೆ ಮಡಿವಂತರು ಅದರ ಮೇಲೆ ಕೂಡುವಂತೆ ತಗಡೂರರು ಮಾಡಿದರು. ಮಡಿವಂತಿಕೆ ಮಾಯವಾಯಿತು.

ಶ್ರೀಮಂತ ವರ್ಗಕ್ಕೆ ಖಾದಿ ಒರಟು ವಸ್ತ್ರ. ಈ ವರ್ಗಕ್ಕೆ ಸೇರಿದ ಮೋತಿಲಾಲ ನೆಹರು ಇದೇ ಆಕ್ಷೇಪಣೆ ಎತ್ತಿದರು ಮಹಾತ್ಮರಲ್ಲಿ. ಖಾದಿಯ ಮೇಲೆ ಕೈ ಆಡಿಸುತ್ತ, "ಹಿಮಾಲಯ ಪರ್ವತ ಶ್ರೇಣಿ ಒಂದೇ ಮಟ್ಟಸವಾಗಿಲ್ಲ. ಅದರಂತೆ ಇದೆ ಈ ಖಾದಿ ಎಂಥ ಸೊಗಸು!" ಎಂದು ನಗೆಯಾಡಿದರು. ಗಾಂಧೀಜಿ "ಗಿರಣಿ ವಸ್ತ್ರದ ಹಾಸು-ಹೊಕ್ಕುಗಳು ಎಡೆಬಿಡದಂತೆ ನೇಯಲಾಗಿರುತ್ತದೆ. ಅದನ್ನು ಧರಿಸುವುದರಿಂದ ಮೈಗೆ ಗಾಳಿ ಸೋಂಕದು. ಬಿಸಿಲು ರಾಷ್ಟ್ರವಾದ ಭಾರತದಲ್ಲಿ ಖಾದಿ ಧರಿಸಲು ಅತ್ಯಂತ ಯೋಗ್ಯ ಅರಿವೆ. ಸೂಕ್ಷ್ಮ ರಂಧ್ರಗಳ ಮೂಲಕ ಸಂಚರಿಸುತ್ತದೆ. ಇದರಿಂದ ಬೇಸಿಗೆಯಲ್ಲಿ ದೇಹವನ್ನು ತಣ್ಣಗೆ ಇಡುತ್ತದೆ. ಚಳಿಗಾಲದಲ್ಲಿ ಒರಟು ಖಾದಿ ದೇಹವನ್ನು ಬೆಚ್ಚಗೆ ಇಡುತ್ತದೆ. ಚಹಾ ಮಂಡಲಿಯ ಜಾಹೀರಾತು ನೋಡಿಲ್ಲವೇ? ಬಿಸಿಲಿಗೆ ತಂಪು ಕೊಡುತ್ತೆ ಟೀ. ಚಳಿಗೆ ಬೆಚ್ಚಗಿರಿಸುತ್ತೆ ಗರಂ ಚಹಾ! ಅಂತೆಯೇ ಖಾದಿ."

ಖಾದಿ ಸ್ವಾತಂತ್ರ್ಯಕ್ಕೆ ಹಾದಿ. ಬಡತನದ ನೇರ ವಿರೋಧಿ. ವಿರಾಮದ ವೇಳೆಯಲ್ಲಿ ಮನೆಯಲ್ಲೇ ಕುಳಿತು, ಹೆಂಗಸರು ಮಕ್ಕಳು ರಾಟೆ ತಿರುಗಿಸಿ, ನಾಲ್ಕು ಪುಡಿಗಾಸು ಮಾಡಿಕೊಳ್ಳಲು ಸಾರ್ವತ್ರಿಕವಾಗಿ ದೇಶದಾದ್ಯಂತ ಯಾರು ಬೇಕಾದರೂ ಬಳಸಬಹುದಾದ ಸುಗಮ, ಸುಲಭ ಸಾಧನ.

ದಿವಾನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು "ರಾಟೆ ಕೊಡುವುದು ಕೇವಲ ಕೆಲವು ದುಗ್ಗಾಣಿ. ಇದರಿಂದ ಬಡತನ ಹೇಗೆ ಹೋದೀತು?" ಎಂದು ಆಕ್ಷೇಪಣೆ ಎತ್ತಿದರು, "ಮಹಾ ಮೇಧಾವಿಗಳನ್ನು ನನ್ನ ವಾದದಿಂದ ಸಮಾಧಾನಗೊಳಿಸುವುದಾಗುವುದಿಲ್ಲವಲ್ಲ" ಎಂದು ಮಹಾತ್ಮರು ಮುಮ್ಮಲಮರುಗಿದರು. ಕಡೆಗೆ ವಿಶ್ವೇಶ್ವರಯ್ಯನವರು ಸಾರ್ವತ್ರಿಕವಾಗಿ, ಎಲ್ಲರಿಂದಲೂ ಎಲ್ಲ ಕಾಲದಲ್ಲೂ ಮನೆಯಲ್ಲೇ ಕುಳಿತು, ಬಿಡುವಿನ ಕಾಲದಲ್ಲಿ ನಾಲ್ಕು ಕಾಸು ಕೊಡುವ ಸುಲಭ ಸಾಧನ ಚರಕ ಎಂದು ಒಪ್ಪಿದರು. ಸಾರ್ವತ್ರಿಕವಾಗಿ ಬಳಸಬಹುದಾದ ಮತ್ತೊಂದು ಸುಲಭ ಸಾಧನ ದೊರೆಯುವವರೆಗೂ ರಾಟೆ ಬಹು ಜನ ಬಳಸಬಹುದಾದುದು ಎಂದು ಒಪ್ಪಿಕೊಂಡರು.

ಖಾದಿ ಸ್ವಾತಂತ್ರ್ಯಕ್ಕೆ ಹಾದಿ ಒಪ್ಪೋಣ. ಸ್ವಾತಂತ್ರ್ಯ ಲಭಿಸಿದ ತರುವಾಯ ಅದರ ಸ್ಥಾನವೇನು? ಸ್ವದೇಶದಲ್ಲೇ ತಯಾರಾದ ಯಂತ್ರಗಳಿಂದ ಇಲ್ಲಿಯ ಗಿರಣಿಗಳಲ್ಲಿ ತಯಾರಾದ ಅರಿವೆ ಬಳಸುವುದು ಉಚಿತವಲ್ಲವೇ? ಇನ್ನೇಕೆ ಖಾದಿ ಬಳಸಬೇಕು? ರೂಪಾಯಿಯ ಮೌಲ್ಯ ಇಳಿದಿರುವಾಗ ರಾಟೆಯಿಂದ ಲಭಿಸುವ ಪುಡಿಗಾಸು

ಅಗಣನೀಯ. ಹೆಚ್ಚು ಲಾಭದಾಯಕವಾದ ಉಪಕಸುಬು ದೊರಕಿಸಿಕೊಡಬೇಕು. ಇದೊಂದು ಬುದ್ಧಿವಂತಿಕೆಯ ವಾದ.

ಆದರೆ ಮಹಾತ್ಮಾ ಗಾಂಧಿಯವರ ಧ್ಯೇಯ, ಉದ್ದೇಶ, ಗುರಿ ಕೇವಲ ಬಡತನದ ನಿವಾರಣೆ ಆಗಿರುವುದಿಲ್ಲ. ಸತ್ಯ, ಶಾಂತಿ, ಅಹಿಂಸಾತ್ಮಕಮಾರ್ಗದಿಂದ ಒಂದು ನೂತನ ಸಮಾಜ ಸ್ಥಾಪಿಸುವುದು ಅವರ ಮಹೋನ್ನತ ಆಸೆ. ಸಮಸ್ತ ಜೀವನ, ಆಡಳಿತ, ಸಮಾಜ, ಆಧುನಿಕ ನಾಗರಿಕತೆಯ ವಿಕೇಂದ್ರೀಕರಣವಾಗಬೇಕು. ಕೇಂದ್ರೀಕರಣ ಭಯಾನಕ. ಈ ಪದ್ಧತಿ ಶೋಷಣೆಗೆ ಅವಕಾಶ ಕೊಡುತ್ತಿದೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳು, ಸಿರಿವಂತರು, ಆಡಳಿತಗಾರರು ಇಡೀ ಸಮಾಜವನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳಲು ಅವಕಾಶ ಕಲ್ಪಿಸಿಕೊಡುತ್ತದೆ. ಒಂದು ಗಿರಣಿ ಬಂದಾದರೆ ಅದರ ಆಶ್ರಯದಲ್ಲಿ ಬದುಕುವ ಸಾವಿರಾರು ಜನ ಅಶನಕ್ಕಾಗಿ ದುಃಖಿಸಬೇಕಾಗುತ್ತದೆ. ಸರ್ವ ವಿಧದಲ್ಲೂ ಸ್ವಾವಲಂಬಿಯಾಗಿ ಬದುಕುವ ವ್ಯಕ್ತಿ, ಸಮಾಜ, ಗ್ರಾಮ ಯಾರಿಗೂ ಅಡಿಯಾಳಾಗಿ ಬಾಳಬೇಕಾದ್ದಿಲ್ಲ. ಗ್ರಾಮ ಸ್ವರಾಜ್ಯ ಸ್ಥಾಪಿತವಾಗಬೇಕು. ಪ್ರತಿಯೊಂದು ಗ್ರಾಮವೂ ಆಧುನಿಕ ನಾಗರಿಕತೆಗೆ ಮರುಳಾಗದೆ, ಸರಳ ಜೀವನ ನಡೆಸುತ್ತ, ಸ್ವಾವಲಂಬಿಯಾಗಿ ಬಾಳಲು ಪ್ರಯತ್ನಿಸಬೇಕು. ಅಹಿಂಸಾತ್ಮಕ ಮಾರ್ಗದಿಂದ ಶೋಷಣೆಗೆ ಎಡೆಗೊಡದ, ಪರಾವಲಂಬಿಯಾಗಿರದ, ಸ್ವಾವಲಂಬಿಯಾಗಿ ಬದುಕಿ ಬಾಳುವ, ವಿಕೇಂದ್ರೀಕೃತ ನೂತನ ಸಮಾಜ ಸ್ಥಾಪನೆ ಮಹಾತ್ಮರ ಮಹೋನ್ನತ ಆದರ್ಶ. ಖಾದಿ ಅದಕ್ಕೊಂದು ದಾರಿ.

* * * *

ರಾಜ್ಯ ದೊರಕಿಸುವುದಕ್ಕಾಗಿಯಾಗಲಿ, ಸ್ವರ್ಗ ಸುಖ ಸಂಪಾದನೆಗಾಗಲಿ ಮತ್ತು ಮುಕ್ತಿಹೊಂದುವುದಕ್ಕೆಂದಾಗಲಿ ನಾನು ದೃಢಪಡಿಸುವುದಿಲ್ಲ. ತೊಂದರೆ ಕೊಟ್ಟವರಿಂದ ವೇದನೆಪಟ್ಟವರನ್ನೂ—ಪಡುವವರನ್ನೂ ಮುಕ್ತ ಮಾಡುವುದೇ ನನ್ನ ಗುರಿಯಾಗಿದೆ.

—ಗಾಂಧೀಜಿ

ಖಾದಿಯ ಅರ್ಥಶಾಸ್ತ್ರ

ಶ್ರೀ ವೈ. ಎ. ಪಂಡಿತರಾವ್
ಮುಂಬೈ ಖಾದಿ ಆಯೋಗದಲ್ಲಿ ಆರ್ಥಿಕ ಸಂಶೋಧನ
ಮತ್ತು ಬ್ಯಾಂಕ್ ಧನ ಸಹಾಯ ವಿಭಾಗದ
ನಿರ್ದೇಶಕರು. ಒಳ್ಳೇ ಬರಹಗಾರರು.

ನಿಜವಾದ ಭಾರತ ಗ್ರಾಮಾಂತರದಲ್ಲಿದೆ. 1981ರ ಗಣತಿಯ ಮೇರೆಗೆ ನಮ್ಮ ದೇಶದ ಜನಸಂಖ್ಯೆ 68.4 ಕೋಟಿ. ಹೋದ ಸಲಕ್ಕಿಂತ (1971) 24% ಹೆಚ್ಚಾಗಿದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿರುವ ಜನತೆಗೆ ಉದ್ಯೋಗ ಕೊಡುವುದು ಮತ್ತು ಅವರಿಗೆ ಅವಶ್ಯವಿದ್ದ ಸಾಧನೆಗಳನ್ನು ಪೂರೈಸುವುದು ಅಗತ್ಯದ ಕೆಲಸ. ನಾವು ಈಗ ಹೆಚ್ಚು ಜನರಿಂದ ಉತ್ಪಾದನೆ ಮಾಡಬೇಕಾಗಿದೆಯೇ ವಿನಃ ಕೇವಲ ಹೆಚ್ಚು ಉತ್ಪಾದನೆ ಮಾಡುವುದಲ್ಲ. ನಮ್ಮ ದೇಶದಲ್ಲಿ ಒಟ್ಟು ಗ್ರಾಮುಗಳ ಸಂಖ್ಯೆ 5.76 ಲಕ್ಷ. ಅಲ್ಲಿ ವಾಸಿಸುವ ಸಂಖ್ಯೆ 43.90 ಕೋಟಿ.

ನಿರುದ್ಯೋಗ : ಒಂದು ಸಮಿತಿಯ ಅಂದಾಜಿನ ಮೇರೆಗೆ ನಮ್ಮ ದೇಶವಲ್ಲಿ ನಿರುದ್ಯೋಗಿಗಳ ಸಂಖ್ಯೆ 4 ಕೋಟಿ. 1980ರಲ್ಲಿ ಭಾರತದಲ್ಲಿಯ 5.67 ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಒಟ್ಟು 1.62 ಕೋಟಿ ಜನರು ನೋಂದಾಯಿಸಿದ್ದರು. ಅದರಲ್ಲಿ ಕೇವಲ 4.62 ಲಕ್ಷ ಜನರಿಗೆ ಮಾತ್ರ ಉದ್ಯೋಗ ದೊರಕಿತು. ಹೀಗೆ ಇದು ಬೆಳೆಯುತ್ತಲೇ ಇದೆ. ಭಾರತದ ಈ ನಿರುದ್ಯೋಗ ಸಮಸ್ಯೆ ಬಗೆಹರಿಸುವುದೆಂದರೆ ಹಳೇ ಕೌದಿಯ ದುರಸ್ತಿ ಮಾಡಿದಂತೆಯೇ. ಒಂದು ಕಡೆ ಹೊಲಿದರೆ ಮತ್ತೊಂದು ಕಡೆ ಹಿಸಿಯುತ್ತದೆ.

ಬಡವರು ಯಾರು ? : ಗ್ರಾಮಾಂತರಗಳಲ್ಲಿ ಕಡಿಮೆ ಭೂಮಿಯುಳ್ಳ ರೈತ, ಹೊಲದಲ್ಲಿ ದುಡಿಯುವ ಭೂರಹಿತ ಕೆಲಸಗಾರ, ಕಸುಬುದಾರ, ಉತ್ಪನ್ನದ ಸಾಧನಗಳಿಲ್ಲದೆ ತೊಳಲಾಡುವವ ಇಂಥವರೇ ಬಡವರು. ಸಮಾಜದ ದೃಷ್ಟಿಯಿಂದ ಹರಿಜನ-ಗಿರಿಜನರು ಈ ಕಕ್ಷೆಯಲ್ಲಿ ಬರುವುದುಂಟು.

ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ದೊಡ್ಡ ಉದ್ಯೋಗಗಳು ಸಮರ್ಥವಿಲ್ಲ. ಇಂಥ ಉದ್ಯೋಗಗಳಲ್ಲಿ ಒಬ್ಬನಿಗೆ ಉದ್ಯೋಗ ಕೊಡಬೇಕಾದರೆ 50 ಸಾವಿರದಿಂದ ಒಂದು ಲಕ್ಷ ರೂಪಾಯಿ ತೊಡಗಿಸಬೇಕಾಗುವುದು. ಆದ ಕಾರಣ ಚಿಕ್ಕ

ಉದ್ಯೋಗಗಳೇ ಇವಕ್ಕೆ ತಾರಕ. ಆದುದರಿಂದ ಭಾರತವು ವಿಕೇಂದ್ರೀಕೃತ ಅರ್ಥ ವ್ಯವಸ್ಥೆಯ ಸ್ವೀಕಾರ ಮಾಡಬೇಕಾಯ್ತು. ಹೊಲಗಳು ಸದೈವ ವಿಕೇಂದ್ರೀಕೃತ. ಅದರಂತೆ ವ್ಯಾಪಾರವೂ ವಿಕೇಂದ್ರೀಕೃತವಾಗಬಲ್ಲದು. ಆದರ ಈ ಔದ್ಯೋಗಿಕರಣವು ವಿಕೇಂದ್ರೀಕೃತ ತಳಹದಿಯಮೇಲೆ ಪ್ರತಿಷ್ಠಿತವಾಗದ ಹೊರತು ನಮ್ಮ ದೇಶದ ಆರ್ಥಿಕ ಪ್ರಶ್ನೆ ಬಿಡಲಾರದು. ಒಕ್ಕಲುತನದ ನಂತರ ಗಾಂಧೀಜಿ ಅವರು ಖಾದಿ ಕಾರ್ಯಕ್ಕೆ ಅಗ್ರಸ್ಥಾನವನ್ನು ಕೊಟ್ಟರು. ಸಾಧಾರಣ ಭಾರತೀಯ ಅರ್ಥವ್ಯವಸ್ಥೆಯಲ್ಲಿ ಒಕ್ಕಲುತನ, ತತ್‌ಸಂಬಂಧಿ ಉದ್ಯೋಗ, ಹೊಲದಲ್ಲಿ ಉತ್ಪತ್ತಿಯಾದ ಕಚ್ಚಾಮಾಲುಗಳ ಮೇಲೆ ವಿಕ್ರಿಮಾಡುವುದು ಮತ್ತು ಬಟ್ಟೆ ಉತ್ಪಾದನೆ, ಗೌಂಡೀ ಕೆಲಸ ಮತ್ತು ಸಾರಿಗೆ ಈ ಕಾರ್ಯದಲ್ಲಿ ಹೆಚ್ಚಿನ ಪ್ರತಿಫಲ ಗಿಟ್ಟುವುದುಂಟು. ಈ ಕ್ಷೇತ್ರದಲ್ಲಿ ಯಂತ್ರೀಕರಣ ಮಾಡಬೇಕಾದಲ್ಲಿ ಪೂರ್ವಾಪರ ವಿಚಾರದ ಅಗತ್ಯವಿದೆ. ಚಿಕ್ಕ ಉದ್ಯೋಗಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು. ಆದರೆ ಈ ಉದ್ಯೋಗಗಳಲ್ಲಿ ಹಸ್ತಕೌಶಲ್ಯ ಕರಗತವಾಗುವುದು ತುಸು ದುಸ್ತರ. ಈ ಉದ್ಯೋಗದಲ್ಲಿ ತೊಡಗಿದವನಿಗೆ ಸಾಮಾಜಿಕ ದರ್ಜೆ ಕಡಿಮೆಯಲ್ಲದೆ, ಗಳಿಕೆಯೂ ಅಷ್ಟಕ್ಕಷ್ಟೇ. ಇನ್ನು ಮುಂದೆ ಇಂಥ ಉದ್ಯೋಗಗಳನ್ನು ಉಪಯೋಗಿಸಿ ಕೆಲ ಉದ್ಯೋಗಗಳು ಕಿರಕುಳ ಉದ್ಯೋಗಗಳೆಂದು ಬೆಳೆಯಬಹುದು. ಹೀಗೆ ಗ್ರಾಮೋದ್ಯೋಗವು ಆಧುನಿಕ ಸ್ಥಾನಗಳ ಅಂಗೀಕಾರ ಮಾಡಿ ತನ್ನ ಸ್ಥಾನವನ್ನು ಭದ್ರಮಾಡಿಕೊಳ್ಳುತ್ತಿದೆ.

ಕೆಲಸ ಎಂಥದಿರಬೇಕು? : ಯಾವುದೇ ಕೆಲಸವು ಸಾರ್ವತ್ರಿಕವಾಗಿ ಯೋಗ್ಯ ಪ್ರತಿಫಲ ಗಿಟ್ಟಿಸಲು ಈ ಕೆಳಗಿನ ಕಾರಣಗಳ ಅವಶ್ಯಕತೆ ಇದೆ.

1) ಆ ಕೆಲಸವು ಮನೆಯಲ್ಲಿ ಕುಳಿತು ತನ್ನ ಬಿಡುವಿನ ವೇಳೆಯಲ್ಲಿ ಮಾಡುವಂತಿರಬೇಕು.

2) ಮನೆಯಲ್ಲಿಯ ಚಿಕ್ಕಮಕ್ಕಳಿಂದ ಮುದುಕರವರೆಗೆ ಎಲ್ಲರೂ ಈ ಕಾರ್ಯದಲ್ಲಿ ತೊಡಗುವಂತಿರಬೇಕು.

3) ಇದರಲ್ಲಿ ಮನುಷ್ಯ, ಯಂತ್ರದ ಗುಲಾಮನಾಗದೆ, ಯಂತ್ರವು ಆತನ ಅಂಕಿತದಲ್ಲಿರುವಂತೆ – ಬೇಕಾದಾಗ, ಬೇಕಾದಲ್ಲಿ ಮಾಡುವಂತೆ ಇರಬೇಕು.

4) ಈ ಕೆಲಸಕ್ಕೆ ಹೆಚ್ಚಿನ ತಂತ್ರಜ್ಞಾನದ ಗೊಡವೆ ಇರದೇ ಅವಶ್ಯವಿದ್ದ ತಾಂತ್ರಿಕ ಜ್ಞಾನವನ್ನು ಸುಲಭವಾಗಿ ಹಸ್ತಗತಮಾಡಿಕೊಳ್ಳುವಂತಿರಬೇಕು.

5) ಈ ಕೆಲಸಕ್ಕೆ ಬೇಕಾಗುವ ಯಂತ್ರವು ಸುಲಭವಾಗಿ ದೊರೆಯುವಂತಿರಬೇಕು. ಅದು ತೀರ ಬಿಕ್ಕಟ್ಟಿನದ್ದಿರದೆ ಹಳ್ಳಿಯಲ್ಲಿಯೇ ಸುಲಭವಾಗಿ ದುರಸ್ತಿಮಾಡಲು ಬರಬೇಕು. ಅದರ ಬಿಡಿಭಾಗಗಳು ಸುಲಭವಾಗಿ ದೊರೆಯುವಂತಿರಬೇಕು.

6) ಇದರಲ್ಲಿ ಕೆಲಸ ಮಾಡುವವನಿಗೆ ಹೊಟ್ಟೆ ತುಂಬುವುದೇ ಪ್ರತಿಫಲ ಆಗಿರಬೇಕು.

ಅವನ ತೀರ ಅವಶ್ಯ ಬೇಡಿಕೆಗಳಾದ ಅನ್ನ, ಅರಿವೆ, ಆಸರ ಇವು ಸುಲಭವಾಗಿ ದೊರೆಯಬೇಕು.

7) ಇದರಿಂದ ಉತ್ಪನ್ನವಾದ ಮಾಲು ಶ್ರೀ ಸಾಮಾನ್ಯನು ನಿತ್ಯ ಉಪಯೋಗಿಸುವ ವಸ್ತುವಾಗಿರಬೇಕು. ಮತ್ತು ಅದು ಉತ್ತಮ ದರ್ಜೆಯದಿದ್ದು ಒಳ್ಳೇ ತಾಳಿಕೆ ಬರಬೇಕು.

8) ಈ ಕಾರ್ಯಕ್ಕೆ ಬೇಕಾಗುವ ಯಂತ್ರಗಳು ತುಂಬಾ ಬೆಲೆಬಾಳುವವಿರಬಾರದು.

9) ಇದರಿಂದ ಉತ್ಪನ್ನವಾಗುವ ಪಕ್ಕಾ ಮಾಲು ತುಸು ಪುರಸ್ಕಾರದಿಂದ ಸುಲಭವಾಗಿ ಮಾರಾಟವಾಗುವಂತಿರಬೇಕು.

ಈ ಮೇಲ್ಕಾಣಿಸಿದ ಎಲ್ಲ ಗುಣಗಳು ಶತಪ್ರತಿ ಕೈನೂಲು ಮತ್ತು ಕೈಮಗ್ಗದಲ್ಲಿ ಅಂದರೆ ಖಾದಿ ಕಾರ್ಯದಲ್ಲಿರುವವೆಂದು ಧಾರಾಳವಾಗಿ ಹೇಳಬಹುದು.

ಖಾದಿ–ಕೈನೂಲು–ಕೈಮಗ್ಗ :

ಇಂದು ಸುದೈವದಿಂದ ಖಾದೀ ಕಾರ್ಯದಲ್ಲಿ ಒಂದು ಕ್ರಾಂತಿಕಾರೀ ಯಂತ್ರವು – ಆರು ಕದರಿನ ಅಥವಾ 12 ಕದರಿನ ಹೊಸ ಮಾದರಿಯ ಅಂಬರ ಚರಖದ ರೂಪದಲ್ಲಿ ಪ್ರಾಪ್ತವಾಗಿದೆ. ಅದು ತುಂಬಾ ಉಪಯುಕ್ತ ಮತ್ತು ಬಹಳ ಮಟ್ಟಿಗೆ ದೋಷರಹಿತವಿದೆ. ಆ ಚರಖದ (ಆರು ಕದರಿನದು) ಬೆಲೆ ಒಂದು ಸಾವಿರ. ಈ ಚರಖದ ನೂಲು ತುಂಬಾ ಸಮಾನವಾಗಿರುವುದಲ್ಲದೆ ಎಂಟು ತಾಸುಗಳಲ್ಲಿ ಸಾಮಾನ್ಯ ನೂಲುವ ಮಾದಮ್ಮ 16ರಿಂದ 20 ಲಡಿ ಸಹಜವಾಗಿ ನೂಲಬಲ್ಲಳು. ಅಂದರೆ ನಿತ್ಯ ಐದಾರು ರೂಪಾಯಿ ಸಹಜವಾಗಿ ದುಡಿಯಬಲ್ಲಳು. ಈ ಚರಖಿಕ್ಕಾಗಿ ಆಯೋಗದವರು ಬಡ್ಡಿ ರಹಿತ ಸಾಲ ಕೊಡುವುದುಂಟು. ಈ ಸಾಲವನ್ನು ಕಂತುಗಳ ಮೂಲಕ ಹತ್ತು ವರುಷಗಳಲ್ಲಿ ಪೂರೈಸಬೇಕು. ಇದಕ್ಕೆ ಬೇಕಾಗುವ ಕಚ್ಚಾ ಮಾಲು ಅಥವಾ ಹಂಜಿಗಳನ್ನು ಸಂಸ್ಥೆಯವರು ಪೂರೈಸುವರು ಮತ್ತು ಸಿದ್ಧವಾದ ನೂಲನ್ನು ಅದರ ಪ್ರತಿಫಲಕೊಟ್ಟು ತೆಗೆದುಕೊಳ್ಳುವರು. ಎಲ್ಲಿಯೂ ನೂಲಬಹುದು. ಈ ಚರಖಿಕ್ಕೆ ಬೇಕಾಗುವ ಹಂಜಿಗಳನ್ನೂ ಯಂತ್ರದ ಮೇಲೆಯೇ ಮಾಡಲಾಗುತ್ತದೆ. ನಿರುದ್ಯೋಗಿಯು ಮಾನಸಿಕ ದೌರ್ಬಲ್ಯಕ್ಕೆ ತುತ್ತಾಗುವ, ಆದರೆ ಈ ಪ್ರಕಾರ ಆತನಿಗೆ ಕೆಲಸ ಸಿಕ್ಕರೆ ಆತನಲ್ಲಿ ಆತ್ಮವಿಶ್ವಾಸ ಖಂಡಿತವಾಗಿ ಬೆಳೆಯಬಲ್ಲದು. ಈ ಕೆಲಸದಲ್ಲಿ ತೊಡಗಿದ 90 ಪ್ರತಿಶತ ಸ್ತ್ರೀಯರೇ ಇರುವರು.

ನಮ್ಮ ದೇಶದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸರಾಸರಿ ಉಪಯೋಗಿಸುವ ಬಟ್ಟೆ 11.12 ಮೀಟರ್ ಇದೆ. ಇದು ತೀರ ಕಡಿಮೆಯಾಯ್ತು. ಕನಿಷ್ಠ 25-30 ಮೀಟರ್ ವರೆಗೆ ಇರಬೇಕಿತ್ತು. ಕಾರಣ ಖಾದಿ ಬಟ್ಟೆಗೆ ಬೇಡಿಕೆ ಕಡಿಮೆಯಾಗಿದೆ ಎಂಬ

ಪೆದರಿಕೆಯೋ ಬೇಡಾ. ಖಾದಿ ಬಟ್ಟೆ ಹೆಚ್ಚು ಉತ್ಪಾದಿಸಿದರೆ ಗಿರಣಿಗಳೇ ಬಂದಾಗುವ ವೆಂಬ ಭೀತಿಗೂ ಆಸ್ಪದವಿಲ್ಲ. ಇಂದು ನಮ್ಮ ಖಾದಿ ಉತ್ಪತ್ತಿ ಒಟ್ಟು ದೇಶದ ಬಟ್ಟೆ ಉತ್ಪತ್ತಿಯಲ್ಲಿ ಒಂದು ಪ್ರತಿಶತ ಮಾತ್ರ :

ದೇಶದ ಬಟ್ಟೆ ಉತ್ಪಾದನೆಯ ಚಿತ್ರ :

ವಿವರ	ಉತ್ಪತ್ತಿ (ಕೋಟಿ ಮೀ.)	ಪ್ರಮಾಣ (ಶೇಕಡಾ)	ಕಸುಬುದಾರರು (ಲಕ್ಷ)	ಪ್ರಮಾಣ (ಶೇಕಡಾ)
ಗಿರಣಿ ಬಟ್ಟೆ	347.60	45	11.61	23
ಕೈಮಗ್ಗದ ಬಟ್ಟೆ	230.00	30	59.00	64
ಗಿರಣೀ ಮಗ್ಗ	180.00	24	24.00	12
ಖಾದಿ ಅರಳೆ	7.90	1	9.72	11

ನೂಲಿನ ಬಟ್ಟೆಯ ಕ್ಷೇತ್ರದಲ್ಲಿ ತುಂಬಾ ಪರಿವರ್ತನೆಯಾಗಹತ್ತಿದೆ. ಸಾವಕಾಶ ವಾಗಿಯಾದರೂ ನಿಶ್ಚಿತವಾಗಿ ಬಟ್ಟೆ ಗಿರಣಿಗಳು ಜಿನುಗು ನೂಲಿನ ಕಡೆಗೇ ವಾಲುತ್ತಿರು ವರು. ದಪ್ಪ ನೂಲಿನ ಉತ್ಪಾದನೆ ಕಡಿಮೆ ಮಾಡುತ್ತಿರುವರು, ಅಲ್ಲದೆ ಇಂದು ಪೇಟೆಯಲ್ಲಿ ಕೃತ್ರಿಮ ನೂಲಿನ ಪ್ರಮಾಣ ಹೆಚ್ಚಾಗುತ್ತಲಿದೆ. ಆದುದರಿಂದ ಸಹಜ ವಾಗಿಯೇ ಕೈಮಗ್ಗ ಮತ್ತು ಯಂತ್ರ ಮಗ್ಗ (ಪವರ್ ಲೂಮ್) ಇವುಗಳ ಉತ್ಪಾದನೆ ಯಲ್ಲಿಯೂ ಜಿನುಗು ನೂಲಿನ ಕಡೆಗೆ ಒಲವು ಕಾಣುತ್ತಲಿದೆ. ಆದರೆ ಕೆಲವೊಂದು ನಿರ್ದಿಷ್ಟ ಬಟ್ಟೆಗೋಸ್ಕರ ಮಧ್ಯಮ ಪ್ರಮಾಣದ ದಪ್ಪ ನೂಲೇ ಬೇಕಾಗುತ್ತದೆ. ಪರದೆ, ಚಾದರ, ಜಾಜಮ್, ಗಾಲೀಚ, ಟಾವೆಲ್, ರಾಷ್ಟ್ರಧ್ವಜ ಮುಂತಾದವುಗಳು ಈ ಮಾಲಿಕೆಯಲ್ಲಿ ಬರುತ್ತವೆ. ಹೀಗೆ ಈ ಕ್ಷೇತ್ರದಲ್ಲಿ ಕೈನೂಲು ತನ್ನ ಸ್ಥಾನವನ್ನು ಕಾಪಾಡಿಕೊಳ್ಳಬಹುದು. 30 ನಂಬರಿನ ನೂಲಿನ ಬೇಡಿಕೆಯ ಪ್ರಮಾಣ ಸುಮಾರು ಶೇಕಡಾ 29 ಒಟ್ಟಾರೆ ಈ ಒರಟು (ದಪ್ಪ) ಬಟ್ಟೆಯ ಅಭಾವವಾಗಬಹುದೆಂದು ತೋರುತ್ತದೆ.

ಖಾದಿಯ ಬಟ್ಟೆ ಬೆಲೆ ಹೆಚ್ಚೇ ? : ಕೇವಲ ದುಡ್ಡಿನ ದೃಷ್ಟಿಯಿಂದ ನೋಡಿದರೆ ಪೇಟೆಯಲ್ಲಿ ಖಾದಿ ಬೆಲೆ ಹೆಚ್ಚು. ಆದರೆ ಈ ಖಾದಿ ಬಟ್ಟೆಯ ಭೂಮಿಕೆಯನ್ನು ತಿಳಿದರೆ ಅದರ ಬೆಲೆ ಹೆಚ್ಚಲ್ಲ.

ಖಾದಿಯಲ್ಲಿ ದುಡಿಯುವ ಕಸುಬುದಾರರಿಗೇ ಹೆಚ್ಚಿನ ಪ್ರಮಾಣದ ಪ್ರತಿಫಲ ಗಿಟ್ಟುವುದು. ಈ ಕಸುಬುದಾರರಲ್ಲಿ ಹೆಚ್ಚಾಗಿ ಬಡವರೇ ಅಂದರೆ ಬಡತನ ರೇಖೆಯ ಕೆಳಗಿರುವವರೇ ಬರುವುದುಂಟು. ಯಾವುದಕ್ಕೆ Transfer of Income ಎಂದು ಹೇಳುವರೋ ಅದು ಖಾದಿಯಲ್ಲಿದೆ. ಇದರಲ್ಲಿ ಕಸುಬುದಾರನಿಗೆ ಹೆಚ್ಚಿನ ಪ್ರಮಾಣದಲ್ಲಿ

ಮುಟ್ಟುವುದಲ್ಲದೆ, ಇದು ವಿಕೇಂದ್ರೀಕರಣ ಧೋರಣೆಯ ತಳಹದಿಯಾಗಿದ್ದು, ಸಹಜವಾಗಿ ಸಮಾಜದಲ್ಲಿ ಶಾಂತಿ–ನೆಮ್ಮದಿ ತರಬಹುದು. ಆ ದೃಷ್ಟಿಯಿಂದ ಖಾದಿ ಬೆಲೆ ಹೆಚ್ಚಲ್ಲ.

ಖಾದಿಯ ಬಗ್ಗೆ ತಪ್ಪು ತಿಳಿವಳಿಕೆ: ಬಹಳ ಜನರ ಕಲ್ಪನೆಗಳು ಖಾದಿಯ ಬಗ್ಗೆ ವಿಪರೀತವಾಗಿವೆ:

ಖಾದಿಯು ಕೇವಲ ಸರಕಾರದ ಸಹಾಯದಿಂದಲೇ ನಡೆದಿದೆ. ಉತ್ಪತ್ತಿಯಾದ ಖಾದಿಯನ್ನೆಲ್ಲ ಸರಕಾರವೇ ಕೊಳ್ಳುವುದು. ಖಾದಿಯನ್ನು ಪಟ್ಟಣದ ಸಿರಿವಂತರು ಮಾತ್ರ ತೊಡುವರು. ಇವೆಲ್ಲ ಸತ್ಯದಿಂದ ತುಂಬಾ ದೂರ ಎಂಬ ಮಾತು ಈ ಕೆಳಗಿನ ಅಂಕಿ–ಸಂಖ್ಯೆಗಳೇ ಹೇಳುತ್ತವೆ.

ಖಾದಿ ಉತ್ಪಾದನೆಯಲ್ಲಿ ಸರಕಾರವು ಕೊಡುತ್ತಿರುವ ಸಹಾಯಧನವೆಂದರೆ ಶೇಕಡಾ 10 ರಿಬೇಟ್ ಮತ್ತು ಗಾಂಧಿ ಜಯಂತಿಯ ಸಮಯಕ್ಕೆ ಇನ್ನೂ ಶೇಕಡಾ 5 ಹೆಚ್ಚಿನ ರಿಬೇಟ್. ಇದರ ಶೇಕಡಾ 12.13 ಬೀಳುತ್ತದೆ. ಮೋಜಿನ ಮಾತೆಂದರೆ ಇದೆಲ್ಲವೂ ಗ್ರಾಹಕರಿಗೆ ನೇರವಾಗಿ ತಲುಪುತ್ತದ. ಕಾರಣ ಖಾದಿ ಸರಕಾರೀ ಸಹಾಯದಿಂದಲೇ ನಡೆಯುತ್ತಿರುವುದಿಲ್ಲ ಎಂಬುದು ಸ್ಪಷ್ಟ.

1980–81ರಲ್ಲಿ ಒಟ್ಟು ಖಾದಿ ಮಾರಾಟ 78.02 ಕೋಟಿ. ಇದರಲ್ಲಿ ಸರಕಾರ ಖರೀದಿಸಿದ್ದು ಕೇವಲ 3.61 ಕೋಟಿ. ಅಂದರೆ ಶೇಕಡಾ 5 ಮಾತ್ರ. ಅಂದ ಬಳಿಕ ಉತ್ಪತ್ತಿಯಾದ ಖಾದಿಯನ್ನೆಲ್ಲ ಸರಕಾರ ಕೊಳ್ಳುವುದಿಲ್ಲ ಎಂಬುದೂ ಸಿದ್ಧ.

ಇನ್ನು ಒಟ್ಟು ಖಾದಿಯ ಉತ್ಪತ್ತಿಯಲ್ಲಿ ಶೇಕಡಾ 55 ಹಳ್ಳಿಗಳಲ್ಲಿಯೇ ಮಾರಲ್ಪಡುತ್ತದೆ. ಅಂದರೆ ಎಲ್ಲ ಖಾದಿಯನ್ನೂ ಪಟ್ಟಣದ ಸಿರಿವಂತರೇ ಕೊಳ್ಳುವರೆಂಬುದು ಸತ್ಯದಿಂದ ದೂರ ಎಂಬುದೂ ಸಿದ್ಧವಾಯ್ತು. ಒಂದು ವೇಳೆ ಹೀಗೆ ಪಟ್ಟಣಿಗರು ಕೊಂಡರೂ ಏನು ತಪ್ಪು? ಅವರು ತಮ್ಮ ಸಾಮಾಜಿಕ ಜವಾಬದಾರಿಯನ್ನು ತೀರಿಸುತ್ತಿರುವರೆಂದು ಹೇಳಬಹುದು—ಹೀಗೆ ಖಾದಿಯು ಸಮಾಜದಲ್ಲಿ ಸಾವಕಾಶವಾಗಿಯಾದರೂ ಸ್ಥಿರವಾಗಿ ಕ್ರಾಂತಿಯನ್ನು ಮಾಡಹತ್ತಿವೆ ಎಂಬುದು ಈ ಆರ್ಥಿಕ ವಿಶ್ಲೇಷಣೆಯಿಂದ ಕಂಡುಬರುತ್ತದೆ.

* * * *

ಸರಿಯಾಗಿ ಮಾತನಾಡದ ಶಬ್ದ ಅರ್ಥವಾಗದ ಮಾತು. ಅದು ಅರೆ-ಬರೆ ಬೇಯಿಸಿದ ಹಸಿ-ಬಿಸಿ ರೊಟ್ಟಿ ಇದ್ದಂತೆ. ಅದು ತಿನ್ನಲಿಕ್ಕೆ ಬಾರದ್ದು. ಎಸೆಯುವುದಕ್ಕೆ ಯೋಗ್ಯವಾಗಿರುತ್ತದೆ.

—ಮಹಾತ್ಮಾ ಗಾಂಧಿ

ಬದನವಾಳ ನೂಲುವ ಪ್ರಾಂತ್ಯ ನಡೆದು ಬಂದ ದಾರಿ

ಶ್ರೀ ಡಿ. ರಂಗಶೆಟ್ಟಿ
ಖಾದಿ ಕಾರ್ಯಕರ್ತ

ಪರಂಪರಾಗತ ನೇಕಾರರಿಗೆ ಮಿಲ್ಲಿನಲ್ಲಿ ತಯಾರಾದ ನೂಲು ದೊರೆಯಲು ಬಹಳ ಕಷ್ಟವಾಗಿದ್ದಿತು. ಪರಂಪರಾಗತ ನೇಯ್ಗೆಯ ಕೇಂದ್ರಗಳಾಗಿದ್ದ ಹೊಳೆನರಸೀಪುರ ಹಾಗೂ ಚಿಕ್ಕನಾಯ್ಕನಹಳ್ಳಿಗಳಲ್ಲಿ ಎರಡು ನೇಯ್ಗೆ ಕೇಂದ್ರಗಳನ್ನು ತೆರೆಯಲು ಬದನವಾಳು ನೂಲುವ ಪ್ರಾಂತ್ಯಕ್ಕೆ ಸರ್ಕಾರದವರು ಅನುಮತಿ ಕೊಟ್ಟಿದ್ದರು. ಹೊಳೆನರಸೀಪುರ ಕೇಂದ್ರಕ್ಕೆ ಮಾನ್ಯ ಶ್ರೀ ಕೆ. ಎಸ್. ಸುಬ್ರಹ್ಮಣ್ಯರವರನ್ನು (ಇವರು ನೇಯ್ಗೆಯಲ್ಲಿ ಪರಿಣಿತಿ ಪಡೆದಿದ್ದರು) ಹಾಗೂ ತುರುವನೂರಿನಲ್ಲಿದ್ದ ಶ್ರೀ ರಂಗ ಶೆಟ್ಟರನ್ನು ಚಿಕ್ಕನಾಯ್ಕನಹಳ್ಳಿ ಕೇಂದ್ರಕ್ಕೂ ವರ್ಗಮಾಡಿ ಅಲ್ಲಿಯ ಕೆಲಸಕಾರ್ಯ ಗಳನ್ನು ಸರಕಾರದವರು ವಿಮರ್ಶೆ ಮಾಡುತ್ತಿದ್ದರು. ಸ್ವಲ್ಪ ದಿನಗಳಲ್ಲಿಯೇ ಶ್ರೀ ಡಿ. ರಂಗಶೆಟ್ಟಿಯವರನ್ನು ಚಿತ್ರದುರ್ಗದ ರಿಲೀಫ್ ಸೆಂಟರಿಗೆ ವರ್ಗಮಾಡ ಲಾಯ್ತು. ಚಿಕ್ಕನಾಯ್ಕನಹಳ್ಳಿ ಕೇಂದ್ರಕ್ಕೆ ಮಾನ್ಯ ಶ್ರೀ ಜಿ. ವಿ. ಸೀತಾರಾಮಯ್ಯ ನವರನ್ನು ವರ್ಗಮಾಡಲಾಯ್ತು. ಮೇಲ್ಕಂಡ ಎರಡು ಕೇಂದ್ರಗಳಲ್ಲೂ ಸಹ ಪರಂಪರಾಗತ ನೇಯ್ಗೆಯವರಿಗೆ ಕೈನೂಲು ಅಳವಡಿಸಿಕೊಂಡು ನೇಯ್ಗೆ ಮಾಡುವ ತರಬೇತಿಯನ್ನು ಎಷ್ಟೇ ಕೊಟ್ಟರೂ, ನೇಯ್ಗೆ ಕೆಲಸಕ್ಕೆ ತೊಡಗದೆ ಸುಮ್ಮನೆ ಹಾಹಾಕಾರ ವೆಬ್ಬಿಸುತ್ತಿದ್ದರು. ಸರ್ಕಾರದ ವತಿಯಿಂದ ಎರಡು ಕೇಂದ್ರಗಳನ್ನೂ ಮುಚ್ಚಲಾಯಿತು.

ಇತ್ತೀಚೆಗೆ ಹೊಳೆನರಸೀಪುರದಲ್ಲಿ ಕೆಲವು ಖಾದಿಪ್ರೇಮಿಗಳು ಒಂದು ಸಂಘವನ್ನು ಮಾಡಿಕೊಂಡು ಖಾದಿ ಬೋರ್ಡಿನಿಂದ ಮತ್ತು ಖಾದಿ ಕಮೀಷನ್ನಿನಿಂದ ದ್ರವ್ಯಸಹಾಯ ಸಹಾನುಭೂತಿಯನ್ನು ಪಡೆದು, ಒಂದು ಸ್ವತಂತ್ರವಾದ ಕೇಂದ್ರವನ್ನು ನಡೆಸುತ್ತಿದ್ದಾರೆ. ಅಂಬರ್ ಚರಖಾ ಯೋಜನೆ ಬಂದಮೇಲೆ ಹಳ್ಳಿಗಳಲ್ಲಿ ಮನೆಮನೆಗಳಲ್ಲಿ ನಡೆಯುತ್ತಿದ್ದ ಕೈರಾಟೆಗಳು ಪೂರ್ಣವಾಗಿ ನಿಂತು ಹೋಯಿತು ಎಂತ ಹೇಳಬೇಕಾಗಿದೆ. ಹೊಳೆನರಸೀ ಪುರದ ಹೊಸ ಕೇಂದ್ರದವರು ಈಗ ಬದನವಾಳ ಖಾದಿ ಕೇಂದ್ರದ ಆವರಣದಲ್ಲಿ ನೂಲುವ ಹೊಸ ಮಾದರಿ ಚರಖಾ ಘಟಕಗಳನ್ನು ನಡೆಸುತ್ತಿದ್ದಾರೆ.

ಈ ಮೊದಲು ಸರ್ಕಾರದ ವತಿಯಿಂದ ನಡೆಸುತ್ತಿದ್ದ ಖಾದಿ ಕೇಂದ್ರವು ಖಾದಿ ಬೋರ್ಡಿಗೆ ವರ್ಗವಾದ ಮೇಲೆ ಅವರ ಆಡಳಿತದಲ್ಲಿ ಶ್ರೀ ಎಸ್. ಎಮ್. ಚನ್ನಬಸಪ್ಪ

ನವರು ಹಾಗೂ ಶ್ರೀ ಎಸ್. ನಂಜುಂಡಪ್ಪ ಎನ್ನುವವರು ಕೆಲವು ಕಾಲ ಕೇಂದ್ರವನ್ನು ಸುಗಮವಾಗಿ ನಡೆಸಿಕೊಂಡು ಬಂದು ತಾವುಗಳಿಬ್ಬರೂ ಖಾದಿ ಬೋರ್ಡಿಗೆ ನಿಯೋಜಿಸಲ್ಪಟ್ಟರು. ಆ ಕಾಲದಲ್ಲಿ ನಂಜನಗೂಡಿನ ಮಾನ್ಯ ವಕೀಲರಾದ ಶ್ರೀ ಎಮ್. ಲಿಂಗಣ್ಣನವರು ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. ಅಲ್ಲಿಂದ ಮುಂದೆ ಅಧಿಕಾರಿ ವರ್ಗದವರು ಹೇಗೆ ಹೇಗೋ ಆಡಳಿತ ನಡೆಸಿ ಅದು ಈಗಿನ ಮುಚ್ಚುವ ಸ್ಥಿತಿಗೆ ಬಂದಿತು.

ಖಾದಿ ಬೋರ್ಡಿನವರು ಕೇಂದ್ರವನ್ನು ಉತ್ತೀರ್ಣತೆ ತರಲು ಸತತ ಪ್ರಯತ್ನ ನಡೆಸಿದರು. ಆದರೂ ಇವರ ಪ್ರಯತ್ನ ಯಶಸ್ವಿಯಾಗದೆ ಕುಂಠಿತಗೊಂಡು ಮೊದಲೇ ಸ್ಥಾಪಿತವಾಗಿದ್ದ ಮಂಡಲಿಯವರಿಗೆ ಕೈಕೊಟ್ಟುಬಿಟ್ಟರು. ಈಗಲೂ ಸಹ ಬದನವಾಳು ಖಾದಿ ಕೇಂದ್ರವನ್ನು ಮುಂದುವರಿಸಲೇಬೇಕೆಂದು ಅನೇಕ ಹಳೇ ಕೆಲಸಗಾರರು ಹಾಗೂ ಹೊಸ ಹೊಸ ರಾಜ್ಯದ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯ್ತಿಗಳು ಪ್ರಯತ್ನ ನಡೆಸಿವೆ. ಆದರೂ ಕೆಲಸಕಾರ್ಯಗಳು ಯಶಸ್ವಿಯಾಗಬೇಕಾಗಿದೆ. ಅಚಲವಾಗಿ ನಿಂತಿರುವ ಕೆಲವು ಹಳೆಯ ಕಟ್ಟಡಗಳು, ನೀರಿನ ಬಾವಿ, ಕೋಳಿ ಬಾವಿ ಮತ್ತು ಮಹಾತ್ಮಾ ಗಾಂಧಿಯವರ ಪ್ರತಿಮೆಯ ಮಂಟಪಗಳು ಆರು ಎಕರೆಗಳಷ್ಟು ಪ್ರದೇಶದಲ್ಲಿ ಹಾಗೆಯೇ ಉಳಿದಿದೆ. ಅನೇಕ ರಾಜ್ಯಮಂತ್ರಿಗಳಿಗೂ ಹಾಗೂ ಖಾದಿ ಕಮೀಷನ್ನಿನವರಿಗೂ ಮತ್ತು ರಾಜ್ಯದ ಖಾದಿ ಮಂಡಲಿಯವರಿಗೂ ಅನೇಕ ಮನವಿಗಳು ತಲುಪಿದ್ದರೂ ಇನ್ನೂ ಕಾರ್ಯಗತವಾಗಿಲ್ಲ.

ಮೈಸೂರು ಜಿಲ್ಲಾ ಮಂಡಳಿ ಅಧ್ಯಕ್ಷರಾದ ಶ್ರೀ ಕೆ. ಎಸ್. ಪುಟ್ಟಬುದ್ಧಿಯವರು ಬದನವಾಳ ಕ್ಷೇತ್ರಕ್ಕೆ ಒಂದೆರಡು ಸಲ ಭೇಟಿಕೊಟ್ಟು ಆ ಕ್ಷೇತ್ರದ ಉದ್ಧಾರಕ್ಕಾಗಿ ಏನೇನೋ ಪ್ರಯತ್ನ ಮಾಡಬೇಕೆಂದು ಆಲೋಚಿಸಿದ್ದಾರೆಂದು ತಿಳಿದುಬಂದಿದೆ. ಅಷ್ಟೇ ವಿಷಯ.

ಬದನವಾಳು ನೂಲುವ ಪ್ರಾಂತ್ಯವು ಖಾದಿ ಉತ್ಪಾದನೆಗಷ್ಟೇ ಮಿತಗೊಳ್ಳದೆ ವ್ಯಾಪಾರಕ್ಕೂ ಬಹಳಷ್ಟು ಪ್ರಯತ್ನಿಸಿವೆ (ಸರ್ಕಾರದ ವಶಿಯಲ್ಲಿದ್ದಾಗ). ಬದನವಾಳು ನೂಲುವ ಪ್ರಾಂತ್ಯವು ಸಂಸ್ಥಾನದ ಮಹಾರಾಜರಾಗಿದ್ದ ಶ್ರೀ ಶ್ರೀ ರಾಜಋಷಿ ಶ್ರೀ ನಾಲ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಆಡಳಿತದಲ್ಲಿ ಕೈಗಾರಿಕಾ ಇಲಾಖೆಯಿಂದ ಸ್ಥಾಪಿಸಲ್ಪಟ್ಟಿದ್ದ ವಿಷಯಗಳು ಈ ಹಿಂದೆಯೇ ಬಂದಿದೆ. ಮುಂದೆ ಶ್ರೀ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಮದುವೆಯ ಕಾಲದಲ್ಲಿ ಮೈಸೂರನ್ನು ಒಂದು ಪ್ರದರ್ಶನವನ್ನಾಗಿಯೇ ಏರ್ಪಡಿಸಲಾಗಿತ್ತು. ಆ ಸಮಯದಲ್ಲಿ ಶ್ರೀ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್‌ನ ದಕ್ಷಿಣ ಭಾಗದ ರಸ್ತೆಗೆ ಹೊಂದಿಕೊಂಡಂತೆ ಒಂದು ಬದನವಾಳು ಖಾದಿ ಭಂಡಾರ ಸಣ್ಣ ಪ್ರಮಾಣದಲ್ಲಿ ಸ್ಥಾಪಿತವಾಯಿತು. ಅಲ್ಲಿಂದ ಮುಂದೆ ಆ ಭಂಡಾರವನ್ನು ಕೃಷ್ಣರಾಜೇಂದ್ರ ಮಾರ್ಕೆಟ್ಟಿನ ಉತ್ತರ ಭಾಗದ ರಸ್ತೆ ಧನ್ವಂತರಿ ರೋಡಿನಲ್ಲಿ ಸ್ಥಳಾಂತರಿಸಲಾಯಿತು. ಆಗ ಬಾಬೂ ರಾಜೇಂದ್ರಪ್ರಸಾದ

ರವರು—ಸ್ವಾತಂತ್ರ್ಯಪೂರ್ವ—ಮೈಸೂರಿಗೆ ಭೇಟಿಕೊಟ್ಟಿದ್ದಾಗ ಆ ಖಾದಿ ಭಂಡಾರಕ್ಕೂ ಭೇಟಿಕೊಟ್ಟಿದ್ದರು. ಆಗ ಅಲ್ಲಿಯ ಆಗಂತುಕನಾಗಿ ಬದನವಾಳು ಖಾದಿ ಕೇಂದ್ರದಿಂದ ನೇಮಿಸಲ್ಪಟ್ಟಿದ್ದ ಶ್ರೀ ಡಿ. ರಂಗಶೆಟ್ಟಿಯವರು ರಾಜೇಂದ್ರ ಬಾಬುರವರ ಆಶೀರ್ವಾದ ಪಡೆದು ಬದನವಾಳು ಖಾದಿ ಕೇಂದ್ರದ ಹೆಸರುವಾಸಿಯಾದ ಪಂಡಿತ್ ಶಾಲನ್ನು ಮತ್ತು ಒಂದು ಹನೀಕೂಮ್ಬ್ ಟವಲ್ಲನ್ನು ಕೇಂದ್ರದ ಪರವಾಗಿ ಕಾಣಿಕೆಯಾಗಿ ಅರ್ಪಿಸಿದರು.

ಮುಂದೆ ಮೈಸೂರು ಸರ್ಕಾರದವರು ಖಾದಿ ಬೋರ್ಡು ಸ್ಥಾಪನೆಮಾಡಿ ಸರ್ಕಾರದ ವತಿಯಿಂದ ನಡೆಸುತ್ತಿದ್ದ ಬದನವಾಳು ಮತ್ತು ಅದರ ಶಾಖಾ ಕೇಂದ್ರ ಗಳನ್ನು ಖಾದಿ ಬೋರ್ಡಿಗೆ ವರ್ಗಾಯಿಸಿದರು. 1939ನೇ ಇಸವಿಯಲ್ಲಿ ಬೆಂಗಳೂರು ಗರುಡಾರ್ ಬಿಲ್ಡಿಂಗ್‌ನಲ್ಲಿ ಸ್ಥಾಪಿತವಾಗಿದ್ದ ಖಾದಿ ಭಂಡಾರವನ್ನು ಆ ಕಾಲದಲ್ಲಿ ಖಾದಿ ಪ್ರೇಮಿಗಳಲ್ಲೊಬ್ಬರಾಗಿದ್ದ ಕಾ॥ ಸದಾಶಿವ ಮೊದಲಿಯಾರ್‌ರವರಿಂದ ತೆರೆಯ ಲ್ಪಟ್ಟಿತು. ಆಗ ಇಲಾಖೆಯಲ್ಲಿದ್ದ ಡೆ॥ ಡೈರೆಕ್ಟರ್ ವಿ. ವೆಂಕಟಾಚಾರ್ಯರು ಬಹಳ ಸಹಕಾರ ನೀಡಿ ಅಂಗಡಿ ತೆರೆಯಲಿಕ್ಕೆ ತುಂಬಾ ಪ್ರೋತ್ಸಾಹ ಕೊಟ್ಟರು. ಮುಂದೆ ಖಾದಿ ಕಮೀಷನ್ ಆಗುವ ಮೊದಲು ಖಾದಿ ಬೋರ್ಡು ಎಂದಾಗಿದ್ದಿತು. ಆವಾಗ ಖಾದಿ ಬೋರ್ಡಿನವರು ಖಾದಿ ಹುಂಡಿ ಯೋಜನೆಯನ್ನು ಅಳವಡಿಸಿದರು. ಮೈಸೂರು ರಾಜ್ಯ ಸರ್ಕಾರದವರು ಹತ್ತು ಲಕ್ಷ ರೂಪಾಯಿಗಳ ಮೌಲ್ಯದ ಖಾದಿ ಹುಂಡಿಗಳನ್ನು ಕೊಂಡು ಎಲ್ಲಾ ಜಿಲ್ಲಾಧಿಕಾರಿಗಳಿಗೂ ಮಾರಾಟಕ್ಕೆ ಕೊಟ್ಟು ಆ ಹುಂಡಿಗಳನ್ನು ಖಾದಿ ವ್ಯಾಪಾರದ ಮೂಲಕ ವಿನಿಮಯ ಮಾಡಿಕೊಳ್ಳಲು ಆದೇಶವಿದ್ದಿತು. ಆ ಕಾಲದಲ್ಲಿ ಹೊರಗಡೆಯಿಂದ 8–10 ಲಕ್ಷ ರೂ.ಗಳ ಖಾದಿಯನ್ನು ಕೊಂಡು ವ್ಯಾಪಾರಕ್ಕಾಗಿ ದೊಡ್ಡದಾಗಿ ಬೆಂಗಳೂರು ಸುಬೇದಾರ್ ಛತ್ರಂ ರೋಡಿನಲ್ಲಿ ಒಂದು ಖಾದಿ ಭಂಡಾರ ವನ್ನೂ ಹಾಸನದಲ್ಲೊಂದು ಖಾದಿ ಭಂಡಾರವನ್ನೂ ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ ಒಂದು ಭಂಡಾರವನ್ನೂ ತೆರೆದು ವ್ಯಾಪಾರ ವಹಿವಾಟನ್ನು ನಡೆಸು ತ್ತಿದ್ದರು. ಅದಕ್ಕಾಗಿಯೇ ಎ. ಜಿ. ಆಫೀಸಿನ ನಿವೃತ್ತ ಲೆಕ್ಕಾಧಿಕಾರಿಗಳಾದ ಒಬ್ಬರು ಲೆಕ್ಕ ಪರಿಶೋಧನಾಧಿಕಾರಿಯನ್ನು ನಿಯೋಜಿಸಲಾಗಿದ್ದಿತು.

ಅದುವರೆಗೆ ಆಗಲೆ ರಾಜ್ಯದಲ್ಲಿ ಒಂದು ಸ್ವಾಯತ್ತ (Statutary Board) ಖಾದಿ ಮಂಡಳಿ ಸ್ಥಾಪನೆಯ ವಿಚಾರ ನಡೆದು ಮಾನ್ಯ ಶ್ರೀ ಜಿ. ವಿ. ಹಳ್ಳಿಕೇರಿಯವರು ಅಧ್ಯಕ್ಷರಾಗಿಯೂ ಸರದಾರ್ ಕೆ. ಆರ್. ವೆಂಕಟರಾಮಯ್ಯನವರು ಕಾರ್ಯದರ್ಶಿ ಗಳಾಗಿಯೂ ನಿಯೋಜಿಸಲ್ಪಟ್ಟು ಸರ್ಕಾರದ ವತಿಯಿಂದ ನಡೆಸಲ್ಪಡುತ್ತಿದ್ದ ಖಾದಿ ಕೇಂದ್ರಗಳನ್ನು ಮತ್ತು ಭಂಡಾರಗಳನ್ನು ಮಂಡಲಿಗೆ ವರ್ಗಮಾಡಿದರು. ಖಾದಿ ಬೋರ್ಡಿನವರು ರಾಜ್ಯದ ಎಲ್ಲಾ ಉತ್ಪತ್ತಿ ಕೇಂದ್ರಗಳು ಮತ್ತು ಮಾರಾಟದ ಅಂಗಡಿ ಗಳನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಮತ್ತೆ 39 ಖಾದಿ ಭಂಡಾರಗಳನ್ನು ರಾಜ್ಯದ ಮುಖ್ಯ ಮುಖ್ಯ ಸ್ಥಳಗಳಲ್ಲಿ ತೆರೆಯಿಸಿದರು.

ಕಾಲಾನುಕಾಲದಲ್ಲಿ ಖಾದಿ ಬೋರ್ಡಿನ ಪಾಲಿಸಿಯು ಖಾದಿ ಉತ್ಪತ್ತಿ ಮತ್ತು ಮಾರಾಟ ಸಂಸ್ಥೆಗಳನ್ನು ನಡೆಸಬಾರದೆಂದು ಖಾದಿ ಕಮೀಷನ್ನಿನಿಂದ ಆದೇಶ ಬಂದು ಅವುಗಳನ್ನೆಲ್ಲಾ ಬೇರೆ ಬೇರೆ ಸಂಸ್ಥೆಗಳಿಗೆ ವಿತರಣೆ ಮಾಡಿಬಿಟ್ಟರು. ಅಲ್ಲಿಗೆ ಬದನವಾಳು ಖಾದಿ ಕೇಂದ್ರದ ಹಾಗೂ ಇತರ ಖಾದಿ ಕೇಂದ್ರಗಳು ಸಂಘ ಸಂಸ್ಥೆಗಳಾಗಿ ಮಾರ್ಪಾಡಾದವು.

ಬದನವಾಳು ಖಾದಿ ಕೇಂದ್ರದಲ್ಲಿ ಕೆಲಸ ಮಾಡಿದ ಹಲವಾರು ಮಂದಿ ಕಾರ್ಯಕರ್ತರುಗಳ ಹೆಸರು ಬಿಟ್ಟು ಹೋಗಿದೆ. ನೆನಪಿಗೆ ಬಂದ ಕೆಲವಾರು ಹೆಸರುಗಳನ್ನು ಇದರಲ್ಲಿ ನಮೂದಿಸಲಾಗಿದೆ—

ಸರ್ವಶ್ರೀ ಲಿಂಗಯ್ಯ
ಬಸಪ್ಪದೇವರು
ಶ್ರೀನಿವಾಸನಾಯಕರು
ಬಿ. ಎಸ್. ಶ್ರೀನಿವಾಸನಾಯ್ಕರು, ಹೋಳ್ಕೆರೆ ಸ್ಟೋರ್ಸ್
ಚಿಕ್ಕರಂಗಯ್ಯನವರು
ಸಣ್ಣನಾಯ್ಕ
ಸಣ್ಣಮಾದಯ್ಯ
ಸಿ. ಕೆ. ಪುಟ್ಟಯ್ಯ
ಬಿ. ಶ್ರೀಕಂಠಯ್ಯ
ಎಮ್. ಶ್ರೀಕಂಠಯ್ಯ
ನೀಲಕಂಠಯ್ಯ
ಶ್ರೀನಿವಾಸಯ್ಯ
ಹೊಂಬಾಳಯ್ಯ
ಬೋರಯ್ಯ

ಬೆಂಗಳೂರು ಭಂಡಾರ


ರಾಜು
ವೆಂಕಟಸುಬ್ಬರಾವ್
ಲಿಂಗಯ್ಯ
ನಾಗಯ್ಯ
ಬೊಮ್ಮಯ್ಯ
ರಾಮಣ್ಣ
ಹೆಚ್. ಲಿಂಗಯ್ಯ.

* * * *

ಬದನವಾಳು ಖಾದಿ ಕೇಂದ್ರದ ನೆನಪು

ಶ್ರೀ ಜಿ. ಕೆ. ಶ್ರೀನಿವಾಸಯ್ಯಂಗಾರ್

ಅರುವತ್ತು ವರ್ಷಕ್ಕೂ ಮೀರಿ ಶುದ್ಧ ಖಾದೀಧಾರಿಗಳಾದ ಮತ್ತು ಡಾ॥ ಗೊರೂರು ರಾಮಸ್ವಾಮಯ್ಯಂಗಾರ್ಯರ ಸಹೋದರ ಗ್ರಂಥಕರ್ತ ಗೊರೂರು ಶ್ರೀನಿವಾಸಯ್ಯಂಗಾರ್, ಎಂ.ಎ.. ಹೆಚ್ ಡಿ.ಸಿ.



ನಾನು ಕಳೆದ ಅರುವತ್ತು ವರ್ಷಗಳಿಗೂ ಮೀರಿ ಶುದ್ಧ ಖಾದಿ ಧಾರಿ. ಸ್ವದೇಶೀ ಸಾಮಾನುಗಳನ್ನು ಉಪಯೋಗಿಸುವವನು ನಾನು. 1925ರಲ್ಲು ದಾವಣಗೆರೆಯಲ್ಲಿ ಹೈಸ್ಕೂಲು ಎರಡನೇ ಫಾರಮ್ಮಿನಲ್ಲಿ ಓದುತ್ತಿದ್ದಾಗ, ದೇಶಬಂಧು ಸಿ. ಆರ್. ದಾಸರು ನಿಧನರಾದ ದಿನವನ್ನು ದಾವಣಗೆರೆಯ ಖಾದಿಭಕ್ತರು ಶ್ರೀ ಮಂಜಪ್ಪನವರ ಐವೇಜಿನಲ್ಲಿ ಸ್ವರಾಜ್ಯ ಕುರಿತಾದ ಸಭೆ ನಡೆಸಿ ಭಜನೆ ಮಾಡಿದರು. ಎಲ್ಲರೂ ಖಾದಿ ಹಾಕಿಕೊಳ್ಳಬೇಕೆಂದು ಮನವಿ ಮಾಡಿಕೊಂಡರು. 1924ರಲ್ಲಿ ಬೆಳಗಾಮಿನಲ್ಲಿ ಮಹಾತ್ಮಾ ಗಾಂಧಿಯವರ ಅಧ್ಯಕ್ಷತೆಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನವೂ ಈ ಪ್ರಾಂತದ ಜನರಲ್ಲಿ ದೇಶಭಕ್ತಿಯನ್ನು ಪ್ರೇರಿಸಿದವು. ಶ್ರೀ ಮಂಜಪ್ಪನವರು ಪ್ರತಿ ಶುಕ್ರವಾರ ಸಾಯಂಕಾಲ ಕಾಂಗ್ರೆಸ್ ಮೀಟಿಂಗ್ ನಡೆಸಿ ಸ್ವದೇಶೀ ಪ್ರಚಾರ ಮಾಡುತ್ತಿದ್ದರು. ಇದರಿಂದ ನಾನು ಖಾದಿ ಹಾಕಲೂ ಸ್ವದೇಶೀ ವ್ರತ ಮಾಡಲೂ ಪ್ರೇರಿತನಾದೆ.

ಬದನವಾಳು ಖಾದಿ ಕೇಂದ್ರವು 1927ರಲ್ಲಿ ಸ್ಥಾಪಿತವಾಯಿತು. ಅಲ್ಲಿಯ ಕೈ ನೂಲಿನ ಕೈ ಮಗ್ಗದ ಖಾದಿಬಟ್ಟೆಯು ಲಭ್ಯವಾಗುವ ವರೆಗೆ ನಾವು ಹಳ್ಳಿ ಮಗ್ಗದ ಗಾಢಾ ಬಟ್ಟೆಯಿಂದ ನಮ್ಮ ಉಡುಪಿನ ಆವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದೆವು, ಮಿಲ್‌ಬಟ್ಟೆ ಕೊಳ್ಳುತ್ತಿರಲಿಲ್ಲ. 1927ರ ನಂತರ ಬೆಂಗಳೂರಿನಲ್ಲಿ ಖಾದಿಪಸ್ತಾಲಯ,

ಬದನವಾಳು ಖಾದೀಕೇಂದ್ರಗಳು ಸ್ಥಾಪಿತವಾಗಿ, ಅಲ್ಲಿಂದ ಮುಂದೆ ಈವತ್ತಿನವರೆಗೂ ನಾನು ಖಾದಿ ಬಟ್ಟೆಯನ್ನು ಧರಿಸುತ್ತಾ ಬಂದಿದ್ದೇನೆ. ಮದುವೆ ಮುಂಜಿ ಎಲ್ಲಾ ಸಮಾರಂಭಗಳಲ್ಲಿಯೂ ಖಾದಿಯನ್ನೇ ಉಪಯೋಗಿಸಿರುತ್ತೇನೆ. ಚಳಿಗಾಲದಲ್ಲಿ ಚಳಿ ನಿವಾರಣೆಗೆ ಉಣ್ಣೆ ಮಗ್ಗದ ಕಂಬಳಿಗಳನ್ನು ಉಪಯೋಗಿಸುತ್ತಿದ್ದೇವೆ. ರೇಷ್ಮೆ ಬಟ್ಟೆಯ ಉಪಯೋಗವನ್ನು ಖಾದಿಧಾರಿಯು ಮಾಡಬಹುದಾದರೂ ನಾನು ಶುದ್ಧವಾದ ಬಿಳಿ ಖಾದಿಯನ್ನೇ ಉಪಯೋಗಿಸುತ್ತಿದ್ದೇನೆ. ಈ ಅನೇಕ ವರ್ಷಗಳ ಖಾದಿ ತೊಡಿಗೆಯಲ್ಲಿ ನನ್ನ ಅನುಭವದಲ್ಲಿ ಕೆಲವು ಸೌಕರ್ಯಗಳಿವೆ. ಖಾದಿ ಧಾರಣೆಯಿಂದ ಗಾಂಧಿಯವರ ಮತ್ತು ದೇಶ ಸೇವೆಯ ಸ್ಮರಣೆಯನ್ನು ತರುತ್ತಿದೆ. ದಿನ ವೇಳಗಾದರೆ ಬದಲಾಗುತ್ತಿರುವ ಫ್ಯಾಷನ್ ವ್ಯಾಮೋಹವು ಖಾದಿಧಾರಿಗಿರುವುದಿಲ್ಲ. ಶುದ್ಧವಾದ ಬಿಳೀ ಖಾದಿಯು ಮನಸ್ಸಿಗೆ ಉಲ್ಲಾಸವನ್ನುಂಟುಮಾಡುತ್ತದೆ. ಖಾದಿ ಬಟ್ಟೆಯಿಂದ ಚಳಿಗಾಲದಲ್ಲಾಗಲಿ ಬೇಸಿಗೆಯಲ್ಲಾಗಲಿ ಯಾವ ಅಸೌಕರ್ಯವೂ ಉಂಟಾಗುವುದಿಲ್ಲ.

ನಾನು 1936ರಲ್ಲಿ ನಂಜನಗೂಡಿಗೆ ಸೊಸೈಟಿ ಇನ್ಸ್‌ಪೆಕ್ಟರಾಗಿ ನೇಮಕಗೊಂಡು ನಂಜನಗೂಡಿಗೆ ಹೋದೆ. ಖಾದಿಧಾರಿಯಾದ ನನಗೆ ಸ್ವಾಭಾವಿಕವಾಗಿಯೇ ಬದನವಾಳು ಖಾದಿ ಕೇಂದ್ರದ ವಿಷಯ ತಿಳಿಯಿತು. ಅಲ್ಲಿ ಒಂದು ಸಹಕಾರ ಸಂಘವನ್ನೂ ಸಹ ಕೇಂದ್ರವು ನಡೆಸುತ್ತಿತ್ತು. ನಾನು ಆ ಕೇಂದ್ರಕ್ಕೆ ಮೊದಲ ಸಲ ಭೇಟಿಯಿತ್ತಾಗ ಅಲ್ಲಿಯ ಮೇಲ್ವಿಚಾರಕರಾದ ಶ್ರೀ ರಾಜಾರಾಮ ಅಯ್ಯಂಗಾರ್ರವರ ಪರಿಚಯವಾಯಿತು.

1927ರಲ್ಲಿ ಸ್ಥಾಪಿತವಾದ ಖಾದಿ ಕೇಂದ್ರವು 1936ರ ವೇಳೆಗೆ ಪ್ರವರ್ಧಮಾನಕ್ಕೆ ಬಂದಿದ್ದು ಖಾದಿಯು ಗಣನೀಯ ಪ್ರಮಾಣದಲ್ಲಿ ತಯಾರಾಗುತ್ತಿತ್ತು. ರಾಜ್ಯದಾದ್ಯಂತ ತನ್ನ ಪ್ರಭಾವ ಬೀರಿ ಅನೇಕ ಕಡೆ ಹಳೇ ಮೈಸೂರು ರಾಜ್ಯದಲ್ಲಿ ಖಾದಿ ಉತ್ಪಾದನಾ ಕೇಂದ್ರಗಳು ಸ್ಥಾಪಿತವಾಗಿದ್ದವು. ಬೆಲೆಯ ದೃಷ್ಟಿಯಿಂದಲೂ ಸಹ ಬದನವಾಳ ಖಾದೀ ಬಟ್ಟೆಯು ಮಿಲ್ ಬಟ್ಟೆಗಳ ಧಾರಣೆಗೇ ಸಿಗುತ್ತಿತ್ತು. ಉದಾಹರಣೆಗೆ ಒಂದು ನಾಲ್ಕು ಮೊಳದ ಪಂಚೆ ಬೆಲೆಯು ಒಂದು ರೂಪಾಯಿ ಎಂಟಾಣೆ; ಹನ್ನೆರಡಾಣೆ ಒಂದು ಟವಲ್ಲಿನ ಬೆಲೆ. ಒಂದು ಗಜ ಕೋಟಿನ ಬಟ್ಟೆಗೆ ಎರಡು ರೂಪಾಯಿ. ಹೀಗೆ ಬದನವಾಳು ಖಾದಿ ಬೆಲೆಯ ದೃಷ್ಟಿಯಿಂದಲೂ ಸುಲಭವಾಗಿತ್ತು.

ನಾನು ನಂಜನಗೂಡಿನಲ್ಲಿ ಕೆಲಸಕ್ಕೆ ಸೇರಿದ ಕೆಲವು ದಿವಸಗಳಲ್ಲೇ ಬದನವಾಳು ಕೇಂದ್ರದಲ್ಲಿ ನಡೆಯುತ್ತಿದ್ದ ಸಹಕಾರ ಸಂಘಕ್ಕೆ ಭೇಟಿಕೊಟ್ಟು ಲೆಕ್ಕ ತಪಾಸಣೆಮಾಡಿದೆ. ಸಹಕಾರ ಸಂಘದ ಸರ್ವ ಸದಸ್ಯರ ಸಭೆಯನ್ನೂ ನಡೆಸುವ ತಾರೀಕನ್ನೂ ಗೊತ್ತುಪಡಿಸಿ ಮೀಟಿಂಗ್ ನೋಟೀಸ್ ಹೊರಡಿಸಲಾಯ್ತು.

ಪುನಃ ನಾನು ಸರ್ವ ಸದಸ್ಯರ ಸಭೆ ದಿನದಂದು ಬದನವಾಳಿಗೆ ಹೋದೆ. ಆ ದಿನ

ಈ ಮೀಟಿಂಗ್ ಪ್ರಯುಕ್ತ ಕೇಂದ್ರದಲ್ಲಿ ಹಬ್ಬದ ವಾತಾವರಣವಿತ್ತು. ಆ ದಿನ ಬೆಳಿಗ್ಗೆ ಆಟಪಾಟ ಫಲಾಹಾರ ಎಲ್ಲರಿಗೂ ಆಯಿತು. ಮಧ್ಯಾಹ್ನ ಊಟವಾದ ನಂತರ ಸಭೆಯು ನಡೆಯಿತು. ಕೇಂದ್ರದ ಎಲ್ಲಾ ನೌಕರರೂ ಮಕ್ಕಳೂ ಅವರ ಹೆಂಡತಿಯರೂ ಶ್ರೀ ರಾಜಾರಾಮಯ್ಯಂಗಾರ್ರವರೂ ಮತ್ತು ಅವರ ಯಜಮಾನಿತಿಯೊಂದಿಗೆ ಸಭೆಗೆ ಆಗಮಿಸಿ ಕಾರ್ಯಕಲಾಪದಲ್ಲಿ ಪಾಲ್ಗೊಂಡರು. ಈ ಕೇಂದ್ರದಲ್ಲಿ ನಡೆಯುತ್ತಿದ್ದ ಸಹಕಾರ ಸಂಘವು ಒಂದು ದೊಡ್ಡ ಸಂಸಾರದಂತೆ ಇದ್ದು ಇಲ್ಲಿ ಇತರೇ ಸರ್ಕಾರೀ ಆಫೀಸುಗಳಲ್ಲಿ ಕಾಣಬರುವ ಆಫೀಸು ವಾತಾವರಣ ಇರಲಿಲ್ಲ. ರಾಜ್ಯದ ಎಲ್ಲಾ ಸಹಕಾರ ಸಂಘಗಳೂ ಈ ರೀತಿ ಕೆಲಸಮಾಡಿದರೆ ಸಹಕಾರ ಸಂಘಗಳು ನಿಜವಾಗಿಯೂ ಜನೋಪಕಾರಿಯಾಗ ಬಲ್ಲವು.

*   *   *   *

IDEOLOGY OF KHADI

Khadi means a Revolution—The acceptance of a new way of life, The charakha is indeed very old but then it did not symbolise a revolution. They plied the charakha then because if they did not, they would have to go without cloth. But the present day charakha does much more; it stands to oust the mill. It is not the hand alone that turns it now, but intelligence, devotion and faith, all have to combine and co-operate with the hand.

Acharya Vinoba Bhave
(From an address to constructive workers at Mathura, 1-11-1951)

ನಾ ಕಂಡ ಬದಸನಾಳು ಖಾದಿ

ಡಿ|| ಕೆ. ವಿಶ್ವೇಶ್ವರ ಗೌಡ
ಖಾದಿ ಕಾರ್ಯಕರ್ತ

ಅದು ಒಂದು ಕಾಲ. ಅದರ ನೆನಪು ಇಂದಿಗೂ ಸವಿಯಾಗಿದೆ. ಯಾವುದೋ ಕಣ್ಣು ತೆರೆಯಿಸಿತು. ಘನತೆಯ ಪಡೆದಿಹ ಕಾಂಗ್ರೆಸ್ಸು ಎಂದು ಹಾಡುತ್ತಿದ್ದ ಕಾಲ. ವಸಂತ ಕಾಲದ ವಿಕಾಸಕ್ಕಾಗಿ ಹೇಮಂತ ಋತುವು ಪ್ರಕೃತಿಯಲ್ಲಿ ಚೈತನ್ಯವನ್ನು ತುಂಬುವಂತೆ ಮುಂದಿನ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ದೇಶವನ್ನು ಅನುಗೊಳಿಸಲು ಮಹಾತ್ಮಾ ಗಾಂಧೀಜಿ ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ನಿಯೋಜಿಸಿದ್ದರು. ಯಾರಿಗಾದರೂ ಸರಿ ಗಾಂಧೀಜಿ ಅಂದರೆ ಭಕ್ತಿ ಇದ್ದಷ್ಟೇ ಭಯವೂ ಇರುತ್ತಿತ್ತು. ಆ ಕಾಲದಲ್ಲಿ ಆಳುತ್ತಿದ್ದ ಮಹಾರಾಜ ಶ್ರೀಮಾನ್ ನಾಲ್ಮಡಿಕೃಷ್ಣರಾಜ ಒಡೆಯರ್ ರವರಿಗೂ ದಿವಾನ್ ಸರ್ ಮಿರ್ಜಾ ಇಸ್ಮೇಲ್ ಅವರಿಗೂ ಸಹ ಅದೇ ಭಾವನೆ ಇತ್ತು. ಚಳವಳಿಗೆ ಅವಕಾಶಕೊಡದೆ ರಚನಾತ್ಮಕ ಕಾರ್ಯಗಳಿಗೆ ಸಂಸ್ಥಾನದಲ್ಲಿ ಪ್ರೋತ್ಸಾಹ ಕೊಟ್ಟು ಮಹಾತ್ಮರ ಮೆಚ್ಚುಗೆ ಪಡೆಯಲು ಉತ್ಸಾಹವಿತ್ತು. ಆದ್ದರಿಂದಲೇ ಮಹಾತ್ಮ ಗಾಂಧೀಜಿ ಅವರಿಂದ ಮೈಸೂರಿಗೆ ರಾಮರಾಜ್ಯ ಎಂಬ ಕೀರ್ತಿಯನ್ನು ಪಡೆದರು.

ಸಂಸ್ಥಾನದ ಎಲ್ಲೆಕಟ್ಟಿನ ಒಳಕ್ಕೆ ಪ್ರವೇಶವಿಲ್ಲದ ಬೆಂಗಳೂರು ದಂಡು ರೈಲ್ವೆ ಸ್ಟೇಷನ್ನಿನ ಬಳಿಯೇ ಭಾಷಣ ಮಾಡಿ ಹೋದ ಗಾಂಧೀಜಿ ಬರುಬರುತ್ತಾ ಮೈಸೂರಿನವರೇ ಆದರು. ನಂದಿಬೆಟ್ಟದಲ್ಲಿ ವಿಶ್ರಾಂತಿ, ಮೈಸೂರು ಬೆಂಗಳೂರುಗಳಲ್ಲಿ ರಾಜಕಾರ್ಯಗಳಿಗೆ ಪಾತ್ರರಾದರು. ಗಾಂಧೀಜಿಯವರ ಎಲ್ಲ ರಚನಾತ್ಮಕ ಕಾರ್ಯಗಳಿಗೆ ಪ್ರಜೆಗಳು ಮತ್ತು ಪ್ರಭು ಎರಡು ಕಡೆಯಿಂದಲೂ ಹಂಬಲ ಮೂಡಿತು. ಅದರ ಪರಿಣಾಮವಾಗಿ ಖಾದಿ, ಹಿಂದಿ, ಪಾನನಿರೋಧ, ಸ್ವದೇಶಿ, ಹರಿಜನೋದ್ಧಾರ, ಮಹಿಳಾ ಸಮಾಜ ಸೇವಾ ಕ್ಷೇತ್ರಗಳು ಅಭಿವೃದ್ಧಿ ಹೊಂದಿದವು. ಸಂಸ್ಥಾನಗಳು ಪ್ರತ್ಯೇಕ ಆಡಳಿತದಲ್ಲಿದ್ದಂತೆ ಕಂಡು ಬಂದರೂ ಸಹ ಪ್ರತ್ಯೇಕವಾಗಿ ಪ್ರಜೆಗಳು ಪರೋಕ್ಷವಾಗಿ ನಮ್ಮ ನೆಚ್ಚಿನ ರಾಜರೂ ದಿವಾನರೂ ಈ ಕಾರ್ಯದಲ್ಲಿ ನೆರವಾದುದನ್ನು ಸ್ಮರಿಸ ಬಹುದು.

ಗಾಂಧೀಜಿಯವರಿಗೆ ಸಹಾಯ ಸಹಾನುಭೂತಿಗಳ ಅಗತ್ಯ ಬಿದ್ದಾಗಲೆಲ್ಲಾ ಸಂಚಾರ ಹೊರಟು ಎಲ್ಲ ಕಡೆಗಳಂತೆ ಮೈಸೂರಿಗೆ ಧಾರಾಳವಾಗಿ ಬರುತ್ತಿದ್ದರು. ಅಷ್ಟೇ ಧಾರಾಳವಾಗಿ ಸಹಾಯಪಡೆದು ತೃಪ್ತರಾಗುತ್ತಿದ್ದರು. ಅದೇರೀತಿ 1934

ಜನವರಿ ಮೊದಲನೇ ವಾರದಲ್ಲಿ ಹರಿಜನ ಪ್ರವಾಸ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯಕ್ಕೂ ಬಂದಿದ್ದರು. ಆಗ್ಗೆ ಮೈಸೂರು, ನಂಜನಗೂಡು,ತಗಡೂರು, ಬದನವಾಳು ಕೇಂದ್ರಗಳಿಗೂ ಭೇಟಿ ಮಾಡಿದರು. ಅವರ ದರ್ಶನ ಸ್ಪರ್ಶನ ಶ್ರವಣಗಳಿಂದ ಉತ್ತೇಜಿತರಾದ ಕಾಂಗ್ರೆಸ್ ಕೆಲಸಗಾರರು ಮತ್ತಷ್ಟು ಹುರುಪಿನಿಂದ ದೇಶಸೇವಾ ಕಾರ್ಯದಲ್ಲಿ ಮುನ್ನಡೆದರು. ಗಾಂಧೀಜಿ ಸ್ವತಹ ಖಾದಿ ಪಂಡಿತರು. ಆ ಖಾದಿ ಕಥೆ ಈಗ ಹೇಳಲು ಸ್ವಾರಸ್ಯವಾಗಿದೆ. ಮೋಟಿಯು ಜತೆಗಾರರಾದ ರಾಟೆಗಳೆಲ್ಲ ಅಟ್ಟ ದಿಂದಿಳಿದು ಸಿದ್ದಮ್ಮ ಮಾದಮ್ಮನ ಕೈ ಸೇರಿದ್ದವು. ಆ ರಾಟೆಗಳಿಂದ ಹೊಸೆದು ಬಂದು ನೇಕಾರ ಸಿದ್ದಯ್ಯ ಮಾದಯ್ಯನ ಮಗ್ಗದ ಮೇಲೆ ಮಲಗಿ ಎದ್ದು ಮಡಿವಾಳ ಮಾಚಯ್ಯನ ಕೈಲಿ ಬಡಿಸಿಕೊಂಡು ಕಾಂಗ್ರೆಸ್ ಕೆಲಸಗಾರರ ಹೆಗಲೇರುತ್ತಿದ್ದ ಗೋಣೀ ತಾಟಿನಂತಿದ್ದ ಬಟ್ಟೆಯೇ ಆಗಿನ ಬದನವಾಳು ಖಾದಿ. ಅದರ ಬೆಲೆ ಗಜಕ್ಕೆ 0. 3-9 (ಮೂರಾಣೆ ಒಂಬತ್ತು ಕಾಸು.) ಅದನ್ನು ಹೆಗಲ ಮೇಲೆ ಹೊತ್ತು ಮನೆ ಮನೆ ತಿರುಗಿ ಗಜಕ್ಕೆ 0. 4-0 (ನಾಲ್ಕಾಣೆ) ದರದಲ್ಲಿ ಮಾರಾಟ ಮಾಡಬೇಕಿತ್ತು. ಕೆಲಸಗಾರರಿಗೆ ಅದೇ ಒಂದು ಆನಂದ. ಅಳಿಲು ಭಕ್ತಿ ಮಳಲು ಸೇವೆಯ ಸಂತೃಪ್ತಿ. ಸರ್ಕಾರಿ ಉದ್ಯೋಗಸ್ತರು ಮತ್ತು ಖಾಸಗಿ ಜನರಿಗೆ ಖಾದಿ ಧರಿಸಲು ಆಸೆ, ಆಸಕ್ತಿ. ಆದರ ಜತೆಯಲ್ಲಿ ಸ್ವಲ್ಪ ಭಯ ಸಂಕೋಚ. ನಮ್ಮ ದಿವಾನರೇ ಒಪ್ಪಿದ್ದಾರೆ ಎಂದು ಕೊಂಚ ಧೈರ್ಯವೂ ಸಹ.

ಖಾದಿ ಪ್ರಚಾರ ವೈಖರಿ ಮರೆಯುವಂತಿಲ್ಲ. ಯಂತ್ರಗಳು ಬಡಜನರ ಉದ್ಯೋಗ ಕಸಿದುಕೊಂಡು ಹೊಟ್ಟೆಯ ಮೇಲೆ ಹೊಡೆಯುತ್ತೆ. ಪರದೇಶದ ಬಟ್ಟೆ ಕೊಂಡರೆ ರೂಪಾಯಿಯಲ್ಲಿ 13 ಆಣೆ ಪರದೇಶದವರಿಗೆ 3 ಆಣೆ ಮಾತ್ರ ನಮ್ಮ ದೇಶದವರಿಗೆ ಉಳಿದು ಕಡೆಗೆ ಅದೂ ಹೊರಟು ಹೋಗುತ್ತದೆ. ಒಂದು ರೂಪಾಯಿ ಖಾದಿ ಕೊಂಡರೇ 16 ಆಣೆಯು ನಮ್ಮ ಅಣ್ಣ ತಮ್ಮ ಅಕ್ಕ ತಂಗಿಯರಲ್ಲೇ ಹಂಚಿಕೆ ಆಗುತ್ತದೆ. ಆದ್ದರಿಂದ ಖಾದಿ ಕೊಳ್ಳಿರಿ ಎಂದು ಸಾರುವುದೇ ಒಂದು ಚಂದ.

ಖಾದಿ ಆರ್ಥಿಕ ನೀತಿಯು ಅಷ್ಟೇ ಮೋಜಿನದು. ವಿರಾಮಕಾಲ, ಉಪಯೋಗ ವಿಲ್ಲದ ತೋಳುಬಲ, ಈ ಎರಡರ ಸಂಯೋಜನೆಯ ಫಲ ಖಾದಿ. ಅಂದ ಮೇಲೆ ಅದೇ ಕಾಲದಲ್ಲಿ ಅದೇ ದೇಹಶ್ರಮದಿಂದ ಖಾದಿಗಿಂತಲೂ ಹೆಚ್ಚು ಲಾಭದಾಯಕವಾದ ಕಾರ್ಯ ಮಾಡುವಂತಿದ್ದರೆ ಅದಕ್ಕೆ ಖಂಡಿತ ಅಡ್ಡಿ ಇರಲಿಲ್ಲ. ಅಂಥ ಉಪಯುಕ್ತವಾದ ಕೆಲಸ ಬಿಟ್ಟು ರಾಟೆ ತಿರುಗಿಸುತ್ತಾ ಕೂಡುವುದು ಎಂದು ಗಾಂಧೀಜಿ ಎಂದೂ ಹೇಳಿರ ಲಿಲ್ಲ. ಏನೊಂದು ಪ್ರಯೋಜನವಿಲ್ಲದೆ ಕಾಲಹರಣ ಮಾಡುವುದನ್ನು ಮಾತ್ರ ಖಂಡಿಸಿದ್ದರು. ವ್ಯರ್ಥವಾಗಿ ಹರಿದು ಹೋಗುವ ನೀರು ಕೆರೆ ಕುಂಟೆ ಕಾಲುವೆಗಳ ರೂಪದಲ್ಲಿ ಉಪಯೋಗವಾಗುವಂತಹ ಕಾಲವು ವಿನಿಯೋಗ ಆಗಬೇಕೆಂಬುದೇ ಅವರ ಅಭಿಪ್ರಾಯ. ಆಶ್ಚರ್ಯವೆಂದರೆ ನೂಲುವುದಕ್ಕೆ ನನಗೆ ಪುರುಸತ್ತೇ ಇಲ್ಲ ಎಂದು ಯಾವ ಗಂಡೂ ಹೆಣ್ಣೂ ಹೇಳಲಿಲ್ಲ. ಗಾಂಧೀಜಿಯ ಖಾದಿ ಯೋಜನೆಯಂತೆ ಮನೆ ಮಂದಿಗೆಲ್ಲಾ

ಬಟ್ಟೆ ಒದಗಿಸಲು ಸಾಧ್ಯ ಎಂಬುದನ್ನು ಒಪ್ಪಲೇ ಬೇಕಿತ್ತು. ಮತ್ತು ಮನೆ ಬಳಕೆಗಾಗಿ ಮಿಗುವಷ್ಟು ಉತ್ಪನ್ನ ಆಗುತ್ತಿತು. ಹೆಚ್ಚಿಗೆ ಖಾದಿಯನ್ನು ಕಂಬಳಿ, ಎಣ್ಣೆ, ದಿನಸಿ ಮೊದಲಾದ ನಿತ್ಯ ಬಳಕೆ ಪದಾರ್ಥಗಳಿಗೆ ವಿನಿಮಯ ಮಾಡಬಹುದಿತ್ತು. ಅಥವಾ ಬಿಕರಿಮಾಡಿ ಹಣ ಪಡೆಯಲು ಅದರ ಅರ್ಥಶಾಸ್ತ್ರ ಈ ರೀತಿ ಇತ್ತು.

ಆಗ ದಿನಗೂಲಿ ಗಂಡಾಳಿಗೆ ಆರಾಣೆ, ಹೆಣ್ಣಾಳಿಗೆ ನಾಲ್ಕಾಣೆಯಂತೆ ದೊರಕು ತ್ತಿತ್ತು. ಅಂದರೆ ಎಂಟು ಗಂಟೆಕಾಲದ ದುಡಿಮೆ. ಹೀಗೆ ಎಂಟು ಗಂಟೆ ಚರಖಾ ದಲ್ಲಿ ಕೆಲಸ ಮಾಡಿದರೆ ಇಷ್ಟು ಲಡಿ ತಯಾರಾಗುತ್ತದೆ. ಆದ್ದರಿಂದ ಅಷ್ಟು ನೂಲು ಮಾಡಲು ಬೇಕಾಗುವ ಹತ್ತಿ ಬೆಲೆ, ಹಂಜಿ ಕೂಲಿ, ಜತೆಗೆ ಎಂಟು ಆಣೆ ಕೊಡಬೇಕು. ನೂಲು 20 ನೇ ನಂಬರಿನದಾಗಿರಬೇಕು ಎಂಬ ನಿಯಮವಿತ್ತು. ಆಳಿಗೆ ಎಂಟು ಗಂಟೆ ದುಡಿಮೆಗೆ ಎಂಟು ಆಣೆ ಮಜೂರಿ. ಲೆಕ್ಕಾಚಾರದ ಆಧಾರದ ಮೇಲೆಯೇ ನೇಯ್ಗೆ ಮಜೂರಿ. ನಂತರ ಅಗಸನಿಗೆ ಗಜಕ್ಕೆ 0.03 ಕಾಸು ಇವೆಲ್ಲಾ ಒಟ್ಟುಗೂಡಿದ ಮೇಲೆ ರೂಪಾಯಿಗೆ ಎರಡಾಣೆ ಲಾಭ ಸೇರಿಸಿ ಬಟ್ಟೆ ಬೆಲೆ ನಿಷ್ಕರ್ಷಿಸಿ ಈ ಎರಡಾಣೆ ಲಾಭದಲ್ಲಿ ಮಾರಾಟ ಮಾಡುವ ಕೆಲಸಗಾರನಿಗೆ ಒಂದಾಣೆ ಆರು ಕಾಸಿನ ರಿಯಾಯ್ತಿ. ಇಷ್ಟೇ ಖಾದಿಯ ಅರ್ಥಶಾಸ್ತ್ರ. ಇದಕ್ಕೆ ಮೇಲ್ಪಟ್ಟ ಸಿಬ್ಬಂದಿ ಖರ್ಚು ಆಡಳಿತ ವರ್ಗದ ಸಂಬಳ ಸಾರಿಗೆಗಳೆಲ್ಲಾ ಸರಕಾರದ ಸಹಾಯಧನ.

ಈ ಖಾದಿಶಾಸ್ತ್ರ ಒಪ್ಪದವರೂ ಇದ್ದರು. ಆದರೆ ಅದೇ ಮಾದಮ್ಮ ಸಿದ್ದಮ್ಮನ ಚರಕಾದಿಂದ ನೂಲಿನ ಜೊತೆಗೆ ಹೊಸೆದು ಬರುತ್ತಿದ್ದ ದೇಶಪ್ರೇಮ, ಸ್ವಾವಲಂಬನೆ, ಆತ್ಮ ಗೌರವ, ಉದ್ಯೋಗ ಶೀಲತೆ, ತಾಳ್ಮೆ, ತೃಪ್ತಿಗಳಂತೂ ಒಪ್ಪದಿರಲು ಸಾಧ್ಯವಿರ ಲಿಲ್ಲ. ಈ ಮಾದಮ್ಮನ ರಾಟೆ ಇಂಗ್ಲೆಂಡಿನ ಬಟ್ಟೆ ಗಿರಣಿಗಳನ್ನು ಮುಚ್ಚಿಸಿತು. ಅದರಿಂದ ಹೊರಬಂದ ನಿರುದ್ಯೋಗಿ ತಂಡಗಳನ್ನು ಗಾಂಧೀಜಿಯವರಿಗೆ ಕಣ್ಣಾರೆ ತೋರಿಸಲಾಯ್ತು. ಅನುತಾಪದೊಡನೆ ಗಾಂಧೀಜಿ ಹೇಳಿದ ಮಾತು. ಭಾರತೀಯರ ಸ್ಥಿತಿ ಇದಕ್ಕಿಂತ ಕರುಣಾಜನಕ ಎಂದರಂತೆ.

ಕಾಲ ಬದಲಾಯಿತು. ದೇಶ ಸ್ವತಂತ್ರವಾಯಿತು. ಜನರ ಚಟುವಟಿಕೆ ಹೆಚ್ಚಾಯ್ತು. ರಾಜನ ಅಧಿಕಾರ ಬೊಕ್ಕಸ ಪ್ರಜೆಗಳದಾಯಿತು. ರಾಜವೈಭವ ಗುಡಿ ಮಠಗಳಲ್ಲಿ ಸೇರಿಹೋಯಿತು. ಭಕ್ತರ ತಂಡ, ಶಿಷ್ಯ ಕೋಟಿ ಬೆಳೆಯುತ್ತಿದೆ. ದೇಶಪ್ರೇಮ, ನಿಷ್ಠೆ, ದೈವಗುರು ಜನರಲ್ಲಿ ಭಕ್ತಿ ಬೆಳೆದಿದೆಯೋ, ಬೆಳೆದಿಲ್ಲವಾದರೆ ಖಂಡಿತ ನಾಶವಾಗಿಲ್ಲ. ಮಾದಮ್ಮ ಸಿದ್ದಮ್ಮನ ಹಳೇ ರಾಟೆಗಳು ಅಟ್ಟ ಸೇರಬಹುದು ಅಷ್ಟೆ. ಕಾಲ ಕ್ರಮದಲ್ಲಿ ಇಳಿದು ಬರುತ್ತದೆ. ಉಪಾಹಾರ ಗೃಹದ ತಿಂಡಿ ತಿನಿಸುಗಳು ಮನೆಯ ಕೈ ತುತ್ತಿನ ರಾಟೆಯನ್ನು ಮರೆಸಬಲ್ಲವೆ !

ಅಂಬರ್ ಚರಕ ಸೃಷ್ಟಿಯಾಗಿದೆ. ಒಂದೇ ಚರಕಕ್ಕೆ ಹತ್ತಾರು ಕದಿರುಗಳನ್ನು ಜೋಡಿಸಿ. ವಿದ್ಯುತ್ತನ್ನೂ ಅಳವಡಿಸಿ. ಹಳ್ಳಿಯ ಕಸುಬನ್ನೇಕೆ ಮಾಡಬಾರ ದೆಂಬುವರ ಆಲೋಚನೆ ಈಗಿನದು. ಇದೂ ಒಂದು ಕಾಲ.

ಸಮಗ್ರ ಖಾದಿ ದರ್ಶನ

ಕರ್ನಾಟಕ ಖಾದಿ ಗ್ರಾಮೋದ್ಯೋಗ ಸಂಘ ಫೆಡರೇಷನ್, ಬೆಂಗೇರಿ,
ಇವರ ಬೆಳ್ಳಿಹಬ್ಬದ ಸಂಚಿಕೆಯಿಂದ ಸಂಗ್ರಹಿಸಿದ ಲೇಖನ ಸಾರ (1983)

ಆಚಾರ್ಯ ವಿನೋಬಾ ಭಾವೆ

ಪೂಜ್ಯ ವಿನೋಬಾ ಅವರು ಗಾಂಧೀಜಿಯವರ ಗೆಳೆಯರು. ನೂಲುವುದರಲ್ಲಿ ನೇಯುವುದರಲ್ಲಿ ಅನೇಕ ಪ್ರಯೋಗ ಮಾಡಿದವರು. ತಕಲಿಯ ಮೇಲೆ ಬಹಳ ಶೀಘ್ರಗತಿಯಿಂದ ನೂಲುತ್ತಿದ್ದರು. ತುಂಬಾ ಚಿಂತನಶೀಲರು.

ಜೇಲಿನಲ್ಲಿದ್ದಾಗ ದೇಶದ ಒಡೆತನ ಅದರ ನಿವಾರಣೆ ಇತ್ಯಾದಿ ವಿಷಯಗಳ ಬಗ್ಗೆ ಬಹಳ ಚಿಂತನೆ ಚರ್ಚೆ ನಡೆಯುತ್ತಲ್ಲಿತ್ತು. ಒಟ್ಟಾರೆ ದೇಶದಲ್ಲಿಯ ದಾರಿದ್ರ್ಯ ಅರೆ ಉದ್ಯೋಗ, ನಿರುದ್ಯೋಗ ಹೋಗಲೇಬೇಕು. ಆ ಬಗ್ಗೆ ಯೋಗ್ಯ ಕ್ರಮ ಕೈಗೊಳ್ಳಲೇ ಬೇಕು. ದೇಶದ ಸಮಸ್ಯೆಯನ್ನು ಖಾದಿ ಬಿಡಿಸದಿದ್ದರೆ ಅದಕ್ಕೆ ಭವಿಷ್ಯ ಇಲ್ಲ ಎಂಬ ವಿಷಯಗಳನ್ನು ಚರ್ಚಿಸುತ್ತಿದ್ದೆವು.

ಖಾದಿ ಜಗತ್ತಿನಲ್ಲಿ ಒಂದು ಯೋಜನೆ ಹೀಗಿತ್ತು. ಸರಕಾರ ದೇಶದಲ್ಲಿಯ ಬಡತನ ನಿವಾರಣೆಯ ಬಗ್ಗೆ ಎಷ್ಟು ಪ್ರಯತ್ನ ಮಾಡಿ ನಿವಾರಿಸುತ್ತದೆಯೋ ಅಷ್ಟನ್ನು ನಿವಾರಿಸಲಿ. ಆದರೆ ಉಳಿದವರ ಬಡತನ, ನಿರುದ್ಯೋಗ ನಿವಾರಿಸಲು ಖಾದಿ ಟೊಂಕ ಕಟ್ಟಿದರೆ ಅದಕ್ಕೂ ಸರಕಾರ ನೆರವಾಗುವುದು ಅತ್ಯಂತ ಅವಶ್ಯವಾಗಿದೆ. ಯಾಕೆಂದರೆ ಒಂದು ವಿಧವಾಗಿ ಸರಕಾರದ ಕರ್ತವ್ಯವನ್ನೇ ಖಾದಿ ಮಾಡಿದಂತಾಗುತ್ತದೆ.


ಈಗ ದೇಶದಲ್ಲಿ ನಡೆದ ಖಾದಿ ಕಾರ್ಯ ಪರಿಪೂರ್ಣವಾದದ್ದಲ್ಲ ಎಂಬ ಮಾತು ಸತ್ಯ. ಆದರೆ ಅದು ಖಾದಿ ಕಾರ್ಯದ ಒಂದು ಭಾಗವೆಂದು ಹೇಳಬಹುದು. ಕೆಲವು ಗ್ರಾಮಗಳಲ್ಲಿ ಕೆಲ ಭಾಗಗಳಲ್ಲಿ ಖಾದಿ ವಸ್ತ್ರ ಸ್ವಾವಲಂಬನೆ ಕಾರ್ಯ ನಡೆಯುತ್ತಲಿದೆ. ಕೆಲವೆಡೆ ಉತ್ಪತ್ತಿ ಮಾರಾಟ ನಡೆಯುತ್ತಲಿದೆ. ಇದು ಖಾದಿ ಕಾರ್ಯ ಹೌದು. ಆದರೆ ಸಂಪೂರ್ಣ ಖಾದಿ ಕಾರ್ಯವಲ್ಲ. ರೈತನು ಧಾನ್ಯ ಬೆಳೆಸುವನು. ಅದರಂತೆ ಪ್ರತಿಯೊಂದು ಮನೆಯಲ್ಲಿಯು ಬೆಳೆಯ ಜತೆಗೆ ಬಟ್ಟೆಯೂ ಸಿದ್ಧವಾಗಬೇಕು. ಈಗ ನಾವು ಜನತೆಗೆ ನೂಲಲು ಹೇಳಿದರೆ ಸ್ವಾಭಾವಿಕವಾಗಿಯೇ ಅವರು ಒಳ್ಳೆಯ ಹಂಜಿ ಕೊಡಲು ಹೇಳುವರು. ಅದನ್ನು ಪೂರೈಸುವುದು ನಮ್ಮ ಆದ್ಯ ಕರ್ತವ್ಯ. ಅದರಂತೆ ನೇಕಾರ ನೂಲು ಕೊಟ್ಟರೆ ಅದರ ಬಗ್ಗೆ ಗೊಣಗುತ್ತ ನೇಯುವನು. ಆದರೆ ಆತನೇ ನೂತರೆ ಅದನ್ನು ಸುಲಭವಾಗಿ ತಕರಾರು ಇಲ್ಲದೆ ನೇಯಬಲ್ಲ.

ನಮಗೆ ಖಾದಿಯ ಬಗ್ಗೆ ಸಮಗ್ರ ದೃಷ್ಟಿ ಬೇಕು. ಇಂದು ಅದು ಇಲ್ಲ. ಗಿರಣಿ ಬಟ್ಟೆ ಅಗ್ಗವಿರುವುದೆಂದು ಅವರ ವಾದ. ಆದರೆ ಅದು ತಪ್ಪು ಎಂಬುದು ನಿರ್ವಿವಾದ. ಗಿರಣಿಯಲ್ಲಿ ವ್ಯವಸ್ಥಾಪಕ ವರ್ಗದ ವೆಚ್ಚ ವಿಪರೀತವಿರುತ್ತದೆ. ಅಲ್ಲದೆ ಯಂತ್ರಗಳ ವೆಚ್ಚ, ಕಚ್ಚಾಮಾಲು ತರುವ ಮತ್ತು ಪಕ್ಕಾ ಮಾಲು ಕಳಿಸುವ ವೆಚ್ಚ, ಇದರ ಮೇಲೆ ಅವರ ಲಾಭ, ಇವೆಲ್ಲ ಸೇರಬೇಕಾಗುತ್ತದೆ. ಹೀಗಾದ ಮೇಲೆಯೂ ಗಿರಣಿ ಬಟ್ಟೆಯ ಬೆಲೆ ಕಡಿಮೆಯಾದರೆ ಇದರಲ್ಲೇನಾದರೂ ಮೂಲಭೂತ ಕಾರಣ ಇರಲೇ ಬೇಕು. ಅದೆಂದರೆ ಗಿರಣಿ ತಮ್ಮ ಮುಖ್ಯ ಉದ್ಯೋಗದ ಜೊತೆ ಜೊತೆಗೆ ಏನು ವೆಚ್ಚವಿಲ್ಲದೆ ಉಪದಂಧೆ ನಡೆಸುವುದುಂಟು. ಆದರಿಂದ ಅವರಿಗೆ ಹೆಚ್ಚಿನ ಲಾಭವಾಗಿ ಬಟ್ಟೆ ಬೆಲೆ ಕಡಿಮೆಯಾಗುವುದು. ಆದರೆ ನಾವು ಖಾದಿ ಕಾರ್ಯದ ಸಮಗ್ರ ದೃಷ್ಟಿಯಿಂದ ಆಲೋಚಿಸಿದರೆ ನಿಶ್ಚಿತವಾಗಿಯೂ ಖಾದಿ ಬಟ್ಟೆ ಗಿರಣಿ ಬಟ್ಟೆ ಗಿಂತ ಅಗ್ಗ ಆಗುವುದುಂಟು. ನೂಲಲು ಮೊದಲು ಅರಳೆ ಬೇಕು. ಅದನ್ನು ರೈತ ತನ್ನ ಹೊಲದಲ್ಲಿಯೋ ಹಿತ್ತಲಲ್ಲಿಯೋ ಬೆಳೆದರೆ ಅದನ್ನೇ ಕಾಳು ತೆಗೆದು ಹಂಜಿ ಮಾಡಿ ಕೊಂಡರೆ ಶ್ರೇಷ್ಠ ಹಂಜಿಯಾಗುವುದು. ಅದರಿಂದ ಒಳ್ಳೆಯ ನೂಲು ಬರುವುದು. ಒಳ್ಳೆಯ ನೂಲು ಬಂದರೆ ಒಳ್ಳೆಯ ಬಟ್ಟೆ ಮತ್ತು ಅದರ ತಾಳಿಕೆಯೂ ಹೆಚ್ಚಾಗುವುದು. ಅಲ್ಲದೆ ಹತ್ತಿಯ ಕಾಳನ್ನು ತನ್ನ ಮನೆಯ ಹೈನಿನ ದನಕ್ಕೆ ಹಾಕಿದರೆ ಅದು ಒಳ್ಳೆಯ ಹಾಲನ್ನು ಕೊಡುವುದು. ಅದರಂತೆ ಹಳ್ಳಿಯ ಜನ ತಮ್ಮ ಊರಲ್ಲಿಯೇ ಎಣ್ಣೆ ಕಾಳು ಬೆಳೆದು ಎಣ್ಣೆ ಮಾಡಿದರೆ ಅದು ಆರೋಗ್ಯಕ್ಕೆ ಹಿತಕರ ಮತ್ತು ಕೆಲವರಿಗೆ ಉದ್ಯೋಗ ವನ್ನೂ ಕೊಡುವುದು. ಅದರಂತೆ ಗ್ರಾಮದಲ್ಲಿ ಪೂರ್ವದಲ್ಲಿದ್ದ ಎಲ್ಲ ಚಿಕ್ಕ ಪುಟ್ಟ ಉದ್ಯೋಗಗಳನ್ನು ಪ್ರಾರಂಭಿಸಿ ಗ್ರಾಮವು ಎಲ್ಲಾ ದೃಷ್ಟಿಯಿಂದ ಸ್ವಾವಲಂಬಿ ಯಾಗುವಂತೆ ಮಾಡಿದರೆ ಹಳ್ಳಿಯ ಆರ್ಥಿಕಸ್ಥಿತಿಯೂ ಸುಧಾರಿಸುವುದು. ಅಂದರೆ ಅಲ್ಲಿಯ ಹಣವು ಅಲ್ಲಿಯೇ ಉಳಿಯುದು. ಅಷ್ಟರ ಮಟ್ಟಿಗೆ ಆ ಗ್ರಾಮ ಹಣ ಉಳ್ಳದ್ದಾಗುವುದು.

ನಾವು ಖಾದಿ ಒಂದೇ ಬೆಳೆಸಹೋದರೆ ನಮ್ಮ ದೇಹದ ಒಂದು ಅಂಗವನ್ನಷ್ಟೇ ಬೆಳೆಸಿದಂತಾಗುವುದು. ಅದು ಸಾಧ್ಯವೂ ಆಗಲಾರದು. ಆ ದೃಷ್ಟಿಯಿಂದ, ಸಮಗ್ರ ಗ್ರಾಮದ ದೃಷ್ಟಿಯಿಂದ, ಅದರ ಹಿತದ ದೃಷ್ಟಿಯಿಂದ ಖಾದಿ ಕಾರ್ಯ ನಡೆಯಬೇಕು. ಖಾದಿ ಕಾರ್ಯದ ಪ್ರಭಾವ ಜನತೆಯ ಮೇಲೆ ಬೀಳಬೇಕು. ಹೀಗೆ ಗ್ರಾಮದ ಸರ್ವಾಂಗೀಣ ಉನ್ನತಿಯಾದಾಗ ಮಾತ್ರ ಅದು ಖಾದಿಯ ಸಮಗ್ರ ದೃಷ್ಟಿಯಾಗಬಲ್ಲದು. ಹಾಗೆ ನೋಡಿದರೆ ಗ್ರಾಮಗಳ ಪುನರುಜ್ಜೀವನವೇ ಖಾದಿಯ ಮೂಲ ಕಾರ್ಯ. ಹಾಗೆ ನಾವು ಖಾದಿ ಉತ್ಪತ್ತಿ ಮಾಡಿದರೆ ಅದು ಖಂಡಿತವಾಗಿಯೂ ಅಗ್ಗವಾಗಬಲ್ಲದು, ಬಹಳ ಜನರಿಗೆ ಉದ್ಯೋಗ ದೊರೆಯುವುದು, ಒಳ್ಳೇ ಬಟ್ಟೆ ನಿರ್ಮಾಣವಾಗುವುದು, ನಿರ್ಜೀವ ವಾದ ಗ್ರಾಮ ಚೇತರಿಸಿಕೊಂಡು ಜನಜೀವನ ತುಂಬ ಚಟುವಟಿಕೆಯುಳ್ಳದ್ದಾಗುವುದು. ಆದ್ದರಿಂದ ನಮ್ಮ ಖಾದಿ ಕಾರ್ಯದಲ್ಲಿ ಸಮಗ್ರ ದರ್ಶನದ ಅಗತ್ಯವಿದೆ. ●

ಬದನವಾಳು ನೂಲುವ ಪ್ರಾಂತದ ಪ್ರವರ್ತಕ
ಆದರ್ಶ ಖಾದಿ ಸೇವಕ
ಶ್ರೀ ರಾಜಾರಾಮ ಅಯ್ಯಂಗಾರ್

ಹೆಚ್. ಆರ್ ವೆಂಕಟರಮಣ ಅಯ್ಯರ್
ಅಧ್ಯಕ್ಷರು, ಕರ್ನಾಟಕ ಸರ್ವೋದಯ ಸಂಘ
ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು



ಆರು ದಶಕಗಳ ಹಿಂದಿನ ಸವಿನೆನಪುಗಳನ್ನು ಸ್ಮರಣೆಗೆ ತಂದು ಕೊಂಡಾಗ ಉತ್ಸಾಹವು ಇಮ್ಮಡಿಸುವುದು ಮಾತ್ರವಲ್ಲ ಆನಂದದಿಂದ ಹೃದಯವು ತುಂಬಿಬರುವುದು. 1927ನೆಯ ವರ್ಷ ಬೆಂಗಳೂರು ನಗರದ ಇತಿಹಾಸದಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಮಹಾತ್ಮ ಗಾಂಧಿ ಅವರು ಭಾರತಾದ್ಯಂತ ಪರ್ಯಟನ ಮಾಡಿ ಪುಣೆಗೆ ಹಿಂತಿರುಗಿದಾಗ ಬಹುವಾಗಿ ಬಳಲಿದ್ದರು. ವಿಶ್ರಾಂತಿಯನ್ನು ಹೊಂದಲು ಬಯಸಿದ್ದರು. ರಾಜಾಜಿ ಅವರ ಸಂಗಡ ಈ ವಿಷಯವನ್ನು ಸಮಾಲೋಚಿಸಿದ ನಂತರ ಅವರ ಸಲಹೆಯಂತೆ ನಂದೀ ದುರ್ಗದ ಗಿರಿಧಾಮದಲ್ಲಿ ತಂಗಿ ವಿಶ್ರಾಂತಿ ಪಡೆಯಲು ತಮ್ಮ ಒಪ್ಪಿಗೆ ನೀಡಿದರು.

ಅಂದಿನ ಮೈಸೂರು ಸರ್ಕಾರದ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್ ಅವರು ಗಾಂಧೀಜಿ ಅವರನ್ನು ಆಹ್ವಾನಿಸಿ ನಂದೀ ದುರ್ಗದಲ್ಲಿ ವಿಶ್ರಾಂತಿ ಹೊಂದಿ, ಬೆಂಗಳೂರಿಗೆ ಬಂದು ತಂಗುವಂತೆ ಎಲ್ಲಾ ವ್ಯವಸ್ಥೆಯನ್ನು ಮಾಡಿಕೊಟ್ಟರು. ನಂದೀ ದುರ್ಗದಿಂದ ಬೆಂಗಳೂರಿಗೆ ಆಗಮಿಸಿ ಮಹಾತ್ಮರು ಸರಕಾರದ ಅತಿಥಿ ಗೃಹವಾದ "ಕುಮಾರಪಾರ್ಕ್" (ಇಂದಿನ ಕುಮಾರಕೃಪ)ದಲ್ಲಿ 3 ತಿಂಗಳವರೆಗೆ ಬಿಡಾರ ಮಾಡಿದ್ದರು.

ಆ ಸಮಯದಲ್ಲಿ ಬೆಂಗಳೂರಿನ ನಾಗರಿಕರಿಗೆ ಗಾಂಧೀಜಿ ಅವರ ದರ್ಶನದ ಪರಮ ಭಾಗ್ಯ ಲಭಿಸಿತು. ಮಹಾತ್ಮರ ಪಾದಸ್ಪರ್ಶದಿಂದ ಕುಮಾರಕೃಪ ಪುನೀತವಾಯಿತೆಂದು ಹೇಳಿದರೆ ತಪ್ಪಾಗಲಾರದು.

ಮಹಾತ್ಮಗಾಂಧಿಯವರು ಬೆಂಗಳೂರಿನಲ್ಲಿ ವಿಶ್ರಾಂತಿ ಹೊಂದುತ್ತಿದ್ದರೂ, ನಿತ್ಯವೂ ಬಿಡುವಿಲ್ಲದ ಕಾರ್ಯಕ್ರಮ. ಬೆಳಗಿನ ಜಾವ 4 ಗಂಟೆಗೆ ಸರಿಯಾಗಿ ಎದ್ದು ಸೃಷ್ಟಿಕರ್ತ ನಾದ ಭಗವಂತನ ನಾಮಸ್ಮರಣೆ, ಪ್ರಾರ್ಥನೆ ನಂತರ ಪ್ರಾತರ್ವಿಧಿಗಳು, ದೇಶವಿದೇಶ ಗಳಿಂದ ಬರುತ್ತಿದ್ದ ಮುಖಂಡರುಗಳ ಸಂಗಡ ಸಂದರ್ಶನ–ಪ್ರಚಲಿತ ವಿಷಯಗಳ ಬಗ್ಗೆ ಚರ್ಚೆ–ಪತ್ರ ವ್ಯವಹಾರಗಳು ವೈಯಕ್ತಿಕ ಭೇಟಿಗಳು–ಯಂಗ್ ಇಂಡಿಯಾ ಪತ್ರಿಕೆ ಸಂಪಾದನಾ ಕಾರ್ಯ–ಲೇಖನ–ಬರವಣಿಗೆ–ಸಾರ್ವಜನಿಕ ಸಭೆ–ಸಂಜೆ ಬೃಹತ್ ಪ್ರಾರ್ಥನಾ ಸಭೆ, ಪ್ರವಚನ–ಇತ್ಯಾದಿ ಸತತವಾಗಿ ನಡೆಯುತ್ತಿತ್ತು. ಗಾಂಧೀಜಿಯ ವರನ್ನು ಸಂದರ್ಶಿಸಲು, ಆ ಮಹಾಪುರುಷನ ದರ್ಶನ ಲಾಭ ಪಡೆಯಲು ಸಹಸ್ರಾರು ಜನ ಶ್ರೀಸಾಮಾನ್ಯರು, ಉನ್ನತಾಧಿಕಾರಿಗಳು, ಹೆಂಗಸರು, ಮಕ್ಕಳು, ವಿದ್ಯಾರ್ಥಿಗಳು ಸಾಲುಗಟ್ಟಿ ನಿಂತು ದರ್ಶನ ಪಡೆಯುವ ಅಪೂರ್ವ ದೃಶ್ಯ ಎಂದೂ ಮರೆಯಲಾಗ ದಂತಹುದು.

ಗಾಂಧೀಜಿಯವರಿಗೆ ವೈಯಕ್ತಿಕವಾಗಿ ಸೇವೆ ಸಲ್ಲಿಸಲು ಅನೇಕ ವಿದ್ಯಾರ್ಥಿಗಳ ತಂಡವನ್ನು ನ್ಯಾಷನಲ್ ಹೈಸ್ಕೂಲಿನ ಪ್ರಾಧ್ಯಾಪಕರಾದ ಶ್ರೀ ಸಂಪದ್ಗಿರಿರಾಯರು ಮತ್ತು ಅಧ್ಯಾಪಕವರ್ಗದವರು ಗೊತ್ತುಮಾಡಿದ್ದರು. ಆ ತಂಡದಲ್ಲಿ ನಾನೂ ಒಬ್ಬ ನಮ್ರ ಸ್ವಯಂ ಸೇವಕನಾಗಿದ್ದೆ. ಮಹಾತ್ಮಾಜಿ ಅವರ ಸೇವೆ ಮಾಡುವ ಅವಕಾಶ 2 ವಾರಗಳು ನನ್ನ ಪಾಲಿಗೂ ದೊರೆತಿದ್ದು ಒಂದು ಪುಣ್ಯ ವಿಶೇಷ. ಆ ಸಮಯದಲ್ಲಿ ಗಾಂಧೀಜಿಯವರ ಬಿಡಾರದ ಎಲ್ಲ ವ್ಯವಸ್ಥೆಗಳ ಪೂರ್ಣ ಹೊಣೆಗಾರಿಕೆಯನ್ನು ಹೊತ್ತು ನಿರ್ವಹಿಸುತ್ತಿದ್ದ ಶ್ರೀ ರಾಜಾರಾಮಯ್ಯಂಗಾರ್ ಅವರ ಮೊದಲ ಪರಿಚಯ ಕುಮಾರ ಪಾರ್ಕಿನಲ್ಲಿ ನನಗೆ ಆಯಿತು. ಶ್ರೀಯುತ ರಾಜಾರಾಮ ಅಯ್ಯಂಗಾರ್ ಅವರು ಅತ್ಯಂತ ಶ್ರದ್ಧಾಳುಗಳು, ಸರಳ ಹೃದಯರು, ಸೌಜನ್ಯ ಸ್ವಭಾವ, ಗಾಂಧೀಜಿ ಅವರಲ್ಲಿ ಅಪಾರ ಭಕ್ತಿ, ನಿಷ್ಠೆ, ಶ್ರದ್ಧೆ ಉಳ್ಳವರು. ಕೆಲವೇ ತಿಂಗಳ ಹಿಂದೆ ತಾತಾ ವಿಜ್ಞಾನ ಮಂದಿರದಲ್ಲಿ ವಿದ್ಯಾರ್ಥಿಯಾಗಿದ್ದವರು ತಮ್ಮ ಉಜ್ವಲ ಭವಿಷ್ಯವನ್ನು ಬಿಟ್ಟುಕೊಟ್ಟು—'ಖಾದಿ ಸೇವಕ'ನಾಗಿ ದುಡಿಯಲು ನಿಶ್ಚಯಿಸಿದ ಮಹಾ ಚೇತನ ಅವರದು. ಬೆಂಗಳೂರಿನಲ್ಲಿ ಕೋಟೆ ಖಾದಿ ವಸ್ತ್ರಾಲಯದಲ್ಲಿ ಶ್ರೀ ಟಿ. ಸದಾಶಿವಂ ಅವರ ಸಹಾನುವರ್ತಿಗಳಾಗಿ ಹಲವಾರು ತಿಂಗಳುಗಳವರೆಗೆ ಕೆಲಸ ಮಾಡುತ್ತಿದ್ದು ಜನಪ್ರಿಯರಾಗಿದ್ದರು. ಗಾಂಧೀಜಿ ಯವರ ಬಿಡಾರದಲ್ಲಿ ಎಲ್ಲ ಕೆಲಸವು ಕ್ರಮವಾಗಿ ಅವರ ನೇತೃತ್ವದಲ್ಲಿ ಚೊಕ್ಕವಾಗಿ ನಡೆ ಯುತ್ತಿತ್ತು. ಊಟ ಉಪಚಾರಗಳು, ದೈನಂದಿನ ಕಾರ್ಯಕ್ರಮಗಳು ಯಾವುದಕ್ಕೂ

ಬಾಧೆಯಾಗದಂತೆ ಅವರು ನೋಡಿಕೊಳ್ಳುತ್ತಿದ್ದರು. ಅಂದಿನಿಂದ ಇಂದಿನವರೆಗೆ ಅವರು ಮತ್ತು ನನ್ನ ಸ್ನೇಹ ಅಚ್ಚಳಿಯಂದೆ ಗಾಢವಾಗಿ ಉಳಿದು ಬೆಳೆದುಕೊಂಡು ಬಂದಿದೆ.

ಗಾಂಧೀಜಿಯವರ ಸನ್ನಿಧಿಯಲ್ಲಿ ಶ್ರೀ ರಾಜಾರಾಮಯ್ಯಂಗಾರ್ ಅವರು ಕೆಲಸ ಮಾಡುತ್ತ ಅವರ ಕೃಪೆಗೆ ಪಾತ್ರರಾಗಿದ್ದರು. ಗಾಂಧೀಜಿಯವರು 'ಖಾದಿ ಯಾತ್ರೆ' ಯನ್ನು ಬೆಂಗಳೂರಿಂದ ಆರಂಭಿಸಿ ದಕ್ಷಿಣ ಭಾರತಕ್ಕೆ ಪ್ರವಾಸ ಹೊರಡುವ ಮುನ್ನ ಮೈಸೂರು ಸರಕಾರದ ವತಿಯಿಂದ ಒಂದು ಖಾದಿ ಕೇಂದ್ರ ತೆರೆಯಬೇಕೆಂದು ಪ್ರೇರಣೆ ಕೊಟ್ಟರು. ಅವರು ಅಪೇಕ್ಷಿಸಿದಂತೆ ಮೈಸೂರು ಸರಕಾರ ಒಪ್ಪಿ ವಾಣಿಜ್ಯ ಇಲಾಖೆಯ ಮೂಲಕ ಬದನವಾಳು ನೂಲುವ ಕೇಂದ್ರವು (ಪ್ರಾಂತ) 1927ರಲ್ಲಿ ರೂಪುಗೊಂಡಿತು. ಶ್ರೀ ರಾಜಾರಾಮ ಅಯ್ಯಂಗಾರ್ ಅವರೇ ಆ ಕೇಂದ್ರದ ಸಂಯೋಜಕರಾದರು. ಕರ್ನಾಟಕ ಚರಕಾ ಸಂಘದ ಹಿರಿಯ ಸಂಘಟಕರಾದ ದಿ॥ ಶ್ರೀ ಸಿದ್ದೂರಾವ್ ಪೂಜಾರ್ ಅವರ ನೆರವು ಸಿಕ್ಕಿತು. ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದ ಹತ್ತಿರ ಖಾದಿ ಕಾರ್ಯಕ್ಕಾಗಿ ನಾಲ್ಕಾರು 'ಪರ್ಣಕುಟಿಗಳು' ನಿರ್ಮಿಸಲ್ಪಟ್ಟವು. ಅಲ್ಲಿಂದ ನೂರಾರು ಹಳ್ಳಿಗಳ ಸಹಸ್ರಾರು ಬಡಕುಟುಂಬಗಳಿಗೆ ಖಾದಿ ಉದ್ಯಮದ ಮೂಲಕ ಉದ್ಯೋಗ ಕಲ್ಪಿಸಿಕೊಟ್ಟು ಚರಿತ್ರಾರ್ಹವಾದ ಕಾರ್ಯವನ್ನು ಸಾಧಿಸಿದರು. ಲಕ್ಷಾಂತರ ರೂಪಾಯಿಗಳ ಖಾದಿ ಉತ್ಪತ್ತಿಯಾಗುತ್ತಿತ್ತು. ಬದನವಾಳು ಖಾದಿ ಕೇಂದ್ರ, ಕಾರ್ಯ ಕ್ಷೇತ್ರ ವಿಸ್ತಾರಗೊಂಡು ಇತರ ಜಿಲ್ಲೆಗಳಲ್ಲಿಯೂ ಪಸರಿಸಿತು. ಐಮಂಗಲ, ಅಜ್ಜಂಪುರ ಮುಂತಾದ ಸ್ಥಳಗಳಲ್ಲಿ ಖಾದಿ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ಬದನವಾಳು ಕೇಂದ್ರದಲ್ಲಿ ತಯಾರಿಸಿದ ಶ್ರೇಷ್ಠ ತರಹ ಬಟ್ಟೆಗಳು, ವಿನ್ಯಾಸಗಳು ಎಲ್ಲರ ಮೆಚ್ಚಿಗೆಗೆ ಪಾತ್ರವಾದವು. ಲಂಡನ್ನಿನಲ್ಲಿ ಒಮ್ಮೆ ನಡೆದ ಪ್ರದರ್ಶನದಲ್ಲಿ ಮೈಸೂರು ಸರಕಾರ ಪಾಲ್ಗೊಂಡಾಗ ಬದನವಾಳದ ಕೈನೂಲು ಕೈಮಗ್ಗದ ಬಟ್ಟೆಗಳನ್ನು ಪ್ರದರ್ಶಿಸಿದ್ದು ವಿದೇಶಿಯರು ಕಂಡು ವಿಸ್ಮಯಗೊಂಡ ವಿಷಯ ಹೆಮ್ಮೆ ತರುವಂತಹುದು. ಬದನವಾಳ ಕೇಂದ್ರದ ಪ್ರವರ್ತಕರಾದ ಶ್ರೀ ರಾಜಾರಾಮಯ್ಯಂಗಾರ್ ಅವರ ನೇತೃತ್ವದಲ್ಲಿ ಖಾದಿ ಕಾರ್ಯ ಬೆಳೆದು ಉಚ್ಛ್ರಾಯಸ್ಥಿತಿಗೆ ಮುಟ್ಟಿ 25 ವರ್ಷಗಳ ನಂತರ ಖಾದಿ ಕೇಂದ್ರದ ರಜತ ಮಹೋತ್ಸವವು ವೈಭವದಿಂದ ನೆರವೇರಿತು. ಅನಂತರ ಶ್ರೀಯುತರು ನಿವೃತ್ತಿ ಹೊಂದಿದರು. ಬದನವಾಳ ಖಾದಿ ಕೇಂದ್ರದಲ್ಲಿ ತಯಾರಿಸಿದ ಬಟ್ಟೆಯನ್ನು ಮಾರಾಟ ಮಾಡಲು ಬೆಂಗಳೂರಿನ ಕೋಟೆ ಖಾದಿ ಕೇಂದ್ರದಲ್ಲಿ ತಯಾರಿಸಿದ ಬಟ್ಟೆಯನ್ನು ಮಾರಾಟ ಮಾಡಲು ಬೆಂಗಳೂರಿನ ಕೋಟೆ ಖಾದಿ ವಸ್ತ್ರಾಲಯವು ದೊಡ್ಡ ಮಾರು ಕಟ್ಟೆಯಾಗಿತ್ತು ಎಂದು ತಿಳಿಸಲು ಸಂತೋಷಿಸುತ್ತೇನೆ. ಬೆಂಗಳೂರಿನ ಕೋಟೆ ಖಾದಿ ವಸ್ತ್ರಾಲಯವು ಗಾಂಧೀಜಿಯವರ ಪ್ರೇರಣೆಯಿಂದ 1927ರಲ್ಲಿ ರಾಜಾಜಿ ಅವರಿಂದ ಆರಂಭಿಸಲ್ಪಟ್ಟು ಇಂದಿಗೆ 60 ವರ್ಷಗಳು ತುಂಬಿವೆ. ಇಂದಿಗೂ ಕರ್ನಾಟಕ ಸರ್ವೋ ದಯ ಸಂಘದ ಆಶ್ರಯದಲ್ಲಿ ಸೇವೆ ಸಲ್ಲಿಸುತ್ತಿದೆ ಎಂದು ತಿಳಿಸಲು ಹರ್ಷಿಸುತ್ತೇನೆ.

1932ರಲ್ಲಿ ನಾನು ಬದನವಾಳಕ್ಕೆ ಭೇಟಿಕೊಟ್ಟು ಶ್ರೀ ರಾಜಾರಾಮಯ್ಯಂಗಾರ್ ಅವರ ಆತಿಥ್ಯ ಪಡೆದು ಜೊತೆಯಲ್ಲಿ 3 ತಿಂಗಳ ಪರ್ಯಂತ ಆ ಕ್ಷೇತ್ರದಲ್ಲಿ ಸಂಘಟನಾ ಕಾರ್ಯದಲ್ಲಿ ತೊಡಗಿದ ಮಹಾಭಾಗ್ಯ ನನ್ನದಾಗಿದೆ. ಅದೇ ಕಾಲಕ್ಕೆ ಅಲ್ಲಿಯ ಇತರ ಸನ್ಮಿತ್ರರ ಪರಿಚಯ, ಸ್ನೇಹಲಾಭವು ಸಹ ದೊರಕಿತು. ಅವರಲ್ಲಿ ಮುಖ್ಯವಾಗಿ ಶ್ರೀ ಡಿ. ರಂಗಶೆಟ್ಟರೂ ಒಬ್ಬರು. ಅವರು ಮತ್ತು ನಾನು ಕಬ್ಬಳ್ಳಿ ಎಂಬ ಗ್ರಾಮದಲ್ಲಿ ಹಾಗೂ ಸುತ್ತಮುತ್ತ ಒಂದು ತಿಂಗಳು ಹಳ್ಳಿಗಳಲ್ಲಿ ತಿರುಗಾಡಿ ಕೆಲಸ ಮಾಡಿ ನಿತ್ಯವೂ ಹಿಂತಿರುಗುತ್ತಿದ್ದೆವು. ಸಂಜೆ ಆಯಾಸಗೊಂಡು ಹಿಂತಿರುಗುವ ವೇಳೆಗೆ ನಮಗೆ ಬೇಲದ ಹಣ್ಣಿನ ರಸಾಯನ ಕಾದಿರುತ್ತಿತ್ತು. ಅಷ್ಟನ್ನು ಭುಂಜಿಸಿ ನಾವು ತೃಪ್ತಿಗೊಂಡು ವಿರಮಿಸುತ್ತ ಅನೇಕ ದಿವಸಗಳನ್ನು ಆನಂದದಿಂದ ಕಳೆಯುತ್ತಿದ್ದ ರಸನಿಮಿಷಗಳು ಇಂದಿಗೂ ಹಸಿರು ಹಸಿರಾಗಿ ಉಳಿದಿರುವುದು.

ಶ್ರೀ ರಾಜಾರಾಮಯ್ಯಂಗಾರ್ ಅವರ ರಸಮಯ ಜೀವನ ಬದನವಾಳ ನೂಲುವ ಪ್ರಾಂತದ ಬೆಳವಣಿಗೆಯಲ್ಲಿ ಬೆರೆತುಹೋಗಿದೆ. ಒಂದಕ್ಕೊಂದು ಓತಪ್ರೋತವಾಗಿದೆ. ಜನತಾ ಜನಾರ್ಧನ ಸೇವೆಯೇ ಅವರ ಜೀವನದ ಮುಖ್ಯ ಗುರಿಯಾಗಿತ್ತು. ಅವರು 85 ವರ್ಷಗಳಿಗೂ ಮೀರಿ ಈಗ ಇಳಿವಯಸ್ಸಿನವರಾಗಿದ್ದರೂ ಎಳೆವಯಸ್ಸಿನ ಉತ್ಸಾಹ, ಸ್ಫೂರ್ತಿ, ಪ್ರೇಮ ಹಾಗೂ ತತ್ವನಿಷ್ಠೆ ಅಚ್ಚಳಿಯದೆ ಇದೆ. ಇಂದಿಗೂ ಎಲ್ಲ ಕಾರ್ಯಕರ್ತರ ದಾರಿದೀಪವಾಗಿರುವರು ಹಾಗೂ ಆದರ್ಶ ಖಾದಿ ಸೇವಕರು ಆಗಿರುವರು. ಅವರ ಕರ್ತೃತ್ವಶಕ್ತಿ ಅಪಾರವಾದುದು. ಎಂತಹ ಅಗಾಧವಾದ ತ್ಯಾಗಕ್ಕೂ ಅಳುಕದಂತಹ ಚೇತನ ಅವರದು. ಅವರ ಪತ್ನಿ ಶ್ರೀಮತಿ ಪಂಕಜಮ್ಮನವರು ಅವರ ಎಲ್ಲ ಕಷ್ಟ ಸುಖಗಳಲ್ಲಿ ಸಹಭಾಗಿಗಳಾಗಿ ಶ್ರೀಯುತ ರಾಜಾರಾಮಯ್ಯಂಗಾರ್ ಅವರಿಗೆ ನೆರವಾಗಿರುವರು. ಈ ಆದರ್ಶ ದಂಪತಿಗಳ ಪೀಳಿಗೆ ವೃದ್ಧಿಯಾಗಲೆಂದು ಹಾರೈಸುತ್ತೇನೆ.

ಸರ್ವಶಕ್ತನಾದ ಭಗವಂತನು ಶ್ರೀ ರಾಜಾರಾಮಯ್ಯಂಗಾರ್ ಮತ್ತು ಅವರ ಪತ್ನಿ ಶ್ರೀಮತಿ ಪಂಕಜಮ್ಮ ಅವರುಗಳಿಗೆ ಆರೋಗ್ಯ ಭಾಗ್ಯವನ್ನು ಸಕಲ ಸಂಪದಗಳನ್ನು ನೀಡಲೆಂದು ಪ್ರಾರ್ಥಿಸುತ್ತಾ, ಅವರಿಗೂ ನಮ್ಮ ಪ್ರಿಯ ಸ್ನೇಹಿತರಾದ ಶ್ರೀ ರಂಗಶೆಟ್ಟರು ಮತ್ತು ಅವರ ಪರಿವಾರದವರಿಗೂ ನನ್ನ ಪ್ರೇಮಪೂರ್ವಕವಾದ ಭಕ್ತಿಪುರಸ್ಕರವಾದ ನಮನಗಳನ್ನು ಮಾಡುತ್ತೇನೆ.

* * *

ಖಾದಿಯ ಮೇಲೆ ಮಹಾತ್ಮಾಜಿಯವರ ಅನಿಸಿಕೆ

ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಡಾ॥ ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರು 1946 ನೇ ಜನವರಿ ಮಾಹೆಯಲ್ಲಿ ಮಹಾತ್ಮರೊಡನೆ ದಕ್ಷಿಣ ಯಾತ್ರೆ ಮಾಡಿದಾಗ ಮಹಾತ್ಮರು ಖಾದಿ ವಿಷಯದಲ್ಲಿ ಮಾಡಿದ ಭಾಷಣ.

ಗಾಂಧೀಜಿ : ಖಾದಿ ಚರ್ಚಾಸ್ಪದವಾದ ವಿಷಯ. ಖಾದಿ ಪ್ರಚಾರ ನಾನು ಮಾಡುವುದರಿಂದ ಸ್ವರಾಜ್ಯದ ಹಡಗನ್ನು ಮುಳುಗಿಸುತ್ತಿದ್ದೇನೆಂದೂ ದೇಶವನ್ನು ಹಿಂದಲ ಯುಗಕ್ಕೆ ತೆಗೆದುಕೊಂಡು ಹೋಗುತ್ತಿದ್ದೇನೆಂದೂ ಅನೇಕರು ಯೋಚಿಸುತ್ತಿದ್ದಾರೆ. ಈ ಚಿಕ್ಕ ಪ್ರಬಂಧದಲ್ಲಿ ಖಾದಿಯ ಪರ ನಾನು ವಕಾಲತ್ತು ವಹಿಸಿ ವಾದ ಮಾಡುವುದಿಲ್ಲ. ಹಿಂದೆ ನಾನು ಬೇಕಾದಷ್ಟು ವಾದ ಮಾಡಿದ್ದೇನೆ. ಈಗ ಎಲ್ಲಾ ಕಾಂಗ್ರೆಸ್ಸಿನವರೂ ಎಲ್ಲ ಭಾರತೀಯರೂ ಖಾದಿಯ ಏಳಿಗೆಗೆ ಏನು ಮಾಡಬಹುದೆಂಬುದನ್ನು ಹೇಳುತ್ತೇನೆ. ಖಾದಿ ಎಂದರೆ ಎಲ್ಲರಿಗೂ ಆರ್ಥಿಕ ಸ್ವಾತಂತ್ರ್ಯ ಮತ್ತು ಸಮಾನತೆ. "ಅಡಿಗೆಯ ರುಚಿ ಊಟದಲ್ಲಿ" ಎಂದು ಕೇಳಿದ್ದೀರಿ. ಪ್ರತಿಯೊಬ್ಬರೂ ಪ್ರಯತ್ನಪಡಲಿ ನನ್ನ ಮಾತಿನ ಸತ್ಯ ಗೊತ್ತಾಗುವುದು. ಖಾದಿಯನ್ನು ಅವರ ಎಲ್ಲಾ ಅರ್ಥದಲ್ಲಿಯೂ ಗ್ರಹಿಸಬೇಕು. ಖಾದಿ ಎಂದರೆ ಸ್ವದೇಶೀಯ ಮನೋಭಾವ ಭಾರತವಲ್ಲಿ ತಯಾರಾದ ಪದಾರ್ಥಗಳಲ್ಲಿಯೇ ತಮ್ಮ ಆವಶ್ಯಕತೆಗಳನ್ನು ಪೂರೈಸಿಕೊಳ್ಳುವ ನಿರ್ಧಾರ, ಹಳ್ಳಿಯ ಕೂಲಿ, ಬುದ್ಧಿಗೇ ಪ್ರಾಧಾನ್ಯ ಇವೆಲ್ಲಾ ಕಣ್ಣ ಮುಂದೆ ನಿಲ್ಲುತ್ತದೆ. ಅಂದರೆ ಪರಿಸ್ಥಿತಿಯೇ ಪಲ್ಲಟವಾಗಿ ಭಾರತದ ಹಳ್ಳಿಗಳ ಸುಲಿಗೆಯ ಬದಲು ಭಾರತದ ಹಳ್ಳಿಗಳು ಸ್ವಯಂ ಪರಿಪೂರ್ಣವಾಗುತ್ತವೆ. ತಮ್ಮ ಕೈಲಾದ ಮಟ್ಟಿಗೆ ಭಾರತದ ಪಟ್ಟಣಗಳ ಮತ್ತು ಜಗತ್ತಿನ ಸೇವೆಯನ್ನು ಮಾಡುತ್ತವೆ.

ಹೀಗೆ ಆಗಬೇಕಾದರೆ ಜನರ ಮನೋಭಾವಗಳಲ್ಲಿಯೇ ಕ್ರಾಂತಿ ನಡೆಯಬೇಕು. ಕೆಲವು ಮಾರ್ಗಗಳಲ್ಲಿ ಅಹಿಂಸೆ ಸುಲಭವಾದರೂ ಅನೇಕ ಮಾರ್ಗಗಳಲ್ಲಿ ಅದು ಕಷ್ಟ. ಇದು ಪ್ರತಿಯೊಬ್ಬ ಭಾರತೀಯನ ಹೃದಯದ ತಂತಿಯನ್ನು ಮಿಡಿಯುತ್ತದೆ. ಅವನಲ್ಲಿ ಹುದಗಿರುವ ಶಕ್ತಿಯ ಅನುಭವವನ್ನು ಅವನಿಗೆ ಉಂಟುಮಾಡಿಕೊಡುತ್ತದೆ. ಭಾರತದ ಜನ ಸಮುದ್ರದಲ್ಲಿ ತಾನು ಒಂದು ತೊಟ್ಟುರಕ್ತ ಎಂಬ ಹೆಮ್ಮೆಯನ್ನು ಅವನಿಗೆ ಉಂಟುಮಾಡುತ್ತದೆ. ಈ ಅಹಿಂಸೆಯೆಲ್ಲ ಮನುಷ್ಯ ಜಗತ್ತಿಗೆ ತಿಳಿದ ಶಕ್ತಿಗಳಲ್ಲಿ ಇದು

ಅತಿ ಬಲಿಷ್ಠವಾದ ಶಕ್ತಿ ಎಂದು ತಿಳಿಯುವುದು. ಅಹಿಂಸೆಯ ಅಸ್ತಿತ್ವ ಅದರ ಶಕ್ತಿಯೇ. ಈ ಶಕ್ತಿಯನ್ನೇ ನಾನು ಕಾಂಗ್ರೆಸ್ಸಿಗೂ ಅದರ ಮೂಲಕ ಜಗತ್ತಿಗೂ ತೋರಿಸಲು ಪ್ರಯತ್ನಿಸುತ್ತಿದ್ದೇನೆ. ಆದುದರಿಂದ ನನ್ನ ಅಭಿಪ್ರಾಯದಲ್ಲಿ ಖಾದಿಯು ಭಾರತ ಸ್ವಾತಂತ್ರ್ಯದ ಗುರುತು. ಭಾರತೀಯರ ಏಳಿಗೆ ಸಮಾನತೆಯ ಗುರುತು. ಜವಹರ್‌ಲಾಲ್ ನೆಹರುರವರ ಕಾವ್ಯಮಯ ವಾಣಿಯಲ್ಲಿ ಖಾದಿ ಭಾರತದ ಸ್ವಾತಂತ್ರ್ಯ ಧ್ವಜ.

ಖಾದಿ ಮನೋಭಾವ ಬಂದರೆ ಪದಾರ್ಥಗಳ ತಯಾರಿ ಮತ್ತು ಹಂಚಿಕೆ ಕೇಂದ್ರೀಕೃತವಾಗಿರುವುದುಹೋಗಿ ಸಾಲಾಗಿ ಬೇರೆಬೇರೆಯಾಗಬೇಕು.ಆದುದರಿಂದ ಪ್ರತಿಹಳ್ಳಿಯು ತನಗೆ ಬೇಕಾದಷ್ಟನ್ನು ತಯಾರಿಸಿ ಸ್ವಯಂಪೂರ್ಣವಾಗಿರಬೇಕು. ಪಟ್ಟಣಗಳಿಗಾಗಿಯೂ ಸ್ವಲ್ಪ ತಯಾರಿಸಬೇಕು. ದೊಡ್ಡ ದೊಡ್ಡ ಕೈಗಾರಿಕೆಗಳು ಕೇಂದ್ರೀಕೃತವಾಗಿ ರಾಷ್ಟ್ರದ ಸ್ವತ್ತಾಗುವುದು ಅನಿವಾರ್ಯ. ಆದರೆ ಅದು ಹಳ್ಳಿಯ ರಾಷ್ಟ್ರ ಜೀವನದಲ್ಲಿ ಕೊನೆಯ ಭಾಗ.

ಖಾದಿಯ ಅರ್ಥ ಹೀಗೆ ಹೇಳಿದ ಮೇಲೆ ಕಾಂಗ್ರೆಸ್ಸಿನವರು, ಖಾದಿಯ ಏಳಿಗೆಗೆ ಮಾಡಬೇಕಾದುದೇನು ಎಂಬುದನ್ನು ಹೇಳುತ್ತೇನೆ. ಖಾದಿ ತಯಾರಿಯಲ್ಲಿ ಹತ್ತಿ ಬೆಳೆಯುವುದರಿಂದ ಮೊದಲು ಮಾಡಿ ಬಟ್ಟೆ ಸಿದ್ಧವಾಗುವವರೆಗಿನ ಎಲ್ಲಾ ಬಾಬುಗಳನ್ನೂ ಎಲ್ಲಾ ಹಳ್ಳಿಗಳಲ್ಲಿಯೂ ಮಾಡಬಹುದು. ಅಖಿಲ ಭಾರತ ಚರಕಾ ಸಂಘ ತನ್ನ ವ್ಯಾಪ್ತಿ ನಡೆಯುತ್ತಿರುವ ಹಳ್ಳಿಗಳಲ್ಲೆಲ್ಲಾ ಈ ಎಲ್ಲಾ ಕೆಲಸಗಳನ್ನೂ ಮಾಡುತ್ತಿದೆ. ಅದರ ಅಂಕಿ ಅಂಶಗಳು ಹೀಗಿವೆ.

1942ನೆ ಇಸವಿಯಲ್ಲಿ ಖಾದಿ ಕೆಲಸ 13451 ಹಳ್ಳಿಗಳಲ್ಲಿ ನಡೆಯಿತು. 19645 ಹರಿಜನರು 57378 ಮುಸಲ್ಮಾನರು, ಉಳಿದವರು ಹಿಂದುಗಳು. ಅಂತೂ ಒಟ್ಟು 275146 ಹಳ್ಳಿಯವರಿಗೆ ಕೆಲಸ ದೊರೆಯಿತು. ನೂಲುವವರಿಗೂ 3485609 ರೂ. ಕೂಲಿ ಕೊಟ್ಟಿತು. ನೂಲುವವರಲ್ಲಿ ಬಹು ಸಂಖೆ ಸ್ತ್ರೀಯರು.


ಕಾಂಗ್ರೆಸ್‌ನವರೆಲ್ಲಾ ಶ್ರದ್ಧೆಯಿಂದ ಕೆಲಸ ಮಾಡಿದರೆ ಇವರ ನೂರರಷ್ಟು ಕೆಲಸ ಮಾಡಬಹುದು. ಈ ಕೈಗಾರಿಕೆಯನ್ನು ಉದ್ದೇಶ ಪೂರ್ವಕವಾಗಿ ನಾಶ ಮಾಡಿದಂದಿನಿಂದ ಹಳ್ಳಿಯವರ ಬುದ್ಧಿಯೇ ಮಂಕಾಗಿದೆ. ಅವರು ಸೋಮಾರಿಗಳಾಗಿದ್ದಾರೆ. ಅವರ ಸ್ಥಿತಿ ದನಗಳ ಸ್ಥಿತಿಗಿಂತ ಕೀಳಾಗಿದೆ.

ಕಾಂಗ್ರೆಸ್ ನಿಯಮದಂತೆ ಕಾಂಗ್ರೆಸ್‌ನವರು ನಡೆಯುವುದಾದರೆ ಅವರು ಚರಕಾ ಸಂಘದ ಖಾದಿ ಕಾರ್ಯದಲ್ಲಿ ಭಾಗಿಗಳಾಗಬೇಕು.

* * *

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರಿನಲ್ಲಿ ಖಾದಿ ಕಾರ್ಯಕ್ಷೇತ್ರದ ಉಗಮ

ಶ್ರೀ ನಿಟ್ಟೂರು ಶ್ರೀನಿವಾಸರಾಯರು



ಪೂಜ್ಯ ಗಾಂಧೀಜಿಯವರು 1925ರಲ್ಲಿ ತಮ್ಮ ನೇತೃತ್ವದಲ್ಲಿ ಅಖಿಲ ಭಾರತ ಚರಕಾ ಸಂಘವನ್ನು ಸ್ಥಾಪಿಸಿದರು. ಅದರಂತೆ ದೇಶದ ಹಲವಾರು ಪ್ರಾಂತಗಳಲ್ಲಿ ಚರಕಾ ಸಂಘಗಳು ತಲೆ ಎತ್ತಿದವು. ದೇಶೀ ರಾಜರ ಆಡಳಿತದಲ್ಲಿದ್ದ ಪ್ರಾಂತ್ಯಗಳಲ್ಲಿ ಸಂಘಗಳು ತಲೆ ಎತ್ತಲು ಅವಕಾಶವಿರಲಿಲ್ಲ. 1927 ರಲ್ಲಿ ಮಹಾತ್ಮ ಗಾಂಧಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿ ನಂದಿ ಬೆಟ್ಟದ ಆರೋಗ್ಯಧಾಮಕ್ಕೆ ಆಗಮಿಸಿದ್ದರು. ಇವರ ಯೋಗಕ್ಷೇಮವನ್ನು ನೋಡಿಕೊಳ್ಳಲು ಸುಪ್ರಸಿದ್ಧ ಗಾಂಧಿ ಅನುಯಾಯಿಗಳಾಗಿದ್ದ ಶ್ರೀ ಸಂಪದ್ಗಿರಿರಾಯರು, ಶ್ರೀ ನಿಟ್ಟೂರು ಶ್ರೀನಿವಾಸರಾಯರೂ, ಶ್ರೀ ಸದಾಶಿವ ಮೊದಲಿಯಾರ್‌ರವರೂ ಹಾಗೂ ಕರ್ನಾಟಕ ಚರಕಾ ಸಂಘದ ಕಾರ್ಯದರ್ಶಿ ಶ್ರೀ ಹಣಮಂತರಾವ್ ಕೌಜಲಗಿಯವರೂ ಮತ್ತು ಇತರ ಕೆಲವು ಪ್ರಮುಖರೂ ಸೇರಿ ಒಂದು ಸಮಿತಿಯನ್ನು ರಚಿಸಿದ್ದರು.

ಮೈಸೂರು ಸಂಸ್ಥಾನಕ್ಕೆ ಮಹಾತ್ಮ ಗಾಂಧಿಯವರ ಆಗಮನವು ಅಂದಿನ ಮೈಸೂರು ರಾಜ್ಯದ ರೆಸಿಡೆಂಟರಿಗೆ ಇಷ್ಟವಿರಲಿಲ್ಲ. ಅವರ ಆಗಮನದಿಂದ ರಾಜ್ಯದಲ್ಲಿ ರಾಜಕೀಯ ಕ್ಷೋಭೆ ಉಂಟಾಗುವುದೆಂಬ ನೆಪವೊಡ್ಡಿ ಮಹಾತ್ಮ ಗಾಂಧಿಯವರಿಗೆ ಇಲ್ಲಿಗೆ ಬರಲು ಆಸ್ಪದ ಕೊಡಬಾರದೆಂದು ರಾಜ್ಯದ ದಿವಾನರಿಗೆ ತಿಳಿಸಿದರು. ಇದಕ್ಕೆ ದಿವಾನ

ರಿಂದ ಉತ್ತರ ಬರಲಿಲ್ಲ. ವೈಸ್‌ರಾಯರು ಮಹಾರಾಜರಿಗೆ ಈ ವಿಚಾರವಾಗಿ ಪತ್ರ ಬರೆದರು. ಅದಕ್ಕೆ ಉತ್ತರವಾಗಿ ಮಹಾರಾಜ ಶ್ರೀ ಕೃಷರಾಜವಡೆಯರು ಮಹಾತ್ಮ ಗಾಂಧಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿ ನಮ್ಮಲ್ಲಿಗೆ ಬರುತ್ತಿದ್ದಾರೆ. ಇವರಲ್ಲಿ ಯಾವ ರಾಜಕೀಯವೂ ಇಲ್ಲ. ಹೆಸರಾಂತ ಒಬ್ಬ ಮಹಾನ್ ವ್ಯಕ್ತಿ ತನ್ನ ಆರೋಗ್ಯ ರಕ್ಷಣೆಗಾಗಿ ಬರುತ್ತಿರುವಾಗ ಅದನ್ನು ನಿರಾಕರಿಸುವುದು ಧರ್ಮವಲ್ಲ ಎಂದು ಬರೆದರು. ಅಲ್ಲಿಗೆ ಈ ಪ್ರಕರಣ ಮುಗಿಯಿತು.

ಗಾಂಧೀಜಿಯವರ ವಾಸ್ತವ್ಯ ಸಮಯದಲ್ಲಿ ಅವರ ಊಟ ಉಪಚಾರ ಹಾಗೂ ಇತರ ವಿಶಿಷ್ಟ ಕಾರ್ಯಗಳನ್ನು ಸುವ್ಯವಸ್ಥೆಯಿಂದ ನೋಡಿಕೊಳ್ಳಲು ಸಮರ್ಥರಾದ ಒಬ್ಬ ವ್ಯಕ್ತಿಯ ತಲಾಶೆ ನಡೆಯಿತು. ಬೆಂಗಳೂರು ಟಾಟಾ ವಿಜ್ಞಾನ ಮಂದಿರದಲ್ಲಿ ಸ್ಕಾಲರ್ ಆಗಿದ್ದ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ B.A.,B.Sc. ಇವರು ಈ ಕೆಲಸ ನಿರ್ವಹಿಸಲು ಮುಂದಾದರು. ಇವರು ಒಳ್ಳೇ ಮೇಧಾವಿ, ಉತ್ಸಾಹ ಶೀಲರು ಹಾಗೂ ಗಾಂಧೀಜಿಯವರ ಆದರ್ಶಗಳಿಗೆ ಮನಸೋತು ಅವರ ಪರಿಚರ್ಯೆಯ ಕೈಂಕರ್ಯವನ್ನು ಕೈಗೊಂಡರು.

ಶ್ರೀಯುತರು ಮೊದಲಿನಿಂದಲೂ ಸೇವಾ ಮನೋವೃತ್ತಿಯವರಾಗಿದ್ದು ಕಾಲೇಜಿನಲ್ಲಿ ಓದುತ್ತಿರುವಾಗ ವಿದ್ಯಾರ್ಥಿ ಸಂಘದ ಸ್ಥಾಪಕರಲ್ಲೊಬ್ಬರಾಗಿ ಕಾರ್ಮಿಕರ ಪುರೋವೃದ್ಧಿ ಮೊದಲಾಗಿ ಹಲವು ಸಮಾಜ ಸೇವೆಯಲ್ಲಿ ಪ್ರವೃತ್ತರಾಗಿದ್ದರು. ಇವರು ಗಾಂಧೀಜಿಯವರ ಕರೆಗೆ ಓಗೊಟ್ಟು ಇನ್ನೂ ಅಭ್ಯಾಸದಲ್ಲೇ ತೊಡಗಿದ್ದ ತಮ್ಮ ಟಾಟಾ ವಿಜ್ಞಾನ ಮಂದಿರದಿಂದ ಹೊರಬಂದು ತಮಿಳ್ನಾಡು ಚರಕಾ ಸಂಘದ ವತಿಯಿಂದ ನಡೆಯುತ್ತಿದ್ದ ಬೆಂಗಳೂರು ಕೋಟೆ ವಸ್ತ್ರಾಲಯದಲ್ಲಿ ಕೇವಲ ತಿಂಗಳಿಗೆ 25 ರೂ. ವೇತನದಲ್ಲಿ ಖಾದಿಕಾರ್ಯಕ್ಕೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಈ ಸಂಸ್ಥೆಯಲ್ಲಿ ಮದ್ರಾಸಿನವರೇ ಆಗಿದ್ದ ಆಗ ಕಲ್ಕಿ ಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಸದಾಶಿವಂ ಎಂಬುವರು ವ್ಯವಸ್ಥಾಪಕರಾಗಿದ್ದರು.

ಶ್ರೀ ರಾಜಾರಾಮಯ್ಯಂಗಾರ್‌ರವರ ಖಾದಿ ಬಗ್ಗೆ ಇರುವ ಆಸಕ್ತಿ ಶ್ರದ್ಧಾಭಕ್ತಿಗಳು ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರ ದೃಷ್ಟಿಗೆ ಬಿದ್ದು ಇವರನ್ನು ತಮ್ಮ ತಿರುಚಂಗೋಡು ಆಶ್ರಮಕ್ಕೆ ಕರೆಸಿಕೊಳ್ಳುವ ಉದ್ದೇಶ ಹೊಂದಿದ್ದರು. ಈ ಅವಧಿಯಲ್ಲಿ ಮಹಾತ್ಮರ ಆಗಮನದ ಕಾರಣದಿಂದ ಮೈಸೂರು ರಾಜ್ಯದಲ್ಲಿ ಚರಕಾ ಸಂಘ ರಚಿಸುವ ಆಲೋಚನೆಯೂ ಮೇಲ್ಕಂಡ ಸಮಿತಿಯವರಿಂದ ನಡೆದಿತ್ತು. ಈ ಉದ್ದೇಶ ಸಾಧನೆಗಾಗಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿಯವರು ಶ್ರೀ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರು (ಹಾಗೂ ಕರ್ನಾಟಕ ಚರಕಾ ಸಂಘದ ಕಾರ್ಯದರ್ಶಿ ಶ್ರೀ ಹಣಮಂತರಾವ್ ಕೌಜಲಗಿಯವರು) ಆಗಿನ ಮಂತ್ರಿಗಳಾಗಿದ್ದ

ಶ್ರೀ ಎಮ್. ಎನ್. ಕೃಷ್ಣರಾಯರ ಭೇಟಿಗಾಗಿ ಅವರ ಮನೆಗೆ ಹೋದರು. ಶ್ರೀಯುತರು ಇವರುಗಳು ಹೋಗಿದ್ದ ಸಮಯದಲ್ಲಿ ತಮ್ಮ ಮನೆಯ ಮುಂದಿನ ಕೊಠಡಿಯಲ್ಲಿ ಒಂದು ಚಾಪೆಯ ಮೇಲೆ ಕುಳಿತು ಒಂದು ಡೆಸ್ಕನ್ನು ಮುಂದಿರಿಸಿಕೊಂಡು ಆಫೀಸ್ ಫೈಲುಗಳನ್ನು ನೋಡುತ್ತಿದ್ದರು. ಇವರುಗಳು ಬಂದುದನ್ನು ಗಮನಿಸಿ. ಕುರ್ಚಿ ತಂದು ಹಾಕುವಂತೆ ಸೇವಕನಿಗೆ ಅಪ್ಪಣೆ ಮಾಡಿದರು. ಅದಕ್ಕೆ ಬಂದಿದ್ದವರು "ತಾವು ದೊಡ್ಡಮನುಷ್ಯರು, ಪ್ರತಿಷ್ಠಿತ ವ್ಯಕ್ತಿ, ತಾವು ನೆಲದ ಮೇಲೆ ಕುಳಿತಿರುವಾಗ ನಮಗೆ ಕುರ್ಚಿ ಏಕೆ? ನಾವೂ ಚಾಪೆಯ ಮೇಲೆ ಕೂಡುತ್ತೇವೆ" ಎಂದು ಹೇಳಿ ಮಾತಿಗಾರಂಭಿಸಿದರು

ಶ್ರೀ ಎಮ್. ಎನ್. ಕೃಷ್ಣರಾಯರೊಂದಿಗೆ ವಿಚಾರ ವಿಮರ್ಶೆ ನಡೆದು, ರಾಜ್ಯದಲ್ಲೂ ಖಾದಿ ಕಾರ್ಯ ಆರಂಭ ಮಾಡಲು ಅವರಿಂದ ಅನುಮತಿ ದೊರಕಿಸಿಕೊಂಡರು. ಆಗಿನ ಕಾಲ ಬ್ರಿಟಿಷರ ಆಡಳಿತದ ಅವಧಿ. ಖಾದಿ ಕೆಲಸದಲ್ಲೂ ಏನೋ ರಾಜಕೀಯವಿದೆ ಎಂಬ ಭಾವನೆ. ಇಂತಹ ಪ್ರತಿಕೂಲ ವಾತಾವರಣದ ಸಮಯದಲ್ಲಿ ಈ ದಿಟ್ಟಕಾರ್ಯವನ್ನು ರಾಜ್ಯವು ಕೈಗೊಂಡಿತು.

ಈ ಕೆಲಸವನ್ನು ಎಲ್ಲಿ ಆರಂಭಿಸಬೇಕೆಂಬ ಬಗ್ಗೆ ಚರ್ಚೆ ನಡೆದು, ಇದನ್ನು ಮೈಸೂರು ಜಿಲ್ಲೆಯಲ್ಲಿ ಆರಂಭಿಸಬೇಕೆಂದು ತೀರ್ಮಾನಿಸಲಾಯ್ತು. ಇದಕ್ಕಾಗಿ ಜಿಲ್ಲೆಯಲ್ಲಿ ಅದರಲ್ಲೂ ಮುಖ್ಯವಾಗಿ ನಂಜನಗೂಡು ತಾಲ್ಲೋಕಿನ ಬದನವಾಳು, ಬಸವಟ್ಟಿಗೆ ನೇರಳೆ, ದೇವನೂರು, ತಗಡೂರು, ಈ ಗ್ರಾಮಗಳಲ್ಲಿ ಸಂಚರಿಸಿದ್ದಾಯ್ತು. ಬದನವಾಳು ಗ್ರಾಮವು ಈ ಕೆಲಸಕ್ಕೆ ಉತ್ತಮವಾದುದೆಂದೂ ಈ ಗ್ರಾಮದಲ್ಲೇ ಕಾರ್ಯಾರಂಭ ಮಾಡುವುದೆಂದೂ ತೀರ್ಮಾನಿಸಲಾಯ್ತು.

ಬದನವಾಳು ಗ್ರಾಮ ಹಾಗೂ ಅದರ ಸುತ್ತಮುತ್ತಲ ಗ್ರಾಮದಲ್ಲಿ ಚರಕಾದಿಂದ ನೂಲುವ ಹಾಗೂ ಈ ನೂಲಿನಿಂದ ದಪ್ಪ ಬಟ್ಟೆ ದುಪ್ಪಟಿ, ಹಚ್ಚಕೆ ಸೀರೆ ಬಟ್ಟೆ ಮೊದಲಾದವನ್ನು ನೇಯುವ ಕಸುಬು ಅಲ್ಲಲ್ಲಿ ಜಾರಿಯಲ್ಲಿದ್ದಿತು. ಸಮೀಪದ ತಗಡೂರು ಗ್ರಾಮದಲ್ಲಿಯೂ ಈ ವಾತಾವರಣವು ಶ್ರೀ ತಗಡೂರು ರಾಮಚಂದ್ರ ರಾಯರಿಂದ ನಿರ್ಮಾಣವಾಗಿತ್ತು. ಅಲ್ಲದೆ ನಂಜನಗೂಡು ಚಾಮರಾಜನಗರದ ರೈಲು ಮಾರ್ಗವೂ ಬದನವಾಳದ ಮೇಲೆ ಹಾದು ಹೋಗಿದ್ದಿತು. ಈ ಎಲ್ಲ ಕಾರಣದಿಂದ ಈ ಗ್ರಾಮವು ಸೂಕ್ತವಾಗಿ ಕಂಡಿತು.

ಬದನವಾಳು ಖಾದಿ ಕ್ಷೇತ್ರಕ್ಕೆ ಹೆಸರಿರುವುದೂ ಒಂದು ಆಲೋಚನಾ ವಿಷಯವಾಗಿ ಚರ್ಚೆ ನಡೆದು, ಇದಕ್ಕೆ ಬದನವಾಳು ನೂಲುವ ಪ್ರಾಂತ್ಯ (Badanval Spinning Circle) ಎಂಬ ಹೆಸರಿನಿಂದ ಕಾರ್ಯಾರಂಭ ಮಾಡಲು ತೀರ್ಮಾನವಾಯ್ತು. ಶ್ರೀ

ಎಸ್. ವಿ. ರಾಜಾರಾಮಯ್ಯಂಗಾರ್ರವರೊಡನೆ, ಕರ್ನಾಟಕ ಚರಕಾ ಸಂಘದ ಕಾರ್ಯ ಕರ್ತರಾದ ದಾರ್ವಾಡದ ಶ್ರೀ ಸಿದ್ಧೂರಾವ್ ಪೂಜಾರಿಯವರನ್ನು ಈ ಪ್ರಾಂತ್ಯದಲ್ಲಿ ಖಾದಿ ಪ್ರಚಾರಕ್ಕಾಗಿ ಸಹಾಯಕರನ್ನಾಗಿ ಕಳಿಸಿಕೊಡಲಾಯ್ತು. ಅಂತು 1-11-1927 ರಲ್ಲಿ ಬದನವಾಳು ನೂಲುವ ಪ್ರಾಂತ್ಯದ ಉದಯವಾಗಿ ಅಸ್ತಿತ್ವಕ್ಕೆ ಬಂದಿತು. ಸರ್ಕಾರವು ತನ್ನ ಕೈಗಾರಿಕೆ ಇಲಾಖೆಯಲ್ಲಿ ಇದಕ್ಕೊಂದು ಸ್ಥಾನವನ್ನು ಕೊಟ್ಟು ಕೆಲಸ ವನ್ನು ಯಶಸ್ವಿಯಾಗಿ ನಡೆಸಲು ಅನುಕೂಲ ಮಾಡಿಕೊಟ್ಟಿತು.

* * *

ಗಾಂಧಿ ವಾಣಿ

ಮದ್ಯಪಾನ ಪ್ರತಿಬಂಧದ ಬಗ್ಗೆ ಇವು ನನ್ನ ಸೂಚನೆಗಳು

೧. ಅವಶ್ಯವಾದ ಕಾನೂನು ಮಾಡಿ ಪಾನಪ್ರತಿಬಂಧ ಮಾಡಬೇಕು

೨. ಜನರಲ್ಲಿ ಇದರಿಂದಾಗುವ ಅನರ್ಥದ ಬಗ್ಗೆ ಪ್ರಚಾರ ಮಾಡಬೇಕು.

೩, ಈಗಿರುವ ಹೆಂಡದಂಗಡಿಗಳಲ್ಲಿ ನಿರ್ಧಿಷ್ಟವಾದ ಪೋಷಕ ತಿಂಡಿಗಳನ್ನು ಇಟ್ಟು ಮಾರಬಹುದು.

೪. ಅಮಲೇರುವ ಪದಾರ್ಥಗಳ ಮಾರಾಟದಿಂದ ಬರುವ ಹಣವನ್ನು ರಾಷ್ಟ್ರದ ಮಕ್ಕಳ ವಿದ್ಯಾಭ್ಯಾಸಕ್ಕಾಗಲಿ ಜನಹಿತ ಸಾಧನೆಗಾಗಲಿ ಉಪಯೋಗಿಸುವುದು ಪಾಪ. ಅಂಥ ವಿಚಾರಗಳನ್ನು ಪೂರ್ತಿ ಬಿಟ್ಟುಬಿಡಬೇಕು.

ನಾವು ಈ ಅಮಲೇರುವ ಪಸ್ತುಗಳನ್ನು ತ್ಯಾಗ ಮಾಡಲೇಬೇಕು. ನಾವು ಈ ದುಶ್ಚಟವನ್ನು ಸಮೂಲ ಕಿತ್ತೆಸೆಯುವಲ್ಲಿ ಯಶಸ್ವಿಯಾದರೆ, ನಮ್ಮ ರಾಷ್ಟ್ರದ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸರಕಾರಕ್ಕೆ ಬೇರೆ ಮಾರ್ಗಗಳು ದೊರೆಯ ಬಲ್ಲವೆಂಬುದು ಅನುಭವದ ಮಾತಾಗಿದೆ.

ಮೈಸೂರು ಕರ್ನಾಟಕದಲ್ಲಿ ಖಾದಿಯ ಮರುಹುಟ್ಟು

ಎಸ್. ವಿ. ರಾಜಾರಾಮಯ್ಯಂಗಾರ್

ಕೈರಾಟೆಯ ಪುನರುಜ್ಜೀವನಕ್ಕಾಗಿಯೇ ಮಹಾತ್ಮಗಾಂಧಿಯವರು 1925ನೇ ಇಸವಿಯಲ್ಲಿ ಅಖಿಲಭಾರತ ಚರಕಾ ಸಂಘ ಎಂಬ ಸಂಸ್ಥೆಯನ್ನು ವ್ಯವಸ್ಥೆ ಮಾಡಿದರು. ರಾಜಕೀಯ ಜ್ವರದಿಂದ ಪೀಡಿತವಾಗಬಾರದೆಂಬುದೇ ಅವರ ಆಶಯ. ಆದರೆ ಅದರ ತಾಪದಿಂದ ಪೂರ್ಣ ತಪ್ಪಿಸಿ ಕೈತ್ಯಾಗರ ಬಂಧನದಲ್ಲಿಡುವುದು ಹೇಗೆ ಸಾಧ್ಯ ? ಖಾದಿ ಮತ್ತು ರಾಜಕೀಯ ಎರಡೂ ಒಂದೇ ಕಾಲದ ಬ್ರಹ್ಮ ಸೃಷ್ಟಿಗಳು. ಕೂಡಿಯೇ ವೃದ್ಧಿ, ಕೂಡಿಯೇ ಕ್ಷಯ.

1927 ನೇ ಇಸವಿಯ ಆದಿಭಾಗದಲ್ಲಿ ಗಾಂಧಿಯವರು ಖಾದಿ ಉದ್ಯಮಕ್ಕೆ ಪೋಷಕವಾಗಿ ಹಣಸಂಗ್ರಹಣೆ ಮಾಡಲು ದಕ್ಷಿಣ ಭಾರತದ ಪ್ರವಾಸ ಕೈಗೊಂಡರು. ಪ್ರಾಂತೀಯ ಮುಖಂಡರು ಪ್ರವಾಸದ ಉದ್ದಿಶ್ಯವನ್ನು ಸಫಲಗೊಳಿಸಲು, ಪೂರ್ವ ಭಾವಿಯಾಗಿ ಜನರಲ್ಲಿ ಎಚ್ಚರವುಂಟುಮಾಡಲು ತಮ್ಮ ತಮ್ಮ ಪ್ರಾಂತ್ಯದಲ್ಲಿ ಪರ್ಯಟನೆ ಮಾಡಿದರು. ಇವಕ್ಕಾಗಿ ಮೈಸೂರು ಪ್ರಾಂತ್ಯದಲ್ಲಿ ಪ್ರವಾಸ ಮಾಡಿದ ಶಿಷ್ಯತ್ರಯರು ಶ್ರೀ ಶಂಕರಲಾಲ್ ಬ್ಯಾಂಕರ್, ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್ಯರು ಮತ್ತು ದಿವಂಗತರಾದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು. ಬೆಂಗಳೂರಿನಲ್ಲಿ ಒಂದು ಸ್ವಾಗತ ಸಮಿತಿಯನ್ನು ಏರ್ಪಡಿಸಲಾಯಿತು. ದಿ॥ ವೀರ್ ಹಂಜಾಹುಸೇನರು, ಅಧ್ಯಕ್ಷ ರಾಗಲು ಒಪ್ಪಿದರು ಹಾಗೂ ದಿ॥ ಕಾಮಿಂಡಿ ಸುಬ್ಬರಾಮುಶೆಟ್ಟರು ಕೋಶಾಧ್ಯಕ್ಷರಾದರು. ಈ ಇಬ್ಬರು ಮಹನೀಯರ ನಿಷ್ಠಾವಂತ ಸೇವೆಯನ್ನು ಸ್ಮರಿಸಲೇಬೇಕು. ಇದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿಯೂ ಸ್ವಾಗತ ಸಮಿತಿಗಳು ಏರ್ಪಾಡಾದವು.

ಗಾಂಧೀಜಿಯವರು 1927ರ ಮಾರ್ಚಿ ಸುಮಾರಿಗೆ ಕರ್ನಾಟಕದ ಪ್ರವಾಸವನ್ನು ಬೆಳಗಾಂ ಜಿಲ್ಲೆಯಿಂದ ಪ್ರಾರಂಭಿಸಿದರು. ಪ್ರವಾಸದಲ್ಲಿ ಇದ್ದಕ್ಕಿದ್ದಂತೆ ಅವರಿಗೆ ರಕ್ತ ಒತ್ತಡದ ಏರಿಕೆಯಿಂದ ಅಸ್ವಸ್ಥರಾದರು. ಮುಂದಿನ ಕಾರ್ಯಕ್ರಮಗಳೆಲ್ಲಾ ಅವರ ಆರೋಗ್ಯ ಸುಧಾರಿಸುವವರೆಗೆ ಮುಂದೂಡಬೇಕಾದ ಅನಿವಾರ್ಯ ಪ್ರಸಂಗ ಪ್ರಾಪ್ತವಾ

ಯಿತು. ವೈದ್ಯರ ಕಟ್ಟಪ್ಪಣೆ ಮೇರೆಗೆ ಗಾಂಧಿಜಿಯವರಿಗೆ ಕೆಲವು ತಿಂಗಳುಗಳ ನಿರ್ಬಂಧಿತ ವಿಶ್ರಾಂತಿಯು ವಿಧಿಸಲ್ಪಟ್ಟಿತು. ಇನ್ನು ವಿಶ್ರಾಂತಿಗೆ ಅನುಕೂಲವಾದ ಸ್ಥಳವೂ ಅನುಗುಣವಾದ ವಾತಾವರಣ ಅಷ್ಟೇ ಅವಶ್ಯಕಗಳಾದವು. ಶ್ರೀ ರಾಜಗೋಪಾಲಾಚಾರಿಯವರೂ ಮತ್ತು ಶ್ರೀ ಶಂಕರಲಾಲ್ ಬ್ಯಾಂಕರ್‌ರವರೂ ಬೆಂಗಳೂರಿಗೆ ಧಾವಿಸಿ ಬಂದರು. ಸ್ನೇಹಿತರಲ್ಲಿ ವಿಚಾರ ವಿನಿಮಯ ಮಾಡಿದ ಫಲವಾಗಿ ನಂದೀಬೆಟ್ಟದ ಮೇಲೆ ಸರ್ಕಾರಿ ಅತಿಥಿ ವಾಸಗೃಹಗಳನ್ನು ನೋಡಲು ಹೋದರು. ಲೇಖಕನೂ ಅವರ ಚೇಲನಾಗಿ ಹೋಗಿದ್ದನು. ಈ ಪ್ರಶಾಂತ ಪ್ರಕೃತಿ ಸಾನಿಧ್ಯದಲ್ಲಿ ಗಾಂಧೀಜಿಯವರ ವಿಶ್ರಾಂತಿಗಾಗಿಯೂ ಶರೀರವನ್ನು ಪುನಶ್ಚೈತನ್ಯಗೊಳಿಸುವುದಕ್ಕೂ ಪ್ರಶಸ್ತವಿದೆ ಎಂಬುದನ್ನು ವೈದ್ಯರ ಸಲಹೆಯಿಂದಲೂ ಬಲಪಡಿಸಿಕೊಂಡರು. ದಿವಾನರಾಗಿದ್ದ ದಿ॥ ಮಿರ್ಜಾ ಇಸ್ಮಾಯಿಲ್‌ರವರನ್ನು ಸಂದರ್ಶಿಸಿದರು. ಅವರು ಒಡನೆಯೇ ಮಹಾರಾಜ ಸರ್ಕಾರದ ಅತಿಥಿಯಾಗಿ ನಂದೀಬೆಟ್ಟದಲ್ಲಿ ಬಿಡಾರ ಮಾಡಲು ಒಪ್ಪಿಗೆಯನ್ನು ಹರ್ಷಚಿತ್ತದಿಂದ ತಿಳಿಯಪಡಿಸಿದರು.

1927ನೇ ಇಸವಿಯ ಮಧ್ಯಭಾಗ ಇರಬಹುದು. ಗಾಂಧಿಜೀಯವರು ಮಿತಶಿಷ್ಯ ಪರಿವಾರ ಸಮೇತ ವಿಶ್ರಾಂತಿ ಬಿಡಾರವನ್ನು ತಲಪಿದರು. ಮೇ ತಿಂಗಳ ಕೊನೆಯ ವೇಳೆಗೆ ಅಧಿಕ ಮಳೆಯಿಂದಲೂ ಶೈತ್ಯಾಧಿಕ್ಯದಿಂದಲೂ ನಂದೀ ವಾಸವನ್ನು ಮೊಟಕು ಮಾಡಿ ಬೆಂಗಳೂರಲ್ಲಿಯ ಕುಮಾರಪಾರ್ಕ್ ಅತಿಥಿ ಗೃಹಕ್ಕೆ ಪರಿವಾರ ಸಮೇತ ಬಂದರು. ಇಲ್ಲಿ ಆಗಸ್ಟ್ ತಿಂಗಳ ಮೂರನೇ ವಾರದವರೆಗೂ ಇದ್ದರು. ಈ ಅವಧಿಯಲ್ಲಿಯೇ ಬೆಂಗಳೂರು ದೇಶೀಯ ವಿದ್ಯಾಶಾಲೆಯ ಆವರಣದಲ್ಲಿ ಪ್ರಥಮ ಬಾರಿಗೆ ಅಖಿಲಭಾರತ ಖಾದಿ ಪ್ರದರ್ಶನವೊಂದು ಏರ್ಪಾಡಾಯಿತು. ಗಾಂಧೀಜಿಯವರು ಉದ್ಘಾಟನೆ ಮಾಡಿ ಭಾಷಣವನ್ನು ಮಾಡಿದರು ಕುಮಾರಪಾರ್ಕಿನಲ್ಲಿಯೇ ದಿವಾನರಿಗೂ ಮಹಾತ್ಮರಿಗೂ ನಡೆದ ಪರಸ್ಪರ ಸಂಭಾಷಣೆ ಫಲವಾಗಿ ಮೈಸೂರು ಸರ್ಕಾರವೇ ಒಂದು ಖಾದಿ ಕೇಂದ್ರವನ್ನು ನಡೆಯಿಸುವುದೆಂದು ನಿಶ್ಚಿತವಾಯಿತು. ಈ ದೇಶದಲ್ಲಿಯೇ ಒಂದು ಸರ್ಕಾರಿ ಖಾದಿ ಕೇಂದ್ರದ ಹುಟ್ಟಿಗೆ ಗಾಂಧೀಜಿಯವರ ಈ ವಿಶ್ರಾಂತಿ ಸಮಯವೇ ಕಾರಣವಾಯಿತೆನ್ನಬಹುದು. ಆಡಳಿತ ಮತ್ತು ಹಣಕಾಸಿನ ಹೊಣೆಗಾರಿಕೆ ಸರ್ಕಾರದವರದ್ದೇ ಆದರೂ ಖಾದಿ ಮಾರಾಟ ಮತ್ತು ಚಟುವಟಿಕೆಗಳ ಮಾರ್ಗದರ್ಶನದ ಭಾರವನ್ನು ಚರಕಾ ಸಂಘದವರೇ ಸಂತೋಷದಿಂದ ವಹಿಸಿಕೊಂಡರು.

1926ನೇ ಇಸವಿಯಲ್ಲಿಯೇ ಬೆಂಗಳೂರು ಕೋಟೆಯಲ್ಲಿ ಚರಕಾ ಸಂಘದವರು ವಸ್ತ್ರಾಲಯವನ್ನು ತೆರೆದಿದ್ದರು. ಇದರ ಪ್ರಥಮ ವ್ಯವಸ್ಥಾಪಕರು ಶ್ರೀ ಟಿ. ಸದಾಶಿವಂರವರು. ಅವರು "ಕಲ್ಕಿ" ಎಂಬ ತಮಿಳು ವಾರಪತ್ರಿಕೆಯ ಸಂಪಾದಕರು. ಅವರ ಸಹಾಯಕನಾಗಿದ್ದುದರ ಸವಿನೆನಪು ಅಚ್ಚಳಿಯದೆ ಉಳಿದಿದೆ ಈ ಲೇಖಕನ ಮನಸ್ಸಿನಲ್ಲಿ.

ಆ ವೇಳೆಗೆ ಮೈಸೂರಿನಲ್ಲಿ ಖಾದಿ ಪರಸ್ಪರ ಸಹಾಯ ಸಂಘದವರ ಭಂಡಾರವೂ ತಗಡೂರಿನಲ್ಲಿ ಶ್ರೀರಾಮಚಂದ್ರರಾಯರ ನೇತೃತ್ವದಲ್ಲಿ ಖಾದಿ ಸಂಸ್ಥೆಯೂ ಜನ್ಮ ತಾಳಿದ್ದವು. ಮೈಸೂರು ವಾಸಿಗಳಾದ ಶ್ರೀ ಪೊನ್ನಚೆಟ್ಟಿ ಎಂಬ ಉತ್ಸಾಹೀ ತರುಣ ವ್ಯಾಪಾರಿ ನಂಜನಗೂಡು ತಾಲ್ಲೂಕು ಬದನವಾಳು, ದೇವನೂರು, ನೆರೆಗ್ರಾಮಗಳಲ್ಲಿ ರಾಟೆ ನೂಲನ್ನು ಕೊಂಡು ಮೈಸೂರಿನಲ್ಲಿ ಖಾದಿ ಬಟ್ಟೆ ನೇಯಿಸುತ್ತಿದ್ದರು. ಅವರ ಉದ್ಯಮಕ್ಕೆ ಚರಕಾ ಸಂಘದವರೂ ಸ್ವಲ್ಪ ಧನ ಸಹಾಯ ಮಾಡಿದ್ದರು. ಶ್ರೀ ಶಂಕರಲಾಲ್ ಬ್ಯಾಂಕರ್‌ರವರೂ ಶ್ರೀ ಗಂಗಾಧರ ರಾವ್ ದೇಶಪಾಂಡೆಯವರೂ ಗಾಂಧೀಜಿಯವರ ಬಿಡಾರದಿಂದಲೇ ಈ ಗ್ರಾಮಗಳಿಗೆ ಭೇಟಿಕೊಟ್ಟು ಬಂದಿದ್ದರು. ಅನಂತರವೇ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಿ, ಅದೂ ಒಪ್ಪಿತವಾಗಿ ಬದನವಾಳು ನೂಲುವ ಪ್ರಾಂತ್ಯ ಎಂಬ ಹೆಸರಿಂದ ಸರ್ಕಾರಿ ಖಾದಿ ಕ್ಷೇತ್ರವು ಸ್ಥಾಪಿತವಾಯಿತು. ಇದರ ಹುಟ್ಟು ದಿನಾಂಕ 1927ನೇ ಇಸವಿ ನವೆಂಬರ್ ಒಂದನೇ ತಾರೀಖು.

ಗಾಂಧೀಜಿಯವರ ಈ ಖಾದಿ ಪ್ರವಾಸದಲ್ಲಿ ಇತರ ಕಡೆಗಳಲ್ಲಿ ಅರ್ಪಿಸಲ್ಪಟ್ಟ ನಿಧಿ ಶೇಖರಣೆಯಿಂದಾಗಿ ಹಲವು ಮಾರಾಟದ ಅಂಗಡಿಗಳನ್ನು ತೆರೆಯಲು ಅನುವಾಯಿತು. ಅಲ್ಲದೆ ಉತ್ತರ ಕರ್ನಾಟಕದಲ್ಲಿ ಸಹ ಹಲವಾರು ಉತ್ಪತ್ತಿ ಮತ್ತು ಮಾರಾಟ ಕೇಂದ್ರಗಳಿಗೂ ಕೃಷಿಧನ ದೊರೆಯಿತು. ಪ್ರಾರಂಭವಾದ ಒಂದು ದಶಕದಲ್ಲಿಯೇ ಬದನವಾಳಿನ ಸರ್ಕಾರಿ ಕ್ಷೇತ್ರವೂ ಬೆಳೆಯಿತು. ಇತರ ಜಿಲ್ಲೆಗಳಲ್ಲಿಯೂ ಖಾದಿ ಕೇಂದ್ರಗಳು ಸ್ಥಾಪನೆಗೊಂಡವು. 1947ರವರೆಗೂ ಅದೊಂದು ಬೆಳವಣಿಗೆಯ ಕಾಲವೇ ಸರಿ. ಖಾದಿಯೂ ಸ್ವಾತಂತ್ರ್ಯದ ಹಾದಿಯೂ ಆಯಿತು. ದೇಶಾದ್ಯಂತ ಖಾದಿ ಸಂದೇಶ ಮೊಳಗಿತು.

ಆಗಿನ ಖಾದಿ ಕೇಂದ್ರಗಳು ಹುಟ್ಟಿದಾಗಿನಿಂದಲೇ ಕಾರ್ಯಕರ್ತರು ರಾಟೆಗಳನ್ನು ಮನೆಗಳಿಗೆ ಹಂಚಿ ನೂಲುವುದನ್ನು ಉಪಕ್ರಮಿಸಿದರು ಎಂದು ಹೇಳಿದರೆ ತಪ್ಪು ಗ್ರಹಿಕೆಯೇ ಸರಿ. ಕ್ಷೇತ್ರಗಳಲ್ಲಿನ ಹಲವಾರು ಹಳ್ಳಿಗಳಲ್ಲಿ ನೂಲುವುದು ಒಂದು ಮನೆಗೆಲಸವಾಗಿ ಅಲ್ಲಿ ಇಲ್ಲಿ ಕಾಣಬರುತ್ತಿತ್ತು. ಅಂತಹ ಹಳ್ಳಿಗಳಲ್ಲಿ ಇನ್ನೂ ಹಲವಾರು ಮನೆಗಳಲ್ಲಿ ನೂಲುವ ಹತ್ತಿ ಬೀಜ ತೆಗೆಯುವ ಮತ್ತು ಅರಳೆ ಹಿಂಜುವ ಉಪಕರಣಗಳನ್ನು ಅಟ್ಟದ ಮೇಲೆಯಾದರೂ ಒಪ್ಪವಾಗಿ ಇಟ್ಟಿದ್ದರು. ಬಹುಷಃ ದಶಕ ತಡವಾಗಿ ಖಾದಿ ಆಂದೋಳನವು ಜನ್ಮ ತಾಳಿದ್ದರೆ ಈ ಉಪಕರಣಗಳೂ ಅಡಿಗೆ ಕಾರ್ಯಕ್ಕೋ ವಾರಾಂತ್ಯ ಬಿಸಿ ನೀರು ಸ್ನಾನ ಕರ್ಮಾದಿಗಳಿಗೋ ಪರಾಕಾಷ್ಠತೆ ಪಡೆಯುತ್ತಿದ್ದುವೇನೋ. ಅಜ್ಜಿಗಳು ನೂಲುತ್ತಿದ್ದ ನೂಲು ಮಕ್ಕಳ ಮತ್ತು ಅಜ್ಜಂದಿರ ಬೆಚ್ಚನೆ ಹೊದಿಕೆ ದುಪ್ಪಟಿಗಳಾಗಿ ಪರಿವರ್ತನೆ ಹೊಂದುತ್ತಿದ್ದುವು. ಊರ ಮಗ್ಗದಲಿಗೂ ನೇಕಾರನಿಗೂ ವೃತ್ತಿ ನಡೆಯುತ್ತಿದ್ದಿತು. ಸಂತೆಗಳಲ್ಲಿ ಇಂತಹ ದುಪ್ಪಟಿ ಕೊಳ್ಳಲಿಕ್ಕೂ ಸಿಕ್ಕುತ್ತಿದ್ದಿತು. ಅತಿ ಸಂಕುಚಿತ ಪ್ರಮಾಣದಲ್ಲಿಯಾದರೂ ನಮ್ಮ ದೇಶದ ಹಳ್ಳಿಗಾಡು ಹತ್ತಿ ಬೆಳೆಯುವ

ಪ್ರದೇಶದಲ್ಲಿ ಮೇಲೆ ವಿವರಿಸಿದಂತೆ ಉಪಯುಕ್ತ ವಸ್ತುವಿನ ಉತ್ಪತ್ತಿ ಬಳಕೆಗಳ ಪರಸ್ಪರ ಮೈತ್ರಿಯು ಸಜೀವವಾಗಿರುವುದು ಕಾಣಬರುತ್ತಿತ್ತು.

ಗಾಂಧೀಜಿಯವರು ಸೇವಾಗ್ರಾಮದಲ್ಲಿ ನೆಲೆನಿಂತ ಕಾಲದಲ್ಲಿ ಖಾದಿಯ ಜೊತೆಗೆ ಇತರ ಹಲವು ಗ್ರಾಮ ಕೈಗಾರಿಕೆಗಳೂ ಅಂಕುರಿಸಿಕೊಂಡವು. ಖಾದಿ ಉದ್ಯಮದ ಉದ್ದೇಶವನ್ನು ಪೂರ್ಣಗೊಳಿಸಲು ಇತರ ಗ್ರಾಮ ಕೈಗಾರಿಕೆಗಳು ಪೂರಕವಾಗಿ ಬಂದವು. ಈ ವಿಸ್ತೃತ ಹಂಚಿಕೆಗೆ ಮೂಲ ಪ್ರಚೋದಕರು ಅಂದರೆ ದಿ॥ ಡಾಕ್ಟರ್ ಜೆ. ಸಿ. ಕುಮಾರಪ್ಪನವರು. ಗಾಂಧೀಜಿಯವರು ತಮ್ಮ ಮನಸ್ಸಿನಲ್ಲಿ ಮೆಲಕು ಹಾಕುತ್ತಿದ್ದ ಉದ್ಯೋಗಮಯವೂ ಸ್ವಯಂಪೂರಿತವೂ ಆಗಬಲ್ಲ ಗ್ರಾಮಗಳ ಸ್ಪಷ್ಟ ಚಿತ್ರೀಕರಣ ಮಾಡಿಕೊಟ್ಟವರು ಶ್ರೀ ಜೆ. ಸಿ. ಕುಮಾರಪ್ಪನವರು. ಈಗ ಅವರಿಬ್ಬರೂ ಇಲ್ಲ. ಸಂಸ್ಥೆಗಳು ಮಾತ್ರ ಅವರ ಕೀರ್ತಿ ಧ್ವಜಪಟಗಳಾಗಿ ನಿಂತಿವೆ.

1939ನೇ ಇಸವಿಯಲ್ಲಿ ಬದನವಾಳು ಕೇಂದ್ರದಲ್ಲಿ ಪ್ರಯೋಗಾತ್ಮಕವಾಗಿ ಹಲವು ಗ್ರಾಮಕೈಗಾರಿಕೆಗಳನ್ನು ಪ್ರಾರಂಭಿಸಲಾಯಿತು. ಕೈಕಾಗದ, ಮುಂದಲಿಗೆ ನೇಯ್ಗೆ, ಬೀಳು ದನದ ಚರ್ಮದಿಂದ ಪಾದರಕ್ಷೆ ತಯಾರಿಕೆ, ಜೇನು ಕೃಷಿ, ಎಣ್ಣೆಗಾಣ ಮರದ ಚಕ್ಕೆಯಿಂದ ಭತ್ತ ಬೀಸಿ ಅಕ್ಕಿ ಮಾಡುವುದು, ಇವೇ ಕೆಲವು ಈ ಹೊಸ ಹಂತಕ್ಕೆ ಕಾರಣ ಪುರುಷರಿಬ್ಬರು ವಾರ್ಧಾದಲ್ಲಿ ತರಬೇತಿ ಹೊಂದಿ ಆದೇ ತಾನೆ ತಮ್ಮ ತವರು ಸ್ಥಳಗಳಿಗೆ ಬಂದಿದ್ದರು. ದಕ್ಷ ಮತ್ತು ಉತ್ಸಾಹೀ ತರುಣರು. ಅವರ ಪೈಕಿ ಒಬ್ಬರು ಶ್ರೀ ಟಿ. ಆರ್. ಗೋವಿಂದರಾವ್ ಆಕಸ್ಮಿಕ ಅನಾಹುತದಿಂದ ಇಹದಿಂದ ಮುಕ್ತರಾದರು. ಬಿಜಾಪುರದ ಜಿಲ್ಲೆಯಲ್ಲಿ ವಿದ್ಯಾಪೀಠದ ಅಧಿಕಾರಿಯಾಗಿ ಚಾರ್ಜ್‌ವಹಿಸಿಕೊಳ್ಳಲು ರೈಲು ನಿಲ್ದಾಣದಲ್ಲಿ ಇಳಿಯುವ ಕ್ಷಣಕ್ಕೆ ದುರ್ಘಟನೆಗೆ ಬಲಿಯಾದರು. ಅವರ ಆತ್ಮಕ್ಕೆ ಶಾಂತಿ ದೊರಕಲಿ. ಅವರು ಅಷ್ಟು ದಕ್ಷರೂ ನಿಷ್ಠಾವಂತರೂ ಆಗಿರದಿದ್ದರೆ ವಿಧಿಯ ವಕ್ರದೃಷ್ಟಿಯಿಂದ ಇನ್ನಷ್ಟು ಕಾಲವಾದರೂ ತಪ್ಪಿಸಿಕೊಳ್ಳಬಹುದಾಗಿತ್ತೇನೋ. ಇದು ತಮ್ಮ ನಂದಾವದ ಅಗಲುವಿಕೆಯಿಂದ ಉಂಟಾದ ಒಬ್ಬ ಹಿರಿಯನ ವ್ಯಸನಪೂರಿತ ಮಾತು. ನಿಷ್ಠಾವಂತ ಕಾರ್ಯಕರ್ತರಾಗಿ ಪಕ್ಷಕ್ಕೆ ಸೇರದಿದ್ದರೂ ಅವರ ಸೇವಾ ಪೋಷಿತ ಫಲವು ಕ್ಷೇತ್ರದಲ್ಲಿ ಉಳಿದುಕೊಂಡಿದೆ. ಇದೇ ಅವರ ದತ್ತಿ, ಬರುವವರಿಗೆ ಕಟ್ಟಿಟ್ಟ ಬುತ್ತಿಯಾದರೂ ವಿವೇಕಪೂರಿತ ನಿರಂತರ ಕೃಷಿಯಿಂದಲೇ ಉಣಲೂ ಉಣಬಡಿಸಲೂ ಸಾಧ್ಯ. ಹಾಗಿಲ್ಲದಿದ್ದರೆ ಎಂಥ ಕ್ಷೇತ್ರವಾದರೂ ಶಿಥಿಲ ಹೊಂದಿ ಕಂದಿ ಹೋಗುತ್ತದೆ.

* * *

ಬದನವಾಳು ಖಾದಿ ಕೇಂದ್ರದ ಹುಟ್ಟು ಪರಿಚಯ

ಶ್ರೀಮತಿ ಪಂಕಜಮ್ಮ ರಾಜಾರಾಮಯ್ಯಂಗಾರ್‌ರವರು ಹೇಳಿದಂತೆ

ಪೂಜ್ಯ ಮಹಾತ್ಮಗಾಂಧಿಯವರು ತಮ್ಮ ಆರೋಗ್ಯ ಸುಧಾರಣೆಗಾಗಿ ಬೆಂಗಳೂರಿಗೆ ಸಮೀಪದಲ್ಲಿರುವ ನಂದಿಬೆಟ್ಟಕ್ಕೆ ಬಂದರಂತೆ. ನಮ್ಮ ಯಜಮಾನರು ಬೆಂಗಳೂರು ತಾತಾ ಇನ್ಸ್ಟಿಟ್ಯೂಟಿನಲ್ಲಿ ಮೊದಲನೇ ವರ್ಗದ B.sc., ಓದುತ್ತಿದ್ದ ಕಾಲವಂತೆ. ಪೂಜ್ಯ ಗಾಂಧೀಜಿಯವರ ಸಾಮೀಪ್ಯದಲ್ಲಿದ್ದು ಸೇವೆ ಮಾಡುವ ಅವಕಾಶ ಬಂದಿದೆ. ಈಗ ಬಿಡಬಾರದೂ ಅಂತ, ತಮ್ಮ ಓದಿಗೆ ಮಂಗಳ ಹಾಕಿ ಪೂಜ್ಯ ಗಾಂಧೀಜಿಯವರ ಶಿಬಿರ ಸೇರಿದರಂತೆ.

ನಂದಿ ಬೆಟ್ಟದಲ್ಲಿ ಗಾಂಧೀಜಿಯವರನ್ನು ಕಾಣಲು ಬರುತ್ತಿದ್ದ ಅತಿಥಿಗಳು, ಅಧಿಕಾರಿಗಳು, ಸೇವಾತತ್ಪರರು ಮತ್ತು ರಚನಾತ್ಮಕವಾದ ಖಾದಿ ಕೆಲಸದಲ್ಲಿ ನುರಿತ ದೊಡ್ಡ ದೊಡ್ಡವರು. ಅದಕ್ಕೂ ಮಿಗಿಲಾಗಿ ದೊಡ್ಡ ನೇತಾರರುಗಳಾದ ಶ್ರೀ ರಾಜಾಜಿ, ಶ್ರೀ ಗಂಗಾಧರರಾವ್ ದೇಶಪಾಂಡೆ, ಹೀಗೆ ಎಷ್ಟೋ ಜನ ಬಂದು ಹೋಗುತ್ತಿದ್ದರಂತೆ. ಪೂಜ್ಯ ಮಾತೆ ಸೌ|| ಕಸ್ತೂರಿಬಾ ಗಾಂಧಿಯವರು ಆಗ ಬರುತ್ತಿದ್ದವರೆಲ್ಲರ ಊಟೋಪಚಾರದ ಮೇಲ್ವಿಚಾರಣೆ ವಹಿಸಿಕೊಂಡು ಸ್ವಯಂ ಸೇವಕರ ಸಹಾಯದಿಂದ ತಾವು ನಿರ್ವಹಿಸುತ್ತಿದ್ದರಂತೆ. ನಮ್ಮ ಯಜಮಾನರು ಹೀಗೆ ಸ್ವಯಂ ಸೇವಕರಾಗಿ 3 ತಿಂಗಳು ಕೆಲಸ ನಿರ್ವಹಿಸಿದರಂತೆ. ಅನಂತರ ಚಳಿ ಹೆಚ್ಚಾಗಿದ್ದುದರ ಕಾರಣ ಬೆಂಗಳೂರಿನ ಸರ್ಕಾರಿ ಅತಿಥಿ ಗೃಹವಾದ ಕುಮಾರಪಾರ್ಕಿಗೆ ಅವರ ಶಿಬಿರ ಬದಲಾಯಿಸಿದರಂತೆ.

ಕುಮಾರಪಾರ್ಕಿಗೆ ಬರುವ ವೇಳೆಗಾಗಲೇ ಗಾಂಧಿಯವರ ಆರೋಗ್ಯ ಬಹುಮಟ್ಟಿಗೆ ಸುಧಾರಿಸಿದ್ದು ಆಮೇಲೆ ಮುಖಂಡರುಗಳೊಡನೆ ಆಗಾಗ್ಗೆ ರಚನಾತ್ಮಕ ವಿಚಾರದಲ್ಲಿ ಸ್ವಾತಂತ್ರ ಸಾಧನೆಯ ಬಗ್ಗೆ ಚರ್ಚೆಗಳಾಗುತ್ತಿದ್ದುವಂತೆ.

ನಮ್ಮ ಯಜಮಾನರಿಗೆ ಅವರ 20ನೇ ವರ್ಷದಿಂದಲೇ ಖಾದಿ ಬಗ್ಗೆ ಒಲವು. ಅವರ 22ನೇ ವರ್ಷದಲ್ಲಿ ನಮ್ಮ ಮದುವೆ. ಮದುವೆಗೆ ಆ ಕಾಲದ ಖಾದಿಬಟ್ಟೆ ಪೂರ್ತಿ ತೆಗೆದುಕೊಂಡಿದ್ದು. ಇನ್ನು ಓದು ಮುಂದುವರಿಸುವುದು ಬೇಡ ಎಲ್ಲಾದರೂ ಖಾದಿ ಕೇಂದ್ರದಲ್ಲಿ ಕೆಲಸಕ್ಕೆ ಸೇರಿ ರಚನಾತ್ಮಕ ಕಾರ್ಯದಲ್ಲಿ ನಿಲ್ಲಬೇಕೆಂದು ಅನ್ನಿಸುತ್ತಿತ್ತಂತೆ.

ಅದಕ್ಕೆ ಪೂರಕವಾಗಿ ಶ್ರೀ ರಾಜಾಜಿಯವರು ನನ್ನವರ ಬಗ್ಗೆ ತುಂಬಾ ಅಭಿಮಾನ ತಾಳಿ ಅವರ ತಿರಚಂಗೋಡು ಆಶ್ರಮಕ್ಕೆ ತೆಗೆದುಕೊಳ್ಳುವವರಿದ್ದರಂತೆ. ಈ ಮಧ್ಯೆ ನಮ್ಮ ಸರ್ಕಾರದವರು ಪೂಜ್ಯ ಗಾಂಧೀಜಿಯವರ ರಚನಾತ್ಮಕ ಕಾರ್ಯದ ಬಹು ಮುಖ್ಯ ಅಂಗವಾದ ಖಾದಿ ಕೆಲಸವನ್ನು ನಾವೇ ಮಾಡುವೆವು. ನಿಮ್ಮ ಸಲಹೆ ಸಹಕಾರ ಕೊಡಿ ಎಂತ ಕೇಳಿದರಂತೆ. ಅದರಂತೆ ನರಸಾಂಬುಧಿ ರೈಲ್ವೆ ಸ್ಟೇಷನ್ (ಬದನವಾಳು ಗ್ರಾಮದ ಸ್ಟೇಷನ್ನಿನ ಹೆಸರು) ಎದುರುಗಡೆ ಬಯಲು ಹೊಲವನ್ನು ಖಾದಿ ಕೇಂದ್ರಕ್ಕೆ ಆರಿಸಿದರಂತೆ.

ಬದನವಾಳನ್ನು ಈ ಕೆಲಸಕ್ಕೆ ಆರಿಸಲು ಮುಖ್ಯ ಕಾರಣ : ಈ ಊರ ಸುತ್ತಮುತ್ತಲ ಹಳ್ಳಿಗಳಲ್ಲಿ ಇನ್ನೂ ರಾಟೆಗಳಿದ್ದು ದೇವನೂರು ತಗಡೂರುಗಳಲ್ಲಿ ಖಾದಿ ಕೆಲಸ ನಡೆಯುತ್ತಿತ್ತು. ಎಲ್ಲಕ್ಕೂ ಮುಖ್ಯವಾಗಿ ರೈಲ್ವೆ ನಿಲ್ದಾಣ ಹತ್ತಿರವಿದ್ದು ಸಾರಿಗೆ ಮೊದಲಾದ ಅನುಕೂಲವಿದ್ದುದರಿಂದ ಬದನವಾಳನ್ನೇ ಕಾರ್ಯಕ್ಷೇತ್ರವಾಗಿ ನಿರ್ಣಯಿಸಿದರಂತೆ.

ಶ್ರೀ ರಾಜಾಜಿಯವರು ನಮ್ಮವರನ್ನು ಕೇಳಿದರಂತೆ. ಏನಪ್ಪಾ ನೀನು ಯೋಚನೆ ಮಾಡು. ಖಾದಿ ಕೆಲಸದಲ್ಲಿ ಸಂಬಳ, ಅಂತಸ್ತು ಹೆಚ್ಚಾಗೇನೂ ಬರುವುದಿಲ್ಲ. ನೀನು ದೊಡ್ಡ ಮನೆತನದ ಹುಡುಗ, ತಂದೆಗೆ ಹಿರಿಯ ಮಗ (ನಮ್ಮ ತಾತ ಜಡ್ಜಿಯಾಗಿದ್ದರು ಮಾವ ಅಡ್ವೋಕೇಟರು) ಯೋಚನೆ ಮಾಡು. ಹಿರಿಯರನ್ನು ಕೇಳು ಅಂತ ಬುದ್ಧಿವಾದ ಹೇಳಿದರಂತೆ. ನಮ್ಮ ತಾತ ಆ ವೇಳೆಗೆ ತೀರಿಕೊಂಡಿದ್ದರು. ಮಾವ ಅಡ್ವೋಕೇಟರಾಗಿದ್ದರೂ ಅವರ ಸಂಪಾದನೆ ಸಾಕಾಗುತ್ತಿರಲಿಲ್ಲ. ತಮ್ಮ ತಂಗಿಯರ ಹೊಣೆಗಾರಿಕೆ, ತಂದೆ ತಾಯಿಯರ ಜತೆಗೇನೆ. ನಮ್ಮ ಮದುವೆ ಆಗಿ ಮೂರು ವರ್ಷವಾಗಿತ್ತು. ಆದರೂ ಈ ಎಲ್ಲ ಹೊಣೆಗಾರಿಕೆ ನನ್ನವರನ್ನು ಖಾದಿ ಕೆಲಸಕ್ಕೆ ಸೇರಲು ಅಡ್ಡಿಯಾಗಲಿಲ್ಲ. ನನ್ನನ್ನೇನೂ ಕೇಳಿರಲಿಲ್ಲ. ಆಗ ನನಗಿನ್ನೂ 13–14 ವರ್ಷ. ಆಗ ಕೇಳುವುದೇನು. ನಾವು ಪರಸ್ಪರ ನೋಡಲೇ ಇಲ್ಲ. 3 ವರ್ಷಗಳಲ್ಲಿ ನಾನಿಟ್ಟ ಹೆಜ್ಜೆ ತುಳಿದು ಬರುವವಳು ನನ್ನವಳು ಎಂತ ನಂಬಿಕೆ ಇರಬಹುದೇನೋ ಅಂತ ಕೇಳಿರಲಾರರು. ಇನ್ನು ಓದುವುದಿಲ್ಲ ಖಾದಿ ಕೆಲಸಕ್ಕೆ ಸೇರುತ್ತೇನೆಂತ ಶ್ರೀ ರಾಜಾಜಿಯವರಿಗೆ ಹೇಳಿದರಂತೆ ಅದಕ್ಕೆ ರಾಜಾಜಿಯವರು ಸರಿ ಹಾಗಾದರೆ ನಿಮ್ಮ ಸರ್ಕಾರವೇ ಖಾದಿ ಕೇಂದ್ರ ತೆರೆಯುತ್ತೆ. ಅಲ್ಲೇ ನೀನು ಸೇರಬಹುದು ಅಂದರಂತೆ, ಸರಿ ಹಾಗಾಗಿ ಬದನವಾಳದ ಖಾದಿ ಕೇಂದ್ರ ಜನ್ಮ ತಾಳುವ ವೇಳೆಗೆ ನನ್ನವರಿಗೆ ಅದರ ಚಾಲಕರಾಗಿ ಕೆಲಸವೂ ಸಿಕ್ಕಿತು.

ಶ್ರೀ ಪೂಜಾರಿಯವರು ಮೊದಲೇ ಉಪ್ಪಿನ ಬೆಟಗೇರಿ, ಹುಬ್ಬಳ್ಳಿ ಕಡೇಲಿ ರಚನಾತ್ಮಕ ಕೆಲಸದಲ್ಲಿ ಅನುಭವವಿದ್ದವರು. ಬದನವಾಳದ ಖಾದಿ ಕೇಂದ್ರದಲ್ಲಿ ನನ್ನವರಿಗೆ ಹಿರಿಯರಾಗಿ ಸುಮಾರು 9 ತಿಂಗಳು ಕೆಲಸದ ಮಾಹಿತಿ ಮಾಡಿಕೊಟ್ಟು ವಾಪಸ್ಸಾದರು.

ಕೇಂದ್ರವನ್ನೇನೊ ಆರಂಭ ಮಾಡಿದರು. ವಾಸಕ್ಕೆ ಸೌಕರ್ಯವಿರಲಿಲ್ಲ. ನೀರಿಗೆ ತೊಂದರೆ. ಸುತ್ತಮುತ್ತ ಹೊಲಗಳು. ಹೇಗೊ ಧೈರ್ಯವಾಗಿ ಮೊಟ್ಟಮೊದಲು ಗುಡಿಸಲು ಹಾಕಿದರಂತೆ. ಇಷ್ಟೆಲ್ಲಾ ಆಗುವ ವೇಳೆಗೆ 3–4 ತಿಂಗಳಾಗಿರಬೇಕು. ಅನಂತರ ಬಂದು ನನ್ನನ್ನು ಜೊತೆಗೆ ಕರೆದುಕೊಂಡು ಹೋದರು. ನಮ್ಮ ಜೊತೆಗೆ ನನ್ನ ಹಿರಿಯ ನಾದಿನಿ ಚಿ॥ ವೇದವಲ್ಲಿ ಬಂದಿದ್ದಳು. ನನಗೂ ಚಿಕ್ಕ ವಯಸ್ಸು. 15 ವರ್ಷವೂ ತುಂಬಿರಲಿಲ್ಲ. ಹುಲ್ಲಿನ ಗುಡಿಸಲು, ಸುತ್ತಲೂ ಬಯಲು, ಹಾವಿನ ಕಾಟವಂತೂ ವಿಪರೀತ, ನೀರಿಗೆ ತುಂಬಾ ದೂರಹೋಗಿ ನೆಲಬಾವಿಯಲ್ಲಿ ಬಗ್ಗಿ ನೀರು ಸೇದಬೇಕು ಮತ್ತು ಹೊತ್ತು ದೂರದಿಂದ ಬರಬೇಕಾಗುತ್ತಿತ್ತು. ಇದಕ್ಕಾಗಿ ಯಾರನ್ನಾದರೂ ನೋಡುವ ಎಂದು ಕೊಳ್ಳುತ್ತಿದ್ದಾಗ ಶ್ರೀ ನಂಜಪ್ಪ ಎನ್ನುವವರು ದೊರಕಿದರು. ದಿನಾ 12 ಕೊಡ ನೀರು ತಂದು ಕೊಡಲು ಒಪ್ಪಿದರು. ಒಂದೆರಡು ತಿಂಗಳಲ್ಲೇ ಆತನನ್ನು ಅಟೆಂಡರನ್ನಾಗಿ ಬದನವಾಳು ಖಾದಿ ಕೇಂದ್ರಕ್ಕೆ ತೆಗೆದುಕೊಂಡರು. ಈತನ ಮಕ್ಕಳೂ ಈಗ ಖಾದಿ ಕೆಲಸದಲ್ಲೇ ಇದ್ದಾರೆ. ಹೀಗೆ ಬದನವಾಳು ಖಾದಿ ಕೇಂದ್ರ ಜನ್ಮ ತಾಳಿದ್ದು.

ಆಗ ಕೇಂದ್ರದಲ್ಲಿ 3 ಜನ ಮೊಟ್ಟಮೊದಲಿಗೆ ಇದ್ದವರು. 1) ಶ್ರೀ ಸಿದ್ಧೋರಾವ್ ಪೂಜಾರರು, 2) ಶ್ರೀ ರಾಜಾರಾಮಯ್ಯಂಗಾರ್‌ರವರು 3) ಶ್ರೀ ವೆಂಕಟಗಿರಿರಾಯರು (ಇವರು ತಗಡೂರು ಖಾದಿ ಸಂಸ್ಥೆಯ ನುರಿತ ಕೆಲಸಗಾರರಾಗಿದ್ದವರು) ಮತ್ತು ಶ್ರೀ ನಂಜಪ್ಪ ಅಟೆಂಡರ್.

ಹೀಗೆ ಬದನವಾಳು ಖಾದಿ ಕೇಂದ್ರ ಬೆಳೆಯುತ್ತಾ ಸುಮಾರು 25 ವರ್ಷದ ವೇಳೆಗೆ ತುಂಬಾ ಚೆನ್ನಾಗಿ ಬೆಳೆಯಿತು. ನಮ್ಮ ಎಲ್ಲಾ ಡಿಸ್ಟ್ರಿಕ್‌ಗಳಲ್ಲೂ ಖಾದಿ ಕೇಂದ್ರಗಳು ತುಂಬಾ ಚಟುವಟಿಕೆಯಿಂದ ಬೆಳೆಯಿತು. ಸಂಸ್ಥೆ ಬೆಳೆದಂತೆಲ್ಲಾ ಕೆಲಸಗಾರರೂ ಹೆಚ್ಚಾಗಿ ಸೇರಿದರು. ನಂಜನಗೂಡಿನ ಗುಂಡ್ಲು ನದಿಯ ತೀರದಲ್ಲಿ ಬಣ್ಣ ಹಾಕುವ ಮನೆ ನಿರ್ಮಾಣವಾಗಿ ಅಲ್ಲಿ ಬಟ್ಟೆಗೆ ಬಣ್ಣ ಹಾಕುವುದು ಮತ್ತು ಅಚ್ಚಿನ ಕೆಲಸ ನಡೆಯ ತೊಡಗಿತು. ಬದನವಾಳದಲ್ಲೇ ಒಂದು ತರಬೇತಿ ಕೇಂದ್ರವೂ ಆರಂಭವಾಯ್ತು. ಹೆಣ್ಣು ಮಕ್ಕಳಿಗೂ ತರಬೇತಿ ಕೊಡಲಾಗುತ್ತಿತ್ತು. ಈ ತರಬೇತಿ ಕೊಡಲಿಕ್ಕಾಗಿ ವಾರ್ಧಾದಲ್ಲಿ ಶಿಕ್ಷಣ ಪಡೆದು ಬಂದಿದ್ದ ಶ್ರೀ ಗೋವಿಂದರಾಯರು ಹಾಗೂ ಶ್ರೀ ತಗಡೂರು ಕೇಶವಮೂರ್ತಿ ಇವರನ್ನು ನೇಮಿಸಿಕೊಳ್ಳಲಾಗಿತ್ತು. ಕೈಕಾಗದ ತಯಾರಿಕೆ, ಎಣ್ಣೆಗಾಣ, ಕೊಟ್ಟಣದ ಅಕ್ಕಿ ತಯಾರಿಕೆ, ಇತ್ಯಾದಿ ಗ್ರಾಮೋದ್ಯೋಗಗಳಿಗೂ ಚಾಲನೆ ದೊರಕಿತು.

ಶ್ರೀ ರಾಜಾಜಿಯವರೂ ಆಗಾಗ್ಗೆ ಬಂದು ನೋಡಿ ಸಲಹೆ ಸೂಚನೆಗಳನ್ನು ಕೊಟ್ಟು ನೋಡಿಕೊಳ್ಳುತ್ತಿದ್ದರು. ನನ್ನನ್ನು ತಮ್ಮ ಮಗಳಂತೆ ನೋಡಿಕೊಳ್ಳುತ್ತಿದ್ದರು. ಒಬ್ಬಳನ್ನೇ ಬಿಟ್ಟುಹೋಗಬೇಡ, ಎಲ್ಲಿಗೆ ಹೋಗಬೇಕಾದರೂ ಜತೆಗೆ ಕರೆದುಕೊಂಡು

ಹೋಗು ಎಂದು ಪತ್ರ ಬರೆಯುವಾಗಲಿಲ್ಲಾ ಇದನ್ನೆ ಸೇರಿಸುತ್ತಿದ್ದರು. ಬದನವಾಳ ಖಾದಿ ಕೇಂದ್ರದ ಜತೆಗೇ ನಮ್ಮ ದಾಂಪತ್ಯ ಜೀವನವೂ ಬೆಳೆಯುತ್ತಾ ಬಂದಿತು. ಮಕ್ಕಳೂ ಬೆಳೆದು ವಿದ್ಯಾವಂತರಾದರು. ನಮ್ಮಲ್ಲೂ ಎಲ್ಲರ ಮನೇಲೂ ಸಹ, ಕೇಂದ್ರ ಬೆಳೆದಂತೆ ಕೆಲಸಗಾರರ ವೃದ್ಧಿಯೂ ಆಯಿತು, ವಸತಿ ಸೌಕರ್ಯವೂ ಉಂಟಾಯಿತು. ಕೇಂದ್ರದಲ್ಲೇ ಒಂದು ಬಾವಿಯೂ ಬಂದಿತು. ಕೆಲವರ್ಷಗಳು ಕಳೆದ ಮೇಲೆ ವಿದ್ಯುತ್ತೂ ಬಂದಿತು, ಪೋಸ್ಟಾಫೀಸು ಬಂದಿತು.

ಆಗಿನ ಕೆಲಸಗಾರರು, ಎಲ್ಲ ಹಿರಿಯ ಕಿರಿಯ ಅಧಿಕಾರಿಗಳು, ಸಹಾಯಕರು, ಎಲ್ಲರೂ ತುಂಬ ವಿಶ್ವಾಸದಿಂದ ಮನೆಯ ಹಿರಿಯನೊಡನೆ ನಡೆದುಕೊಳ್ಳುವಂತೆ ನಡೆದುಕೊಳ್ಳುತ್ತಿದ್ದರು. ಸಣ್ಣ ಪುಟ್ಟ ಅಸಮಾಧಾನ ಬಂದರೂ ಸಮಾಧಾನ ಮಾಡಿಕೊಳ್ಳುತ್ತಿದ್ದರು. ಅದೆಲ್ಲಾ ಸಹಜವೆನ್ನುವಂತೆ ಮರೆಯುತಿದ್ದರು. ಅನೇಕ ಗಣ್ಯ ಜನರು ಹೊರಗಿನಿಂದ ಆಗಾಗ ಬರುತ್ತಿದ್ದರು. ನಮ್ಮ ಮಹಾರಾಜರಿಗಾಗಿ 1943ರಲ್ಲಿ ಒಂದು ವಸ್ತು ಪ್ರದರ್ಶನ ಏರ್ಪಾಡು ಮಾಡಿದ್ದಿತು. ಇದರಲ್ಲಿ ಬದನವಾಳದಲ್ಲಿ ನಡೆಸುತ್ತಿದ್ದ ಎಲ್ಲ ಕೈಗಾರಿಕೆಗಳೂ ಒಂದೆಡೆ ನೋಡಲು ಅನುಕೂಲವಾಗುವಂತೆ ಏರ್ಪಾಡು ಮಾಡಲಾಗಿತ್ತು.

ಕೇಂದ್ರದ ಕಲಸಗಾರರ ಮಕ್ಕಳೆಲ್ಲಾ ಬೆಳೆದು ದೊಡ್ಡವರಾಗಿ ಬೇರೆ ಬೇರೆ ಸ್ಥಳಗಳಲ್ಲಿ ವ್ಯಾಸಂಗ ಮಾಡಿ ಅವರ ಜೀವನ ಹುಡುಕಿಕೊಂಡು ತಮ ತಮಗೆ ಸುಖವಾಗಿದ್ದಾರೆ. ಖಾದಿ ಕೆಲಸ ಹಳ್ಳೀ ವಾಸವಲ್ಲಿ ನಮ್ಮ ಮಕ್ಕಳು ಮುಂದೆ ಬರಲಾಗಲಿಲ್ಲ ಅಂತ ಅವರ ತಂದೆ ತಾಯಿಗಳಾರೂ ನೊಂದುಕೊಳ್ಳದಂತೆ ಮಕ್ಕಳೆಲ್ಲಾ ಒಳ್ಳೆಯ ಜೀವನವನ್ನು ನಡೆಸುತ್ತಿದ್ದಾರೆ. ಇದು ಹೆಮ್ಮೆಯ ವಿಚಾರ. ಆಗಾಗ್ಗೆ ಹಾವುಗಳು ಕಾಣಿಸಿಕೊಳ್ಳುತ್ತಿದ್ದರೂ ಯಾರನ್ನೂ ಏನೂ ಮಾಡದೆ ಕಾಪಾಡಿಕೊಂಡು ಬಂದಿದೆ.

ಕೇಂದ್ರದ ಆವರಣದಲ್ಲಿಯೇ ನಮ್ಮ ನಾದಿನಿಯ ಮದುವೆ ನಮ್ಮ ಅಣ್ಣನೊಂದಿಗೆ ನಡೆಯಿತು. ಖಾದಿ ಪಂಚೆ ಸೀರೆಯೇ ಮದುವಣಿಗರ ಉಡುಪು. ಅವರೀಗ ಹರಿಹರದಲ್ಲಿ ಅನುಕೂಲವಾಗಿದ್ದಾರೆ. ನಮ್ಮ ಆವರಣದಲ್ಲಿ ಹೂಗಿಡಗಳನ್ನು ಹಾಕಿದ್ದೆವು. ಹೂ ಬಿಡುತ್ತಿತ್ತು. ಬೆಳಗಾಗುವುದರೊಳಗಾಗಿ ಒಬ್ಬರು ಶಿವಭಕ್ತರು ಬಂದು ಹೂಗಳನ್ನೆಲ್ಲಾ ಕಿತ್ತುಕೊಳ್ಳುತ್ತಿದ್ದರು. ಬೇಡವೆಂದರೂ ಬಿಡದೆ ಶಿವ ಒಳ್ಳೆಯದು ಮಾಡುತ್ತಾನೆ ಅಂತ ಹೇಳಿಹೋಗುತ್ತಿದ್ದರು.

ಒಮ್ಮೆ ಮದುವೆ ಆದ ತಿಂಗಳಲ್ಲಿ ತಿಂಗಳ ನಾಗೋಲಿ ಅಂತ ಹಬ್ಬದ ಅಡಿಗೆ ಎಲ್ಲಾ ಮಾಡಿದ್ದು. ಚಳುವಳಿಯ ಕಾಲ. ಕಾಂಗ್ರೆಸ್ಸಿನ ಪ್ರಚಾರಕ್ಕೆಂದು ಶ್ರೀ ಹೆಚ್.ಸಿ. ದಾಸಪ್ಪನವರು ಮತ್ತು ಅವರ ಅನುಯಾಯಿಗಳು ಸುಮಾರು 40 ಜನ ಬಂದರು. ಸರ್ಕಾರಿ ಕೇಂದ್ರ. ಆದರೂ ಧೈರ್ಯ ಮಾಡಿ ಅವರಿಗೆಲ್ಲಾ ನಮ್ಮ ಮನೇಲಿ ನಮ್ಮ ಕೈಲಾದ

ಆತಿಥ್ಯ ನಡೆಸಿದೆವು. ಕೆಲವು ದಿನಗಳವರೆಗೆ ನನಗೆ ಭಯವೂ ಆಗಿತ್ತು. ನಮ್ಮವರನ್ನು ಎಲ್ಲಾದರೂ ಜೈಲಿಗೆ ಹಾಕುತ್ತಾರೋ ಏನೋ ಅಂತ. ನಮ್ಮವರೂ ಚಳುವಳಿಗೆ ಧುಮ್ಮಿಕ್ಕಲು ಆತುರರಾಗಿದ್ದರು. ಆದರೆ ಗಾಂಧಿಜೀಯವರು ರಚನಾತ್ಮಕ ಕೆಲಸದಲ್ಲಿರುವವರು ಚಳುವಳಿಗೆ ಹೋಗುವುದು ಬೇಡ ಎಂದಿದ್ದರಿಂದ ಅವರು ಚಳುವಳಿ ಮಾರ್ಗ ಸ್ವೀಕರಿಸಲಿಲ್ಲ.

ಆಮೇಲೆ ನನಗೆ ಅನ್ನಿಸುತ್ತಿತ್ತು. ನಮ್ಮವರೂ ಜೈಲಿಗೆ ಹೋಗಿದ್ದರೆ ನಮ್ಮ ಜೀವನ ಮಟ್ಟ ಇನ್ನೂ ಉತ್ತಮಗೊಳ್ಳುವಂತೆ ಅಧಿಕಾರ ಸಿಗುತ್ತಿತ್ತೋ ಏನೋ. ಇವರೂ B.A., B.Sc., ಆಗಿದ್ದವರು. ರಾಜಾಜಿಯಂತಹ ಹಿರಿಯ ನಾಯಕರ ಸಹವಾಸ ಬಹಳ ಇತ್ತು ಅಂತ ನನ್ನಷ್ಟಕ್ಕೆ ನಾನು ಅಂದುಕೊಳ್ಳುತ್ತಿದ್ದೆ.

ನಮ್ಮವರು ರಿಟೈರಾದರು. ಅನಂತರ ಏನು ಕಾರಣವೋ ಅಂತೂ ಉನ್ನತ ಮಟ್ಟವೇರಿದ್ದ ಖಾದಿ ಕೇಂದ್ರ ಇಳಿಮುಖವಾಗತೊಡಗಿತು. ಅಂತು ಎಲ್ಲಾ ಕಾಲಕ್ಕೂ ಎಲ್ಲ ಕ್ಷೇತ್ರಕ್ಕೂ ಉನ್ನತಿಗೊಂದು ಮಿತಿ. ನಂತರ ಕುಗ್ಗುವಿಕೆ. ಆಮೇಲೆ ವರ್ಧಿಸುವುದು. ಇದು ನಮ್ಮ ಅನುಭವಲ್ಲೇ ಬಂದಿದೆ.

ಆಗಿನ ಕಾಲ ಅಂದರೆ 1926-27ರಲ್ಲಿ ಬ್ರಿಟಿಷ್ ಆಧಿಪತ್ಯ ಇದ್ದ ಕಾಲ. ಪೂಜ್ಯ ಗಾಂಧಿಯವರನ್ನು ಕಂಡು ಮಾತಾಡಿ ಬಂದರೆ ಸಂಶಯವಾಗುತ್ತಿದ್ದಾಗ, ಗಾಂಧಿಯವರಿಗೆ ವಿಶ್ರಾಂತಿ ಆವಶ್ಯಕ ಎಂದಾಗ ಎಲ್ಲಿ ಹೇಗೆ ಅಂತ ಎನ್ನುವ ಪ್ರಶ್ನೆ ದೊಡ್ಡ ದೊಡ್ಡ ಮುಖಂಡರಿಗೆ ಕಾಡುತ್ತಿದ್ದಾಗ ನಮ್ಮ ಮೈಸೂರು ಸರ್ಕಾರ ಬಹು ಧೈರ್ಯದಿಂದ ಪೂಜ್ಯ ಗಾಂಧೀಜಿಯವರನ್ನು ಬರಮಾಡಿಕೊಂಡು ಅವರ ಆತಿಥ್ಯ ನೀಡಿ ಅತಿಥಿ ದೇವೋ ಭವ ಎನ್ನುವುದನ್ನು ಸಾರ್ಥಕಗೊಳಿಸಿದ್ದಷ್ಟೇ ಅಲ್ಲದೆ, ಅವರ ಅತಿ ಪ್ರಿಯವಾದ ಖಾದಿ ಕೆಲಸ ಅದೂ ಸರ್ಕಾರದ ಕಡೆಯಿಂದ ನಡೆಸುವ ಧೈರ್ಯ ಮಾಡಿದ್ದು. ಆಗಿನ ಕಾಲದಲ್ಲಿ ಯಾವ ಸಂಸ್ಥಾನವೂ ಕೈಗೊಳ್ಳದ ಕೆಲಸ. ಇದು ನಮ್ಮ ಸರ್ಕಾರದ ಹಿರಿಮೆಗೆ ಸಾಕ್ಷಿ ಇದೆಲ್ಲದರ ಹೊಣೆಗಾರಿಕೆಗೆ ಆಗಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮಾಯಿಲ್, ಶ್ರೀ ರಾಜಾಜಿ, ಶ್ರೀ ನವರತ್ನರಾಮರಾಯರು. ಇವರನ್ನು ನೆನಪು ಮಾಡಿಕೊಳ್ಳಬೇಕು. ಕೇಂದ್ರದ ಬೆಳವಣಿಗೆಗೆ ಬಹಳಷ್ಟು ಬೆಂಬಲ ಕೊಟ್ಟು ಕೈ ಹಿಡಿದು ನಡೆಸಿದವರೆಂದರೆ, ಆಗಿನ ಕೈಗಾರಿಕೆ ಡೈರೆಕ್ಟರುಗಳಾದ ಶ್ರೀ ರಂಗನಾಥ ಸಾಹೇಬರು.

ಬದನವಾಳ ಕೇಂದ್ರದಲ್ಲಿ ಮೊದಲಿಂದಲೂ ಜತೆಯಲ್ಲಿದ್ದವನು ಶ್ರೀ ನಂಜಪ್ಪ. ಅಟೆಂಡರಾಗಿ, ಮನೆಯ ಹಿರಿಯನಾಗಿ, ಸಲಹೆಗಾರನಾಗಿ ಕೆಲಸದಲ್ಲಿ ತನ್ಮಯನಾಗಿ, ಮನೆಯ ಮಕ್ಕಳಿಗೆ ಪ್ರೀತಿಯ ಸೆಲೆಯಾಗಿ ಕಾವಲುಗಾರನಾಗಿ, ನಮಗೆ ದಿಕ್ಕಾಗಿದ್ದವನು, ಅವನ ಸೇವೆ ಯಾವಾಗಲೂ ನೆನಪಾಗಿ ಉಳಿದಿದೆ.


* * *

ಖಾದಿ ಕ್ಷೇತ್ರದ ಭೀಷ್ಮಾಚಾರ್ಯ ರಾಜಾರಾಮಯ್ಯಂಗಾರ್

ಕೆ. ಎಸ್. ನಾರಾಯಣಸ್ವಾಮಿ

ಈಚೆಗೆ ನಿಧನರಾದ ರಾಜಾರಾಮಯ್ಯಂಗಾರ್ ಅವರನ್ನು ಖಾದಿ ಕ್ಷೇತ್ರದ ಭೀಷ್ಮಾಚಾರ್ಯ ಎಂದೇ ಗುರುತಿಸಲಾಗುತ್ತಿತ್ತು. ಇವರೊಂದು ಗಾಂಧಿ ಯುಗದ ಜೀವಂತ ಪ್ರತೀಕವಾಗಿದ್ದರು.

ರಾಷ್ಟ್ರದ ಇತಿಹಾಸದಲ್ಲಿ ಅದೊಂದು ಪರ್ವಕಾಲ. ಅರವತ್ತು ವರ್ಷಗಳಿಗೂ ಹಿಂದೆ ಹೊಚ್ಚ ಹೊಸ ಬಿರುಗಾಳಿಯಂತೆ ಬೀಸಿ ಬಂದ ಗಾಂಧಿ ಪ್ರಭಾವದ ಅಲೆ ಬಾಳಿನ ಸಮಗ್ರ ವಲಯಗಳಲ್ಲೂ ಉಸಿರು ತುಂಬುತ್ತಿತ್ತು. 1927 ರಲ್ಲಿ ಗಾಂಧೀಜಿ ಖಾದಿ ಪ್ರಚಾರಕ್ಕಾಗಿ ಸಂಚಾರ ಮಾಡುತ್ತಿದ್ದರು. ಬೆಂಗಳೂರಿಗೂ ಬಂದರು. ಆಗಿನ ಸಂಸ್ಥಾನ ಅಂದಿನ ಮಹಾರಾಜರು, ದಿವಾನರು ಅವರನ್ನು ಬರಮಾಡಿಕೊಳ್ಳುವ ಸಾಹಸ ಮಾಡಿದರು. ರಾಷ್ಟ್ರೀಯತೆಯ ಹೊನಲು ಚಿಮ್ಮುತ್ತಿತ್ತು. ಮೊದಲ ಸುತ್ತಿನ ಸತ್ಯಾಗ್ರಹ ಸಮರ ಮುಗಿದಿತ್ತು. ಉತ್ಸಾಹ ಮುಗಿಲಿಗೇರುತ್ತಿತ್ತು. ಅಹಿಂಸಾತ್ಮಕ ಅಸಹಕಾರ ಆಂದೋಲನದ ಪ್ರಬಲ ಅಸ್ತ್ರವನ್ನಾಗಿ ಗಾಂಧೀಜಿ ಖಾದಿ ಚಳವಳಿಯನ್ನು ಸಂಘಟಿಸುತ್ತಿದ್ದರು. ಚರಕ ರಾಷ್ಟ್ರ ಧ್ವಜದ ಮಧ್ಯೆ ಆರ್ಥಿಕ ಸ್ವಾತಂತ್ರ್ಯದ ಲಾಂಛನವಾಗಿ ಮೆರೆಯಿತು. ಸರ್ವರಿಗೂ ಬಾಪೂಜಿಯ ಒಂದೇ ಸಂದೇಶ "ನೂಲಿರಿ, ಅರ್ಥಮಾಡಿಕೊಂಡು ನೂಲಿರಿ". ಕವಿವರ್ಯ ಠಾಕೂರರಿಗೂ ಅದೇ ಉಪದೇಶ. ವಿಜ್ಞಾನಿ ಪಿ. ಸಿ. ರೇ ತುಂಡು ಖಾದಿ ತೊಟ್ಟು ಚರಕದಿಂದ ನೂಲುತ್ತಿದ್ದರು. ಬೆಂಗಳೂರು ವಿಜ್ಞಾನ ಮಹಾ ವಿದ್ಯಾಲಯದ ಆಡಳಿತ ಮಂಡಲ ಸದಸ್ಯರಾಗಿದ್ದ ಸರ್. ಪಿ. ಸಿ. ರೇ ನೆಲದ ಮೇಲೆ ಕುಳಿತು ನೂಲುವ ದೀಕ್ಷೆ ತೊಟ್ಟಿದ್ದರು. ಇಲ್ಲಿನ ಆಳರಸರಿಗೆ, ಪಾಶ್ಚಾತ್ಯಾನುಕರಣೆಯ ವಿಜ್ಞಾನಿಗಳಿಗೆ ಸೋಜಿಗ. ಜವಾಹರಲಾಲರು, ರಾಜೇಂದ್ರ ಪ್ರಸಾದ್, ಡಾ॥ ಬಿ. ಸಿ. ರಾಯ್, ರಾಜಾಜಿ ಎಲ್ಲ ಶ್ರೀಮಂತ ಗೃಹಗಳಿಗೂ ರಾಟೆ ನುಗ್ಗಿಬಂತು. ಯುವ ಪೀಳಿಗೆಗೆ ಯಾವುದೋ ವಿಚಿತ್ರ ರೋಮಾಂಚಕಾರಿ ಕ್ರಾಂತಿಯ ಅನುಭವ. 'ಖಾದಿ ಸ್ವಾತಂತ್ರ್ಯದ ಲಾಂಛನ' ಎಂದರು ನೆಹರೂ. ಹೀಗೆ ಒಂದು ಪ್ರವಾಹ ಉಕ್ಕಿಬಂತು.



ಂದ ಬಲಕ್ಕೆ : ಎಂ. ಎಸ್. ಸುಬ್ಬಲಕ್ಷ್ಮಿ, ಟಿ. ಸದಾಶಿವಮ್, ರಾಜಾರಾಮಯ್ಯಂಗಾರ್, ಹೆಚ್. ಆರ್. ವೆಂಕಟರಮಣಯ್ಯ, ನಿಂತಿರುವವರು : ಕೆ. ಎಸ್. ನಾರಾಯಣಸ್ವಾಮಿ, (ಬೆಂಗಳೂರು ಗಾಂಧಿ ಶಾಂತಿ ಪ್ರತಿಷ್ಠಾನ ಕಾರ್ಯದರ್ಶಿ) ಶ್ರೀಮತಿ ಕೆ. ಎಸ್. ನಾರಾಯಣಸ್ವಾಮಿ

ಆ ಕಾಲಕ್ಕೆ ಮೈಸೂರಿನಂತಹ ದೇಶೀ ಸಂಸ್ಥಾನಗಳಲ್ಲಿ ಸಂಗ್ರಾಮದ ಕಾವು ಇನ್ನೂ ಏರಿರಲಿಲ್ಲ. 1927ರ ಖಾದಿ ಪ್ರಚಾರ ಪ್ರವಾಸದಲ್ಲಿ ಮೊದಲ ಬಾರಿಗೆ ಖಾದಿ ಗ್ರಾಮೋದ್ಯೋಗ ಪ್ರದರ್ಶನ ಗಾಂಧೀಜಿಯೇ ಉದ್ಘಾಟಿಸಿದರು. ಸರ್ಕಾರದ ಅತಿಥಿಯಾಗಿದ್ದುದರಿಂದ ಎಲ್ಲವೂ ಸುಗಮ. ಅಧಿಕಾರಿಗಳೇ ಖಾದಿ ತೊಟ್ಟರು. ನ್ಯಾಷನಲ್ ಹೈಸ್ಕೂಲ್ ಆಗ ರಚನಾತ್ಮಕ ಕ್ರಾಂತಿಯ ಕೇಂದ್ರ.ರಾಜಾರಾಮಯ್ಯಂಗಾರ್ ಆ ವೇಳೆಗೆ ಪದವಿ ಪರೀಕ್ಷೆಯಲ್ಲಿ ಉನ್ನತ ದರ್ಜೆಯಲ್ಲಿ ತೇರ್ಗಡೆಯಾಗಿ ಟಾಟಾ ವಿಜ್ಞಾನ ಮಂದಿರದಲ್ಲಿ ವ್ಯಾಸಂಗಕ್ಕೆ ಸೇರಿದ್ದರು. ಮಾಸ್ತಿ, ಗೊರೂರು, ಪು.ತಿ.ನ. ಇವರೆಲ್ಲ ಅವರ ಬಂಧುವರ್ಗಕ್ಕೆ ಸೇರಿದವರು. ಮದ್ರಾಸಿನಲ್ಲಿ ಮದುವೆಯಾಯಿತು. ಈ ಉದಯೋನ್ಮುಖ ನವ ಯುವಕ ರಾಜಾಜಿ ಅವರ ಪ್ರಭಾವದ ಸೆಲೆಗೆ ಸಿಕ್ಕಿದರು. ದೇಶದ ಕರೆಯ ಒತ್ತಡ ಒಮ್ಮಿಂದೊಮ್ಮೆ ಚಿಮ್ಮಿತು. ಅಲ್ಲಿಗೇ ಓದನ್ನು ನಿಲ್ಲಿಸಿ ಖಾದಿ ಚಳವಳಿಗೆ ಸೇರಿದರು. ರಾಜಾಜಿ ಅವರ ಸೇಲಮ್ಮಿನ ಖಾದಿ ಕೇಂದ್ರದಲ್ಲಿ ಕೆಲಸ. ಜೊತೆಗೆ ಸಿಕ್ಕವರು ಶ್ರೀ ಸದಾಶಿವಮ್.(ಶ್ರೀಮತಿ ಸುಬ್ಬಲಕ್ಷ್ಮಿ ಅವರ ಪತಿ) ಯೋಜನೆಗಳನ್ನೆಲ್ಲ ಬಿಟ್ಟರು. ದೇಶ ಸೇವೆಗೆ ಸಂಪೂರ್ಣವಾಗಿ ಸಮರ್ಪಿಸಿಕೊಂಡರು.

ಬೆಂಗಳೂರಿನಲ್ಲಿ ಅಖಿಲ ಭಾರತ ಚರಕ ಸಂಘದ ಖಾದಿ ವಸ್ತ್ರಾಲಯವನ್ನು ಕೋಟೆ ಆಂಜನೇಯ ಗುಡಿ ಪಕ್ಕದ ಜನೋಪಕಾರಿ ದೊಡ್ಡಣ್ಣನವರ ಅಂಗಡಿ ಸಾಲಿನಲ್ಲಿ ಪ್ರಾರಂಭಿಸಲು ತೀರ್ಮಾನವಾಯಿತು. ರಾಜಾಜಿ, ಶಂಕರರಾವ್ ಬ್ಯಾಂಕರ್ ಮತ್ತು ಗಂಗಾಧರರಾವ್ ದೇಶಪಾಂಡೆ ಅವರನ್ನು ಗಾಂಧೀಜಿ ಇಲ್ಲಿಗೆ ಕಳುಹಿಸಿದರು. ಆ ಮಳಿಗೆಗಳು ಕೇವಲ ಮಾರಾಟದ ಅಂಗಡಿಗಳಾಗಲಿಲ್ಲ. ಸ್ವಾತಂತ್ರ್ಯ ದೀಕ್ಷೆ ಕೊಟ್ಟು ಸಾವಿರಾರು ಯುವಕರನ್ನಾಕರ್ಷಿಸಿದ ಪುಣ್ಯ ಕ್ಷೇತ್ರವಾಯಿತು. ದೇಶದ ಮಹಾ ಸಂಗ್ರಾಮದ ಕೇಂದ್ರ ಕಾರ್ಯಾಲಯದಂತಿತ್ತು. ಅಲ್ಲೇ ಸಾಲಿಗೆ ಸತ್ಯ ಶೋಧನ ಪುಸ್ತಕ ಭಂಡಾರದಲ್ಲಿ ಕನ್ನಡ ದೇಶೀಯ ಸಾಹಿತ್ಯ ಗ್ರಾಮೋದ್ಯೋಗ ವಿಭಾಗ ಮತ್ತು ನ್ಯಾಯಮೂರ್ತಿ ನಿಟ್ಟೂರರಂತಹ ಯುವಕ ರಾಷ್ಟ್ರವಾದೀ ವಕೀಲರ ಕಾರ್ಯಾಲಯ. ಒಂದು ಜೇನುಗೂಡಿನಂತೆ ಸದಾ ಚಟುವಟಿಕೆಯ ತಾಣವಾಗಿತ್ತು, ಕೋಟೆಯ ವಸ್ತ್ರಾಲಯ. ಅಲ್ಲಿಗೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳ ಸಂಭಾವನೆಯ ಮೇಲೆ ಕೆಲಸ ಮಾಡಲು ಮುಂದೆ ಬಂದ ಸುಪ್ರಸಿದ್ಧ ಮೇಧಾವೀ ಯುವಕರಲ್ಲಿ ರಾಜಾರಾಮಯ್ಯಂಗಾರ್ ಒಬ್ಬರು. ಗೊರೂರು ರಾಮಸ್ವಾಮಿ ಐಯ್ಯಂಗಾರ್ಯರು ಸಬರ್ಮತಿಯಲ್ಲಿಯೆ ಗಾಂಧೀಜಿಯಿಂದ ದೀಕ್ಷೆ ಪಡೆದು ಅಲ್ಲಿಗೆ ಬಂದು ಸೇರಿದರು. ಸದಾಶಿವಮ್ ಮದ್ರಾಸಿನಿಂದ ಬಂದರು. ಬೆಂಗಳೂರಿನ ರಾಷ್ಟ್ರೀಯ ವಿದ್ಯಾಲಯದ ಶಿಕ್ಷಕರು ವಿದ್ಯಾರ್ಥಿಗಳು ಸಂಪದ್ಗಿರಿರಾಯರ ನೇತೃತ್ವದಲ್ಲಿ ಖಾದಿಯನ್ನು ಮನೆ ಮನೆಗೆ ಹೊತ್ತು ಮಾರಿದರು. ಒಂದು ಪ್ರಚಂಡ ಸ್ವಯಂಸೇವಕರ

ಪಡೆ ಸಿದ್ಧವಾಯಿತು. ಖಾದಿ ಪ್ರಚಾರ ಎಂದರೆ ಸ್ವಾತಂತ್ರ್ಯದ ಜಾಗೃತಿ ಎಂದೇ ಅನ್ವರ್ಥವಾಯಿತು.

ಚರಕದ ಸಂದೇಶ : ಗಾಂಧೀಜಿ ಮೈಸೂರಿಗೆ ಹೋಗಿದ್ದರು. ಮಹಾರಾಜರಿಗೂ ಚರಕದ ಸಂದೇಶ ಮುಟ್ಟಿಸಿದರು. ಖಾದಿಯನ್ನು ಉಡುಗೊರೆಯಾಗಿ ಕೊಟ್ಟರು. ಮುಂದೆ ತಗಡೂರು ರಾಮಚಂದ್ರರಾಯರು ಕೃಷ್ಣರಾಜ ಒಡೆಯರಿಗೆ ಪ್ರತಿ ವರ್ಧಂತಿಯಲ್ಲೂ ಖಾದಿ ಉಡುಗೊರೆ ಕಳಿಸುತ್ತಿದ್ದರು. ದಿವಾನ್ ಮಿರ್ಜಾ ಅವರಿಗೆ ಖಾದಿ ಉತ್ಪಾದನಾ ಕೇಂದ್ರ ತೆರೆಯುವ ಉತ್ಸಾಹ ಬಂತು. ಇಡೀ ದೇಶದಲ್ಲೇ ಪ್ರಥಮವಾಗಿ ರಾಜ್ಯ ಸರ್ಕಾರವೊಂದು ಖಾದಿ ಉತ್ಪಾದನಾ ಕೇಂದ್ರ ಪ್ರಾರಂಭಿಸಿದುದು ಹಳೆಯ ಮೈಸೂರು ರಾಜ್ಯದಲ್ಲೇ. ಅದಕ್ಕೆ ಮೇಲ್ವಿಚಾರಕರೊಬ್ಬರನ್ನು ಕಳಿಸಲು ಸರ್ ಮಿರ್ಜಾ ಅವರು ರಾಜಾಜಿ ಅವರನ್ನು ಕೇಳಿದರು. ತಕ್ಷಣವೇ ರಾಜಾಜಿ ರಾಜಾರಾಮಯ್ಯಂಗಾರ್ಯರನ್ನು ನೇಮಕ ಮಾಡಲು ಸಲಹೆಯಿತ್ತರು. 1930ರ ವೇಳೆಗೆ ನಂಜನಗೂಡು ಚಾಮರಾಜನಗರ ಮಧ್ಯದ ಅತ್ಯಂತ ಹಿಂದುಳಿದ ಹಳ್ಳಿಗಳ ಮಧ್ಯೆ ಬದನವಾಳು ಗ್ರಾಮದಲ್ಲಿ ಸರ್ಕಾರದ ಕೈಗಾರಿಕೆ ಇಲಾಖೆ ಖಾದಿ ಕೇಂದ್ರ ಪ್ರಾರಂಭಿಸಿತು. ಮುಂದೆ 1932 ರಲ್ಲಿ ಗಾಂಧೀಜಿ ಹರಿಜನ ಪ್ರವಾಸಕ್ಕಾಗಿ ಮೈಸೂರಿಗೆ ಬಂದಾಗ ಬದನವಾಳಿಗೂ ಭೇಟಿ ಕೊಟ್ಟರು. ಜನತೆಯ ಉತ್ಸಾಹ ಮುಗಿಲಿಗೇರಿತ್ತು. ಸುತ್ತಲಿನ ಸುಮಾರು 30 ಹಳ್ಳಿಗಳಲ್ಲಿ ರಾಟೆಗಳ ಝೇಂಕಾರ ಪ್ರಾರಂಭವಾಯಿತು. ಅರೆಹೊಟ್ಟೆಯ, ಅರೆನಗ್ನತೆಯ ಬರಪೀಡಿತ ಪ್ರದೇಶದ ಸಾವಿರಾರು ರೈತರ ಕುಟುಂಬಗಳಿಗೆ ಗಂಜಿ ದೊರೆಯುವಂತಾಯಿತು. ಹೆಣ್ಣು ಮಕ್ಕಳು ಉತ್ಸಾಹದಿಂದ ನೂತರು. ಅಟ್ಟದ ಮೇಲೆ ಮುರಿದು ಬಿದ್ದಿದ್ದ ಹಳೆಯ ರಾಟೆಗಳು ಮತ್ತೆ ತಮ್ಮ ಗೌರವ ಸ್ಥಾನ ಪಡೆದವು. ರಾಜಾರಾಮಯ್ಯಂಗಾರ್ ಮತ್ತು ಪತ್ನಿ ಪಂಕಜಮ್ಮ ಬದನವಾಳಿಯಲ್ಲಿ ನೆಲಸಿದರು. ಸುತ್ತಲೂ ಕಾಲ್ನಡಿಗೆಯಿಂದ ಹಳ್ಳಿ ಹಳ್ಳಿಗೆ ಭೇಟಿ ಕೊಟ್ಟರು. ಹರಿಜನ ಗ್ರಾಮಗಳೇ ವಿಶೇಷವಾಗಿದ್ದ ಪ್ರದೇಶ ಅದು. ಅಲ್ಲಿನ ಹೊಲೆ ಮಗ್ಗಗಳು ಮುರಿದು ಬಿದ್ದಿದ್ದವು. ಮತ್ತೆ ಅವನ್ನು ಪುನರುಜ್ಜೀವನಗೊಳಿಸಿದರು. ಹೊಸ ಮಾದರಿಯ ಮಗ್ಗಗಳನ್ನು ಹಾಕಿದರು. ಬದನವಾಳಿಯಲ್ಲೇ ಐವತ್ತು ಅರವತ್ತು ಮಗ್ಗಗಳಿಗೆ ನೂಲು ಸರಬರಾಜಾಗುತ್ತಿತ್ತು. ನೀರಿಲ್ಲದ ಖುಷ್ಕಿ ಜಮೀನಿನ ಬೇಸಾಯದಲ್ಲಿ ಕೇವಲ ನಾಲ್ಕು ತಿಂಗಳು ಕೂಲಿ ಸಿಗುತ್ತಿದ್ದ ಕಾರ್ಮಿಕ ಕುಟುಂಬಗಳಿಗೆ ನೂಲುವ ಉದ್ಯಮ ವರಪ್ರದವಾಯಿತು. ತಮಗಾಗುವ ಬಟ್ಟೆ ಏನೂ ವೆಚ್ಚವಿಲ್ಲದೆ ಮನೆಗೊದಗುತ್ತಿತ್ತು. ಪ್ರತಿ ವಾರ ಸಂತೆಯಲ್ಲಿ ಮಾರುತ್ತಿದ್ದ ಆ ಸಂಸಾರಗಳ ಪ್ರತಿಯೊಬ್ಬರೂ ನೂತ ನೂಲು ಐವತ್ತು ಅರವತ್ತು ಅಡಿಗಳಾಗುತ್ತಿದ್ದವು. ಅವುಗಳನ್ನೆಲ್ಲ ಬದನವಾಳು ಕೇಂದ್ರ ಕೊಂಡು ಬಟ್ಟೆಮಾಡಿ ಕೊಡುತ್ತಿತ್ತು. ಗಾಂಧೀಜಿ ಅಂದಂತೆ ರಾಟೆ ದಟ್ಟ ದರಿದ್ರರ ಮನೆಯ ಕಾಮಧೇನುವಾಯಿತು.

ರಾಜಾರಾಮಯ್ಯಂಗಾರ್ ಸುತ್ತಲಿನ ಗ್ರಾಮಗಳಲ್ಲೆಲ್ಲಾ ಹಿರಿಯಣ್ಣನಂತೆ ಕಟ್ಟ ಕಡೆಯ ಹರಿಜನ ಬಂಧುವಿನಿಂದ ಹಿಡಿದು ದೊಡ್ಡ ಜಮೀನುದಾರರವರೆಗೆ ಪ್ರಿಯ ಬಂಧುವಾದರು. ಅವರೆಲ್ಲ ಖಾದಿ ಕೊಂಡರು. ಮೈಸೂರಿನಲ್ಲಿ ಆ ಕಾಲಕ್ಕೆ ಪ್ರಾರಂಭ ವಾದ ಖದ್ದರು ಪರಸ್ಪರ ಸಹಾಯ ಸಂಘ ಖಾದಿ ವಸ್ತ್ರಾಲಯ ನಡೆಸಿತು. ಮೈಸೂರಿನ ಹಿರಿಯರಾದ ವೆಂಕಟಕೃಷ್ಣಯ್ಯನವರು. ಲಕ್ಷ್ಮೀನಾರಾಯಣರಾಯರು. ತಗಡೂರು ರಾಮಚಂದ್ರರಾಯರು, ನ್ಯಾಯಮೂರ್ತಿ ಶಂಕರನಾರಾಯಣರಾಯರು, ಪ್ರಾಧ್ಯಾಪಕ ಹಿರಿಯಣ್ಣ, ಸಾಹುಕಾರ್ ಬಸಮಯ್ಯ, ಸಿ. ಆರ್. ರೆಡ್ಡಿ, ಪುಟ್ಟಪ್ಪ, ಡಾ॥ ಸುಬ್ಬರಾಮಯ್ಯನವರೇ ಮುಂತಾದ ಪ್ರತಿಷ್ಠಿತರು ಖಾದಿ ಕೊಂಡು ಪ್ರೋತ್ಸಾ ಹಿಸಿದರು. ವಿದ್ಯಾರ್ಥಿ ವೃಂದ ಉತ್ಸಾಹದಿಂದ ವಾರವಾರವೂ ಮನೆ ಮನೆಗೆ ಖಾದಿ ಹಂಚಿತು. ಮಹಿಳಾ ಸದನಗಳು ಖಾದಿ ಪ್ರಚಾರ ಮಾಡಿದವು. ಎಲ್ಲ ಕಡೆಯೂ ಪಾದರಸದಂತೆ ರಾಜಾರಾಮಯ್ಯಂಗಾರ್ ಓಡಾಡಿ ಸಂಘಟನಾ ಕಾರ್ಯವನ್ನು ಯಶಸ್ವಿಯಾಗಿ ನಡೆಸಿದರು. ಬದನವಾಳಿನಿಂದ ಆರೇ ಮೈಲಿ ತಗಡೂರು ಶ್ರೀ ರಾಮಚಂದ್ರರಾಯರ ಸತ್ಯಾಗ್ರಹಾಶ್ರಮ. ಅಲ್ಲಿ ಒಂದು ಸ್ವತಂತ್ರ ಖಾದಿ ಕೇಂದ್ರ ಪ್ರಾರಂಭವಾಗಿತ್ತು. ಅದೊಂದು ಸಂಗ್ರಾಮದ ಸ್ಫೂರ್ತಿ ಚಿಲುಮೆ. ಅಸ್ಪೃಶ್ಯತಾ ನಿವಾ ರಣೆ, ಮದ್ಯಪಾನ ನಿಷೇಧ, ಮತಾಂತರ ವಿರೋಧೀ ಚಳವಳಿ, ರೈತ ಚಳವಳಿ, ಗ್ರಾಮ ಸ್ವರಾಜ್ಯ ಆಂದೋಲನ, ಎಲ್ಲವೂ ಕೇಂದ್ರೀಕೃತವಾದ ಖಾದಿ ಕೇಂದ್ರ ತಗಡೂರು. ಹೀಗೆ ಆ ಪ್ರದೇಶದ ರಚನಾತ್ಮಕ ಕ್ರಾಂತಿಯ ನಾಯಕದ್ವಯರಾಗಿ ರಾಜಾರಾಮ್ ಮತ್ತು ತಗಡೂರು ಪ್ರಸಿದ್ಧರಾದರು. ರಾಜಾರಾಮಯ್ಯಂಗಾರ್ ತಮ್ಮ ಸುತ್ತಲೂ ನೂತನ ಕಾರ್ಯಕರ್ತರ ಪಡೆಯನ್ನೇ ಸಿದ್ಧಮಾಡಿಕೊಂಡರು. ಶ್ರೀಗಳಾದ ರಂಗಶೆಟ್ಟರು ಬಸಪಯ್ಯನವರೂ, ಕೇಶವಮೂರ್ತಿ ಮುಂತಾದವರೆಲ್ಲ ಅವಿಶ್ರಾಂತವಾಗಿ ದುಡಿದರು. ಎಲ್ಲರೂ ದೈತರಂತೆ ಜೀವಿಸಿದರು. ಸರಳ ಜೀವನದ ವ್ರತಧಾರಿಗಳಾದರು. ಬದನವಾಳು ಸ್ವಾತಂತ್ರ್ಯ ಪ್ರೇಮಿಗಳ ಪುಣ್ಯ ಕ್ಷೇತ್ರವಾಯಿತು.

ಮುಂದೆ ಮುವತ್ತು ವರ್ಷಗಳಕಾಲ ರಾಜಾರಾಮಯ್ಯಂಗಾರ್ – ಪಂಕಜಮ್ಮ ದಂಪತಿಗಳ ಪರ್ಣಕುಟಿ, ಸ್ವಯಂ ಸೇವಕರ ಆಶ್ರಯಧಾಮವಾಯಿತು. ಅವರ ಆದರದ ಆತಿಥ್ಯ ಸ್ಫೂರ್ತಿದಾಯಕ ಸಂಭಾಷಣೆ, ನಗುಮುಖದ ಸ್ನೇಹ, ವಾತ್ಸಲ್ಯದ ನಡೆನುಡಿ ಗಳು ನಮ್ಮಂಥ ನೂರಾರು ಯುವಕರನ್ನು ಸ್ವಾತಂತ್ರ್ಯ ಸಂಗ್ರಾಮದ ಸತ್ಯಾಗ್ರಹಿಗಳಾಗಿ ನೆಲೆಗೊಳಿಸಿತು. ನಮ್ಮ ಜೀವನವಿಧಾನಗಳು 'ಗಾಂಧಿ ಮಾರ್ಗ'ಕ್ಕೆ ಒಲಿದು ಬಂದವು-ಅತ್ಯ ದ್ಭುತ ಪರಿವರ್ತನೆ ಅಷ್ಟು ಬೇಗ ಅಷ್ಟು ನಿಶ್ಶಬ್ದವಾಗಿ ನಡೆದುದು ಆ ಪರ್ವ ಕಾಲದ ಒಂದು ಮಹತ್ತರ ಪವಾಡ.

ಬದನವಾಳು ಕೇಂದ್ರದ ಪ್ರೇರಣೆಯಿಂದ ಆಗಿನ ಹಳೆಯ ಮೈಸೂರಿನ ಜಿಲ್ಲಾ

ಬೋರ್ಡುಗಳು ಖಾದಿ ಉತ್ಪಾದನೆಯನ್ನು ಕೈಗೊಂಡವು, ಜಿಲ್ಲೆಯ ಬರ ಪ್ರದೇಶಗಳ ಪಾಲಿಗೆ ಈ ಕೇಂದ್ರಗಳು ವರಪ್ರಸಾದವಾದವು. ಚುನಾಯಿತ ಅಧ್ಯಕ್ಷರುಗಳಾಗಿದ್ದ ಮೈಸೂರಿನ ಶ್ರೀ ಸುಬ್ಬಣ್ಣನವರು (ಶ್ರೀಮತಿ ನಾಗರತ್ನಮ್ಮನವರ ಪತಿ) ಹಾಸನದ ಗುಂಡಪ್ಪಗೌಡರು, ಕೋಲಾರದ ಚಂಗಲರಾಯ ರೆಡ್ಡಿ, ಚಿತ್ರದುರ್ಗದ ವಾಸುದೇವ ರಾಯರು, ಬೆಂಗಳೂರಿನ ಸುಬ್ಬರಾಮಶೆಟ್ಟರು, ತುಮಕೂರಿನ ಡಿ. ಎಸ್. ಮಲ್ಲಪ್ಪ ನವರು ಖಾದಿ ಉದ್ಯಮಗಳಿಗೆ ಪ್ರೋತ್ಸಾಹವಿತ್ತ ಆ ಕಾಲದ ಸಾರ್ವಜನಿಕ ನಾಯಕರು. ರಾಜಾರಾಮಯ್ಯಂಗಾರ್ ಈ ಅರೆ ಸರ್ಕಾರಿ ಉದ್ಯಮಗಳಿಗೆಲ್ಲ ಸಲಹೆಗಾರರು. ಮೈಸೂರು ರಾಜ್ಯ ಹೀಗೆ ಖಾದಿ ಉದ್ಯಮದಲ್ಲಿ ದೊಡ್ಡ ಹೆಜ್ಜೆ ಇಟ್ಟಿತು. ಆರೋಗ್ಯ ಸುಧಾರಣೆಗಾಗಿ ಎರಡು ಮೂರು ಸಲ ಗಾಂಧೀಜಿ ಇಲ್ಲಿನ ನಂದಿ ಬೆಟ್ಟದಲ್ಲಿ ಹಲವು ವಾರಗಳ ಕಾಲ ತಂಗುತ್ತಿದ್ದುದು ರಚನಾತ್ಮಕ ಕಾರ್ಯಕ್ಕೆ ಶಕ್ತಿಕೊಟ್ಟಿತು. ನೇರ ಸಂಘರ್ಷ ದೇಶೀ ರಾಜ್ಯಗಳಲ್ಲಿ ಆಗ ನಡೆದಿರಲಿಲ್ಲ. ಆದರೆ ಗ್ರಾಮ ಪುನರ್ರಚನೆಯ ಈ ಯೋಜನೆಗಳು ಯಶಸ್ವಿಯಾಗಿ ನಡೆದವು.

ಬದನವಾಳಿನ ರಜತಮಹೋತ್ಸವ 1960 ರಲ್ಲಿ ನಡೆದಾಗ ಬಂಗಾಳದ ಪ್ರಸಿದ್ಧ ಗಾಂಧೀವಾದಿ ಮತ್ತು ಖಾದಿ ಪ್ರತಿಷ್ಠಾನದ ಸಂಸ್ಥಾಪಕ ವಿಜ್ಞಾನಿ ಸತೀಶಚಂದ್ರ ದಾಸ ಗುಪ್ತರು ಅಧ್ಯಕ್ಷರಾಗಿ ಬಂದಿದ್ದರು. ಗಾಂಧೀಜಿಯಂತೆಯೇ ಇದ್ದ ಈ ವಯೋವೃದ್ಧರು ಅಲ್ಲಿನ ಕಾರ್ಯಕ್ರಮಗಳನ್ನು ಮೆಚ್ಚಿ ಹರಸಿದರು. ಸ್ವತಂತ್ರ ಭಾರತದಲ್ಲಿ ಎಲ್ಲೆಲ್ಲ ಖಾದಿ ಕೇಂದ್ರಗಳಂತೆ ಬದನವಾಳು ಕ್ಷೇತ್ರವೂ ಖಾದಿ ಗ್ರಾಮೋದ್ಯೋಗ ಮಂಡಳಿಯ ಅಂಗ ಸಂಸ್ಥೆಯಾಯಿತು.

ವಿಶ್ರಾಂತರಾದ ಮೇಲೆ ರಾಜಾರಾಮಯ್ಯಂಗಾರ್ ಶಿವಮೊಗ್ಗದಲ್ಲಿ ಹಿರಿಯ ಸಮಾಜ ಸೇವಕ ರಾಮಕೃಷ್ಣರಾಯರು ಸ್ಥಾಪಿಸಿದ್ದ ಭಗವಾನ್ ಆಶ್ರಮದ ಟ್ರಸ್ಟಿ ಯಾಗಿ ನೆಲೆಸಿದರು. ಶ್ರೀ ನಾಗಪ್ಪ ಶೆಟ್ಟರ ಸುಪ್ರಸಿದ್ಧ ಗ್ರಾಮೋದ್ಯೋಗ ಕೇಂದ್ರಕ್ಕೆ ನೆರವಾದರು. ಕೊನೆಯವರೆವಿಗೂ ದೇಶದ ವಿವಿಧ ಭಾಗಗಳ ಖಾದಿ ಪ್ರೇಮಿಗಳು ಗೌರವ ದಿಂದ ಕಾಣುತ್ತಿದ್ದರು.

ಕೋಟೆಯ ಖಾದಿ ವಸ್ತ್ರಾಲಯ ತನ್ನ ಸುವರ್ಣ ಮಹೋತ್ಸವ ನೆರವೇರಿಸಿದಾಗ ಈ ಹಿರಿಯರನ್ನು ಸನ್ಮಾನಿಸಲಾಯಿತು. ಅನಂತರ 1983ರಲ್ಲಿ ಶ್ರೀ ಸದಾಶಿವಮ್ ಮತ್ತು ಶ್ರೀಮತಿ ಸುಬ್ಬಲಕ್ಷ್ಮಿ ಅವರನ್ನು ಕರ್ನಾಟಕ ಸರ್ವೋದಯ ಸಂಘ ಬರಮಾಡಿ ಕೊಂಡು ಗೌರವಿಸಿದಾಗ ಶ್ರೀ ರಾಜಾರಾಮಯ್ಯಂಗಾರ್ ತಮ್ಮ ಅನಾರೋಗ್ಯ ಸ್ಥಿತಿ ಯಲ್ಲೂ ಬೆಂಗಳೂರಿಗೆ ಬಂದು ಸ್ನೇಹಿತರನ್ನೆಲ್ಲ ಭೇಟಿಯಾದರು (ಆ ಸಂದರ್ಭದಲ್ಲಿ ತೆಗೆದ ಚಿತ್ರ ಪುಟ 101 ರಲ್ಲಿದೆ) 1987ರ ಅಕ್ಟೋಬರ್ 6ರಂದು ಶಿವಮೊಗ್ಗದಲ್ಲಿ

ಶ್ರೀ ರಾಜಾರಾಮಯ್ಯಂಗಾರ್ ತಮ್ಮ 85ನೇ ವಯಸ್ಸಿನಲ್ಲಿ ಸ್ವರ್ಗಸ್ಥರಾದರು. ಹಳೆಯ ಮೈಸೂರಿನ ಸಹಸ್ರಾರು ಖಾದಿ ಪ್ರೇಮಿಗಳು ಕೃತಜ್ಞತೆಯಿಂದ ಶ್ರದ್ಧಾಂಜಲಿಯನ್ನರ್ಪಿಸಿದರು. ವನಸುಮದಂತೆ ಸೌರಭ ಸೂಸಿ ತ್ಯಾಗ ಸೇವೆ ಮತ್ತು ದೇಶಭಕ್ತಿಗಳಿಂದ ಪ್ರೇರಿತರಾದ ಅವರ ದಿವ್ಯಜೀವನ ಗಾಂಧೀ ಯುಗದ ಒಂದು ಜೀವಂತ ಪ್ರತೀಕ. ಅವರ ನೆನಪು ಚಿರಕಾಲ ಉಳಿಯುವುದರಲ್ಲಿ ಸಂದೇಹವಿಲ್ಲ.

* * *

ಗಾಂಧಿ ವಾಣಿ

(೧೯೩೮ ರ ಹರಿಪುರ ಕಾಂಗ್ರೆಸ್ಸಿನಲ್ಲಿ ಮಹಾತ್ಮಾಗಾಂಧಿ ಹೇಳಿದ್ದು)


ಖಾದಿಯ ವಿಶಿಷ್ಟ ಪಂಥವನ್ನು ಇಪ್ಪತ್ತು ವರ್ಷಗಳಿಗೂ ಮೀರಿ ನನ್ನ ದೇಶಬಾಂಧವರಿಗೆ ಬೋಧಿಸಿದ್ದೇನೆ. ಸಾವಿನ ಅಂಚಿಗೆ ಬಂದಿರುವ ಈ ವಯಸ್ಸಿನಲ್ಲಿಯೂ ಇದನ್ನೇ ಬೋಧಿಸುವೆ. ಪ್ರಾರಂಭದಲ್ಲಿ ಜೀರ್ಣ ಚಿಂದಿಯಂತೆ ಕಾಣುತ್ತಿದ್ದ ಖಾದಿ, ಈಗ ಬದಲಾಗಿದೆ. ಯೌವನದ ಶಕ್ತಿ, ಆರೋಗ್ಯ ಮತ್ತು ಸೌಂದರ್ಯದಿಂದ ಈಗ ಶೋಭಿಸುತ್ತಿದೆ. ಆದ್ದರಿಂದಲೇ ಇಮ್ಮಡಿ ಉತ್ಸಾಹದಿಂದ ಸಂಪೂರ್ಣ ನಂಬಿಕೆಯಿಂದ ನಾನು ಈಗ ಖಾದಿ ಪಂಥವನ್ನು ಪ್ರತಿಪಾದಿಸಬಲ್ಲೆ. ಇದು ಸರಿ, ಎಂದು ನನ್ನ ಅಂತರ್ವಾಣಿ ಸ್ಪಷ್ಟವಾಗಿ ಸಮರ್ಥಿಸುತ್ತದೆ. ನಮ್ಮ ದೇಶದ ಸ್ವರಾಜ್ಯ ಖಾದಿಯ ಅಭಿವೃದ್ಧಿಯಲ್ಲಿ ಅಡಗಿದೆ ಎಂದು ನನಗೆ ಸುಸ್ಪಷ್ಟ.

ಸಂಗ್ರಹ : ಶ್ರೀ ಕೆ. ಎಸ್. ನಾರಾಯಣಸ್ವಾಮಿ

ತಗಡೂರು ಖಾದಿ ಕೇಂದ್ರ ಪ್ರಾರಂಭ ಹೇಗೆ?

ಶ್ರೀ ತಗಡೂರು ರಾಮಚಂದ್ರರಾಯರು
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ತಗಡೂರು ಖಾದಿ ಸಂಸ್ಥೆಯ ಸಂಸ್ಥಾಪಕರು
(ಬದನವಾಳಕ್ಕೆ ಆಗಾಗ್ಗೆ ಭೇಟಿ ಕೊಟ್ಟು ಸಲಹೆ-ಸೂಚನೆಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು.)

ಶ್ರೀ ತಗಡೂರು ರಾಮಚಂದ್ರರಾಯರು ನಿಷ್ಠಾವಂತ ಖಾದಿ ಕಾರ್ಯಕರ್ತರು. ಮೂರ್ತಿಮಂತ ಸತ್ಯಾಗ್ರಹಿಗಳು, ಸ್ವಾತಂತ್ರ್ಯ ಯೋಧರು. ಜೀವನದುದ್ದಕ್ಕೂ ಖಾದಿಕಾರ್ಯ ಮತ್ತು ಹೋರಾಟ ಮಾಡುತ್ತಲೇ ಬಂದವರು. ಅವರ ಸೇವೆಗೆ ಪುರಸ್ಕಾರವಾಗಿ ಈ ವರುಷದ 'ಬಜಾಜ್ ಅವಾರ್ಡ್' ಅವರಿಗೆ ದೊರಕಿದೆ. ಈಗ ತಗಡೂರು ಖಾದಿ ಕೇಂದ್ರದ ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದಾರೆ.



ಮಹಾತ್ಮಾಜಿಯವರ "ಹಿಂದ-ಸ್ವರಾಜ್ಯ" ಪುಸ್ತಕ ನನ್ನ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿತ್ತು. ಆ ಮೂಲ ತತ್ವಗಳನ್ನು ಅನುಷ್ಠಾನಕ್ಕೆ ತರುವ ಯೋಜನೆಗಳನ್ನು ಮನಸ್ಸಿನಲ್ಲಿ ರೂಪಿಸಿಕೊಳ್ಳುತ್ತಿದ್ದೆ. ಬಂದ ಹತ್ತು ಜನರೊಡನೆ ಅದನ್ನು ಚರ್ಚಿಸುತ್ತಲೂ ಇದ್ದೆ.

ಹೀಗಾಗಿ ಸ್ವದೇಶೀ ಪ್ರಚಾರದ ಅಂಗವಾಗಿ ಮಹಾತ್ಮಾ ಗಾಂಧಿಯವರು ಮೊಟ್ಟಮೊದಲು ತೊಡುವ ಬಟ್ಟೆಯನ್ನು ಸ್ವದೇಶಿಯನ್ನಾಗಿ ಮಾಡಲೆಂದು, ಜನತೆ ಕುಳಿತಲ್ಲಿ, ನಿಂತಲ್ಲಿ, ನುಡಿದಲ್ಲಿ, ತಕಲಿಯಿಂದಲೋ, ರಾಟೆಯಿಂದಲೋ ದಾರವನ್ನು ತೆಗೆಯುವ ಸೂಚನೆಯನ್ನು ಕೊಟ್ಟರು. 'ಹಳೆಯ ಕಾಲದ ರಾಟೆಗಳು ಹಳ್ಳಿಗಳಲ್ಲಿ ಇದ್ದವು. ಅವನ್ನು ತೆಗೆಸಬೇಕು. ಅದರ ಸಂಖ್ಯೆಯನ್ನು ನಿಗದಿಮಾಡಿ, ಅವು ಮತ್ತೆ ಗುಂಯ್ ಗುಡುವ ಸಾಹಸವನ್ನು ಮಾಡಬೇಕು' ಎಂಬ ಕರೆಕೊಟ್ಟರು.

ನಾನು ತಗಡೂರಿನಲ್ಲಿ ವಯಸ್ಸಾದ ಮುದುಕರನ್ನು, ಮುದುಕಿಯರನ್ನು ಕಂಡು ರಾಟೆಗಳ ಬಗ್ಗೆ ಮಾತನಾಡಿದೆ. ಅವರಲ್ಲಿ ಕೆಲವರು ರಾಟೆಯನ್ನು ಉಪಯೋಗಿಸಿದ ನೆನಪಿದ್ದವರು, ಅದಲ್ಲದೆ ಮನೆಯ ಹಳೆಯ ಸಾಮಾನಿನ ಸಂಗ್ರಹದಲ್ಲಿ ರಾಟೆಯನ್ನು ನೋಡಿದ್ದವರು ಹಲವರಿದ್ದರು. ಅದನ್ನು ಉಪಯೋಗಿಸುವ ಮಾತು ಬಂದಾಗ ಅದು ಗಿಟ್ಟದ ಕಸುಬೆಂದು ನಿರಾಸೆಯನ್ನು ತೋರಿಸದವರೇ ಹೆಚ್ಚು ಮಂದಿ.

ನಾನು ಹಾಗೆ ಆ ಹಿರಿಯ ಜನರ ಮನವೊಲಿಸಿ ಅಟ್ಟಗಳಿಂದ ಅವುಗಳನ್ನು ಕೆಳಕ್ಕೆ ಇಳಿಸುವ ಪ್ರಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಸಫಲನಾದೆ. ತಗಡೂರು ಒಂದರಲ್ಲಿಯೇ ಹತ್ತಾರು ರಾಟೆಗಳು ಹೊರಬಂದವು. ರಾಟೆಯ ಮಾತೇ ಮರೆತು ಹೋಗಿದ್ದ ಆಗ, ಆ ಮಾತು ನಾಲ್ಕು ಜನರ ಬಾಯಿಯಲ್ಲಿ ಬರಬೇಕೆಂಬ ಅಪೇಕ್ಷೆಯಿಂದ ಅದಕ್ಕೊಂದು ಪ್ರಚಾರವನ್ನು ಕೊಡಬೇಕೆಂದಾಲೋಚಿಸಿ, ರಾಟೆಯ ಚಿತ್ರ ಎಲ್ಲೆಲ್ಲಿಯೂ ಕಣ್ಣಿಗೆ ಬೀಳಲೆಂದು ಹಳೆಯ ಡಬ್ಬದ ತಗಡಿನ ಮೇಲೆ ರಾಟೆಯ ಚಿತ್ರವನ್ನು ಬರೆಯಿಸಿ, ಆ ಆಕಾರವನ್ನು ತಗಡಿನಲ್ಲಿ ಉಳಿಯುವಂತೆ ಕತ್ತರಿಸಿದೆ. ಊರಸಂತ್ತೆ ಎಲ್ಲಿಯೋ ಇದ್ದ ಕೆಮ್ಮಣ್ಣಿನ ಕೆಸರನ್ನು ಮಾಡಿಕೊಂಡು ಒಂದು ಹಳೆಯ ಬಟ್ಟೆಯ ಸಹಾಯದಿಂದ ತಗಡನ್ನು ಗೋಡೆಯ ಮೇಲೆ ಇಟ್ಟು, ರಾಟೆಯಾಕಾರದ ಕತ್ತರಿಸಿದ ಭಾಗಕ್ಕೆ ಬಳಿದು ತಗಡನ್ನು ಎತ್ತಿದರೆ, ಗೋಡೆಯಲ್ಲಿ ಕೆಮ್ಮಣ್ಣಿನ ರಾಟೆಯ ಚಿತ್ರ ಉಳಿದುಕೊಳ್ಳುತ್ತಿತ್ತು.

ಹಲವು ಮಿತ್ರರನ್ನು ಇದಕ್ಕಾಗಿ ನೆರವಿಗೆ ತೆಗೆದುಕೊಂಡು, ಒಂದು ರಾತ್ರಿಯಲ್ಲಿ ತಗಡೂರಿನ ಮನೆ ಮನೆಯ ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿದೆ. ಬೆಳಗ್ಗೆ ಏಳುವಾಗ ಜನಕ್ಕೆ ಕಂಡದ್ದು ಎಲ್ಲಿ ನೋಡಿದರೂ ರಾಟೆಗಳೇ, ಯಾರ ಬಾಯಲ್ಲಿ ನೋಡಿದರೂ ರಾಟೆಯ ಮಾತೇ, ಪ್ರಚಾರ ಸಫಲವೆಂದು ಕಂಡು ಬಂದದ್ದರಿಂದ, ಪಕ್ಕದ ನಾಲ್ಕಾರು ಹಳ್ಳಿಗಳ ಗೋಡೆ ಗೋಡೆಗಳ ಮೇಲೆ ರಾಟೆಗಳನ್ನು ಬಿಡಿಸಿದೆ. ಜನ ಕುತೂಹಲದಿಂದ ಅದರ ಹಳೆಯ ಉಪಯೋಗವನ್ನು ನೆನೆದರು, ಅದರ ಬಗ್ಗೆ ಮಾತನಾಡತೊಡಗಿದರು.

ಒಂದು ದಿವಸ ಹತ್ತಾರು ಹಳೆಯ ರಾಟೆಗಳನ್ನು, ದಾಟೆಗಳನ್ನು ಸರಿಮಾಡಿಸಿ, ತೊಳೆದು, ಹೊರಗೆ ಸಿಕ್ಕ ಕಾಡು ಹೂಗಳಿಂದ ಅಲಂಕರಿಸಿ, ಉದ್ದನೆಯ ಮೆರವಣಿಗೆಯನ್ನು ಹೊರಡಿಸಿದೆ. ಅದಕ್ಕೆ ಜನರ ಬೆಂಬಲ ಸಿಕ್ಕಿತು. ಕೆಲವರು ರಾಟೆಯ ಪುನರುತ್ಥಾನವನ್ನು ಕುರಿತು ಘೋಷಣೆಗಳನ್ನು ಕೂಗುತ್ತಿರುವಾಗ, ಮೆರವಣಿಗೆಯ ಮುಂಭಾಗದಲ್ಲಿ ಹಳೆಯ ಡಬ್ಬವನ್ನು ಒಬ್ಬನು ಬಡಿಯುತ್ತಿದ್ದನು. ಈ ಶಬ್ದಕ್ಕೆ ಮನೆ ಮನೆಯ ಜನ ಹೊರಕ್ಕೆ ಬರುತ್ತಿದ್ದರು, ನೋಡುತ್ತಿದ್ದರು. ಸುತ್ತಣ ಹಳ್ಳಿಗಳಲ್ಲಿ ಈ ಪ್ರಚಾರ ಮಾಡಿದೆ.

ರಾಟೆಯ ಬಗ್ಗೆ ಹೀಗೆ ಪ್ರಚಾರವಾದಾಗ ನೂಲುವವರನ್ನು ಗೊತ್ತುಹಚ್ಚಿದೆ. ಅವರ ಪಟ್ಟಿಯೊಂದನ್ನು ಮಾಡಿಕೊಂಡು ನಾಲ್ಕೈದು ಜನರನ್ನು ಒಪ್ಪಿಸಿದೆ. ನೂಲು ತೆಗೆಯುವುದು ಆರಂಭವಾಯಿತು. ಅವರುಗಳು 'ನೂತ ದಾರವನ್ನು ನಾನು ಕೊಂಡು ಕೊಳ್ಳುತ್ತೇನೆ' ಎಂದು ಅವರಿಗೆ ಆಶ್ವಾಸನೆಯನ್ನು ಕೊಟ್ಟೆ. ಈ ಆಶ್ವಾಸನೆಯಿಂದ ನೂಲುವವರ ಸಂಖ್ಯೆ 70–80ಕ್ಕೆ ಏರಿತು. ಅವರು ನೂತರು ನಿಜ. ಅದನ್ನು ಕೊಂಡು ಕೊಳ್ಳುವ ತ್ರಾಣ ನನಗಿರಲಿಲ್ಲ. ಆದರೂ ನಾನು ಕೊಳ್ಳಬೇಕು. ಹದಿನಾರುವಿನಲ್ಲಿ ಶ್ರೀ ಬಾಲಚಂದ್ರಯ್ಯನವರು ಉಪಾಧ್ಯಾಯರಾಗಿದ್ದರು. ಅವರಲ್ಲಿ ಆ ಪ್ರಸ್ತಾಪವನ್ನೆತ್ತಿದಾಗ ಅವರು ನೀಡಿದ ಸಹಕಾರ ತುಂಬ ದೊಡ್ಡದು. ಅವರು ನನ್ನನ್ನು ಹದಿನಾರು ಗ್ರಾಮದ ಮನೆಮನೆಗೆ ಕರೆದುಕೊಂಡು ಹೋದರು. ನನ್ನ ಕಾರ್ಯಕ್ರಮವನ್ನು ವಿವರಿಸಿದರು. ಜನ ಸ್ವಾಗತಿಸಿತು. ಕೆಲವರು ನಗದು ಹಣವನ್ನು ಕೊಟ್ಟರು, ಕೆಲವರು ದವಸವನ್ನು ಕೊಟ್ಟರು. ಇದನ್ನು ತಗಡೂರಿಗೊಯ್ದು ನೂಲನ್ನು ಶೇಖರಿಸುತ್ತಿದ್ದೆ.

ಶೇಖರವಾಗುತ್ತಿದ್ದ ನೂಲಿನ ಉಂಡೆಗಳು ಬಟ್ಟೆಯಾಗಿ ಪರಿವರ್ತನೆಗೊಳ್ಳದಿದ್ದರೆ ಸಾಧ್ಯವಿರಲಿಲ್ಲ. ಕಿರುಗುಂದದಲ್ಲಿ ನೇಕಾರರಿದ್ದರು. ಅವರನ್ನು ಕಂಡು ಈ ಬಗ್ಗೆ ಮಾತ ನಾಡಿದಾಗ ಈ ಒರಟು ದಾರದ ಬಟ್ಟೆಗೆ ಗಿರಾಕಿ ಸಿಕ್ಕುವುದರ ಬಗ್ಗೆ ಸಂಶಯ ತೋರಿದ ರಾದರೂ ಅದನ್ನು ನಾನು ವಹಿಸಿಕೊಂಡು ನೆಯ್ದು ಕೊಡಿರೆಂದೆ, ಅದಕ್ಕೆ ಒಪ್ಪಿದರು. ಹಾಸಿಗೆ ಗಿರಣಿಯ ನೂಲನ್ನು ಹಾಕಿ ಹೊಕ್ಕಿಗೆ ರಾಟೆಯಲ್ಲಿ ನೂತ ಈ ಒರಟು ದಾರ ವನ್ನು ಹಾಕಿಸಿದೆ. ಬಟ್ಟೆ ಒಂದು ತರಹೆಯಾಗಿ ಬಂತು.

ತೆಳ್ಳನೆಯ ಸೊಗಸಾದ ಗಿರಣಿಯ ಅರಿವೆಯನ್ನು ಉಟ್ಟ ಜನ ಇದನ್ನು ತೆಗೆದು ಕೊಳ್ಳಲಿಲ್ಲ. ಗಂಟುಕಟ್ಟಿ ಬೆಂಗಳೂರಿಗೆ ತೆಗೆದುಕೊಂಡು ಹೋದೆ. ಇಂಡಿಯನ್ ಪ್ರೆಸ್ಸಿನ ಶ್ರೀ ಎ. ಎಸ್. ನಾರಾಯಣರಾಯರು ನನ್ನ ಈ ಉದ್ಯಮದಲ್ಲಿ ನೆರವಾದರು. ಅವರ ಮುದ್ರಣಾಲಯದ ಮೆಟ್ಟಲ ಕೆಳಗಣ ತೆರೆದ ಜಾಗ ನನ್ನ ಅಂಗಡಿಯಾಯಿತು. ಬಂದ ಬಂದವರಿಗೆ ಭಾಷಣ ಬಿಗಿದು ಅಲ್ಪಸ್ವಲ್ಪವನ್ನು ಮಾರಾಟಮಾಡುತ್ತಿದ್ದೆ.

ನಾನು ಇಲ್ಲಿ ನೂಲುವವರಿಗೆ, ನೇಕಾರರಿಗೆ, ಹಣ ತೆರಬೇಕಾಗಿತ್ತು. ಅದು ಈ ಮಾರಾಟದಿಂದ ಎಟುಕುತ್ತಿರಲಿಲ್ಲ, ಕಾರಣ ಚಂದಾ ಎತ್ತಲು ಶ್ರೀ ನಾರಾಯಣರಾಯ ರಲ್ಲಿ ಯೋಚಿಸಿದೆ. ಇಬ್ಬರೂ ಕೂಡಿ ಮಹಾತ್ಮಾ ಗಾಂಧಿಯವರ ಭಾವಚಿತ್ರವಿದ್ದ ಹಣದ ನೋಟುಗಳಂತಹ ಟಿಕೆಟ್ಟುಗಳನ್ನು ಮುದ್ರಿಸಿ ಅದನ್ನು ಮಾರಾಟ ಮಾಡಿದ್ದ ರಿಂದ ಸುಮಾರು ಒಂದು ಸಾವಿರ ರೂಪಾಯಿಯ ನಿಧಿ ಸಂಗ್ರಹವಾಯಿತು. ಅದನ್ನು ಹೊತ್ತು ತಗಡೂರಿಗೆ ಓಡಿದೆ, ನೂಲುವವರಿಗೆ, ನೆಯ್ಯುವವರಿಗೆ ಒಂದು ಭರವಸೆ ಮೂಡಿತು.

ನೂಲು ಮತ್ತು ಅರಿವೆಗಳ ಉತ್ಪಾದನೆ ಹೆಚ್ಚಿತು. ಸ್ವಚ್ಛವಾದ ಖಾದಿಯ ಉತ್ಪತ್ತಿ ಈಗ ಸಾಧ್ಯವಾಯಿತು. ಅದನ್ನು ಜೋಪಾನ ಮಾಡಲೆಂದು ಒಂದು ಕೊಠಡಿಯನ್ನು ಉಚಿತವಾಗಿ ಸಂಗೀತ ಉಪಾಧ್ಯಾಯರಾದ ಶ್ರೀ ಶ್ರೀನಿವಾಸರಾಯರು ಕೊಟ್ಟರು. ಅದರಲ್ಲಿ ಶೇಖರಿಸಿದ ಆ ಕೊಠಡಿಯನ್ನು 'ಸ್ವರಾಜ್ಯ ಮಂದಿರ' ಎಂದು ಕರೆದೆ. ಈ ವೇಳೆಗೆ ನನ್ನ ಭಿಕ್ಷಾವೃತ್ತಿ ನಿಂತುಹೋಗಿ, ವಾರದ ಊಟವಾಗಿ ಪರಿಣಮಿಸಿತ್ತು. ಆ ಕೊಠಡಿಗೆ ಹತ್ತು ಪುಸ್ತಕಗಳನ್ನು ತಂದಿರಿಸಿದೆ. ಎರಡು ಪತ್ರಿಕೆ ತರಿಸಿದೆ. ಸಾರ್ವಜನಿಕ ವಾಚನಾಲಯ ಎಂದು ಘೋಷಿಸಿದೆ.

ಕಿರುಗುಂದದ ನೆಯ್ಗೆಯವರು ಹರಿಜನರಾಗಿದ್ದು ಅಸ್ಪೃಶ್ಯರಾಗಿದ್ದುದರಿಂದ ಅವರು ನೆಯ್ದು ಗಂಜಿಹಾಕಿದ ಅರಿವೆಗಳನ್ನು ನಾನು ಮುಟ್ಟುವುದು, ಮಾರುವುದು ಅಂದು ಅಲ್ಲಿನ ಸವರ್ಣಮತೀಯರಿಗೆ ಮೈಲಿಗೆಯಾಯಿತು. ನನ್ನನ್ನು ಬಹಿಷ್ಕರಿಸಿಬಿಟ್ಟರು. 'ಆಗಲಿ' ಎಂದು ತಾಳಿಕೊಂಡೆ. ಅವರಿಗೆ ನೋವಾಗುವುದಾದರೆ ನಾನು ಅದನ್ನು ಪ್ರತಿಭಟಿಸಬಾರದು ಎಂದುಕೊಂಡೆ. ಈ ಪ್ರಚಾರ ಮತ್ತು ಸೃಜನಾತ್ಮಕ ಕಾರ್ಯ ಸುಮಾರು ಐದು ವರುಷಗಳ ತನಕ ನಡೆಯಿತು.

ಈ ಐದು ವರುಷಗಳ ವೇಳೆಗೆ ನೂಲುವ–ನೇಯ್ವ ಜನಕ್ಕೆ ಎರಡು ಕಾಸು ಸಿಗುವಂತಾಯಿತು ಎಂದಾಗ ಕೊಠಡಿ ಸಾಲದಾಯಿತು. ಪ್ರತ್ಯೇಕವಾದ ಒಂದು ಕಟ್ಟಡ ಅವಶ್ಯಕವೆಂದೆನಿಸಿ 1929 ರ ಜನವರಿ 4 ರಂದು ಎದುರಿಗಿದ್ದ ನಿವೇಶನವನ್ನು ಶ್ರೀ ಎಸ್. ಶ್ರೀನಿವಾಸಯ್ಯನವರಿಂದ ಕೊಂಡುಕೊಂಡೆ ಜನಗಳನ್ನು ಸೇರಿಸಿ 1925 ರ ಮೇ 12 ರಂದು 'ಕರ್ನಾಟಕ ಖದ್ದರ್ ಪರಸ್ಪರ ಸಹಾಯ ಸಂಘ' ಎಂದು ಅದನ್ನು ಅಧಿಕೃತವಾಗಿ ಘೋಷಿಸಲಾಯಿತು. ಕೆಲಸ ನನಗೊಬ್ಬನಿಗೆ ಜಾಸ್ತಿಯಾಯಿತು ಎಂದಾಗ ಅದೇ ಊರಿನ ಹುಡುಗರು ನಾಲ್ವರಿಗೆ ಶಿಕ್ಷಣಕೊಡಿಸಿ, ಖಾದಿ ಕೇಂದ್ರದ ಕೆಲಸಗಳಿಗೆ ನೇಮಿಸಿದೆ. ನನ್ನ ವಾರದ ಊಟ ಹಾಗೆಯೇ ಮುಂದುವರಿದಿತ್ತು. ಬಟ್ಟೆಯನ್ನು ನೆಯ್ದು ಅಸ್ಪೃಶ್ಯನು ಹಾಕಿದ ಗಂಜಿ ನನಗೆ ಸೋಕಿ ನಾನು ಮೈಲಿಗೆಯಾಗಿದ್ದುದು ನನಗೆ ಕಂಡಿದ್ದಿರಬೇಕು. ಅವರು ಅದನ್ನು ಮುಟ್ಟಿದಾಗ ಅವರಿಗೆ ಹತ್ತುವ ಮೈಲಿಗೆ ಹೇಗಿರುತ್ತದೆಂಬುದನ್ನು ನೋಡುವ ಕುತೂಹಲದಿಂದ ಸಂಘದ ಸಭೆಗಳಲ್ಲಿ ಕೂಡ್ರಲು ಈ ಖಾದಿಯನ್ನೇ ಹಾಸಿದೆ. ನನಗೆ ಬಹಿಷ್ಕಾರ ಹಾಕಿದ್ದವರೂ ಬಂದು ಕುಳಿತರು. ಅವರಿಗೆ ಯಾವುದೇ ಮೈಲಿಗೆ ಹತ್ತಿದಂತೆ ನನಗೆ ಕಾಣಲಿಲ್ಲ, ಅಷ್ಟೇ ಅಲ್ಲ ಅಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದವರಲ್ಲಿ ಒಂದಿಬ್ಬರು ನನಗೆ ಬಹಿಷ್ಕಾರ ಹಾಕಿದ್ದ ಮನೆಗಳವರಿದ್ದರು, ಅವರೂ ಅದನ್ನು ಮುಟ್ಟುವುದು ಅನಿವಾರ್ಯವಾಗಿತ್ತು, ಹಾಗೆ ಬಂದು ಕುಳಿತವರಿಗೆ ಮುಟ್ಟಿ ಸರಕನ್ನು ಕೈಯಾಡಿಸುತ್ತಿದ್ದವರಿಗೆ ಆ ಬಹಿಷ್ಕಾರ ಇರಲಿಲ್ಲ, ಅವರಿಗೆ ಎಂದಿನ "ಮಡಿ" ಉಳಿದಿತ್ತು, ನಾನು ಮಾತ್ರ ಅಸ್ಪೃಶ್ಯರಲ್ಲಿ ಒಬ್ಬ ಅಸ್ಪೃಶ್ಯನಾಗಿಯೇ ಉಳಿದುಕೊಂಡೆ,

ಈ ವೇಳೆಗಾಗಲೇ ತಗಡೂರಿನಲ್ಲಿ ಒಂದು ಗ್ರಾಮ ಶಿಕ್ಷಣ ಸಭೆಯನ್ನು ಏರ್ಪಡಿಸಿದೆ. ಅದಕ್ಕೆ ನಾನೇ ಕಾರ್ಯದರ್ಶಿಯೆಂದು ಘೋಷಿಸಿಕೊಂಡೆ.

ಖಾದಿ ಉತ್ಪಾದನೆಯ ಕೆಲಸ ಹೀಗೆ ನಡೆಸುವಾಗ ನಾನು ಹತ್ತು ಜನರನ್ನು ನಿತ್ಯವೂ ನೋಡುತ್ತಿದ್ದೆ. ಅವರ ಕಷ್ಟ–ಸುಖಗಳನ್ನು ವಿಚಾರಿಸುತ್ತಿದ್ದೆ. ಸರಕಾರದ ಅಧಿಕಾರಿಗಳ ದೌರ್ಜನ್ಯ, ಅತ್ಯಾಸೆಗಳು ಅಲ್ಲಲ್ಲಿ ಕಿವಿಗೆ ಬೀಳುತ್ತಿದ್ದವು. ಮನಸ್ಸು ನೋವಿಗೆ ಈಡಾಗುತ್ತಿತ್ತು. ಪ್ರತಿಭಟಿಸಲು ನೊಂದ ಜನಕ್ಕೆ ಹೇಳುತ್ತಿದ್ದುದಲ್ಲದೆ, ಸಮಯ ಸಿಕ್ಕಿದಾಗಲೆಲ್ಲ ಆಡಳಿತಾಧಿಕಾರಿಗಳ ದೌರ್ಜನ್ಯ ಮತ್ತು ಹಿಂಸೆಗಳನ್ನು ಮೇಲಣ ಅಧಿಕಾರಿಗಳ ಬಳಿ ಪ್ರಬಲವಾಗಿ ವಿರೋಧಿಸುತ್ತಿದ್ದೆ. ಶ್ರೀಮಂತರು ಯಾವಾಗಲೂ ಆಡಳಿತಾಧಿಕಾರಿಗಳ ಬಾಲ ಹಿಡಿಯುವ ಸ್ವಭಾವವುಳ್ಳವರಾದ್ದರಿಂದ ನನ್ನ ಈ ನಡೆವಳಿಕೆ ಅಧಿಕಾರಿಗಳಿಗಾಗಲಿ, ಐಶ್ವರ್ಯವಂತರಿಗಾಗಲಿ ಹಿಡಿಸಲಿಲ್ಲ. ನೂಲುವುದು, ನೇಯುವುದು, ಮೊದಲಾದ ಕೈಗಾರಿಕೆಗಳಿಗೆ ಉತ್ತೇಜನ ಕೊಡುವ ನನ್ನ ಈ ಕೆಲಸದಿಂದ ಹತ್ತಾರು ಬಡಕುಟುಂಬಗಳು ನನ್ನಲ್ಲಿ ವಿಶ್ವಾಸವನ್ನಿಡುವುದು ಹೆಚ್ಚಾಯಿತು. ನನಗೆ ಸಂದ ಈ ಗೌರವ ಆ ಎರಡು ವರ್ಗದವರಲ್ಲಿಯೂ ಅಸೂಯೆ ಮತ್ತು ದ್ವೇಷಗಳನ್ನು ಕ್ರಮ ಕ್ರಮೇಣ ಹೆಚ್ಚು ಮಾಡಿತು.

ತಗಡೂರಿನಲ್ಲಿಯ ನನ್ನ ಈ ಬ್ರಿಟಿಷ ವಿರೋಧಿ ಚಟುವಟಿಕೆಗಳು ಆಂಗ್ಲ ಜಿಲ್ಲಾಧಿಕಾರಿ ಬೌರಿಂಗನಿಗೂ, ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಮೆಲ್ಲರನಿಗೂ ತಿಳಿಯಿತು. ಉರಿದೆದ್ದ ಅವರು ಒಂದು ದಿನ ಎಂಟು ಹತ್ತು ಕುದುರೆಗಳೊಡನೆ ಬಂದು ತಗಡೂರಿನ ಸಂದುಗೊಂದುಗಳಲ್ಲಿ ಸಂಚರಿಸಿ ಗದ್ದಲ ಮಾಡಿದ್ದರು. ಹೋಗುವಾಗ ಸ್ಥಳೀಯ ಅಧಿಕಾರಿಗಳಿಗೆ ನನ್ನನ್ನು ದೇವಸ್ಥಾನದಿಂದ ಓಡಿಸುವ ಸೂಚನೆಗಳನ್ನು ಕೊಟ್ಟುಹೋದರು.

ಹೀಗಿರುವಾಗ, ಒಮ್ಮೆ ನಾನು ಖಾದಿಯನ್ನು ಮಾರಲೆಂದು ಮೈಸೂರಿಗೆ ಹೋಗಿದ್ದ ಸಮಯದಲ್ಲಿ, ತಾಲ್ಲೂಕ ಅಮಲ್ದಾರರೂ, ಪೋಲೀಸ್ ಇನ್‌ಸ್ಪೆಕ್ಟರರೂ ನನ್ನ ಮಂದಿರಕ್ಕೆ ನುಗ್ಗಿ ನನ್ನ ವಸ್ತುಗಳನ್ನು ಎತ್ತಿಸಿಬಿಟ್ಟರು. ಶ್ರೀಮಂತ ವರ್ಗಕ್ಕೆ ಅದು ಪ್ರಿಯವೇ ಆಯಿತು. ಬಡವರು ನನ್ನ ಕಡೆಯೇ ಆದರೂ ಸರಕಾರದ ಅಧಿಕಾರಿಗಳಿಗೆ ಹೆದರಿ ಸುಮ್ಮನಾಗಿದ್ದರು. ದೇ॥ ವೆಂಕಟಕೃಷ್ಣಯ್ಯನವರು ಆಗಿನ ದಿವಾನರಾದ ಬ್ಯಾನರ್ಜಿಯವರಿಗೆ ವಿಷಯವನ್ನು ತಿಳಿಸಿದಾಗ ಅವರು ಸಬ್ ಡಿವಿಜನ್ ಅಧಿಕಾರಿಯನ್ನು ತಗಡೂರಿಗೆ ಕಳಿಸಿ, ಅಲ್ಲಿನ ಪಾಠಶಾಲೆಯಲ್ಲಿ ವಿಶೇಷ ನ್ಯಾಯಾಲಯವನ್ನು ಏರ್ಪಡಿಸಿ ಸ್ವರಾಜ್ಯ ಮಂದಿರದ ವಸ್ತುಗಳನ್ನು ಹಿಂದಿರುಗಿಸುವ ವ್ಯವಸ್ಥೆ ಮಾಡಿದರು.

ಅವರು ಅಷ್ಟಕ್ಕೇ ಬಿಡಲಿಲ್ಲ. ಈ ಇಬ್ಬರೂ ಗ್ರಾಮಗಳಲ್ಲಿ ಪ್ರವಾಸ ಮಾಡುವಾಗ ನನಗೆ ಕುಡಿಯಲು ನೀರನ್ನಾದರೂ ಕೊಡಕೂಡದೆಂದು ಆಜ್ಞಾಪಿಸುತ್ತಿದ್ದುದಲ್ಲದೆ

ಬಡಿದು ಓಡಿಸಬೇಕೆಂದು ರಹಸ್ಯವಾಗಿಯೂ ಜನರಿಗೆ ಹೇಳುತ್ತಿದ್ದರು. ಅದು ಕಾರ್ಯ ರೂಪಕ್ಕೆ ಬರುವುದೆಂಬ ವದಂತಿ ನನ್ನ ಕಿವಿಗೆ ಬಿದ್ದ ಕೂಡಲೆ ದಿವಾನ್‌ರವರಿಗೂ, ಕೌನ್ಸಿಲ್ ರುಗಳಿಗೂ ತಿಳಿಸಿದೆ. ಅದು ಪ್ರಯೋಜನವಾಗಲಿಲ್ಲ. ನಂತರ ಅದೇ ಅಮಲ್ದಾರರು ನಾನು ಕಂದಾಯವನ್ನು ಕೊಡಕೂಡದೆಂಬ ಅಸಹಕಾರ ಚಳುವಳಿಯನ್ನು ಹೂಡಿರುವು ದಾಗಿಯೂ, ಹಳೇನಾಡು ಕರ್ನಾಟಕ ಬ್ರಾಹ್ಮಣನಾದ್ದರಿಂದ ದೇವಸ್ಥಾನವನ್ನು ಅಪವಿತ್ರ ಮಾಡಿದ್ದೇನೆಂದು ಬಗೆದು, ನನಗೆ ದೇವಸ್ಥಾನವನ್ನು ಬಿಡಬೇಕೆಂದು ತಿಳಿವಳಿಕೆಯನ್ನು ಕೊಟ್ಟರು.

ನಾನು ಅದಕ್ಕೆ ಜಗ್ಗಲಿಲ್ಲ. ನಾನು ಪೂಜಿಸುವ ದೇವರುಗಳ ಹತ್ತಿರವಿರಿಸಿದ್ದ ಶ್ರೀ ಮನ್ಮಹಾರಾಜ ಒಡೆಯರ ಭಾವಚಿತ್ರವನ್ನು 1924ನೆಯ ಜನವರಿ 14ನೇ ಸೋಮವಾರದ ದಿವಸ ಕಳವು ಮಾಡಿಸಿಬಿಟ್ಟಿದ್ದಲ್ಲದೆ, ಅನೇಕ ಕೆಡಕನ್ನುಂಟುಮಾಡಲು ಹವಣಿಸಿದರು. ಅಧಿಕಾರಿಗಳು ಸುತ್ತ ಮಾಡುತ್ತಿದ್ದ ದೌರ್ಜನ್ಯವನ್ನೂ, ನನ್ನ ಕಣ್ಣಿಗೆ ಕಂಡ ಅನೇಕ ಹೇಯ ಕೃತ್ಯಗಳನ್ನೂ ಸವಿವರವಾಗಿ ಬಣ್ಣಿಸಿ ನಾನು 'ಸಂಪದಭ್ಯುದಯ' ಪತ್ರಿಕೆಯಲ್ಲಿ 1924 ನೇ ಜನವರಿ 30 ರಂದು ಬಹಿರಂಗ ಪತ್ರವನ್ನು ಪ್ರಕಟಿಸಿದೆನು. ನಂತರ ಧರ್ಮ ಹೇಗೆ ನಶಿಸಿಹೋಗುತ್ತದೆ, ಸ್ವಾರ್ಥ ಮತ್ತು ದುರಾಚಾರಗಳು ಹೇಗೆ ತಲೆಯೆತ್ತಿ ಮೆರೆಯುತ್ತಿವೆ ಎಂಬುದನ್ನೂ ಕರ್ನಾಟಕದ ವೈಭವ ಮತ್ತು ಸತ್ಯಸಂಧತೆ ಗಳನ್ನು ಬಣ್ಣಿಸಿ ಮಹಾರಾಜರಿಗೆ ಅದೇ ಪತ್ರಿಕೆಯಲ್ಲಿ 1924 ರ ಜೂನ್ 5 ರ ಮತ್ತು 25 ರ, ಜುಲೈ 27 ರ ಸಂಚಿಕೆಗಳಲ್ಲಿ ಮತ್ತೆರಡು ಬಹಿರಂಗ ಪತ್ರಗಳನ್ನು ಬರೆದೆ.

ಮೂರನೆಯ ಪತ್ರದಲ್ಲಿ "ಓ ಕರ್ನಾಟಕೇಶ್ವರ, ಯುಗ ಯುಗಾಂತರದಿಂದ ಸಿರಿ ವೈಭಗಳಿಂದ ತುಂಬಿ ತುಳುಕಾಡುತ್ತಿದ್ದ ಕರ್ನಾಟಕವು ಇಂದು ಪಾಪಮಯವಾದ ದುಃಖ ಸಾಗರದಲ್ಲಿ ತೇಲಾಡುತ್ತಿರುವುದನ್ನು ಯಾರು ತಾನೆ ನೋಡಿ ಸಹಿಸಬಹುದು ?—" ಎಂದು ಮುಂತಾಗಿ ವರ್ಣಿಸಿ ಆಗ ತಾನೆ ಪ್ರಜಾಪ್ರತಿನಿಧಿ ಸಭೆ ಮತ್ತು ಲೆಜಿಸ್ಲೇಟಿವ್ ಕೌನ್ಸಿಲ್ಲುಗಳಲ್ಲಿ ಪರ್ಯಾಲೋಚನೆಗೆಂದು ತಂದಿದ್ದ 'ಪ್ರೆಸ್ ಆಕ್ಟ್'ನ್ನು ಬಲವಾಗಿ ವಿರೋಧಿಸಿದೆ.

ಖಾದಿಯ ಉತ್ಪತ್ತಿ ಹೀಗೆ ತಗಡೂರಿನಲ್ಲಿ ಕ್ರಮೇಣ ವೃದ್ಧಿಗೊಂಡು ಅದರ ಮಾರಾಟದ ಒಂದು ವ್ಯವಸ್ಥೆ ಅನಿವಾರ್ಯವಾದಾಗ,'ಲ್ಯಾನ್ಸ್‌ಡೌನ್ ಕಟ್ಟಡದಲ್ಲಿ ಒಂದು ಮಳಿಗೆಯನ್ನು ತೆಗೆದುಕೊಂಡು 1925 ರ ಜೂನ್ 12 ರಂದು ಅದನ್ನು "ಖದ್ದರ್ ಪರಸ್ಪರ ಸಹಾಯ ಸಂಘ ಲಿ. ಮೈಸೂರು" ಎಂಬ ಸಹಕಾರ ಸಂಘವನ್ನು ಸ್ಥಾಪಿಸಿದೆ. ಇದಕ್ಕೆ ತಗಡೂರಿನ ಖಾದಿ ಕೆಲಸಗಾರರಾದ ಶ್ರೀ. ಅಶ್ವತ್ಥನಾರಾಯಣಪ್ಪನವರು ಮತ್ತು ಶ್ರೀ ಸೂರ್ಯನಾರಾಯಣಪ್ಪನವರುಗಳನ್ನು ಮೈಸೂರಿಗೆ ಕಳಿಸಲಾಯಿತು. ಈ ದಿವಸ

ದವರೆಗೂ ತಗಡೂರಿನ ಕೆಲಸಗಾರರೇ ಇಲ್ಲಿನ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಈಗಿನ ಶ್ರೀ ಶ್ರೀಕಂಠಯ್ಯನವರು 1941 ರಿಂದ ಕೆಲಸವನ್ನು ನಿರ್ವಹಿಸುತ್ತಿದ್ದಾರೆ. ಅಲ್ಲಿ ಖಾದಿಯ ಮಾರಾಟ ಇಂದಿಗೂ ನಡೆದುಕೊಂಡು ಬರುತ್ತಿದೆ. ಖಾದಿಯ ಹುಟ್ಟುವಳಿಗಾಗಿ ತಗಡೂರಲ್ಲಿ "ಕರ್ನಾಟಕ ಖದ್ದರ್ ಕೋ ಆಪರೇಟಿವ್ ಸೊಸೈಟಿ ಲಿಮಿಟೆಡ್, ತಗಡೂರು" ಎಂಬುದನ್ನು 1925 ರ ನವೆಂಬರ್ 26 ರಂದು ಸ್ಥಾಪಿಸಿದುದಾಯಿತು. ಈ ನಂತರ ಬೆಂಗಳೂರಿನ ಕೋಟೆಯಲ್ಲಿ ದೊಡ್ಡಣ್ಣನವರ ಕಟ್ಟಡದಲ್ಲಿ ಒಂದು ಅಂಗಡಿಯನ್ನು ಬಾಡಿಗೆಗೆ ಗೊತ್ತುಮಾಡಿ, 1926 ನೇ ಜೂನ್ 2 ರಂದು ಶ್ರೀ ಕರ್ಪೂರ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ 'ಖಾದಿ ವಸ್ತ್ರಾಲಯ'ವನ್ನು ಆರಂಭಿಸಲಾಯಿತು. ಇದಕ್ಕೆ ರಾಜಾಜಿಯವರ ಸಂಪೂರ್ಣ ಬೆಂಬಲ ದೊರಕಿತು. ಶುದ್ಧ ಖಾದಿಯ ಮಾರಾಟವ ಈ ವ್ಯವಸ್ಥೆಯನ್ನು ಕೇಳಿದ ಅವರು ತುಂಬಾ ಸಂತೋಷಪಟ್ಟರು.

ಈ ಗ್ರಾಮ ಕೈಗಾರಿಕೆ ಹೀಗೆ ಮುಂದುವರಿದಿರುವಾಗ 1927 ರಲ್ಲಿ ಪೂಜ್ಯ ಮಹಾತ್ಮಾ ಗಾಂಧಿಯವರು ಅಖಿಲಭಾರತ ಚರಕಾ ಸಂಘದ ಪ್ರಚಾರಕ್ಕಾಗಿ ಪ್ರವಾಸ ಮಾಡುವಾಗ ಮೈಸೂರಿಗೆ ದಯಮಾಡಿಸಿದರು. ಮೈಸೂರು ದೇಶದಲ್ಲಿ ನೂಲುವ ಕೇಂದ್ರವೊಂದನ್ನು ಸ್ಥಾಪಿಸುವ ಯೋಜನೆಯನ್ನು ಅವರು ಕೈಗೆತ್ತಿಕೊಂಡಾಗ ಅವರ ಕಣ್ಣಿಗೆ ಬಿದ್ದದ್ದು ಎಂದರೆ ತಗಡೂರು. ಕಾರಣವೆಂದರೆ ಈ ಕ್ಷೇತ್ರದಲ್ಲಿ ಈ ಕೈಗಾರಿಕೆಗೆ ವಾತಾವರಣ ಈ ಮೊದಲೇ ಸಿದ್ಧವಾಗಿತ್ತು. ಅಲ್ಲದೆ ಅಂತಹ ಕೇಂದ್ರದ ಸ್ಥಾಪನೆಗೆ ಮೈಸೂರು ಮಹಾರಾಜರವರ ಸರಕಾರ ತಮ್ಮ ಒಪ್ಪಿಗೆಯನ್ನು ಕೊಟ್ಟಿತ್ತು. ಆದ್ದರಿಂದ ರೈಲು ನಿಲ್ದಾಣವಿರುವ ಬದನವಾಳವನ್ನು ನೂಲುವ ಕೇಂದ್ರವನ್ನಾಗಿ ಮಾಡಲಾಯಿತು. ಈ ಕಾರ್ಯ ನಿರ್ವಹಣೆಗಾಗಿ ಹುಬ್ಬಳ್ಳಿ ಚರಕಾ ಸಂಘದಿಂದ ಶ್ರೀ ಸಿದ್ದೋರಾವ್ ಪೂಜಾರಿಯವರನ್ನು ನೇಮಿಸಲಾಯಿತು. ತಗಡೂರಿನಿಂದ ಖಾದಿ ಕೆಲಸಗಾರರಾದ ಶ್ರೀ ವೆಂಕಟನಾರಣಪ್ಪ ಮತ್ತು ಶ್ರೀ ವೆಂಕಟಗಿರಿಯಪ್ಪನವರುಗಳನ್ನೂ ಬದನವಾಳು ಕೇಂದ್ರಕ್ಕೆ ಕಳಿಸಲಾಯಿತು. ಹೀಗೆ ಖಾದಿ ಕಾರ್ಯದ ಶ್ರೀ ಗಣೇಶಾಯನಮಃ ಆಯಿತು.

* * *

ಬದನವಾಳ ಖಾದಿ

ಶ್ರೀ ಜಿ. ವಿ. ಸೀತಾರಾಮಯ್ಯನವರ
ಬದನವಾಳು ಕೇಂದ್ರದ ಹಿಂದೀ ಪ್ರಚಾರಕರ
ಮತ್ತು ಖಾದಿ ಕಾರ್ಯಕರ್ತರಾಗಿದ್ದವರು



ದೇಶದ ಸ್ವಾತಂತ್ರ ಹೋರಾಟದ ಮೊದಲನೆ ಘಟ್ಟವು ಈ ಶತಮಾನದ 1920-21 ರಲ್ಲಿ ಅಸಹಕಾರ ಆಂದೋಳನದ ಮೂಲಕ ಮುಗಿಯಿತು. ಅದರ ಎರಡನೇ ಘಟ್ಟ 1930-31 ರಲ್ಲಿ ನಡೆದ ವಿದೇಶೀ ವಸ್ತ್ರ ಬಹಿಷ್ಕಾರ ಹಾಗೂ ಕರನಿರಾಕರಣ ಆಂದೋಳನದೊಂದಿಗೆ ಪೂರ್ಣಗೊಂಡಿತು. ಮೂರಕ್ಕೆ ಮುಕ್ತಾಯ ಎಂಬಂತೆ ಸ್ವಾತಂತ್ರ್ಯ ಸಂಗ್ರಾಮದ ಮೂರನೆ ಮತ್ತು ಅಂತಿಮ ಘಟ್ಟ 1942 ರ ಚಲೇ ಜಾವ್ (Quit India) ಚಳವಳಿಯಲ್ಲಿ ಮುಕ್ತಾಯಗೊಂಡು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟಿತು. ಇಲ್ಲಿಗೆ ವಿದೇಶೀಯರ ವಿಶೇಷವಾಗಿ ಇಂಗ್ಲೀಷರ ಆಳ್ವಿಕೆ ಸಂಪೂರ್ಣವಾಗಿ ಇಲ್ಲದಂತೆ ಆಯಿತು.

ಸ್ವಾತಂತ್ರ ಸಮರವು ತನ್ನ ಮೊದಲನೆಘಟ್ಟ ಬಿಟ್ಟು ಎರಡನೆ ಘಟ್ಟಕ್ಕೆ ಕಾಲಿಡುವ ಮಧ್ಯದಲ್ಲಿ ಖಾದಿಯ ಉದಯವಾಯಿತು. ಇದರ ಸಾಧನೆ ಉದ್ದೇಶಗಳನ್ನು ವಿವರಿಸಿ ಪ್ರೇರಣೆ ಕೊಟ್ಟವರು, ಸ್ವಾತಂತ್ರ ಸಮರದ ಮುಂಚೂಣಿಯಲ್ಲಿದ್ದ ನೇತ ಮಹಾತ್ಮ ಗಾಂಧೀಜಿಯವರು. ದೇಶಾದ್ಯಂತ ವಸ್ತ್ರ ಸ್ವಾವಲಂಬನದ ಬೀಜಮಂತ್ರವನ್ನು ಬಿತ್ತಿದ ಮಹಾಮಹಿಮರು ಇವರು. ಗಾಂಧೀಜಿಯವರ ವಿಧಾಯಕ ಕಾರ್ಯ ಕ್ರಮಗಳಲ್ಲಿ ಅಗ್ರ

ಸ್ಥಾನಗಳಿಸಿದ್ದ "ಖಾದಿ" ವಸ್ತ್ರ ತಯಾರಿಕೆಯು ಸ್ವಾತಂತ್ರಗಳಿಸುವ ಕಾರ್ಯ ಚಟು ವಟಿಕೆಗಳಲ್ಲಿಯೂ ಅಗ್ರಸ್ಥಾನ ಹೊಂದಿತ್ತು. ಇದರ ಉತ್ಪಾದನೆ ಮತ್ತು ವ್ಯಾಪಕತೆಯು ಕಾವು ಇಂಗ್ಲೆಂಡಿನ ಅನೇಕ ಬಟ್ಟೆ ಗಿರಣಿಗಳಿಗೆ ಸಾಕಷ್ಟು ತಟ್ಟಿತು. ಅಂತಹ ಒಂದು ಸಶಕ್ತ ಅಸ್ತ್ರವಾಗಿತ್ತು ಖಾದಿ.

ಅರಳಿಯನ್ನು ಹಿಂಜಿ ಕೈಯಲ್ಲಿ ನೂತು ಕೈಮಗ್ಗದಿಂದ ನೆಯ್ದ ಬಟ್ಟೆಗೆ "ಖಾದಿ" ಎಂದು ಹೆಸರಿಟ್ಟರು ಮಹಾತ್ಮರು. ಅಂದಿನ ರಾಜಕೀಯದಿಂದ ದೂರವಿದ್ದರೂ ಸಹ ಅದಕ್ಕೆ ಇದು ಪೂರಕವಾಗಿತ್ತು. ಈಗಿನ ವೈಜ್ಞಾನಿಕ ಯುಗದ ನವಯುವಕರಿಗೆ ಖಾದಿ ಬಟ್ಟೆಯ ಮಹತ್ವದ ಅರಿವಿಲ್ಲದ್ದು ದುರದೃಷ್ಟಕರ. ಅದರ ಇತಿಹಾಸ ದೇಶದ ಆರ್ಥಿಕ ಕ್ಷೇತ್ರದಲ್ಲಿ ಅದರ ಪಾತ್ರ ಇವುಗಳ ಬಗ್ಗೆ ಒಂದು ಅಧ್ಯಯನ ಮಾಡುವ ಕ್ಷಮತೆ ಯನ್ನು ಸಹ ಹೊಂದಿರದ ಇಂದಿನ ಯುವ ಜನಕ್ಕೆ ಅದರ ಮಹತ್ವ ತಿಳಿಯುವು ದಾದರೂ ಹೇಗೆ ?

ಖಾದಿ ಉತ್ಪಾದನಾ ಕಾರ್ಯವು ದೇಶದಲ್ಲೆಲ್ಲಾ ವಿಶೇಷವಾಗಿ ಹಳ್ಳಿಗಳ ಕಡೆ ಹರ ಡಿತು. ನೇಕಾರರಿಗೂ ನೂಲುವವರಿಗೂ ಈ ಉದ್ಯೋಗದಿಂದಾಗಿ ಸ್ವಲ್ಪ ಹಣ ಗಳಿಸಲನು ಕೂಲವಾಯಿತು. ಇದನ್ನರಿತು ಮೈಸೂರಿನ ರಾಜರು ತಮ್ಮ ರಾಜ್ಯದಲ್ಲೂ ಒಂದು ಕೇಂದ್ರವನ್ನು ತೆಗೆಯಲು ನಿರ್ಧರಿಸಿದರು ದೇಶೀರಾಜರುಗಳಲ್ಲಿ ಇವರೇ ಮೊದಲಿಗರು. ಈ ರೀತಿ ಖಾದಿ ಉತ್ಪಾದನಾ ಕಾರ್ಯ ಕೈಕೊಂಡವರಲ್ಲಿ ಆಗಿನ ಮೈಸೂರು ಸರ್ಕಾರದ ವಾಣಿಜ್ಯ ಕೈಗಾರಿಕಾ ಇಲಾಖೆಯಿಂದ ಮೈಸೂರು ಜಿಲ್ಲೆಯ ಬದನವಾಳು ಗ್ರಾಮದ ಕ್ಷೇತ್ರವನ್ನು ಆರಿಸಿಕೊಂಡು ಈ ಖಾದಿ ಉದ್ಯಮವನ್ನು ಪ್ರಾರಂಭಿಸಿದರು. 1927ನೇ ವರ್ಷದಲ್ಲಿ ಬದನವಾಳು ಗ್ರಾಮದ ಹತ್ತಿರವಿರುವ ಒಂದು ಸ್ಮಶಾನ ಪ್ರದೇಶದಲ್ಲಿ ಬಹು ಸರಳ ಸಮಾರಂಭದೊಡನೆ ಕಛೇರಿ ಕೆಲಸ ಷುರುವಾಯಿತು. ಅಖಿಲ ಭಾರತ ಚರಖಾ ಸಂಘದ ಇಬ್ಬರು ನುರಿತ ಅನುಭವಿ ಕಾರ್ಯಕರ್ತರಾದ ಶ್ರೀಮಾನ್ ಸಿದ್ಧೋರಾವ್ ಪೂಜಾರ್, ಶ್ರೀ ಸೂ.ರಾಜಾರಾಮಯ್ಯಂಗಾರ್ ಇವರೇ ಈ ಇಬ್ಬರು ಕಾರ್ಯಕರ್ತರು. ನೂಲುವ ನೇಯುವ ಕೆಲಸಗಳನ್ನು ಸಕ್ರಿಯವಾಗಿ ನಡೆಯಿಸಿಕೊಂಡು ಹೋಗಲು ಬಂಡ ವಾಳದ ಹಣವನ್ನು ಹಾಗೂ ಕಛೇರಿಯ ಖರ್ಚು ವೆಚ್ಚಗಳನ್ನು ಸರ್ಕಾರವೇ ವಹಿಸಿ ಕೊಂಡಿತು. ತಯಾರಾದ ಖಾದಿಯ ಅರ್ಧವಷ್ಟನ್ನು ಸಹ ಸರ್ಕಾರದ ರೈಲ್ವೆ ಇಲಾಖೆಯ ಉಪಯೋಗಕ್ಕೆ ಕೊಡುತ್ತಿದ್ದರು. ಉಳಿದಿದ್ದನ್ನು ಸಾರ್ವಜನಿಕರಿಗೆ ಮಾರಾಟ ಮಾಡುವ ವ್ಯವಸ್ಥೆ ಮಾಡಿದರು. ಉತ್ಪತ್ತಿ ಹೆಚ್ಚಿ ಜನತೆಯಲ್ಲಿ ಹೆಚ್ಚಿನ ಆಸ್ಥೆ ಹುಟ್ಟಿದಂತೆಲ್ಲ ಬದ ನವಾಳು ನೂಲುವ ಕೇಂದ್ರದ ಅಂಗವಾಗಿ ಕಬ್ಬಳ್ಳಿ ಮತ್ತು ಚಿತ್ರದುರ್ಗದ ಹಾಗೂ ತುರುವನೂರುಗಳಲ್ಲಿಯೂ ಸಹ ಖರೀದಿ ಕೇಂದ್ರಗಳು ಸ್ಥಾಪನೆಯಾದವು. ಮೈಸೂರು

ರಾಜ್ಯ ಸರ್ಕಾರದ ಪ್ರಯತ್ನದಿಂದ ತಯಾರಾಗುತ್ತಿದ್ದ ಖಾದಿಯು 'ಬದನವಾಳು ಖಾದಿ' ಎಂಬ ಹೆಸರಿನಿಂದ ಪ್ರಸಿದ್ಧವಾಯಿತು.

ಈ ಕೇಂದ್ರದ ಬಗ್ಗೆ ಉಲ್ಲೇಖನೀಯ ಅಂಶವೆಂದರೆ ಅದು ಸರ್ಕಾರೀ ಇಲಾಖೆಯದ್ದಾದರೂ ಅದರಲ್ಲಿ ಕೆಲಸ ಮಾಡತಕ್ಕ ಎಲ್ಲರೂ ಏಕೀಭವಿಸಿ ಒಂದೇ ಕುಟುಂಬವೆಂಬಂತೆ ಕೂಡಿ ದುಡಿಯುತ್ತಿದ್ದರು. ಈ ದುಡಿಮೆಯ ನೆಲೆಗಟ್ಟು ಕಾರ್ಯಕರ್ತರ ಪ್ರಾಮಾಣಿಕತೆ ಶ್ರದ್ಧಾಸಕ್ತಿ ಮತ್ತು ಪರಿಶ್ರಮ ಆಗಿತ್ತು. ಬದನವಾಳು ಗ್ರಾಮದಿಂದ ಅರ್ಧ ಕಿಲೋ ಮೀಟರ್ ದೂರವಾಗಿದ್ದ ಈ ನೂಲುವ ಕೇಂದ್ರವು ಒಂದು ಆದರ್ಶಮಯ ಆಶ್ರಮವಾಗಿತ್ತೆಂದರೆ ಅತಿಶಯೋಕ್ತಿಯಾಗಲಾರದು.

ಕಛೇರಿಯ ಕೆಲಸ ಕಾರ್ಯಗಳು ಬೆಳಗಿನ ಪ್ರಾರ್ಥನೆಯೊಂದಿಗೆ ಶುರುವಾಗಿ ಸಂಜೆಯ ಪ್ರಾರ್ಥನೆಯೊಂದಿಗೆ ಮುಕ್ತಾಯವಾಗುತ್ತಿತ್ತು. ಕಛೇರಿಯಲ್ಲಿರುವಷ್ಟು ಹೊತ್ತು ಅವರವರ ಹುದ್ದೆಯ ಸ್ಥಾನಮಾನದ ಪ್ರಶ್ನೆ ಇರುತ್ತಿತ್ತು. ಉಳಿದಂತೆ ಎಲ್ಲರೂ ಒಂದು ಕುಟುಂಬದವರಂತೆ ವ್ಯವಹರಿಸುತ್ತಿದ್ದರು. ಇದಕ್ಕೆಲ್ಲಾ ಕಾರಣ ಅಲ್ಲಿಯ ಅಧಿಕಾರದಲ್ಲಿದ್ದ ವ್ಯವಸ್ಥಾಪಕರಾದ ಶ್ರೀ ರಾಜಾರಾಮಯ್ಯಂಗಾರ್‌ರವರ ಸರಳತೆ ಮತ್ತು ಸೌಜನ್ಯತೆಯೇ ಕಾರಣವಾಗಿತ್ತು. ಅಂತೆಯೇ ಅವರ ಕುಟುಂಬದವರೂ ಸಹ ಕೇಂದ್ರದ ಕೆಲಸ ಕಾರ್ಯಗಳು ಬೆಳೆದಂತೆಲ್ಲಾ ಖಾದಿ ಉತ್ಪಾದನೆಯ ಜೊತೆಗೆ ಇತರ ಗ್ರಾಮ ಕೈಗಾರಿಕೆಗಳೂ ಪ್ರಾರಂಭವಾದವು. ಗಾಣದ ಎಣ್ಣೆ, ಚಾಪೆ ಹೆಣೆಯುವುದು ಮತ್ತು ಕೈಕಾಗದ ತಯಾರಿಕೆ ಇವು ಮುಖ್ಯವಾದವು. ಹೀಗೆ ಖಾದಿ ಮತ್ತು ಇತರ ಗ್ರಾಮೋದ್ಯೋಗಗಳು ಇಲ್ಲಿ ಬೆಳೆದು ರಾಜ್ಯದ ಇತರ ಕಡೆಗಳಲ್ಲೂ ಕೇಂದ್ರಗಳನ್ನು ತೆರೆದು ವೃದ್ಧಿಗೊಳಿಸಲಾಯಿತು.

ಬದನವಾಳು ಖಾದಿಯ ವೈಶಿಷ್ಟ್ಯವೆಂದರೆ ನೂಲು ಹುರಿಕಟ್ಟು ಆಗಿದ್ದು ನೇಯ್ದ ಬಟ್ಟೆ ಬಹುದಿನ ಬಾಳಿಕೆ ಬರುವಂಥಾದ್ದು, ಈ ಖಾದಿ ಉದ್ಯಮವು ಖಾದಿ ಮಂಡಲಿಗಳಿಗೆ ವರ್ಗಾಯಿಸಲ್ಪಡುವವರೆಗೂ ಅದರ ಉತ್ಪಾದನೆ ಮತ್ತು ಮಾರಾಟ ಸಮ ಸಮವಾಗಿತ್ತು. ಜನರ ಗೌರವಾದರಗಳಿಗೂ ಪಾತ್ರವಾಗಿತ್ತು ಮೈಸೂರಿನಲ್ಲೂ ಜವಾಬ್ದಾರಿ ಸರ್ಕಾರ ಬಂದು ದೇಶವು ಸ್ವಾತಂತ್ರ ಪಡೆದ ನಂತರದ ವಿದ್ಯಮಾನಗಳಿಂದಾಗಿ ಅಂದಿನ ಅಭಿಮಾನದ ಖಾದಿ ಇಂದು ಇಲ್ಲದಂತಾಗಿದೆ. ಹಳೆ ನೀರಿನ ರೂಪ ಹೊಸ ನೀರಿನಿಂದ ಬದಲಾವಣೆ ಹೊಂದುವಂತೆ ನೌಕರಿಯ ಉದ್ದಿಶ್ಯವಿಟ್ಟುಕೊಂಡು ಬಂದ ಹೊಸ ಹೊಸ ಕಾರ್ಯಕರ್ತರು ನಿರಾಸಕ್ತಿಯಿಂದ ಖಾದಿ ತನ್ನ ಮಹತ್ವವನ್ನು ಕಳೆದುಕೊಂಡಂತಾಗಿದೆ. ಇದಕ್ಕೆ ಸರ್ಕಾರದ ಖಾದಿ ಬಗ್ಗೆ ಇರುವ ಅಸ್ಥಿರ ಧೋರಣೆಯೇ ಕಾರಣವೆನ್ನಬಹುದು. ಸ್ವಾತಂತ್ರ್ಯ ನಂತರ ಖಾದಿಯ ಪವಿತ್ರತೆಯಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಕಾಣಬರುವ

ದೋಷಗಳು ಇದರಲ್ಲೂ ಮನೆಮಾಡಿಕೊಂಡು ಅದರ ಬೆಳವಣಿಗೆ ಕುಂಠಿತವಾಗಲಾರಂಭಿಸಿದೆ. ಕೈರಾಟೆ ಮತ್ತು ಕೈಮಗ್ಗಗಳು ಈಗ ವಿದ್ಯುತ್ ಚಾಲಿತ ಯಂತ್ರಗಳಿಂದ ನಡೆಸಲ್ಪಟ್ಟ ಖಾದಿಯುಂ ತನ್ನ ನೈಜ ಸ್ವರೂಪವನ್ನೇ ಕಳೆದುಕೊಂಡಂತಾಗಿದೆ.

ಆಚಾರ್ಯ ಪ್ರಫುಲ್ಲ ಚಂದ್ರ ರಾಯ್‌ರವರು ಗಾಂಧಿ ವಿಚಾರವಾದಿ. ಖಾದಿಯನ್ನು ಅವರು ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತಿದ್ದರು. ತಾವೇ ನೂತ ನೂಲಿನಿಂದ ಬಟ್ಟೆ ಮಾಡಿಕೊಂಡು ಧರಿಸುತ್ತಿದ್ದರು. ಖಾದಿ ಬಗ್ಗೆ ಅವರ ವಿಚಾರ ಹೀಗಿತ್ತು. ಖಾದಿ ತಯಾರ್ಮಾಡುವುದು ಮತ್ತು ಧರಿಸುವುದು ಒಂದು ಅಗತ್ಯ. ಬಡವರೊಳಗೆ ಒಂದು ತನವನ್ನು ಬೆಳೆಯಿಸಿಕೊಳ್ಳುವುದಕ್ಕೆ ಮಾರ್ಗ, ಜೊತೆಗೆ ಅವರ ಬಡತನವನ್ನು ಪಾರುಮಾಡುವ ಒಂದು ಪ್ರಯತ್ನ. ಗ್ರಾಮಗಳಲ್ಲಿ ನಿರುದ್ಯೋಗ ಆಲಸ್ಯವನ್ನು ತೊಡೆದುಹಾಕಲು ಖಾದಿ ಒಂದು ಒಳ್ಳೆ ಉದ್ಯೋಗ. ಖಾದಿ ಧರಿಸುವುದೆಂದರೆ ಸ್ವದೇಶೀ ವ್ರತ ಪಾಲಿಸಿದ ಹಾಗೆ. ಈ ಶ್ರೇಷ್ಠ ವಿಚಾರಗಳು ಮೂರ್ತಿವೆತ್ತಿ ನಮ್ಮ ಮುಂದೆ ಕಾಣತೊಡಗುವುವು. ಈ ಬದನವಾಳು ಖಾದಿ ಕೇಂದ್ರದ ಚಟುವಟಿಕೆಗಳು ಸುತ್ತಮುತ್ತಲಿನ ಗ್ರಾಮಗಳಲ್ಲಿ ಒಂದೊಪ್ಪತ್ತಿಗೆ ಕಷ್ಟ ಎನ್ನುವ ಅನೇಕ ಹಳ್ಳಿಗರಿಗೆ ಖಾದಿಯು ಒಂದು ವರವಾಗಿ ಪರಿಣಮಿಸಿದೆ ಎನ್ನಬಹುದು.

ನಮ್ಮ ರಾಜ್ಯದಲ್ಲಿ ಮೊಟ್ಟಮೊದಲಿಗೆ ಈ ಖಾದಿಯ ಮಹತ್ವ ಖಾದಿಯ ಸಂಕೇತ ಮತ್ತು ಖಾದಿಯ ಸೇವೆಯನ್ನು ಎತ್ತಿ ಹಿಡಿದದ್ದು ಬದನವಾಳಿನಲ್ಲಿ. ಬದನವಾಳು ಖಾದಿ ಕೇಂದ್ರದ ವ್ಯವಸ್ಥಾಪಕರೂ ಕಾರ್ಯಕರ್ತರೂ ಸೇರಿ ಖಾದಿಯ ತತ್ವವನ್ನು ಬದನವಾಳು ಗ್ರಾಮಸ್ಥರಿಗೆ ಬೋಧಿಸಿ ತತ್ವ ನಿಷ್ಠರನ್ನಾಗಿ ಮಾಡಿಸಿ ಕಾರ್ಯರೂಪದಲ್ಲಿ ತರಲು ಸಹಾಯ ಮಾಡಿದರು. ಇಂಗ್ಲೀಷಿನಲ್ಲಿ ಟೀಮ್ ಸ್ಪಿರಿಟ್ ಅಂತಾರಲ್ಲ ಅದು ಈ ಕೇಂದ್ರದಲ್ಲಿತ್ತು. ಇವೆಲ್ಲದರ ಶ್ರೇಯಸ್ಸು. ಅಲ್ಲಿಯ ನಿಸ್ವಾರ್ಥ, ನಿಗರ್ವಿ, ನಿರಾಡಂಬರ ವ್ಯವಸ್ಥಾಪಕರಾದ ಶ್ರೀಮಾನ್ ರಾಜಾರಾಮಯ್ಯಂಗಾರ್‌ರವರಿಗೆ ಸಲ್ಲುತ್ತದೆ.

* * *

ಮೈಸೂರು ರಾಜ್ಯದಲ್ಲಿ ಖಾದಿಯ ಉದ್ಯಮದ ಉದಯ

ಖಾದಿಧಾರಿ ನಿಷ್ಠಾವಂತ ಪತ್ರಕರ್ತ
ಅಗರಂ ರಂಗಯ್ಯನವರು



ದೇಶೀಯ ರಾಜ್ಯಗಳಲ್ಲಿ ಖಾದಿ ಉದ್ಯಮಕ್ಕೆ ಪ್ರಥಮ ಪುರಸ್ಕಾರ ಕೊಟ್ಟ ಹಿರಿಮೆ ಮೈಸೂರು ರಾಜ್ಯಕ್ಕೆ ಸಂದಿರುತ್ತದೆ. ಮಹಾತ್ಮ ಗಾಂಧಿಯವರು 1927 ರಲ್ಲಿ ನಂದಿಬೆಟ್ಟಕ್ಕೆ ತಮ್ಮ ಆರೋಗ್ಯ ಸುಧಾರಣೆಗೆ ಬಂದಿದ್ದು ಕೆಲವು ದಿನ ಕುಮಾರಾ ಪಾರ್ಕಿನಲ್ಲಿ ತಂಗಿದ್ದರು. ಆ ಸಮಯದಲ್ಲಿ ಇದು ಕಾರ್ಯರೂಪಕ್ಕೆ ಬಂದಿತು. ಆಗ ಭಾರತದಲ್ಲಿ ಬ್ರಿಟಿಷರ ಆಡಳಿತವೇ ನಡೆಯುತ್ತಿತ್ತು. ಸ್ವಾತಂತ್ರ್ಯ ಚಳುವಳಿಗೆ ಸರ್ಕಾರದ ವಕ್ರ ದೃಷ್ಟಿಯು ವಿರೋಧವಾಗಿತ್ತು. ಆಶ್ರಿತ ರಾಜ್ಯವಾದ ಮೈಸೂರಿನ ಆಳರಸರೂ ಬಹುಮಟ್ಟಿಗೆ ಅದೇ ನೀತಿಯನ್ನು ಅನುಸರಿಸಬೇಕಾಗಿದ್ದಿತು.

ಖಾದಿ ಬಟ್ಟೆಯೆಂದರೆ ಆಳರೆಸರ ಕಣ್ಣು ಕೆಂಪಗಾಗುತ್ತಿತ್ತು. ಖಾದಿಯು ಬ್ರಿಟಿಷರ ವಿರೋಧಿ ಎಂಬ ಕಲ್ಪನೆ ಅವರಿಗಿತ್ತು. ಗಾಂಧೀಜಿಯವರು ತಮ್ಮ ಶತ್ರುಗಳೆಂದು ಅರಿತಿದ್ದವರೂ ಉಂಟು. ಆದ್ದರಿಂದ ಖಾದಿ ಕೈಗಾರಿಕೆಗೆ ಪ್ರೋತ್ಸಾಹ ಕೊಡುವಂತೆ ಅವರು ಸರ್ವ ಪ್ರಯತ್ನ ಮಾಡಿದರು. ಕೆಲವು ಕಡೆ ಶಾಲಾ ಮಕ್ಕಳು ಖಾದಿ ಟೋಪಿ ಧರಿಸಲು ನಿಷೇಧ ಹಾಕಲಾಗಿತ್ತು. ಆದರೆ ರಾಜ ಕಾರ್ಯ ವಿಚಾರಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ ರಚನಾತ್ಮಕ ಕಾರ್ಯಗಳಲ್ಲಿ ಪ್ರಭುಗಳ ಮನವೊಲಿಸಲು ಗಾಂಧೀಜಿಯವರು ಯಶಸ್ವಿಯಾದರು.

ದೀನ ದಲಿತರ ಜೀವನ ಮಾರ್ಗಕ್ಕೆ ಸಾಧಕವಾದ ಕೈರಾಟೆ ಕೈಮಗ್ಗ ಇವುಗಳಿಂದ ತಯಾರಾದ ಬಟ್ಟೆಯ ಬಳಕೆ ಇವುಗಳ ಬಗ್ಗೆ ಅವರು ಅಂದಿನ ಮಹಾರಾಜರು ಮತ್ತು ದಿವಾನ್ ಮಿರ್ಜಾ ಇಸ್ಮೈಲ್ ಇವರ ನೆರವನ್ನು ಪಡೆದರು.

ಸರ್ಕಾರದ ಪರವಾಗಿ ನಂಜನಗೂಡು ತಾಲ್ಲೂಕು ಬದನವಾಳಿನಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆಯಲು ಏರ್ಪಾಡಾಯಿತು. ಇದಕ್ಕೆ ಮುಂಚೆಯೇ ತಗಡೂರಿನಲ್ಲಿ ಶ್ರೀ ರಾಮಚಂದ್ರರಾಯರು ಒಂದು ಕೇಂದ್ರವನ್ನು ಖಾಸಗಿಯಾಗಿ ಆರಂಭಿಸಿ ಅದರ ಮೂಲಕ ಅನೇಕ ಮುಖವಾದ ರಾಷ್ಟ್ರೀಯ ಚಳುವಳಿಗಳನ್ನು ನಡೆಸುತ್ತಿದ್ದರು.

ಹೀಗೆ ತಗಡೂರು ಮತ್ತು ಬದನವಾಳು ಕೇಂದ್ರಗಳು ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಆರ್ಥಿಕಾಭಿವೃದ್ಧಿ ಸಾಧನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದವು.

ಮಹಾತ್ಮ ಗಾಂಧಿಯವರೇ ಹೇಳಿದ್ದಂತೆ ಖಾದಿಯು ಕೇವಲ ಒಂದು ಲಾಂಛನ ಮಾತ್ರ. ಖಾದಿಯೇ ಸ್ವರಾಜ್ಯದ ಹಾದಿ ಎಂಬ ಘೋಷಣೆಯು ಎಲ್ಲರ ಬಾಯಲ್ಲೂ ಕೇಳಿ ಬರುತ್ತಿತ್ತು. ಆದರೂ ನಾಡಿನ ಸರ್ವತೋಮುಖ ಪ್ರಗತಿ ಮತ್ತು ಅಭ್ಯುದಯಕ್ಕೆ ಅದೊಂದೇ ಸಾಧನವಲ್ಲವೆಂದೂ ಮಹಾತ್ಮರು ತಿಳಿಸಿದ್ದರು. ಖಾದಿಯ ಮೂಲಕ ಆರ್ಥಿಕ ಸ್ವಾವಲಂಬನೆ ಇತರ ಗ್ರಾಮ ಕೈಗಾರಿಕೆಗಳ ಬೆಳವಣಿಗೆ ಮತ್ತು ನಮ್ಮ ದೇಶ ದಲ್ಲಿ ತಯಾರಾಗುವ ವಸ್ತುಗಳಿಗೆ ಪುರಸ್ಕಾರ, ಈ ಭಾವನೆಗಳು ಬೆಳೆಯಲು ಅವಕಾಶ ವಾಗುವುದೆಂದು ಅವರು ಹೇಳುತ್ತಿದ್ದರು.


ಇದಲ್ಲದೆ ಖಾದಿಯ ಮೂಲಕ ದೇಶದ ಸರ್ವತೋಮುಖವಾದ ಅಭಿವೃದ್ಧಿ ಸಾಧನೆಯ ಸಂದೇಶವನ್ನು ಸಾರಲು ಅವರು ಹವಣಿಸಿದರು. ಇತರ ಹಲವು ರಚನಾ ತ್ಮಕ ಕಾರ್ಯಕ್ರಮಗಳನ್ನು ನಿಯೋಜಿಸಿದರು. ಗ್ರಾಮ ನೈರ್ಮಲ್ಯ, ಗ್ರಾಮ ಸ್ವಯಂ ಪೂರ್ಣತೆ, ಗೋ ರಕ್ಷಣೆ, ಕೋಮುವಾರು ಐಕಮತ್ಯ ಮುಂತಾದ ಧ್ಯೇಯಗಳನ್ನು ಅವರು ಸಾರುತ್ತಿದ್ದರು.

ಈ ರೀತಿಯಲ್ಲಿ ತಗಡೂರು ಮತ್ತು ಬದನವಾಳು ಕೇಂದ್ರಗಳು ನಾಡಿನ ಸ್ವಾತಂತ್ರ್ಯ ಸಾಧನೆಗಾಗಿ ನವ ಚೈತನ್ಯ ಮೂಡಿಸಿದ ಮಹಾ ಕ್ಷೇತ್ರಗಳಾಗಿದ್ದವು. ನಮ್ಮ ದೇಶದ ರಾಜಕೀಯ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿರುತ್ತವೆ. ಅವುಗಳ ಮೇಲ್ಪಂಕ್ತಿ ಯನ್ನು ಅನುಸರಿಸಿ ಹಳೇ ಮೈಸೂರು ಮತ್ತು ವಿಶಾಲ ಕರ್ನಾಟಕ ಇನ್ನೂ ಅನೇಕ ಸ್ಥಳಗಳಲ್ಲಿ ಇದೇ ರೀತಿ ಖಾದಿ ಮತ್ತು ಗ್ರಾಮೋದ್ಯೋಗ ಕೇಂದ್ರಗಳು ಜನಿಸಿ ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ನಾಡಿನ ಅಭ್ಯುದಯಕ್ಕೆ ತಮ್ಮ ಕಾಣಿಕೆಯನ್ನು ಅರ್ಪಿಸಿರುತ್ತವೆ.

* * *

ಬದನವಾಳು ಖಾದಿಯ ಕೆಲ ನೆನಪುಗಳು

ಮಾನ್ಯ ಶ್ರೀ ಎಸ್. ನಿಜಲಿಂಗಪ್ಪನವರು
ಮೈಸೂರು—ಕರ್ನಾಟಕ ರಾಜ್ಯದ ಮಾಜಿ ಮುಖ್ಯ ಮಂತ್ರಿಗಳು



ಖಾದಿ ಮತ್ತು ಗ್ರಾಮೋದ್ಯೋಗದ ತತ್ವಕ್ಕಾಗಿ ದುಡಿದವರಲ್ಲಿ ಅನೇಕರು ನನಗೆ ಪರಿಚಿತರು. ಬದನವಾಳು ಖಾದಿ ಕೇಂದ್ರ ಆ ಹಳೇಕಾಲ ಅಂದರೆ ಗಾಂಧಿಯವರ ಕೂಗಿಗೆ ಓಗೂಟ್ಟು ಸ್ಥಾಪನೆಯಾದವುಗಳಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ದುಡಿದ ಕ್ಷೇತ್ರ. ಅದರ ಸ್ಥಾಪನೆಗಾಗಿ ಪ್ರಯತ್ನಿಸಿ ಯಶಸ್ವಿಯಾದವರಲ್ಲಿ ಮುಖಂಡರು ಶ್ರೀ ತಗಡೂರು ರಾಮಚಂದ್ರರಾಯರು. ಅವರು ಸ್ವಾತಂತ್ರ ಹೋರಾಟಕ್ಕಾಗಿ ಹಳೇ ಮೈಸೂರಿನಲ್ಲಿ ಬುನಾದಿ ಹಾಕಿದವರು. ಅವರನ್ನು ಯಾರೂ ಮರೆಯುವಂತಿಲ್ಲ ಅಲ್ಲಿ ಕೆಲಸ ಮಾಡಿ ಕೀರ್ತಿ ತಂದವರು ಅನೇಕರು. ಅವರಲ್ಲಿ ನೀವೂ ಒಬ್ಬರು (ರಂಗ ಶೆಟ್ಟರು) ಎಂದು ಹೇಳಲು ಹೆಮ್ಮೆ ಎನಿಸುತ್ತದೆ. ಜತೆಗೆ ನಿಷ್ಠೆ ಮತ್ತು ನಿಸ್ವಾರ್ಥತೆ ಹಾಗೂ ಸೇವಾ ದೀಕ್ಷೆ ಎಂದು ದುಡಿದವರಲ್ಲಿ ಕಾಲೇಜಿನಲ್ಲಿ ನನ್ನ ಜತೆಯಲ್ಲಿದ್ದು ಸತ್ಯಾಗ್ರಹದಲ್ಲಿ ದುಡಿದವರು ಶ್ರೀ ಸರ್ದಾರ್ ವೆಂಕಟರಾಮಯ್ಯನವರು, ಐಮಂಗಲದ ಖಾದಿ ಕೇಂದ್ರದ ವ್ಯವಸ್ಥಾಪಕರಾಗಿದ್ದ ಶ್ರೀ ವೆಂಕಟಗಿರಿರಾಯರು, ಶ್ರೀ ರಾಜಾರಾಮಯ್ಯಂಗಾರ್ರರರೂ. ಹಾಗೆಯೇ ಚಿಕ್ಕ ವಯಸ್ಸಿನಿಂದಲೂ ಡಾ॥ ಹರ್ಡೀಕರ ಸೇವಾದಳದಲ್ಲಿ ನಿಸ್ಸೀಮ ಸೇವೆ ಸಲ್ಲಿಸಿ ತುರುವನೂರು ಅರಣ್ಯ ಸತ್ಯಾಗ್ರಹದಲ್ಲಿ ಮುಖಂಡರಾಗಿ ಜೈಲು ವಾಸಗಳನ್ನು ಆಗಲೂ ನಂತರವೂ ಸ್ವಾತಂತ್ರ ಹೋರಾಟಗಾರರಾಗಿ ಅನೇಕ ಸಲ ಮೈಸೂರು ಒಳಗೂ, ಅದಕ್ಕೆ ಮೊದಲು ಹೊರಗೂ ಕಾರಾಗೃಹ ವಾಸ ಮಾಡಿದ ಮತ್ತು ಕೊನೆ ಉಸಿರಿರುವವರೆಗೂ ಖಾದಿ ಮತ್ತು ಗ್ರಾಮೋದ್ಯೋಗಗಳಿಗಾಗಿಯೇ

ಮಡಿಕೇರಿ ಪುರದಲ್ಲಿ ಮೈಸೂರು ಚರಕಾ ಪ್ರಚಾರ ಸಂಘವನ್ನು ಸ್ಥಾಪಿಸಿ ಸುಮಾರು ನಲವತ್ತು ವರ್ಷಗಳು ಯಶಸ್ವಿಯಾಗಿ ನಡೆಸಿಕೊಂಡು ಬಂದ ಶ್ರೀ ಎಸ್. ವಾಸುದೇವ ರಾಯರು, ಇವರುಗಳನ್ನು ಮರೆಯುವಂತಿಲ್ಲ. ಶ್ರೀ ವಾಸುದೇವರಾಯರು ಈಚೆಗೆ ನಿಧನ ರಾದುದು ನನಗಂತೂ ಅತೀವ ದುಃಖದ ಸಂಗತಿ.

ಇವರುಗಳನ್ನಲ್ಲದೆ ಆಗ್ಗೆ ಖಾದಿಗಾಗಿ ದುಡಿದವರಲ್ಲಿ ನಮ್ಮ ಜಿಲ್ಲೆಯವರ ಜ್ಞಾಪ ಕವೂ ಬರುತ್ತದೆ. ಶ್ರೀ ಕೆಂಚಪ್ಪನವರು, ಶ್ರೀ ಎಸ್. ವೀರಬಸಪ್ಪನವರು, ವಗೈರೆಯವ ರನ್ನು ಜ್ಞಾಪಿಸಿಕೊಳ್ಳಬೇಕು. ಹೆಸರುಗಳು ಮರೆಯುತ್ತಾ ಬಂದಿದೆ. ಮೇಲಾಗಿ 1980ರ ಸುಮಾರಿನಲ್ಲಿ ಚಿತ್ರದುರ್ಗದ ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾಗಿದ್ದ ಶ್ರೀ ಜಿ. ಚನ್ನಪ್ಪ ನವರು ನನ್ನ ಪತ್ನಾಯಕ್ಕೆ ಒಪ್ಪಿ ಐಮಂಗಲದ ಖಾದಿ ಕೇಂದ್ರವನ್ನು ಸ್ಥಾಪಿಸಿದರು, ಅವರನ್ನು ಮರೆಯುವಂತಿಲ್ಲ.

ಖಾದಿಯು ಮಹಾತ್ಮಾಜೀಯವರು ಹೇಳಿದಂತೆ ಹಳ್ಳಿಗಳವರ ಬಂಧು, ಚಿತ್ರದುರ್ಗ ಜಿಲ್ಲೆಯಲ್ಲಿ ಮಳೆಯಿಲ್ಲದೆ ತೊಂದರೆಗೀಡಾಗಿ ಹಳ್ಳಿಗಳ ಜನರಿಗೆ ಉದ್ಯೋಗ ವಿಲ್ಲದೆ ಕಂಗಾಲಾಗಿದ್ದಾಗ ತುರುವನೂರಿನಲ್ಲಿ ಅರಣ್ಯ ಸತ್ಯಾಗ್ರಹ, ಮೈಸೂರಿನಲ್ಲಿ 1929ರಲ್ಲಿ ಪ್ರಾರಂಭವಾಯಿತೋ ಅಲ್ಲಿ ಒಂದು ಖಾದಿ ಕೇಂದ್ರ ಪ್ರಾರಂಭವಾಯಿತು. ಅದರಂತೆಯೇ ಚಿತ್ರದುರ್ಗದಲ್ಲಿಯೂ, ಹಿರಿಯೂರು, ಚಳ್ಳಕೆರೆ ಮುಂತಾದ ತಾಲ್ಲೋಕು ಗಳಲ್ಲಿ ಕೇಂದ್ರಗಳು ಪ್ರಾರಂಭವಾಗಿ ಆ ಕ್ಷಾಮ ಕಾಲದಲ್ಲಿ ಜನರನ್ನು ಬದುಕಿಸಿದವು. ದುರ್ದೈವದಿಂದ ಅವುಗಳು ಈಗ ಕೆಲಸ ಮಾಡುತ್ತಲಿಲ್ಲ. ಇದಕ್ಕೆ ಕಾರಣ ಸರ್ಕಾರದ ತೋರುಗಾಣಿಕೆಯ ಸಹಾನುಭೂತಿ ಹೇಳಿಕೆಗೆ ಮಾತ್ರ ಇದ್ದರೂ, ಗಾಂಧಿಜೀಯವರ ನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ದಾರಿತಪ್ಪಿದ ನೀತಿ. ಆ ಕಾಲದಲ್ಲಿ ಶ್ರೀ ರಂಗಶೆಟ್ಟರು, ಶ್ರೀ ವೆಂಕಟಗಿರಿರಾಯರು, ಶ್ರೀ ರಾಜಾರಾಮಯ್ಯಂಗಾರ್‌ರವರು ಮೊದ ಲಾದವರು ಅತ್ಯಂತ ನಿಷ್ಠೆ ಮತ್ತು ದಕ್ಷತೆಯಿಂದ ಹಳ್ಳಿ ಹಳ್ಳಿ ತಿರುಗಿ ಕೆಲಸ ಮಾಡಿ ಹಳ್ಳಿ ಜನರ ಸೇವೆಯನ್ನು ಖಾದಿ ಭಕ್ತರಾಗಿ ಸೇವೆಸಲ್ಲಿಸಿದ್ದಾರೆ. ಅದು ಈಗಲೂ ನನ್ನ ಜ್ಞಾಪಕದಲ್ಲಿ ಹಸಿರಾಗಿ ನಿಂತಿದೆ.

ಮೈಸೂರು ಮತ್ತು ಖಾದಿ ಎಂದು ವಿಚಾರ ಮಾಡಿದಾಗ ಮೈಸೂರು ಜಿಲ್ಲೆಯ ಬದನವಾಳು ಖಾದಿ ಕೇಂದ್ರವು ಮುಖ್ಯ ಸ್ಥಾನವನ್ನು ಹೊಂದಿತು. ನಾನು ಮೇಲೆ ಹೇಳಿದ ಮಹನೀಯರೆಲ್ಲರೂ ಅಲ್ಲಿ ತಯಾರಾಗಿ ಮೈಸೂರು ಸಂಸ್ಥಾನದ ಅನೇಕ ಕಡೆ ಗಳಲ್ಲಿ ಕೆಲಸ ಮಾಡಿರುತ್ತಾರೆಂಬುದನ್ನು ಯಾರೂ ಮರೆಯಲಾರರು. ಅವರಲ್ಲಿ ನಮ್ಮ ತಗಡೂರು ರಾಮಚಂದ್ರರಾಯರಿಗೆ ಪ್ರಥಮ ಸ್ಥಾನ ಸಲ್ಲಬೇಕಾಗುತ್ತದೆ.

ಈಗಲೂ ಬದನವಾಳ ಖಾದಿ ಕೇಂದ್ರವು ಜೀವಂತವಾಗಿ ಕೆಲಸ ಮಾಡುತ್ತಿದೆ. ಎಂದು ನನ್ನ ನಂಬಿಕೆ. ಖಾದಿ ಪ್ರಚಾರ ಸಂಪೂರ್ಣವಾಗಿ ನಿಂತಿದೆ. ಕೇಂದ್ರ ಸರ್ಕಾರದ ಈಚಿನ ಬಟ್ಟೆ ವಿಚಾರದಲ್ಲಿ ಅದರಲ್ಲಿ ದರ ಮತ್ತು ಅನಿಸಿಕೆ, ಏನು ಎಂಬ ವಿಚಾರದಲ್ಲಿ (Texture Policy) ಹೇಳಿರುವುದು ತೀರಾ ನಿರಾಶದಾಯಕವಾಗಿದೆ. ಗಾಂಧೀಜಿ ಯಾವ ತತ್ವಕ್ಕಾಗಿ ಬಹುಜನರ ಕಲ್ಯಾಣಕ್ಕಾಗಿ ಉದ್ಯೋಗ ಕಲ್ಪಿಸುವುದಕ್ಕಾಗಿ ಬಡತನ ನೀಗುವುದಕ್ಕಾಗಿ ಕೊನೆಯ ಉಸಿರಿನವರೆಗೂ ಗ್ರಾಮದ ಉದ್ಧಾರಕ್ಕಾಗಿ ಉತ್ಪತ್ತಿಯ ವಿಕೇಂದ್ರೀಕರಣವನ್ನು ಬೋಧಿಸಿದರೋ ಅದನ್ನು ತಾನು ಒಪ್ಪುವುದಾಗಿ ನಾಚಿಕೆ ಯಿಲ್ಲದೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೇಳಿದ ಮೇಲೆ ಹೇಳಿಕೆ ಕೊಡುತ್ತಿ ವೆಯೋ ಆ ತತ್ವವನ್ನು ನಿರಾಕರಿಸಿವೆ. ಅಲ್ಲದೆ ತಿಲಾಂಜಲಿಯನ್ನು ಅರ್ಪಿಸಿದೆ. ನಾಮ್ಕಾ ವಾಸ್ತೆ ಖಾದಿ ಮತ್ತು ಗ್ರಾಮೋದ್ಯೋಗಗಳ ಸಂಸ್ಥೆಯನ್ನು ನೂರಾರು ಕೋಟಿ ರೂಪಾಯಿಗಳ ಖರ್ಚಿನಿಂದ ಏರ್ಪಡಿಸಿ ಯಾವ ಪರಿಣಾಮವೂ ಇಲ್ಲದೆ ನಡೆಸುತ್ತಿವೆ. ಇದು ರಾಷ್ಟ್ರದ ದುರಾದೃಷ್ಟ. ಸಣ್ಣ ಕೈಗಾರಿಕೆಗೆ ಖರ್ಚಾಗುತ್ತಿರುವ ವೆಚ್ಚವೂ ಪತ್ರಿಕೆ ಗಳಲ್ಲಿ ಕೊಡುತ್ತಿರುವ ದೊಡ್ಡ ದೊಡ್ಡಕ್ಷರದ ಜಾಹಿರಾತುಗಳೂ ಕಣ್ಣೊರೆಸುವ ಪ್ರಯತ್ನಗಳೇ ಹೊರತು ಅವುಗಳಿಂದ ಹಳ್ಳಿಯ ಜನರ ನಿರುದ್ಯೋಗ ಎಳ್ಳಷ್ಟೂ ನಿವಾ ರಣೆ ಆಗುವುದಿಲ್ಲ ಎನ್ನುವ ಮಾತು ಖಂಡಿತ ಎಂಬುದು. ಈ ತಪ್ಪು ದಾರಿಯನ್ನು ಬಿಡಿಸಿ ಗಾಂಧೀಜಿಯವರು ಬೋಧಿಸಿದ ತತ್ವಕ್ಕಾಗಿ ಪ್ರಚಾರ ಮತ್ತು ಅದನ್ನು ಕಾರ್ಯಗತ ಮಾಡಲು ಪ್ರಯತ್ನಗಳಿಗಾಗಿ ಹೊಸ ಚಳುವಳಿಯೇ ಬೇಕಾಗಿದೆ ಎಂಬುದು ನನ್ನ ನಿಶ್ಚಿತ ಅಭಿಪ್ರಾಯ.


* * *

ದೊಡ್ಡ ದೊಡ್ಡ ಕಾರ್ಖಾನೆಗಳಿಂದ ಸ್ವರಾಜ್ಯ ದೊರೆಯದು. ಬಂಗಾರ, ಬೆಳ್ಳಿಯನ್ನು ಬೇಕಾದರೆ ಸಂಗ್ರಹಿಸಬಹುದು. ಆದರೆ ಅವು ಸ್ವರಾಜ್ಯದ ಸ್ಥಾಪನೆಗೆ ನೆರವಾಗಲಾರವು. ಪಾಶ್ಚಿಮಾತ್ಯ ನಾಗರೀಕತೆ ಇನ್ನೂ ಶಿಶು. ಐವತ್ತು ವರ್ಷದಿಂದೀಚೆಗೆ ಕಣ್ಣುಬಿಟ್ಟಿದೆ. ಆದರೂ ಅದು ಯೂರೋಪನ್ನು ದುಃಖದ ಮಡುವಿನಲ್ಲಿ ಮುಳುಗಿಸಿದೆ. ಅಕ್ಕಪಕ್ಕದ ರಾಷ್ಟ್ರಗಳು ಒಂದನ್ನೊಂದು ಮುತ್ತಿಗೆ ಹಾಕಲು ಹವಣಿಸು ತ್ತಿವೆ. ಅದಕ್ಕಾಗಿ ಶಸ್ತ್ರಾಸ್ತ್ರಗಳ ಸಂಗ್ರಹದಲ್ಲೂ ತೊಡಗಿವೆ.ಅವು ಸ್ಫೋಟಗೊಂಡು ಇಡೀ ಯುರೋಪು ನರಕವಾದೀತು. ಅಂತಲೇ ಭಗವಂತ ಇಂತಹ ನಾಗರೀಕತೆಯಿಂದ ನಮ್ಮನ್ನು ಪಾರು ಮಾಡಲಿ. ಇದಕ್ಕೆಲ್ಲಾ ದೈತ್ಯಾಕಾರದ ಯಂತ್ರೋತ್ಪಾದನೆ ಮುಖ್ಯ ಕಾರಣವೆಂದು ನನ್ನ ಭಾವನೆ,

—ಮಹಾತ್ಮಾ ಗಾಂಧೀ

ನನ್ನ ನೆನಪಿನ ಬದನವಾಳು

ಶ್ರೀ ಎಮ್. ಎನ್. ಜೋಯಿಸರು
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು
ಮತ್ತು ಖಾದಿ ಭಕ್ತರು



ಸುಮಾರು 65 ವರ್ಷಗಳ ಹಿಂದೆ ರಾಜರ ಸಂಸ್ಥಾನವಾದ ಮೈಸೂರಿನಲ್ಲಿ ಕಾಂಗ್ರೆಸ್ಸಿನ ಚಟುವಟಿಕೆಗಳು ಕಾಣಿಸತೊಡಗಿದವು. ಆ ಚಟುವಟಿಕೆಗಳೆಲ್ಲಾ ರಾಜಕೀಯಕ್ಕೆ ಸಂಬಂಧಪಟ್ಟವುಗಳಾಗಿದ್ದವು. ಸಾರ್ವಜನಿಕ ಸಭೆಗಳಲ್ಲಿ ಬ್ರಿಟಿಷ್ ಸರ್ಕಾರದ ನೀತಿಯನ್ನು ಖಂಡಿಸುವುದು, ಹರತಾಳಗಳನ್ನು ಆಚರಿಸುವುದೂ ಸಂತಾಪ ಸೂಚಕ ಸಭೆಗಳನ್ನು ನಡೆಸುವುದೂ ಮತ್ತು ಸ್ವದೇಶಿ ಪ್ರಚಾರಗಳು ಇವುಗಳಲ್ಲಿ ಮುಖ್ಯವಾದವು. ಈ ಕಾರ್ಯಕ್ರಮಗಳಿಗೆ ಮುಂಚೂಣಿಯಾಗಿದ್ದವರು ತಗಡೂರು ರಾಮಚಂದ್ರರಾಯರು. ಗಾಂಧಿಯವರು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಪ್ರಚಾರ ಪ್ರಾರಂಭಿಸಿದರು. ಅದರಂತೆ ರಾಮಚಂದ್ರರಾಯರು ಗಾಂಧಿಯವರು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಪ್ರಚಾರ ಪ್ರಾರಂಭಿಸಿದರು. ಅದರಂತೆ ರಾಮಚಂದ್ರರಾಯರು ತಗಡೂರಲ್ಲಿ ಖಾದಿ ಕೇಂದ್ರ ಸ್ಥಾಪಿಸಿದರು. ಸುತ್ತಮುತ್ತಲ ಹಳ್ಳಿಗಳಲ್ಲಿ ರಾಯರ ಈ ಚಟುವಟಿಕೆಯ ಫಲವಾಗಿ ಪ್ರಾಬಲ್ಯ ಹೆಚ್ಚಿತು. ಮೈಸೂರು ಸರ್ಕಾರಕ್ಕೆ ಇದು ಬೇಕಾಗಿರಲಿಲ್ಲ. ಅವರ ಪ್ರಾಬಲ್ಯದ ದಮನಕ್ಕೆ ಸರ್ಕಾರವು ಕುತಂತ್ರಗಳನ್ನು ನಡೆಸಿತು, ಕೇಂದ್ರವನ್ನು ಸುಡಿಸಿತು. ಇವುಗಳು ರಾಯರ ಕೆಲಸದ ಮೇಲೆ ಪರಿಣಾಮವಾಗಲಿಲ್ಲ. ಗಾಂಧಿಯವರನ್ನು ಒಲಿಸಿಕೊಳ್ಳುವುದರ ಮೂಲಕ ಕಾಂಗ್ರೆಸ್ಸಿನ ಸಂಸ್ಥಾನದ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರ ಸಂಚುಮಾಡಿತು. ಅದರ ಫಲಶ್ರುತಿಯೇ ಬದನವಾಳು ಖಾದಿ ಕೇಂದ್ರ.

ಸುಮಾರು 1926-27 ರಲ್ಲಿ ಮದರಾಸಿನ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರ್‌ರವರ ಸಹಕಾರದಿಂದ ಖಾದಿ ಸಂಸ್ಥೆಯನ್ನು ಬದನವಾಳಲ್ಲಿ ಸರ್ಕಾರವು ಸ್ಥಾಪಿಸಿತು. ದಿವಾನರುಗಳಾಗಿದ್ದ ಶ್ರೀ ಎಂ. ಎನ್. ಕೃಷ್ಣರಾವ್ ಮತ್ತು ಸರ್ ಮಿರ್ಜಾರವರ ಪಾತ್ರವನ್ನು ಇಲ್ಲಿ ಸ್ಮರಿಸಬಹುದು. ಶ್ರೀ ರಾಜಾರಾಮಯ್ಯಂಗಾರ್ ಎಂಬ ಖಾದಿ ಕಾರ್ಯಕರ್ತರನ್ನು ಶ್ರೀ ರಾಜಗೋಪಾಲಾಚಾರ್ಯರವರು ಕಳಿಸಿಕೊಟ್ಟರು. ಇವರು ಚುರುಕಾಗಿ ಕೆಲಸ ಪ್ರಾರಂಭಿಸಿದರು. ನಾನು ತಗಡೂರಿಗೆ ಹೋಗುವಾಗಲೆಲ್ಲಾ ಬದನವಾಳು ರೈಲ್ವೆ ಸ್ಟೇಷನ್ನಿನಲ್ಲಿಳಿದು ರಾಜಾರಾಮಯ್ಯಂಗಾರ್ಯರನ್ನು ಭೇಟಿಮಾಡಿ ತಗಡೂರಿಗೆ ನಡೆದು ಹೋಗುತ್ತಿದ್ದೆ. ಐಯ್ಯಂಗಾರ್‌ರವರು ಬಹಳ ಸರಳ ಸ್ವಭಾವದರು. ಹಾಸ್ಯ ಪಟುಗಳೂ ಮತ್ತು ನಿಷ್ಠಾವಂತರು. ಮನೆಗೆ ಬಂದವರಿಗೆ ಆತಿಥ್ಯ ನೀಡಿ ಸಂತೋಷಪಡಿಸುತ್ತಿದ್ದ ಆ ಕಾಲದ ಜನರಲ್ಲಿ ಇವರು ಅಗ್ರಗಣ್ಯರು. ಇವರ ಮನೆಯ ಸವಿಯೂಟದ ನೆನಪು ನನಗೆ ಇನ್ನೂ ಇದೆ. ಇವರ ಸ್ವಭಾವದಿಂದ ಇವರಿಗೆ ಗಾಂಧಿಅಯ್ಯ ಮತ್ತು ಖಾದಿ ಕೇಂದ್ರಕ್ಕೆ ಗಾಂಧಿ ಮನೆ ಎಂದು ಹಳ್ಳಿಗರು ಹೆಸರಿಟ್ಟರು. ಕೇಂದ್ರವು ಕೆಲವು ಕಾಲ ಚೆನ್ನಾಗಿ ನಡೆಯಿತು. ಆಗಲೇ ಸರ್ಕಾರದ ನೌಕರಷಾಹಿಯು ಅಯ್ಯಂಗಾರ್‌ರವರಿಗೆ ಸ್ವತಂತ್ರದಿಂದ ಕೆಲಸ ಮಾಡಲು ಬಿಡಲಿಲ್ಲ. ನೌಕರ ಶಾಹಿಯ ಕಟ್ಟಳೆ ಕಾನೂನುಗಳ ಮತ್ತು ಒತ್ತಡಗಳ ಮಧ್ಯೆ ಖಾದಿ ಕೆಲಸ ಕುಂಠಿತವಾಯ್ತು. ಅಲ್ಲಿನ ಕೆಲಸಗಾರರೆಲ್ಲಾ ನೌಕರರಾದರೂ ಆದರಂತೆ ವರ್ತಿಸಿದರು. ಬದನವಾಳು ಖಾದಿ ಸಂಸ್ಥೆ ಸರ್ಕಾರಿ ಕಛೇರಿಯಾಯ್ತು. ಎಲ್ಲ ಸರ್ಕಾರಿ ಕಛೇರಿಗಳ ವಿಷಯದಲ್ಲಿ ಸಾಮಾನ್ಯ ಜನ ಬೇಸರ ಪಡುವಂತೆ ಇಲ್ಲಿನ ಹಳ್ಳಿಗರೂ ಸುತ್ತ ಮುತ್ತಲಿನ ಹಳ್ಳಿಗರೂ ಬೇಸರ ಪಟ್ಟರು. ಗಾಂಧಿ ಮನೆಯನ್ನು ಕಂಡರೆ ಹರ್ಷಿಸುತ್ತಿದ್ದ ಜನ ಈಗ ಅಸಡ್ಡೆ ಮಾಡತೊಡಗಿದರು. ನೌಕರಶಾಹಿಯ ದರ್ಪ ಇಂತಹ ಕಾರ್ಯ ಕ್ರಮಗಳಿಗೆ ಸಲ್ಲದು. ಖಾದಿ ಕೇಂದ್ರಕ್ಕೆ ಕ್ಷಯರೋಗ ಅಂಟಿಕೊಂಡಿತು. ಮುಂದೆ ಕೇಂದ್ರವು ಕ್ಷೀಣವಾಯಿತು. ತಗಡೂರಿನ ಖಾದಿ ಕೇಂದ್ರ ಲಾಭಗಳಿಸಿದರೆ ಬದನವಾಳು ಕೇಂದ್ರವು ಬಹಳ ನಷ್ಟ ಕಾಣಬೇಕಾಯಿತು ಇಂದಿಗೂ ಬೇರೆ ಬೇರೆ ಕೈಗಾರಿಕೆಗಳನ್ನು ಈ ಕೇಂದ್ರದಲ್ಲಿ ಸ್ಥಾಪಿಸಿಕೊಂಡು ಹೋಗುವ ಪ್ರಯತ್ನ ಸರ್ಕಾರದ ಕಡೆಯಿಂದ ನಡೆಯುತ್ತಿದೆ. ಇದು ಎಷ್ಟು ಫಲಪ್ರದವಾಗುತ್ತೋ ಕಾದು ನೋಡಬೇಕು.

* * *

ಬದನವಾಳು ಖಾದಿ ಕ್ಷೇತ್ರದ ಕೆಲವು ಮಧುರ ನೆನಪುಗಳು

ಟಿ. ಕೇಶವಮೂರ್ತಿ



ಸುಮಾರು 1923–24 ನೇ ಇಸವಿ ತಗಡೂರಲ್ಲಿ ಚರಕದಿಂದ ನೂಲುವ ಹಾಗೂ ಕೈಮಗ್ಗದಿಂದ ನೇಯುವ ಕೆಲಸ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿತ್ತು. ಶ್ರೀ ತಗಡೂರು ರಾಮಚಂದ್ರರಾಯರು ಇದಕ್ಕೆ ಕಾರಣೀಭೂತರಾಗಿದ್ದರು. ನಮ್ಮ ತಾತ ಪೂ॥ ಗೋಪಾಲಕೃಷ್ಣಯ್ಯನವರು ಜನಿವಾರ ಮಾಡುವುದರಲ್ಲಿ ತುಂಬಾ ನಿಷ್ಣಾತರಾಗಿದ್ದರು. ಊರಿನಲ್ಲಿ ಇನ್ನೂ ಕೆಲವರು ಜನಿವಾರ ಮಾಡುತ್ತಿದ್ದರು, ಅವರೆಲ್ಲರಿಗಿಂತ ನಮ್ಮ ತಾತನ ಜನಿವಾರ ಪ್ರಸಿದ್ಧಿ. ಕೇವಲ ಬ್ರಾಹ್ಮಣರಿಗೇ ಅಲ್ಲ. ಊರಿನ ಇತರ ಜನಿವಾರ ಹಾಕಿಕೊಳ್ಳುವ ಬ್ರಾಹ್ಮಣೇತರರಿಗೂ ಇವರ ಜನಿವಾರ ಬಹು ಪ್ರಿಯವಾಗಿತ್ತು.

ತಕಲಿಯಲ್ಲಿ ನೂಲುತ್ತಿದ್ದರು. ಬಳಪದ ಕಲ್ಲಿನಲ್ಲಿ ಅವರೇ ತಕಲಿಯನ್ನು ಮಾಡಿಕೊಳ್ಳುತ್ತಿದ್ದರು. ಜನಿವಾರಕ್ಕೆ ಬೇಕಾಗುವ ಹತ್ತಿಯನ್ನು ಜನಿವಾರ ಬೇಕಾದವರೇ ತಂದುಕೊಡುತ್ತಿದ್ದರು. ತಾತ ನಮ್ಮಗಳನ್ನು ಗೋಳು ಹೊಯ್ದುಕೊಂಡು ಹತ್ತಿ ಬೀಜವನ್ನು ನಮ್ಮಗಳ ಕೈಯಿಂದ ಬಿಡಿಸಿ ಅರಳೆಯನ್ನು ಕೈಯಿಂದಲೇ ಹಿಂಜಿಕೊಂಡು ನೂಲುವುದಕ್ಕೆ ಬೇಕಾಗುವ ಹಂಜಿಯನ್ನು ಒಂದು ದಪ್ಪ ರೂಲು ದೊಣ್ಣೆಯ ಆಕಾರಕ್ಕೆ ಮಾಡಿಕೊಂಡು ನೂಲುತ್ತಿದ್ದರು. ಜನಿವಾರಕ್ಕೆ ಈ ದಾರವನ್ನು ಶಾಸ್ತ್ರೀಯವಾಗಿ ಮೊದಲು 3 ಎಳೆ ಮಾಡಿಕೊಂಡು ಅದನ್ನು ಹುರಿಮಾಡಿ ನಂತರ ಅದನ್ನು 3 ಎಳೆ ಹೊಸೆದು ಪುನಃ ಅದನ್ನು 3 ಮಡಿಕೆಮಾಡಿ ಬ್ರಹ್ಮಗಂಟು ಹಾಕಿ ಧರಿಸುವ ಅಳತೆಗೆ ಅದನ್ನು ಮಾಡುತ್ತಿದ್ದರು.

ದಾರಕ್ಕೆ ಹುರಿಕೊಡುವುದನ್ನು ನೋಡಿ ನಮಗೆ ಒಂದು ರೀತಿಯ ಚಮತ್ಕಾರ ವಾಗಿ ಕಾಣುತ್ತಿತ್ತು. ನಮ್ಮೂರಲ್ಲಿ ಎಲ್ಲರ ಮನೆ ಹಿತ್ತಲಲ್ಲೂ ನೆಲ ಬಾವಿ ಇದೆ. ನೆಲ ಬಾವಿ ಎಂದರೆ ನೆಲದ ಮೇಲೆ ಒಂದು ಬಿಂದಿಗೆ ಪ್ರವೇಶಿಸುವಷ್ಟು ರಂಧ್ರ ಕೆಳಗೆ ಹೋಗುತ್ತಾ ನೀರು ಇರುವ ಕಡೆ ಮಾತ್ರ 4–5 ವ್ಯಾಸದ ಒಂದು ವಾಡೆ ಮೇಲೆ ನಿಂತು ಕೈಯಿಂದ ನೀರು ಸೇದುವುದು. ನಮ್ಮ ತಾತ ಈ ಬಾವಿಯನ್ನು ಜನಿವಾರ ಹೊಸೆಯಲು ಉಪಯೋಗಿಸುತ್ತಿದ್ದರು. ಮೂರೆಳೆ ಮಾಡಿದ ನೂಲನ್ನು ಒಂದು ಕೊನೆ ತಕಲಿಗೆ ಸಿಕ್ಕಿಸಿ 8-10 ಅಡಿ ಆಳದವರೆಗೆ ಇಳಿಬಿಟ್ಟು ತಕಲಿಯನ್ನು ತೊಡೆಯ ಮೇಲಿಟ್ಟು ಜೋರಾಗಿ ತೀಡುವರು ನಂತರ ಭಾವಿಗೆ ತಕಲಿಯನ್ನು ಇಳಿ ಬಿಟ್ಟು ಅದಕ್ಕೆ ಹುರಿಕೊಟ್ಟು ಮೇಲಕ್ಕೆ ಕೊಂಡು ನಂತರ ಅದರಿಂದ ಮುಂದಿನ ಕ್ರಿಯೆಗಳನ್ನು ಮಾಡಿ ಮುಗಿಸುತ್ತಿದ್ದರು. ಈ ಕ್ರಿಯೆ ನಮಗೆ ತಮಾಷೆಯಾಗಿ ಕಾಣುತ್ತಿತ್ತು ಚರಕಾದಿಂದ ತಯಾರಾದ ನೂಲನ್ನು ಜನಿ ವಾರಕ್ಕಾಗಿ ನಮ್ಮ ತಾತನಿಗೆ ಕೊಡುತ್ತಿದ್ದೆವು.

ಆ ಕಾಲದಲ್ಲಿ ನೂಲುವುದಕ್ಕೆ ಅರಳೆಯನ್ನು ಗಿರಣಿಯಿಂದ ತರುತ್ತಿರಲಿಲ್ಲ ಹೊಲ ಗಳಲ್ಲಿ ಹತ್ತಿ ಬೆಳೆಯುತ್ತಿದ್ದರು. ಅದನ್ನು ಬಿಡಿಸಿದವರಿಗೂ ಕೂಲಿಯಾಗಿ ಹತ್ತಿಯನ್ನೇ ಕೊಡುತ್ತಿದ್ದರು. ಅದನ್ನು ತಂದು ಬೀಜ ಬಿಡಿಸಿ ಕೈಬೆಸೆಯಿಂದ (ಬಿಲ್ಲಿನಿಂದ) ಅರಳೆ ಯನ್ನು ಎಕ್ಕಿದ ನಂತರ ತೆಳುವಾದ ಜೋಳದ ಕಡ್ಡಿಯಿಂದ ಸ್ವಲ್ಪ ಅರಳೆಯನ್ನು ತೊಡೆಯ ಮೇಲಿಟ್ಟುಕೊಂಡು ಕಡ್ಡಿಯಿಂದ ಹಂಜಿಗಳನ್ನು ಮಾಡಿಕೊಳ್ಳುತ್ತಿದ್ದರು. ನಂತರ ಹಂಜಿಯಿಂದ ನೂಲುವ ಕ್ರಿಯೆ ಸಾಗುತ್ತಿತ್ತು. ಇದರಿಂದ ಪೂರ್ಣ ಪ್ರಯೋ ಜನ ರೈತ ಕುಟುಂಬಕ್ಕೆ ದೊರೆಯುತ್ತಿತ್ತು. ಅಂದರೆ ಹತ್ತಿ ಬೀಜ ದನಗಳಿಗೆ, ಮನೆಯವ ರಿಗೆ ವಿರಾಮ ಕಾಲದ ಕೆಲಸ ತನ್ಮೂಲಕ ಆರ್ಥಿಕ ಸಹಾಯ ಇದು ಲಭ್ಯವಿತ್ತು.

ನಾನು ಕೂಡ ಈ ಕ್ರಿಯೆಯಲ್ಲಿ ಪಾರಂಗತನಾದೆ. ಬಿಡುವು ಸಮಯವನ್ನೆಲ್ಲಾ ಈ ಕೆಲಸದಲ್ಲಿ ಕಳೆಯುತ್ತಿದ್ದೆ. ನಮ್ಮ ತಾತನಿಗೆ ಈ ದಾರ ಜನಿವಾರಕ್ಕೆ ಬರುತ್ತಿತ್ತು ಅವರು ಜನಿವಾರವನ್ನು ಕೇಳಿದವರಿಗೆ ಮುಫತ್ತಾಗಿ ಕೊಡುತ್ತಿದ್ದರು. ಇದರಿಂದ ಪ್ರತಿಯಾಗಿ ಮನೆಗೆ ಬೇಕಾಗುವ ತರ್ಕಾರಿ, ಹಾಲು ಬೆಣ್ಣೆ ಮೊದಲಾದವು ದೊರಕುತ್ತಿದ್ದಿತು.

ಬದನವಾಳಲ್ಲಿ 1927 ರಲ್ಲಿ ನೂಲುವ ಕೇಂದ್ರ ರಚನೆಯಾಗಿ ಕೆಲಸ ಮುಂದು ವರಿಯುತ್ತಿತ್ತು. ಒಂದು ದಿನ ನಮ್ಮ ಸ್ಕೂಲಿನ ರಸ್ತೆಯಲ್ಲಿ ಇಬ್ಬರು ನಡೆದು ಬರುತ್ತಿ ದ್ದರು. ಇವರಲ್ಲಿ ಒಬ್ಬರು ಸಣ್ಣಗೆ ಉದ್ದವಾಗಿ ಬಿಳಿ ಖಾದಿ ಬಟ್ಟೆ ಒಂದು ತುಂಡು ಅಂಗಿ, ಒಂದು ತುಂಡು ಪಂಚೆ ಉಟ್ಟಿದ್ದು ಹಣೆಗೆ ಬಲವಾಗಿ ಮೂರು ನಾಮ ಹಾಕಿ ಒಂದು ರೀತಿಯ ತೇಜಸ್ಸಿನಿಂದ ಕೂಡಿದ್ದರು ಮತ್ತೊಬ್ಬರು ಕುಳ್ಳಗೆ ಕಪ್ಪಗೆ ತಲೆಗೊಂದು ಖಾದಿ ಪೇಟ ಧರಿಸಿದ್ದರು. ಬಾಕಿ ಉಡುಪು ಸಾಮಾನ್ಯ. ಧಾರ್ವಾಡದ ಕಡೆಯವರು

ಎಂದು ತೋರಂತ್ತಿತ್ತು. ಇವರ ದರ್ಶನವಾಯ್ತು. ಯಾರಿವರು ? ನಂತರ ತಿಳಿಯಿತು. ಉದ್ದನೆಯವರು ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು, ಬದನವಾಳು ಖಾದಿ ಕೇಂದ್ರದ ಮ್ಯಾನೇಜರು. ಎರಡನೆಯವರು ಶ್ರೀ ಸಿದ್ದೂರಾವ್ ಪೂಜಾರಿ, ಉಪ್ಪಿನ ಬೆಟಗೇರಿಯವರು. ಖಾದಿ ಕಾರ್ಯ ವ್ಯವಸ್ಥೆಗೊಳಿಸಲು ನೇಮಕವಾಗಿದ್ದಾರೆಂದು, ಇವರು ಶ್ರೀ ತಗಡೂರು ರಾಮಚಂದ್ರರಾಯರನ್ನು ಕಾಣಲು ಬಂದಿದ್ದಾರೆಂದು ತಿಳಿಯಿತು. ಅವರು ರಾಯರನ್ನು ಭೆಟ್ಟಿಯಾಗಿ ವಾಪಸ್ಸು ಬರುವಾಗ ನಾವು ಕೆಲ ಹುಡುಗರು ನಮ್ಮ ಜಗುಲಿ ಮೇಲೆ ಚರಕಾದಿಂದ ನೂಲುತ್ತಿದ್ದೆವು. ನಮ್ಮನ್ನು ನೋಡಿ ಬಳಿಗೆ ಬಂದರು, ಮೆಚ್ಚಿದರು. ನಮ್ಮನ್ನು ಬದನವಾಳಿಗೆ ಬರ ಹೇಳಿದರು. ಬಂದರೆ ನಮಗೆ ಒಳ್ಳೆಯ ಚರಕಾ ಬಹುಮಾನ ಕೊಡುವುದಾಗಿ ತಿಳಿಸಿದರು.

ನಾನು ಮತ್ತು ಶ್ರೀ ವಿಠಲಮೂರ್ತಿ ಎಂಬುವರು ಇಬ್ಬರೂ ಮಾರನೇ ದಿನವೇ ಬದನವಾಳು ತಲಪಿದೆವು. ಶ್ರೀಯುತರು ನಮ್ಮನ್ನು ಬಹಳ ಅಕ್ಕರೆಯಿಂದ ಬರಮಾಡಿ ಕೊಂಡು ಕಾಫಿ ಕುಡಿಸಿ, ಕುಶಲ ಸಂಭಾಷಣೆ ಮಾಡಿ ಇಬ್ಬರ ಹೆಗಲಿಗೂ ಒಂದೊಂದು ಬಾರ್ಡೋಲಿ ಚರಕ ಹೊರಿಸಿದರು.

ಈ ಚರಕಾ ಸುಧಾರಿಸಿದ್ದು ಹೆಚ್ಚು ಪ್ರಮಾಣದಲ್ಲಿ ನೂಲಬಹುದಾಗಿತ್ತು. ಆಕಾರ ದೊಡ್ಡದು. ಸುಮಾರು 24" ವ್ಯಾಸವುಳ್ಳದ್ದು. ಇದನ್ನಿಟ್ಟುಕೊಂಡು ಖುಷಿಯಿಂದ ನೂಲು ತೆಗೆಯುತ್ತಿದ್ದೆವು. ನಂತರ ನಮ್ಮ ಉಡುಪೂ ಒರಟು ಖಾದಿಮಯವಾಯಿತು.

ಬದನವಾಳು ಪ್ರವೇಶ

1937 ರಲ್ಲಿ ಗ್ರಾಮೋದ್ಯೋಗ ಕಲಿಕೆಗಾಗಿ ವರ್ಧಾಕ್ಕೆ ಹೋದೆ. ಮಗನವಾಡಿ ಯಲ್ಲಿ ಒಂದು ವರ್ಷದ ಅಭ್ಯಾಸ, ಗಾಂಧಿಯವರ ಸಾನ್ನಿಧ್ಯ ಅವರಿತ್ತ ವಚನ ಇವುಗಳು ಪ್ರಭಾವ ಬೀರಿದವು. ಕೈಕಾಗದ ಉದ್ಯೋಗ ಎಣ್ಣೆಗಾಣ ಜೇನು ಸಾಕಾಣಿಕೆ ಇವುಗಳಲ್ಲಿ ಪಾರಂಗತನಾದೆ. ಇದೇ ಅವಧಿಯಲ್ಲಿ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗಿಯಾ ಗುವ ಸುಯೋಗವೂ ಲಭ್ಯವಾಗಿತ್ತು. ಇವೆಲ್ಲಾ ಒಂದು ಅವಿಸ್ಮರಣೀಯ ಘಟನೆಗಳು. ಕಡೆಯಲ್ಲಿ ಬಾಪೂಜಿಯವರ ಆಶೀರ್ವಾದ ಪಡೆದು ನನ್ನ ಜೀವನವನ್ನು ಗ್ರಾಮೀಣ ಸೇವಾಕಾರ್ಯಕ್ಕೆ ಮೀಸಲಿಡುವೆ ಎಂದು ವಚನವಿತ್ತು ವಾಪಸಾದೆ.

ಬರುತ್ತಿರಬೇಕಾದರೆ ಹುಬ್ಬಳ್ಳಿಯಲ್ಲಿ ನನ್ನ ವಿದ್ಯಾ ಗುರುಗಳೂ, ಹಿತೈಷಿಗಳೂ ಆಗಿದ್ದ ಶ್ರೀ ಜಿ. ವಿ. ಸೀತಾರಾಮಯ್ಯನವರು ಹಿಂದೀ ಪ್ರಚಾರ ನಡೆಸುತ್ತಿದ್ದರು. ಅವರಲ್ಲಿ ಒಂದು ದಿನ ತಂಗಿದ್ದೆ. ಅವರು ತಗಡೂರು ಆಶ್ರಮ ವಾಸಿಗಳಾಗಿದ್ದು ಶ್ರೀ ರಾಜಾರಾಮಯ್ಯಂಗಾರ್ರವರಿಗೂ ತುಂಬಾ ಆತ್ಮೀಯರಾಗಿದ್ದರು. ಅವರ ಹೆಸರಿಗೆ ಒಂದು

ಪತ್ರ ಶ್ರೀಯುತ ರಾಜಾರಾಮಯ್ಯಂಗಾರ್ರವರಿಂದ ಬಂದಿತ್ತು. ಶ್ರೀ ಕೇಶವಮೂರ್ತಿ ನಿಮ್ಮಲ್ಲಿಗೆ ಬಂದರೆ ಅವರು ತಮ್ಮೂರಿಗೆ ಹೋಗುವಾಗ ನನ್ನನ್ನು ಭೆಟ್ಟಿ ಮಾಡಲಿ ಎಂದು ಹೇಳಿದ್ದರು. ಬದನವಾಳ ಮೂಲಕವಾಗಿಯೇ ತಗಡೂರಿಗೆ ಹೋಗಬೇಕಾದ ಮಾರ್ಗ. ಸರಿ ಅವರನ್ನು ಭೆಟ್ಟಿಯಾದೆ. ಅವರು ಬದನವಾಳಲ್ಲಿಯೇ ಗ್ರಾಮ ಕೈಗಾರಿಕೆಗಳನ್ನು ಆರಂಭಿಸಲಿದ್ದೇವೆ ನಿನ್ನ ನೆರವು ಬೇಕಿದೆ ಎಂದು ತಿಳಿಸಿದರು. ನಾನು ನಮ್ಮ ತಂದೆಯವರನ್ನು ಕೇಳಿ ತಿಳಿಸುತ್ತೇನೆಂದು ಹೇಳಿ ತಗಡೂರಿಗೆ ಬಂದೆ. ತಂದೆಯವರೂ ಈ ಕಾರ್ಯದಲ್ಲಿ ಆಸಕ್ತಿಯುಳ್ಳವರಾಗಿದ್ದರು. ಅವರ ಅನುಮತಿಯೂ ದೊರಕಿತು. 1938 ರಲ್ಲಿ ಬದನವಾಳದಲ್ಲಿ ಕಾರ್ಯಕರ್ತನಾಗಿ ನಿಯುಕ್ತನಾದೆ.

ಕೈಕಾಗದ ಹಾಗೂ ಇತರ ಗ್ರಾಮ ಕೈಗಾರಿಕೆಗಳ ಉದಯ

ವರ್ಧಾದಲ್ಲಿದ್ದಾಗ ಶ್ರೀ ಟಿ. ಆರ್. ಗೋವಿಂದರಾಯರೆಂಬುವರು ಮುಂಚೆಯೆ ಶಿಕ್ಷಣ ಪಡೆದು ಅಲ್ಲಿಯೇ ಇದ್ದರು. ನನಗೂ ಅವರಿಗೂ ಪರಿಚಯವಾಗಿ ಅದು ಸ್ನೇಹವಾಗಿ ಪರಿಣಮಿಸಿತು. ಅವರೂ ಕೂಡ ಬದನವಾಳಿಗೆ ಬಂದರು. ಶ್ರೀ ರಾಜಾರಾಂ ಅಯ್ಯಂಗಾರ್ರವರ ಭೇಟಿಯಾಗಿ ಅವರೂ ನಮ್ಮೊಡನೆ ನಿಂತು ಈ ಉದ್ಯೋಗವನ್ನು ಆರಂಭಿಸಲು ನೆರವಾದರು. ಕೈಕಾಗದ ಉದ್ಯೋಗವು ಒಂದು ಒಳ್ಳೆಯ ದಿನದಲ್ಲಿ ಸರಳ ರೀತಿಯಲ್ಲಿ ಆರಂಭವಾಯ್ತು.

ಆ ಕಾಲದಲ್ಲಿ ಕೈಕಾಗದ ಉದ್ಯೋಗಕ್ಕೆ ಈ ಕಾಲದಂತೆ ಯಂತ್ರೋಪಕರಣಗಳಾಗಲಿ ವಿದ್ಯುತ್ ಸಲಕರಣೆಗಳಾಗಲಿ ಇರಲಿಲ್ಲ. ಭತ್ತ ಕುಟ್ಟಲು ಉಪಯೋಗಿಸುವ ಏತದಂತೆ ಭಾರವಾದ ಒನಕೆಯುಳ್ಳ ಏತ. ಇದಕ್ಕೆ ಹಿಂದಿಯಲ್ಲಿ ಢೇಂಕಿ ಎನ್ನುತ್ತಿದ್ದರು. ಇದರಿಂದ ಕಾಗದ ತಯಾರಿಕೆಗೆ ಬೇಕಾಗುವ ತಿರುಳು (ಪಲ್ಪ್) ತಯಾರಾಗುತ್ತಿತ್ತು. ನಮ್ಮಲ್ಲಿ ಅದಮ್ಯ ಉತ್ಸಾಹವಿತ್ತು. ಇದನ್ನು ಶ್ರೀ ರಾಜಾರಾಮಯ್ಯಂಗಾರ್ರವರು ಗಮನಿಸಿದ್ದರು. ನಮ್ಮಲ್ಲಿ ಸಂಪೂರ್ಣ ವಿಶ್ವಾಸವಿಟ್ಟು ಈ ಕೆಲಸವನ್ನು ನಮಗೆ ಪೂರ್ಣವಾಗಿ ವಹಿಸಿದರು.

ಪ್ರಾರಂಭದಲ್ಲಿ ಒಂದು ಷಡ್ ನಿರ್ಮಾಣವಾಯ್ತು ಸಲಕರಣೆಗಳಿಗಾಗಿ ಸಾಮಗ್ರಿಗಳನ್ನು ಮಾಡಿಸುವಂತೆ ನನ್ನ ಕೈಗೆ 200 ರೂಗಳನ್ನಿತ್ತು ಉಪಕರಣಗಳನ್ನು ಒದಗಿಸಿಕೊಳ್ಳಲು ಹೇಳಿದರು. ಈ ಉದ್ಯೋಗ ಹೊಸದು, ನಾನೂ ಹೊಸಬ, ಒಂದು ರೀತಿಯ ದಿಗಿಲು. ಆದರೂ ಭಗವಂತನ ಮೇಲೆ ಭಾರ ಹಾಕಿದೆ. ಉದ್ಯೋಗಕ್ಕೆ ಬೇಕಾದ ವ್ಯಾಟು ವ್ಯಾಟು ಇತ್ಯಾದಿಗಳನ್ನು 4–5 ದಿನ ಮೈಸೂರಲ್ಲಿ ನಿಂತು ಮಾಡಿಸಿಕೊಂಡು ಬಂದೆ. ಕೆಲಸ ಆರಂಭಿಸಿದೆ. ಕೈಯಿಂದ ಕಾಗದ ಮಾಡುವುದು. ಈ ಉದ್ಯೋಗ ಈ ದೇಶಕ್ಕೆ ಹೊಸದು. ಆದ್ದರಿಂದ ಇದನ್ನು ನೋಡಲು ಜನರೂ ಬರತೊಡಗಿದರು. ಸಣ್ಣದಾಗಿ ಉತ್ಪಾದನೆಯೂ ಆಗತೊಡಗಿತು. ದಕ್ಷಿಣ ಭಾರತದ ಕೆಲವು ಖಾದಿ ಸಂಸ್ಥೆಗಳೂ

ಬದನವಾಳು ನೂಲುವ ಪ್ರಾಂತ್ಯವೂ ತನ್ನ ಬರವಣಿಗೆಗಾಗಿ ಈ ಕಾಗದವನ್ನೇ ಬಳಸ ತೊಡಗಿದವು. ಸಾಕಷ್ಟು ಬೇಡಿಕೆಯೂ ಇದ್ದಿತು. ಈ ಉದ್ಯೋಗವು ಕ್ರಮೇಣ ಬೆಳೆದು ಎಲ್ಲ ಕಡೆಗೂ ಪ್ರಸರಿಸಿ ಆಧುನಿಕ ಸಲಕರಣೆಗಳನ್ನು ಹೊಂದಿ ಉತ್ತಮ ದರ್ಜೆ ಕಾಗದಗಳನ್ನು ತಯಾರಿಸುತ್ತಿದೆ.

ಒಮ್ಮೆ ಕೆಲವು ಗಣ್ಯರೊಡನೆ ಶ್ರೀ ತಗಡೂರು ರಾಮಚಂದ್ರರಾಯರು ಭೇಟಿ ಕೊಟ್ಟರು. ನಾವು ಆಗತಾನೆ ಭತ್ತದ ಹುಲ್ಲಿನಿಂದ ಕಾಗದ ತಯಾರಿಸಿ ಹುರಿ ಮೇಲೆ ಒಣಗಲು ಹಾಕಿದ್ದೆವು. ರಾಯರು ಬಂದಾಗ ಅದನ್ನು ತೋರಿಸುವ ಆತುರದಲ್ಲಿ ಅದು ಜಾರಿ ಕೆಳಗಡೆಯಿದ್ದ ನೀರಿನ ತೊಟ್ಟಿಗೆ ಬಿದ್ದು ಒದ್ದೆಯಾಯಿತು. ಇವರಿಗೆ ಹೇಗೆ ಅನ್ನಿಸಿತೋ ಕಾಣೆ. ತೊಯ್ದು ಕಾಗದವನ್ನು ನೋಡಿ ವಾರ್ಧಾದಲ್ಲಿ ಕಲಿತದ್ದು ಹೀಗೇನೇ ಎಂತ ಎಂದರು. ಇದರಿಂದ ನಮಗೆ ಕೊಂಚ ತತ್ಕಾಲದಲ್ಲಿ ಬೇಸರವಾಯಿತು. ಎಲ್ಲಿ ತಪ್ಪಿದೆ ಎಂಬ ಅರಿವೂ ನಮಗೆ ಉಂಟಾಯ್ತು. ರಸಾಯನಿಕ ದ್ರವ್ಯಗಳ ಸಮತೋಲನ ಉಪಯೋಗದಿಂದ ಈ ದೋಷವನ್ನು ದೂರಮಾಡಿಕೊಂಡೆವು. ನಮಗಿದ್ದ ಜಿಜ್ಞಾಸು ಮನೋಭಾವ, ಅದಕ್ಕೆ ತಕ್ಕ ಪ್ರೋತ್ಸಾಹ ಶ್ರೀ ರಾಜಾರಾಮಯ್ಯಂಗಾರ್ರವರಿಂದ ದೊರೆತು ಈ ಉದ್ಯೋಗವು ಅಭಿವೃದ್ಧಿಗೊಂಡಿತು.

ಈ ದಿನಗಳಲ್ಲಿ ಬದನವಾಳಿನಲ್ಲಿ ಒಂದು ಖಾದಿ ಗ್ರಾಮೋದ್ಯೋಗ ಶಿಕ್ಷಣ ಕೇಂದ್ರವೂ ಆರಂಭವಾಯ್ತು. ಆಸಕ್ತರಾದ ಕೆಲವು ಯುವಕರೂ ಈ ಉದ್ಯೋಗದಲ್ಲಿ ತರಬೇತಿ ಪಡೆಯಲು ಬಂದಿದ್ದರು. ಎಲ್ಲರೂ ವಿದ್ಯಾವಂತರೂ, ಆಸಕ್ತರೂ, ವಿನೋದ ಪ್ರಿಯರೂ ಆಗಿದ್ದರು. ಇವರಲ್ಲಿ ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ರವರ ತಮ್ಮ ಶ್ರೀ ಬಿಳಿಗಿರಿರಂಗಯ್ಯಂಗಾರ್ರವರೂ ಇದ್ದರು. 100 ಅಡಿ ಆಳದಿಂದ ನೀರು ಎಳೆಯಬೇಕಾಗಿತ್ತು. ಕೈಕಾಗದಕ್ಕೆ ಹೆಚ್ಚು ನೀರು ಬೇಕಾಗುತ್ತಿತ್ತು. ಕೈಪಂಪಿನಿಂದ ಸರದಿ ಮೇಲೆ ನೀರು ಎತ್ತುತ್ತಿದ್ದರು. ರಾಗಿ ಕಲ್ಲು ಪದ ಹೇಳುವಂತೆ ಹಾಡು ಹೇಳಿ ಕೊಂಡು ಕೆಲಸಮಾಡುತ್ತಿದ್ದರು.

ಅಭ್ಯರ್ಥಿಗಳು ಹಾಸನ. ಶಿವಮೊಗ್ಗ, ಕನಕಪುರ, ಮೈಸೂರು, ಚಿತ್ರದುರ್ಗ ಮೊದಲಾದ ಕಡೆಗಳಿಂದ ಬಂದಿದ್ದರು. ಇವರಲ್ಲಿ ಮುಸಲ್ಮಾನರೂ ಕ್ರಿಶ್ಚನರು ಇದ್ದರು. ಎಲ್ಲರೂ ಏಕೀಭವಿಸಿ ಭೇದಭಾವವಿಲ್ಲದೆ ಇರುತ್ತಿದ್ದರು. ಚಿತ್ರದುರ್ಗದ ರಹಿಮಾನರು ರಾಮಾಶಾಸ್ತ್ರಿಯಾದರು. ಕ್ರಿಶ್ಚಿಯನ್‌ರಾದ ಜಾನ್ ಅವರು ಜಾನ್ ಅಮೃತಾಚಾರ್ ಹೀಗೆ ಹೆಸರು ಹಿಡಿದು ಕೂಗಿ ಗೇಲಿ ಮಾಡುತ್ತಿದ್ದರು. ಇದು ಒಂದು ರೀತಿಯ ಉತ್ಸಾಹ ಮನೋಭಾವವಾಗಿತ್ತು.

ಶಿಕ್ಷಣ ಶಿಬಿರದಲ್ಲಿ ಸಾಮೂಹಿಕ ಪ್ರಾರ್ಥನೆ, ಶ್ರಮದಾನ, ಅಧ್ಯಯನ, ಭೋಜನ ಆಟಪಾಟಗಳು ಇವು ನಿತ್ಯದ ಕಾರ್ಯಕ್ರಮಗಳು. ಎಲ್ಲದರಲ್ಲಿಯೂ ಆಸಕ್ತಿಯಿಂದ

ಕೆಲಸಮಾಡುತ್ತಿದ್ದು, ಶ್ರಮದಾನದಲ್ಲಿ ದಣಿವಾದರೂ ಹಾಸ್ಯಚಟಾಕಿ ಹಾರಿಸಿ ಆಯಾಸ ಪರಿಹಾರಮಾಡಿಕೊಳ್ಳುತ್ತಿದ್ದರು. ಊಟದ ಸಮಯದಲ್ಲಿಯೂ ಹಾಡು ಲಘುಹಾಸ್ಯ ಮೊದಲಾದವೂ ಇರುತ್ತಿದ್ದವು. ಇದರಲ್ಲಿ ಶ್ರೀ ರಾಜಾರಾಮಯ್ಯಂಗಾರ್ರವರೂ ಹಿರಿಯಣ್ಣನಂತೆ ಪಾಲ್ಗೊಳ್ಳುತ್ತಿದ್ದರು. ಜಾನ್ ಅಮೃತಾಚಾರ್‌ರವರ ಕ್ರಿಸ್ತಗೀತೆ, ರಹಿಮಾನ್ ಶಾಸ್ತ್ರಿಯ ಕುರಾನ್ ಪಠಣ, ಚಳ್ಳಕೆರೆ ಜೋಯಿಸರ ಸಂಸ್ಕೃತ ಶ್ಲೋಕ ಎಲ್ಲವೂ ರಂಜನೀಯವಾಗಿರುತ್ತಿದ್ದುವು. ಊಟದ ಸಮಯದಲ್ಲಿ ಕೆಲವು ಸಂಕೇತ ಪದಗಳೂ ಉಪಯೋಗಿಸಲ್ಪಡುತ್ತಿತ್ತು. ಯಾವುದಾದರೂ ವ್ಯಂಜನ ಕಡಿಮೆಬಿದ್ದರೆ ಅದರ ಬೇಡಿಕೆ ಬಂದರೆ "ಗಾಂಧಿ" ಎನ್ನುತ್ತಿದ್ದರು. ಹಾಗೆಂದರೆ ಆ ಪದಾರ್ಥ ಮುಗಿದಿದೆ ಎಂದರ್ಥ. "ಗೋವಿಂದ" ಎಂದರೆ ಯಾವುದೂ ಇಲ್ಲ ಎಂತ. ಸಾಯಂಕಾಲ ಪ್ರಾರ್ಥನೆಯ ನಂತರ ಪ್ರವಚನ, ಕಥಾ ವಿನೋದಗಳು ನಂತರ ಶಯನ ಇವು ಅಭ್ಯರ್ಥಿಗಳ ದಿನಚರಿಯಾಗಿತ್ತು.

ಒಮ್ಮೆ ಒಂದು ಸಂದರ್ಭದಲ್ಲಿ ಊಟಕ್ಕೆ ಹೆಚ್ಚು ಜನ ಬಂದರು. ಮಜ್ಜಿಗೆ ಊಟದ ಸಮಯದಲ್ಲಿ ಮಜ್ಜಿಗೆ ಕಡಿಮೆ ಬಿತ್ತು. ಊಟಕ್ಕೆ ಕಡೇಲಿ ಮಜ್ಜಿಗೆ ಇಲ್ಲದಿದ್ದರೆ ಊಟ ಪೂರ್ಣವಾಗುವುದು ಹೇಗೆ? "ಗಾಂಧಿ" ನಡೆಯುವ ಹಾಗಿರಲಿಲ್ಲ. ಅಡಿಗೆ ಚಾರ್ಜು ಶ್ರೀ ತಳುಕಿನ ಜೋಯಿಸರದಾಗಿತ್ತು. ಅವರು ಸಮಯ ನೋಡಿದರು. ಮಜ್ಜಿಗೆಗೆ ಮದುವೆ ಮಾಡದೆ ಬೇರೆ ಮಾರ್ಗ ಕಾಣಿಸಲಿಲ್ಲ. ಸರಿ, ನೀರು ಬೆರಸಿ (ಮದುವೆ ಮಾಡಿ) ಅದಕ್ಕೆ ಕೊತ್ತಂಬರಿ ಸೊಪ್ಪು, ಒಗ್ಗರಣೆ ಹಾಕಿ ಬಡಿಸಿದರು. ಅಂದಿನ ಊಟಕ್ಕೆ ಶ್ರೀ ರಾಜಾರಾಮಯ್ಯಂಗಾರ್ರವರಿಗೂ ಆಹ್ವಾನವಿತ್ತು. ಅವರಿಗೆ ಮಜ್ಜಿಗೆ ಬಡಿಸಿದರು. ತಕ್ಷಣ ಅವರ ಬಾಯಿಂದ ಹೊರಟಿತು "ಮಜ್ಜಿಗೆಗೆ ಜಳಕಾ ಮಾಡಿದನು ತಳಕ" ಎಂದು. ಎಲ್ಲರೂ ನಕ್ಕಿದ್ದೇ ನಕ್ಕಿದ್ದು; ಆದರೆ ಜೋಯಿಸರು ನಗಲಿಲ್ಲ.

ಒಂದು ಭಾನುವಾರ ವಿಶೇಷ ಭೋಜನ. ಅಂದು ನಂಜನಗೂಡಿನ ಬಣ್ಣದ ಮನೆಯವರು, ಶ್ರೀ ಬೇಗ್ ಎನ್ನುವವರು ಇವರು ರಾಜಾಸ್ಥಾನದವರು. ಬಣ್ಣ ಮತ್ತು ಅಚ್ಚು ಹಾಕುವ ಕೆಲಸದಲ್ಲಿ ಪರಿಣತರು, ಅವರು ಬಣ್ಣದ ಮನೆಯಲ್ಲಿ ಕೆಲಸಮಾಡುತ್ತಿದ್ದರು. ಅವರಿಗೂ ಆಹ್ವಾನವಿತ್ತಿದ್ದರು. ಆ ದಿನದ ವಿಶೇಷ ಗಸಗಸೆ ಪಾಯಸ ಒಳ್ಳೇ ರಸವತ್ತಾಗಿ ಘಮಘಮ ಎನ್ನುತ್ತಿತ್ತು. ಊಟಕ್ಕೆ ಬಾಳೆಲೆ ಹಾಕಿದ್ದರು. ಪಾಯಸ ಬಡಿಸುವ ಸರದಿ, ಬೇಗ್‌ರವರ ಎಲೆಗೂ ಪಾಯಸ ಬಿತ್ತು. ಗಸಗಸೆ ಪಾಯಸ ಕೊಂಚ ನೀರಾಗಿತ್ತು (ತೆಳುವು). ಒಂದು ಸೌಟು ಬಡಿಸಿದರು. ಅದೇನು ಒಂದೇಕಡೆ ನಿಲ್ಲುತ್ತದೆಯೇ? ಹಾಗೆ ನಿಲ್ಲಲು ಕಡಲೇ ಹುಳಿಯೆ? ಹರಿದಾಡತೊಡಗಿತು. ಬೇಗ್ ಸಾಹೇಬರಿಗೆ ಪರದಾಟ. ಎಲೇಲಿ ಊಟ ಮಾಡಿ ಅಭ್ಯಾಸವಿಲ್ಲ. ಎರಡು ಕೈಯಿಂದಲೂ ಎಲೆಯ ತುದಿಗಳನ್ನು ಹಿಡಿದುಕೊಂಡು ಪಾಯಸ ಹರಿದು ಹೋಗದ ಹಾಗೆ ಕುಳಿತರು.

ಪಾಯಸ ಕುಡಿಯುವುದು ಹೇಗೆ? ಒಂದು ಕೈಬಿಟ್ಟು ನೋಡಿದರು. ಅದೇನು ಸುಮ್ಮನೆ ಕೂತಿರುತ್ತದೆಯೆ? ಹರಿದಾಡತೊಡಗಿತು. "ಅರೇ, ಜಲೇಗಯ" ಎಂದು ಪುನಃ ಕೈಯಿಂದ ಹಿಡಿದುಕೊಂಡರು. ಇವರ ಅವಸ್ಥೆ ನೋಡಿ ಶ್ರೀ ರಾಜಾರಾಮಯ್ಯಂಗಾರ್ರವರು "ಅರೇ, ಪತ್ತೇಕೆ ನೀಚೆ ಥೋಡಾ ಭಾಜಿ ರಖೋ" (ಎಲೆ ಕೆಳಗೆ ಕೊಂಚ ಪಲ್ಯ ಹಾಕಪ್ಪ) ಎಂದರು. ಅವರು ಅದರಂತೆ ಕೈಬಿಟ್ಟು ಮಾಡಿದರು. ಖಾಲಿಯಾದ ಪಾಯಸವನ್ನು ಪುನಃ ಭರ್ತಿಮಾಡಿಸಿಕೊಂಡು ಕುಡಿದರು.

ನನಗೆ ಬದನವಾಳಿಂದ ಗೋರಿಬಿದನೂರಿನ ಹೊಸೂರಿಗೆ ವರ್ಗವಾಯಿತು. ಅಲ್ಲಿ ಹೊಸದಾಗಿ ಕೈಕಾಗದ ಉದ್ಯೋಗ ಪ್ರಾರಂಭಮಾಡುವುದಿತ್ತು. ಪ್ರಾರಂಭಿಸಿ ಕೆಲಸ ನಡೆಯುತ್ತಿತ್ತು. ಇಲ್ಲಿ ಹೊಸ ಹೊಸ ಕಚ್ಚಾ ಮಾಲುಗಳಿಂದ ಕೈಕಾಗದ ಮಾಡುವ ಪ್ರಯೋಗವನ್ನೂ ಮಾಡಲಾಗಿತ್ತು. ಭಾರವಾದ ಏತ ಉಪಯೋಗ ಶ್ರಮ ಸಾಧ್ಯವಾಗಿತ್ತು. ಇದಕ್ಕೆ ಬೇರೆ ಸಾಧನ ಉಪಯೋಗಿಸಬೇಕೆಂಬ ಯೋಜನೆ ತಲೆಯಲ್ಲಿತ್ತು. ಈ ಸಮಯದಲ್ಲಿ ಕೇಂದ್ರದ ಮುಂದೆ ಒಂದು ಅರಳೀಕಟ್ಟೆಯ ತುದಿಯಲ್ಲಿನ ಚಪ್ಪಡಿ ಕಲ್ಲಿನ ಮೇಲೆ ಒಂದು ಭಾರಿ ಕಲ್ಲುಗುಂಡನ್ನು ಎದುರು ಬದುರು ಇಬ್ಬರು ಹೆಂಗಸರು ಹಿಂದುಮುಂದು ಉರುಳಾಡಿಸುತ್ತಿದ್ದರು. ಹತ್ತಿರ ಹೋಗಿ ನೋಡಿದಾಗ ಅದರ ಕೆಳಗೆ ನವಣೆ ಹಾಕಿದ್ದರು. ವಿಚಾರಿಸಲಾಗಿ ಈ ಕ್ರಮದಿಂದ ನವಣೆಯ ಮೇಲಿನ ಹೊಟ್ಟನ್ನು ತೆಗೆಯಲಾಗುವುದು ಎಂದರು. ಆಗ ನಮಗೆ ಹೊಳೆದಿದ್ದೇನೆಂದರೆ ಈ ಕ್ರಮದಿಂದ ಕಾಗದ ಪಲ್ಪ್ ಮಾಡಬಹುದೆಂದು. ಅದರಂತೆ ಪ್ರಯೋಗ ಮಾಡಿ ಯಶಸ್ವಿಯಾದೆವು. ಕೆಲವು ಬಗೆ ಹುಲ್ಲು, ಕಬ್ಬಿನ ಸಿಪ್ಪೆ, ಇವುಗಳಿಂದ ಕಾಗದ ತಯಾರಾಗತೊಡಗಿತು. ಕಾಚಿ ಹುಲ್ಲಿನಿಂದ ತಯಾರಾದ ಟೈಪಿಂಗ್ ಪೇಪರನ್ನು ಅಖಿಲ ಭಾರತ ಚರಕಾ ಸಂಘದ ಸೆಕ್ರೆಟರಿ ಶ್ರೀ ಶಂಕರಲಾಲ್ ಬ್ಯಾಂಕರ್ರವರು ಉಪಯೋಗಿಸಿ ಪ್ರಶಂಸಿಸಿದ್ದಾರೆ.

ಒಂದು ಸಲ ನಾನು ಕೈಕಾಗದ ವಿಭಾಗದಲ್ಲಿ ಕೆಲಸದಲ್ಲಿ ನಿರತನಾಗಿದ್ದೆ. ಸುಮಾರು ಬೆಳಗಿನ 9 ಘಂಟೆ ಸಮಯ. ಹೊರಗಡೆ ಅಕಸ್ಮಾತ್ ಬಂದೆ. ರಸ್ತೆಯಲ್ಲಿ ಶ್ರೀ ರಾಜಾರಾಮಯ್ಯಂಗಾರ್ರವರ ಜತೆ ಒಬ್ಬರು ಜರತಾರಿ ಪೇಟ ಧರಿಸಿದ್ದವರು ನಮ್ಮ ಕೇಂದ್ರದ ಕಡೆ ನಡೆದು ಬರುತ್ತಿದ್ದರು. ಸ್ವಾಭಾವಿಕವಾಗಿ ಅವರಿಗೆ ನಮಸ್ಕರಿಸಿದೆ. ಜತೆಯಲ್ಲಿರುವವರು ಯಾರೋ ಪ್ರತಿಷ್ಠಿತ ಅತಿಥಿಗಳಿರಬಹುದೆಂದು ಶಂಕಿಸಿದೆ. ಒಳಗೆ ಬಂದವರು ನೇರವಾಗಿ ಕೈಕಾಗದ ವಿಭಾಗಕ್ಕೆ ಬಂದರು. ಅಲ್ಲಿ ನಡೆಯುತ್ತಿದ್ದ ಕ್ರಮವನ್ನು ನೋಡಿದರು. ಆ ಕಾಲದಲ್ಲಿ ಪಲ್ಪನ್ನು ಒಂದು ತೊಟ್ಟಿಯಲ್ಲಿ ಹಾಕಿ ಅದಕ್ಕೆ ನೀರು ತುಂಬಿ ಒಂದು ಬಿದಿರು ಕೋಲಿನಿಂದ ಚೆನ್ನಾಗಿ ಕದಡುತ್ತಿದ್ದರು. ಇದರಿಂದ ಪಲ್ಪ್ ನೀರಿನೊಂದಿಗೆ ಸಮರಸವಾಗಿ ಬೆರೆಯುತ್ತಿತ್ತು. ನಂತರ ಜಾಳಿಗೆಯಲ್ಲಿ ಕಾಗದ ತೆಗೆಯುತ್ತಿದ್ದರು.

ಬಂದಿದ್ದವರು ಈ ಕ್ರಮವನ್ನು ನೋಡಿ ಇದು ಸರಿಯಿಲ್ಲ, ಒಂದು ದೊಡ್ಡ

ಕಡೆಗೋಲಿನಿಂದ ಮೊಸರು ಕಡೆಯುವಂತೆ ಕಡೆದರೆ ಕೆಲಸ ಸುಲಭ ಎಂದು ಹೇಳಿದರು. ಅದಕ್ಕೆ ನಾನು ಕಡೆಗೋಲಿಗೆ ಆಧಾರವಿಲ್ಲದೆ ಹೇಗೆ ಕಡೆಯುವುದು ಎಂದು ಕೇಳಿದೆ. ಅವರು ಮತ್ತೆ ಕೆಲವು ಸೂಚನೆ ಸಲಹೆ ಕೊಟ್ಟರು. ಅದಕ್ಕೆ ಪ್ರತಿಯಾಗಿ ನಾನೂ ನನ್ನ ಅನಿಸಿಕೆಗಳನ್ನು ಹೇಳತೊಡಗಿದೆ. ಬಂದಿದ್ದವರು ಸಮಾಧಾನಚಿತ್ತದಿಂದ ಕೇಳುತ್ತಿದ್ದರು. ನಾನು ಅವರೊಂದಿಗೆ ವಾದ ಮಾಡುತ್ತಿರುವುದು ಅಧಿಕಪ್ರಸಂಗಿತನ ಎಂದು ಶ್ರೀ ರಾಜಾರಾಮಯ್ಯಂಗಾರ್ರವರಿಗೆ ಅನ್ನಿಸಿರಬಹುದೋ ಏನೋ. ಅವರು ಹೇಳಿದರು ಸಾಹೇಬರು ಏನು ಹೇಳುತ್ತಾರೋ ಅದನ್ನು ಬರೆದುಕೋ ಎಂದು. ಆಗ ನನಗನ್ನಿಸಿತು, ಇವರು ಡೈರೆಕ್ಟರ್‌ರವರು ಇರಬಹುದೆಂದು. ನಂತರ ಜಾಗರೂಕನಾಗಿ ಅವರು ಕೊಟ್ಟ ಸಲಹೆಯನ್ನು ನೋಟ್ ಮಾಡಿಕೊಂಡೆ.

ಅಲ್ಲಿನ ಕೆಲಸಗಳನ್ನು ಸಮಾಧಾನಚಿತ್ತದಿಂದ ವೀಕ್ಷಿಸಿ ಕಬ್ಬಿನ ಸಿಪ್ಪೆಯಿಂದ ತಯಾರಾದ ಕಾಗದವನ್ನು ಪರೀಕ್ಷಿಸಿದರು. ಅದು ತುಂಬಾ ಗಟ್ಟಿಯಾಗಿತ್ತು. ಮೆಚ್ಚುಗೆ ವ್ಯಕ್ತಪಡಿಸಿ ಅರಗು ಮತ್ತು ಪೇಂಟ್ ಕೈಗಾರಿಕಾ ವಿಭಾಗಕ್ಕೆ ಅರಗು ಕಡ್ಡಿಗಳನ್ನು ಪ್ಯಾಕ್ ಮಾಡಲಿಕ್ಕಾಗಿ ಕಾಗದ ಸಪ್ಲೈ ಮಾಡಲು ಆರ್ಡರ್ ಕೊಟ್ಟರು. ನನಗೆ ಆ ಮೇಲೆ ಗೊತ್ತಾಯ್ತು ಬಂದಿದ್ದವರು ಡೈರೆಕ್ಟರಾದ ಶ್ರೀ ಎಸ್. ಜಿ. ಶಾಸ್ತ್ರಿಗಳೆಂದು. ಅವರು ಹೋದ ಕೆಲದಿನಗಳ ಮೇಲೆ ಅವರು ಪ್ರಶಂಸೆ ಮಾಡಿದ್ದನ್ನು ಶ್ರೀ ರಾಜಾ ರಾಮಯ್ಯಂಗಾರ್ರವರು ಪತ್ರಮುಖೇನ ನನಗೆ ತಿಳಿಸಿದರು.

ಇದಾದ ನಂತರ ಸೊಂಡೂರು ಸಂಸ್ಥಾನಕ್ಕೆ ಅಲ್ಲಿ ಹೊಸದಾಗಿ ಕೈಕಾಗದ ಪ್ರಾರಂಭಿಸಲು ಡೆಪ್ಯೂಟ್ ಮಾಡಿದರು. ಸೊಂಡೂರಿನಲ್ಲಿ ಕಾಡಿನಲ್ಲಿ ಬೆಳೆಯುವ ಒಂದು ತರದ ಹುಲ್ಲಿನಲ್ಲಿ ಕಾಗದ ತಯಾರಿಸಬೇಕಿತ್ತು. ಅಲ್ಲಿನ ರಾಜಕೀಯ ಪರಿಸ್ಥಿತಿ ಯಿಂದ ಸಾಕಷ್ಟು ಪ್ರೋತ್ಸಾಹವೂ ಸಲಕರಣೆಗಳೂ ಸಿಗಲಿಲ್ಲ. ಒಂದು ವರ್ಷದ ನಂತರ ಅಲ್ಲಿಂದ ವಾಪಸ್ಸಾಗಬೇಕಾಯ್ತು.

ಇವು ಬದನವಾಳಲ್ಲಿ ಕೆಲಸಮಾಡಿದ್ದರ ಕೆಲ ನೆನಪುಗಳು ಮಾತ್ರ. ಈ ನೆನಪುಗಳು ಮಧುರವಾಗಿದ್ದು ನಿರಂತರ ನೆನಪಿನಾಳದಲ್ಲಿ ಉಳಿದಿರುವುದು. ಬದನವಾಳು ನೂಲುವ ಪ್ರಾಂತ್ಯದ ವ್ಯವಸ್ಥಾಪಕರಾಗಿದ್ದ ಶ್ರೀ ರಾಜಾರಾಮಯ್ಯಂಗಾರ್ರವರ ಅವಿರತ ಶ್ರಮ, ಪ್ರೀತಿ ವಾತ್ಸಲ್ಯಯುತ ನಡವಳಿಕೆ ಇದರಿಂದ ಪ್ರಭಾವಿತರಾದ ಕಾರ್ಯಕರ್ತರಿಂದೊಡ ಗೂಡಿ ಇದೊಂದು ಕುಟುಂಬದ ಸದಸ್ಯರಿಂದೊಡಗೂಡಿದ ಆದರ್ಶಮಯ ಪರಿವಾರದಂತೆ ಕೀರ್ತಿಶಾಲಿಯಾಗಿ ಮೆರೆಯಿತು. ಅಂದಿನ ವೈಭವವು ಇಂದು ಕೇವಲ ನೆನಪಾಗಿ ಉಳಿದಿದೆ. ಸ್ವರಾಜ್ಯ ಪ್ರಾಪ್ತಿಯ ನಂತರ ಖಾದಿ ಕ್ಷೇತ್ರವು ಸರ್ಕಾರದ ಒಂದು ಅಂಗವಾಗಿ ಪರಿಣಮಿಸಿ ಗಾಂಧೀಜಿಯವರ ಆದರ್ಶದಿಂದ ಪ್ರತ್ಯೇಕವಾದ ಮಾರ್ಗದಲ್ಲಿ ನಡೆದಿದೆ.

* * *

ಬದನವಾಳು ಖಾದಿ ಹುಟ್ಟು ಮತ್ತು ವಿಸ್ತರಣೆ

ಶ್ರೀ ಡಿ. ರಂಗಶೆಟ್ಟಿ
ಬದನವಾಳು ಹಳೇ ಖಾದಿ ಕಾರ್ಯಕರ್ತ



1927ನೇ ವರ್ಷ ಮೈಸೂರು ರಾಜ್ಯದ ನಂದಿ ಬೆಟ್ಟದಲ್ಲಿ ಪೂಜ್ಯರಾದ ಮಹಾತ್ಮ ಗಾಂಧಿಯವರು ಅವರ ಆರೋಗ್ಯ ಸುಧಾರಣೆಗಾಗಿ ಬಿಡಾರವನ್ನು ಮಾಡಿದ್ದರು. ಬಹುಶಃ ಏಪ್ರಿಲ ನಿಂದ ಎರಡು ತಿಂಗಳು ನಂದಿಬೆಟ್ಟದಲ್ಲಿ ಮತ್ತು ಮುಂದಿನ ಎರಡೂವರೆ ತಿಂಗಳು ಬೆಂಗಳೂರು ಕುಮಾರ ಪಾರ್ಕಿನಲ್ಲಿಯೂ ತಂಗಿದ್ದರು. ಆಗಿನ ಮೈಸೂರು ಸರ್ಕಾರದ ದಿವಾನರಾಗಿದ್ದ ಸರ್ ಮಿರ್ಜಾ ಸಾಹೇಬರು ಮೊದಲನೇ ಕೌನ್ಸಿಲರು ಶ್ರೀ ಎಂ. ಎನ್. ಕೃಷ್ಣರಾಯರೂ ಆಲೋಚಿಸಿ, ಘನವೆತ್ತ ಮೈಸೂರು ಮಹಾರಾಜ ಶ್ರೀ ಕೃಷ್ಣರಾಜ ವಡೆಯರವರ ಅನುಮತಿ ಪಡೆದು ಮೈಸೂರು ಸಂಸ್ಥಾನದಲ್ಲಿ ಮಹಾತ್ಮಾಜೀಯವರು ವಾಸಿಸುವಷ್ಟು ದಿನ ಎಲ್ಲಾ ಸೌಲಭ್ಯಗಳನ್ನು ಒದಗಿಸಿದ್ದರು.

ಆ ಕಾಲದಲ್ಲಿ ಈ ರಾಜ್ಯಕ್ಕೆ ಹಿಂದುಸ್ತಾನದ ಗಣ್ಯ ರಾಜಕೀಯ ಮುಖಂಡರುಗಳೂ, ಸಮಾಜ ಕಾರ್ಯಕರ್ತರೂ, ಕ್ರಿಯಾಶೀಲರೂ, ಸ್ವಾರ್ಥತ್ಯಾಗಿಗಳೂ ಮತ್ತು ರಚನಾತ್ಮಕ ಕಾರ್ಯಕರ್ತರೂ, ಖಾದಿ ಉದ್ಯಮದವರೂ ಆಗಾಗ್ಗೆ ಬರುತ್ತಲೇ ಇದ್ದರು. ಚರ್ಚೆಗಳನ್ನು ನಡೆಸುತ್ತಲೇ ಇದ್ದರು. ನಂದಿ ಬೆಟ್ಟ ಮತ್ತು ಕುಮಾರ ಪಾರ್ಕು ಬಂಗಲೆಗಳು. ಒಂದು ಯಾತ್ರಾ ಸ್ಥಳವಾಗಿದ್ದಿತ್ತು. ಮಹಾತ್ಮರು ಎಲ್ಲಿದ್ದರಲ್ಲಿಯೇ ಬೆಳಗಿನ ಮತ್ತು ಸಾಯಂಕಾಲದ ಪ್ರಾರ್ಥನೆಗಳು ನಡೆಸಲ್ಪಡುತ್ತಿದ್ದಿತು. ಅಂತೆಯೇ ಪ್ರತಿದಿನವೂ ಬೆಂಗಳೂರು ಕುಮಾರಾ ಪಾರ್ಕಿನಲ್ಲಿ (ಈಚೆಗೆ ಇದನ್ನು ಕುಮಾರ ಕೃಪ ಎಂದು ಹೆಸರಿಸಲಾಗಿದೆ) ಪ್ರಾರ್ಥನೆಗಳು ನಡೆಯುತ್ತಿದ್ದವು. ಪ್ರಾರ್ಥನೆಯಾದ ಮೇಲೆ

ಮಹಾತ್ಮರು ಖಾದಿ ಮತ್ತು ಇತರ ರಚನಾತ್ಮಕ ವಿಷಯದಲ್ಲಿ ಮನದಟ್ಟುವ ಹಾಗೆ ಪ್ರವಚನ ನಡೆಸುತ್ತಿದ್ದರು.

ಆ ಕಾಲದಲ್ಲಿ ಹಳೆ ಮೈಸೂರು ಸಂಸ್ಥಾನದಲ್ಲಿ ಖಾದಿ ಉದ್ದಿಮೆ ಮತ್ತು ಪ್ರಚಾರ ಅಷ್ಟಾಗಿ ಇರಲಿಲ್ಲ. ಉತ್ತರ ಕರ್ನಾಟಕ ಪ್ರಾಂತ್ಯದಲ್ಲಿ ಅಖಿಲ ಭಾರತ ಚರಕಾ ಸಂಘದ ಕರ್ನಾಟಕ ಶಾಖೆಯ ಮುಖ್ಯ ಕಚೇರಿ ಬೇಗಾವಿಯಲ್ಲಿದ್ದಿತು. ಜಿಲ್ಲೆಯ ಹುದಲಿ, ಧಾರವಾಡ, ಹುಬ್ಬಳ್ಳಿ, ಬಿಜಾಪುರ, ರಾಯಚೂರು ಜಿಲ್ಲೆಗಳಲ್ಲಿ ಖಾದಿ ಉತ್ಪತ್ತಿ ಮತ್ತು ಮಾರಾಟದ ವ್ಯವಸ್ಥೆ ನಡೆಸಲಾಗುತ್ತಿತ್ತು. ಬಹುಮಟ್ಟಿಗೆ ಈ ಖಾದಿ ಉದ್ದಿಮೆ ಕರ್ನಾಟಕದಲ್ಲಿ ಬೆಳೆದದ್ದು 1924ರ ನಂತರ. ಈ ಹೊತ್ತಿಗಾಗಲೇ ದೇಶದ ಮುಖಂಡರುಗಳಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ಒಂದು ಖಾದಿ ಸೊಸೈಟಿಯನ್ನು ಸ್ಥಾಪನೆ ಮಾಡಿದರು. ಅಂತೆಯೇ ಮೈಸೂರು ಸಿಟಿಯಲ್ಲಿ ಕೆಲವು ಮುಖಂಡರುಗಳು ಖಾದಿ ಕೋ ಆಪರೇಟಿವ್ ಸೊಸೈಟಿಯನ್ನು ಮಾಡಿ, ವ್ಯಾಪಾರದ ಅಂಗಡಿಯನ್ನು ಲ್ಯಾನ್ಸ್‌ಡೌನ್ ಬಿಲ್ಡಿಂಗಿನಲ್ಲಿ ತೆರೆದಿದ್ದರು. ಈಗಲೂ ಇದು ಅಸ್ತಿತ್ವ ದಲ್ಲಿದ್ದು ಚೆನ್ನಾಗಿ ಕೆಲಸ ನಿರ್ವಹಿಸುತ್ತಿದೆ.

1926ರಲ್ಲಿ ಬೆಂಗಳೂರು ಸಿಟಿಯಲ್ಲಿ ಕೋಟೆ ಖಾದಿ ವಸ್ತ್ರಾಲಯವನ್ನು ತಮಿಳುನಾಡು ಚರಕಾ ಸಂಘದವರು ನಡೆಸುತ್ತಿದ್ದು ಕರ್ನಾಟಕ ಚರಕಾ ಸಂಘಕ್ಕೆ ವಹಿಸಿಕೊಟ್ಟರು. ಈ ವಸ್ತ್ರಾಲಯದಲ್ಲಿ ಶ್ರೀ ಸದಾಶಿವಮ್ (ಇವರು ಸಂಗೀತ ವಿದುಷಿ ಶ್ರೀ ಎಂ. ಎಸ್. ಸುಬ್ಬಲಕ್ಷ್ಮಿಯವರ ಯಜಮಾನರು) ಎಂಬುವರು ವ್ಯವಸ್ಥಾಪಕ ರಾಗಿದ್ದರು. ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಸಹಾಯಕರಾಗಿದ್ದರು.

ಮಹಾತ್ಮರು ನಂದಿಬೆಟ್ಟದಲ್ಲಿ ಬಿಡಾರ ಮಾಡಿದಾಗ ಅವರ ಯೋಗಕ್ಷೇಮ ಊಟ ಉಪಚಾರಗಳ ಮೇಲ್ವಿಚಾರಣೆಗೆ ಒಬ್ಬ ವಿದ್ಯಾವಂತ ಹಾಗೂ ಸುಸಂಸ್ಕೃತ ತರುಣ ಬೇಕಾಗಿದ್ದಿತು. ಶ್ರೀ ರಾಜಾರಾಮಯ್ಯಂಗಾರ್ರವರು ಬಿ.ಎ.,ಬಿ.ಎಸ್‌ಸಿ. ಪಾಸು ಮಾಡಿಕೊಂಡು ತಾತಾ ವಿಜ್ಞಾನ ಮಂದಿರದಲ್ಲಿ ಆಗ ತಾನೇ ಸೇರಿದ್ದರು. ಅದನ್ನು ಬಿಟ್ಟು ಕೊಟ್ಟು ಖಾದಿ ಕೆಲಸ ಮಾಡುತ್ತಿದ್ದರು. ಈ ಕೆಲಸ ವಹಿಸಿಕೊಳ್ಳಲು ಮುಂದೆ ಬಂದರು. ಇವರ ಕೆಲಸ ಮಹಾತ್ಮಾಜಿಯವರಿಗೆ ಅನುಗುಣವಾದ ಆಹಾರವನ್ನು ಸಕಾಲಕ್ಕೆ ಒದಗಿಸುವುದು. ಅಲ್ಲಿಗೆ ಬರುತ್ತಿದ್ದ ಗಾಂಧೀಜಿಯವರ ಒಡನಾಡಿಗಳೂ ಸ್ನೇಹಿತರಿಗೂ ಊಟ ಉಪಚಾರಗಳ ವ್ಯವಸ್ಥೆ ಮಾಡುವ ಜವಾಬ್ದಾರಿ ಇದ್ದಿತು. ಈ ಕೆಲಸವನ್ನು ಬಹು ವಿಚಕ್ಷಣೆಯಿಂದಲೂ ದಿಟ್ಟತನದಿಂದಲೂ ನಿರ್ವಹಿಸಿದರು. ಮಹಾತ್ಮರು ಸಂತೋಷಗೊಂಡರು. ಇವರ ಕಾರ್ಯದಕ್ಷತೆಯ ಕುರುಹಾಗಿ ಭಗವ ದ್ಗೀತೆಯ ಪ್ರತಿಯನ್ನು ಆಶೀರ್ವದಿಸಿ ದಯಪಾಲಿಸಿದರು.

ಇದೇ ಅವಧಿಯ ಕಡೆಯಲ್ಲಿ ಮಹಾತ್ಮರೂ ಪೂಜ್ಯರಾದ ರಾಜಗೋಪಾಲಾಚಾರಿ

ಯವರೂ, ದೇಶಪಾಂಡೆ ಗಂಗಾಧರರಾಯರು, ಶ್ರೀ ಶಂಕರಲಾಲ್ ಬ್ಯಾಂಕರ್‌ರವರು, ಶ್ರೀ ಹಣಮಂತರಾವ್ ಕೌಜಲಗಿ ಆಗಿನ ಮೈಸೂರು ರಾಜ್ಯದಲ್ಲಿ ಖಾದಿ ಉದ್ದಿಮೆ ಹೇಗೆ ಆರಂಭಿಸಬೇಕೆಂಬುದರ ಬಗ್ಗೆ ಆಲೋಚಿಸುತ್ತಿದ್ದರು. ಕರ್ನಾಟಕ ಚರಕಾ ಸಂಘದವರೂ ಇದೇ ಆಲೋಚನೆಯಲ್ಲಿದ್ದರು. ಮೈಸೂರು ಸಂಸ್ಥಾನವು ಬ್ರಿಟಿಷರ ಆಶ್ರಿತ ಸಂಸ್ಥಾನವಾಗಿದ್ದು ಖಾದಿ ಕೆಲಸ ನಡೆಸಲು ಚರಕಾ ಸಂಘದವರಿಗೆ ಸಂದಿಗ್ಧ ವಾಗಿತ್ತು. ಆಗಿನ ದಿವಾನರಾಗಿದ್ದ ಸರ್ ಮಿರ್ಜಾ ಇಸ್ಮೇಲ್ ಸಾಹೇಬರು ಇದರ ಬಗ್ಗೆ ಮಹಾತ್ಮರನ್ನು ಭೇಟಿಯಾದರು. ಮಾತಿನ ಸಂದರ್ಭದಲ್ಲಿ ರಾಜ್ಯದಲ್ಲಿ ಖಾದಿ ಉದ್ದಿಮೆಯ ಪ್ರಸ್ತಾಪವೂ ಬಂದಿತು. ಸರ್ಕಾರವು ಚರಕಾ ಸಂಘಕ್ಕೆ ಅವಕಾಶ ಕೊಟ್ಟರೆ ರಾಜಕೀಯ ಗುಂಪಿಗೆ ಅವಕಾಶ ಕೊಟ್ಟಂತಾಗುವುದೆಂದು ಆಲೋಚಿಸಿ ಕೈಗಾರಿಕೆ ಇಲಾಖೆಯ ವತಿಯಿಂದಲೇ ಗ್ರಾಮಾಂತರದಲ್ಲಿ ಈ ಉದ್ದಿಮೆಯನ್ನು ಸ್ಥಾಪಿಸುವುದೆಂದು ಮಹಾತ್ಮರಿಗೆ ಆಶ್ವಾಸನೆ ಕೊಟ್ಟರು. ಈ ಕೆಲಸಕ್ಕಾಗಿ ಸರ್ವೆ ನಡೆಸಲು ಮೇಲ್ಕಂಡ ಮಹನೀಯರು ಬದನವಾಳು, ನೇರಳೆ, ಬಸವಟ್ಟಿಗೆ, ಚಿಕ್ಕ ಕೌಲಂದೆ, ದೇವನೂರು, ಈ ಹಳ್ಳಿಗಳಲ್ಲಿ ಸಂಚರಿಸಿ ಅಲ್ಲಿ ಕೈರಾಟೆಗಳನ್ನು ನೋಡಿದರು ಮತ್ತು ಕೆಲವು ಕೈಮಗ್ಗಗಳನ್ನು ನೋಡಿ ವಿಚಾರ ವಿನಿಮಯ ಮಾಡಿಕೊಂಡರು. ಬದನವಾಳವು ಖಾದಿ ಉದ್ದಿಮೆಗೆ ಸೂಕ್ತ ಕೇಂದ್ರವಾಗಲು ಅರ್ಹವಾಗಿದೆ ಎಂದು ಮನಗಂಡರು.

ಈ ಕೆಲಸಕ್ಕೆ ನಂಜನಗೂಡು ತಾಲ್ಲೂಕಿನ ಬದನವಾಳು ಸೂಕ್ತವಾಗಿ ಕಂಡಿತು. ರೈಲು ರಸ್ತೆಯ ಪಕ್ಕದಲ್ಲಿ ಆರು ಎಕರೆ ಜಮೀನನ್ನು ಖರೀದಿಸಿ ಅಲ್ಲಿ ಕೇಂದ್ರ ಸ್ಥಾಪನೆ ಯಾಯಿತು. ಈಗಾಗಲೇ ಮಹಾತ್ಮರ ಸೇವೆಯಲ್ಲಿದ್ದ ಹಾಗೂ ಖಾದಿ ಕೆಲಸದಲ್ಲಿ ಆಸಕ್ತಿ ಹೊಂದಿದ್ದ ಶ್ರೀ ಎಸ್. ರಾಜಾರಾಮಯ್ಯಂಗಾರ್‌ರವರು, ಬಿ.ಎ.,ಬಿ.ಎಸ್‌ಸಿ., ಇವರನ್ನು ಈ ಕಾರ್ಯಕ್ಕೆ ಆಹ್ವಾನಿಸಲಾಯ್ತು. ಇನ್ನೂ ಹೆಚ್ಚಿನ ಮಾಹಿತಿ ಮತ್ತು ನೆರವಿಗಾಗಿ ಉಪ್ಪಿನಬೆಟಗೇರಿ ಖಾದಿ ಕ್ಷೇತ್ರದಲ್ಲಿದ್ದ ಶ್ರೀ ಸಿದ್ದೂರಾವ್ ಪೂಜಾರಿಯವ ರನ್ನೂ ಇವರ ನೆರವಿಗಾಗಿ 9 ತಿಂಗಳ ವರೆಗೆ ನೇಮಿಸಿಕೊಳ್ಳಲಾಯ್ತು.

ಬದನವಾಳ ಖಾದಿ ಕೇಂದ್ರವು ಬದನವಾಳು ನೂಲುವ ಪ್ರಾಂತ ಎಂಬ ಅಭಿದಾನ ದಿಂದ 1-11-1927ರಂದು ಆಡಂಬರ ರಹಿತವಾಗಿ ಸರಳ ರೀತಿಯಲ್ಲಿ ಆರಂಭವಾಯ್ತು. ಈ ಹೆಸರಿಡಲು ಕಾರಣ : ಬ್ರಿಟಿಷ್ ಸರ್ಕಾರಕ್ಕೆ ಈ ಹೆಸರು ರಾಜಕೀಯವಾಗಿ ಕಂಡಿದ್ದಿತು. ಮೈಸೂರು ಆಶ್ರಿತ ಸಂಸ್ಥಾನವಾಗಿದ್ದುದು ಖಾದಿ ಹೆಸರಿಡಲು ಒಂದು ತರಹ ಅಳುಕು ಇದ್ದಿತು. ಆದ್ದರಿಂದ ಮಧ್ಯಮಮಾರ್ಗ ನೂಲುವ ಪ್ರಾಂತ್ಯ ಎಂದಾಯ್ತು. ಅಂದಿನಿಂದ ಪ್ರಗತಿ ಹೊಂದುತ್ತಾ ಬಂದಿತು. 1954 ಡಿಸೆಂಬರ್ ವರೆವಿಗೂ ಉಚ್ಛ್ರಾಯ ಸ್ಥಿತಿಗೇರುತ್ತಾ ಬಂದಿತು. 27 ವರ್ಷಗಳು ಶ್ರೀ ರಾಜಾ ರಾಮಯ್ಯಂಗಾರ್‌ರವರು ಅಖಂಡವಾಗಿ ಸೇವೆಗೈದರು. ದೇಶದ ಅನೇಕ ಗಣ್ಯ ವ್ಯಕ್ತಿಗಳು

ಆಗಾಗ್ಗೆ ಭೇಟಿ ಕೊಡುತ್ತಲಿದ್ದರು. ರಾಜ್ಯದ ದಿವಾನರೂ ಕೌನ್ಸಿಲರ್‌ರವರೂ ಸಂಬಂಧಿಸಿದ ಹಿರಿಯ ಅಧಿಕಾರಿಗಳೂ ಆಗಾಗ್ಗೆ ಭೇಟಿಕೊಟ್ಟು ಇದರ ಬೆಳವಣಿಗೆಗೆ ಸಹಾಯ ಸಹಕಾರವನ್ನು ಕೊಡುತ್ತಿದ್ದರು.

ಇದಕ್ಕೂ ಹಿಂದೆ 1934ರಲ್ಲಿ ಮಹಾತ್ಮಾ ಗಾಂಧಿಯವರು ಈ ಕೇಂದ್ರಕ್ಕೆ ಭೇಟಿಯಿತ್ತು ಈ ಕ್ಷೇತ್ರವನ್ನು ಪಾವನಗೊಳಿಸಿದ್ದಾರೆ. ಇವರ ಜತೇಲಿ ಶ್ರೀ ಆಚಾರ್ಯ ಕೃಪಲಾನಿಯವರೂ ಆಗಮಿಸಿದ್ದರು. ಈ ಸಂದರ್ಭದಲ್ಲಿ ಮಹಾತ್ಮರಿಗೆ ಹರಿಜನ ನಿಧಿಗಾಗಿ 250 ರೂ.ಗಳ ವಂತಿಗೆಯನ್ನು ಅರ್ಪಿಸಲಾಯ್ತು. ಆಕಸ್ಮಿಕವಾಗಿ ಖಾದಿ ಸ್ಟೋರ್ಸಿನಲ್ಲಿದ್ದ ಡಿ. ರಂಗಶೆಟ್ಟರು ಈ ನಿಧಿಯನ್ನು ಅವರಿಗೆ ಅರ್ಪಿಸಿದರು.

ಇಲ್ಲಿಂದ ಮುಂದೆ 1954ನೇ ಇಸವಿ ವರೆವಿಗೂ ಶ್ರೀ ರಾಜಾರಾಮಯ್ಯಂಗಾರ್ರವರು ಕೇಂದ್ರ ಮುಖ್ಯರಾಗಿ ಕಾರ್ಯ ನಿರ್ವಹಿಸಿ ವ್ಯವಸ್ಥಾಪಕ ವೃತ್ತಿಯಿಂದ ನಿವೃತ್ತಿಹೊಂದಿದರು. ಮುಂದೆ ಕ್ರಮವಾಗಿ ಶ್ರೀ ಕೆ. ಎಸ್. ಬಸವಯ್ಯ, ಶ್ರೀ ಡಿ. ರಂಗಶೆಟ್ಟಿ, ಶ್ರೀ ರಾಮಕೃಷ್ಣ ಕೈಗಾರಿಕೆಯಲ್ಲಿದ್ದಾಗ ಕೇಂದ್ರದ ವ್ಯವಸ್ಥಾಪಕರುಗಳಾಗಿ ನಿಷ್ಠೆಯಿಂದ ಸೇವೆ ಸಲ್ಲಿಸಿರುತ್ತಾರೆ. ಇವರುಗಳು 27–30 ವರ್ಷಗಳ ವರೆಗೂ ಸೇವೆ ಸಲ್ಲಿಸಿ ನಿವೃತ್ತರಾಗಿರುತ್ತಾರೆ.

1-1-1958ರಿಂದ ಸರ್ಕಾರವು ನಡೆಸುತ್ತಿದ್ದ ಖಾದಿ ಕೇಂದ್ರಗಳೆಲ್ಲವನ್ನೂ ಮೈಸೂರು ರಾಜ್ಯದ ಖಾದಿ ಮಂಡಲಿಯವರು ವಹಿಸಿಕೊಂಡರು. ಅಲ್ಲಿನ ಮುಂದಿನ ಆಗುಹೋಗುಗಳೆಲ್ಲವೂ ಖಾದಿ ಮಂಡಲಿಗೆ ಸೇರಿದೆ.

* * * *

ಕರ್ನಾಟಕದಲ್ಲಿ ಖಾದಿ

ಮೈಸೂರು ರಾಜ್ಯದ ಶ್ರೀ ನಾಲ್ಮಡಿ ಕೃಷ್ಣರಾಜ ಒಡೆಯರ ವರದಾನದಿಂದ ಬೆಳೆದುಬಂದ ಖಾದಿ ಗ್ರಾಮೋದ್ಯೋಗ ಉದ್ದಿಮೆಗಳ ಚಾರಿತ್ರಿಕ ಹಿನ್ನೆಲೆ.

ಡಿ. ರಂಗಶೆಟ್ಟಿ
ಖಾದಿ ಕಾರ್ಯಕರ್ತರು

ಕರ್ಣಾಟಕದಲ್ಲಿ ಖಾದಿಯ ಇತಿಹಾಸವೆಂಬ ಒಂದು ಪುಸ್ತಕವನ್ನು ಶ್ರೀ॥ ರಾಮಚಂದ್ರವಡವಿಯವರು ಬರೆದಿದ್ದಾರೆ. ಕರ್ಣಾಟಕ ಖಾದಿ ಮಂಡಳಿಯವರು ಶ್ರೀ॥ ರಂಗನಾಥ ದಿವಾಕರ ಮುನ್ನುಡಿಯೊಡನೆ ಇದನ್ನು ಪ್ರಕಟಿಸಿದ್ದಾರೆ. ಶ್ರೀ॥ ವಡವಿಯವರು ಕರ್ಣಾಟಕದಲ್ಲಿ ಆದಿಯಿಂದ ಖಾದಿಗ್ರಾಮೊದ್ಯೋಗ ಕ್ಷೇತ್ರದಲ್ಲಿ ಕೆಲಸಮಾಡಿದವರು, ಕರ್ನಾಟಕ ಚರಖಾ ಸಂಘದಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದವರು. ಅಂದಿನ ಮೈಸೂರು ರಾಜ್ಯ ಸರ್ಕಾರದ ನೆರವಿನಲ್ಲಿ ಸುಮಾರು ಮೂವತ್ತು ವರ್ಷಗಳ ಮೇಲ್ಪಟ್ಟು ಇಡೀ ಭಾರತದಲ್ಲಿಯೇ ಹೆಸರಾಂತ ಬದನವಾಳು ಖಾದಿಕ್ಷೇತ್ರದ ವಿಷಯದಲ್ಲಿ ಅವರ ಇತಿಹಾಸ ಪುಸ್ತಕದಲ್ಲಿ ಒಂದೆರಡು ಪಂಕ್ತಿಯಲ್ಲಿಯೇ ಮುಗಿಸಿ ಶ್ರೀ॥ ರಾಜಾರಾಮಯ್ಯಂಗಾರ್ರವರ ಹೆಸರನ್ನು ಮಾತ್ರ ಸೂಚಿಸಿದ್ದಾರೆ. ಅಷ್ಟಾದರೂ ಇರುವುದಕ್ಕೆ ಸಂತಸಪಡಬೇಕಾಗಿದೆ.

ಉತ್ತರ ಕರ್ನಾಟಕಕ್ಕೆ ಹೆಚ್ಚು ಪ್ರಾಶಸ್ತ್ಯ ದೊರಕಿದೆ. ಅಲ್ಲಿ ಕೆಲಸಮಾಡಿದ ಎಲ್ಲ ಕಾರ್ಯಕರ್ತರೂ ಅವರ ನೆನಪಿಗೆ ಬಂದಿದ್ದಾರೆ. ಆದರೆ ಮೈಸೂರವರು ಯಾರೂ ಇವರ ದೃಷ್ಟಿಗೆ ಬೀಳಲಿಲ್ಲ ಅಷ್ಟೇಕೆ. ಅಖಿಲ ಭಾರತ ಚರಖಾ ಸಂಘದ ಸ್ಥಾಪನೆಗಿಂತ ಪೂರ್ವಭಾವಿಯಾಗಿಯೇ ಈ ಪ್ರಾಂತ್ಯದಲ್ಲಿ ಖಾದಿ ಕೆಲಸ ಆರಂಭಿಸಿ ರಚನಾತ್ಮಕ ಕಾರ್ಯವನ್ನು ತಮ್ಮ ಜೀವದ ಉಸಿರಾಗಿಸಿಕೊಂಡು ಇರುವ ತಗಡೂರು ರಾಮಚಂದ್ರರಾಯರೂ ಇವರ ನೆನಪಿಗೆ ಬಂದಿಲ್ಲ. ರಾಜಧಾನಿಯಾದ ಮೈಸೂರು ನಗರದಲ್ಲಿ ಸುಪ್ರಸಿದ್ಧರಾಗಿದ್ದ ಹಲವಾರು ರಾಜಕಾರಿಣಿಗಳಿಗೂ ರಚನಾತ್ಮಕ ಕಾರ್ಯಕರ್ತರುಗಳಿಗೂ ಗುರುಗಳಾಗಿದ್ದ ಪೂಜನೀಯ, ದಿವಂಗತ ಶ್ರೀ ಎಂ. ವೆಂಕಟಕೃಷ್ಣಯ್ಯನವರ ಹೆಸರೂ ಇವರ ಸ್ಮೃತಿಯಲ್ಲಿ ಬರಲಿಲ್ಲ. ಅಲ್ಲದೆ ಇನ್ನೂ ಅನೇಕ ಮಹನೀಯರ ಹೆಸರುಗಳೂ ಈ ಹೊತ್ತಿಗೆಯಲ್ಲಿ ಉಲ್ಲೇಖವಿಲ್ಲವಾಗಿದೆ. ಇದು ಆಪಾದನೆಯಂತಲ್ಲ, ಏನೋ ಇಲ್ಲಿನ ವಿಚಾರ ಅವರು ಚೆನ್ನಾಗಿ ತಿಳಿದುಕೊಂಡಿರಲಿಲ್ಲವೆಂದು ಕಾಣುತ್ತದೆ ಅಷ್ಟೆ.

ಈ ಕೊರತೆಯನ್ನು ನಿವಾರಿಸುವ ಸಲುವಾಗಿ ಈ ಲೇಖಕನು ಈ ಪ್ರಾಂತ್ಯದ ಖಾದಿ ಇತಿಹಾಸವನ್ನು ಹೊರತರುವ ಹಂಬಲದಿಂದ ಬಹಳ ಹಿಂದೆಯೇ ಹಲವಾರು ಸಂಗತಿಗಳನ್ನು ಕ್ರೋಢೀಕರಿಸಿ ಖಾದಿ ಮಂಡಲಿಗೆ ಬರೆದು ಪ್ರಕಟಿಸಲು ಕೇಳಿ ಕೊಂಡಿದ್ದೆನು. ಆದರೆ ಅವರು ಅದನ್ನು ಪರಿಶೀಲಿಸಿ ಕಾರ್ಯವನ್ನು ಕೈಗೊಂಡಿರಲಿಲ್ಲ ಏನು ಕಾರಣವೋ ತಿಳಿಯದು.

ಇದೆಲ್ಲದರಿಂದ ಈ ಲೇಖಕನಿಗೆ ಬದನಾವಾಳು ಖಾದಿವಿಚಾರವಾಗಿ 30 ವರ್ಷ ಗಳಷ್ಟು ಹಿಂದಿನಿಂದಲೂ ನಡೆದುಬಂದಿರುವ ಒಂದು ಐತಿಹಾಸಿಕ ಚಿತ್ರವನ್ನು ಜನತೆಯ ಮುಂದಿಡಬೇಕೆಂಬ ಅಭಿಲಾಷೆಯಿಂದ ಈ ಚಿಕ್ಕ ಹೊತ್ತಿಗೆಯನ್ನು ತಮ್ಮ ಮುಂದಿಡುತ್ತಿದ್ದೇನೆ. ಶ್ರೀ ವಡವಿಯವರು ಖಾದಿ ಇತಿಹಾಸದ ಬಗ್ಗೆ ಆಳವಾಗಿ ಅಧ್ಯಯನಮಾಡಿ ಎಲ್ಲ ವಿಷಯಗಳನ್ನೂ ಕ್ರೋಢೀಕರಿಸಿ ಬರೆದಿದ್ದಾರೆ. ಅದಕ್ಕಾಗಿ ಅವರು ಅಭಿನಂದನಾರ್ಹರು. ಆ ವಿಷಯಗಳಿಗೆ ನಾನು ಕೈಹಾಕಿಲ್ಲ, ಅವವರಿಗೆ ಗೋಚರಿಸದ ಕೆಲವು ವಿಷಯಗಳನ್ನು ಮಾತ್ರ ಇದರಲ್ಲಿ ಅಳವಡಿಸಿದ್ದೇನೆ.

ಪೂಜ್ಯರಾದ ಮಹಾತ್ಮ ಗಾಂಧಿಯವರು ಆಫ್ರಿಕಾ ದೇಶದಿಂದ ಭಾರತಕ್ಕೆ ಬಂದು ಭಾರತದ ಸಮೀಕ್ಷೆಯನ್ನು ನಡೆಸಿದರು. ದೇಶದ ಕಡುಬಡತನ ನಿವಾರಣೆಗೆ ಏನಾದರೂ ಮಾರ್ಗ ಕಂಡುಹಿಡಿಯಬೇಕೆಂಬುದು ಅವರಿಗೆ ಮನವರಿಕೆಯಾಯ್ತು. ಬ್ರಿಟಿಷರ ದಾಸ್ಯಶೃಂಖಲೆಯಿಂದ ಭಾರತವು ಮುಕ್ತಿ ಹೊಂದಬೇಕು. ಜತೆಜತೆಗೇ ರಚನಾತ್ಮಕ ಕಾರ್ಯವೂ ನಡೆಯಬೇಕೆಂಬುದು ಅವರ ಧೃಢವಾದ ನಂಬಿಕೆಯಾಗಿತ್ತು. ಇಡೀ ದೇಶವನ್ನು ಸುತ್ತಾಡಿದರು. ಬಹುಷಃ 1924–25ರ ಸುಮಾರಿನಲ್ಲಿ ಗುಜರಾತಿನಲ್ಲಿ ಪ್ರವಾಸಮಾಡುತ್ತಿದ್ದ ಸಮಯದಲ್ಲಿ ಚರಕಾದಿಂದ ನೂಲುತ್ತಿದ್ದ ಒಬ್ಬ ಮಹಿಳೆಯನ್ನು ಒಂದು ಹಳ್ಳಿಯಲ್ಲಿ ಕಂಡರು. ಆಕೆಯೊಡನೆ ಸೌಜನ್ಯದಿಂದ ಮಾತಾಡಿದರು. ಸತ್ಯ ಅಹಿಂಸೆಯ ಪ್ರತೀಕವಾದ ಈ ಚರಕದಿಂದ ದೇಶಕ್ಕೆ ಸ್ವಾತಂತ್ರ್ಯವನ್ನು ತರಬಹುದೆಂಬ ಧೃಡವಿಶ್ವಾಸ ಅವರಿಗುಂಟಾಯ್ತು. ಈ ವಿಷಯವನ್ನು ಮಹಾತ್ಮರೊಡನೆ ಪ್ರವಾಸಮಾಡಿದ ಶ್ರೀ ಸತೀಶಚಂದ್ರದಾಸ್ ಗುಪ್ತ ಎಂಬುವರು ಅವರ ಒಂದು ಲೇಖನದಲ್ಲಿ ಉಲ್ಲೇಖಿಸಿದ್ದಾರೆ. (Seven Month with Mahatmaji)

ಮಹಾತ್ಮರು ಚರಖಾ ಪ್ರಚಾರಕಾರ್ಯವನ್ನು ದೇಶದ ಎಲ್ಲ ಕಡೆಗೂ ಪ್ರಸರಿಸ ಬೇಕೆಂಬ ಉದ್ದೇಶದಿಂದ. ಅಖಿಲಭಾರತ ಮಟ್ಟದಲ್ಲಿ ಚರಖಾ ಸಂಘವನ್ನು ನಿರ್ಮಿಸಿದರು. ಇದಕ್ಕೆ ಗಾಂಧಿ ಅನುಯಾಯಿಗಳಾಗಿದ್ದ ಸುಪ್ರಸಿದ್ಧರಾಗಿದ್ದ ಅಹಮದಾಬಾದಿನ ಶ್ರೀ ಶಂಕರಲಾಲ್ ಬ್ಯಾಂಕರು ಕಾರ್ಯದರ್ಶಿಯಾಗಿಯೂ ತಾವೇ ಅಧ್ಯಕ್ಷರೂ ಆಗಿ ನಿಯುಕ್ತಗೊಂಡರು. ಇಡೀ ದೇಶವನ್ನೆಲ್ಲಾ ಸುತ್ತಾಡಿ ಸಂಘಕ್ಕೆ ನಿಧಿಯನ್ನು ಶೇಖರಿಸಿದರು, ಆಗಿನ ಮೈಸೂರು ರಾಜ್ಯದ ಜನತೆಯೂ ತನ್ನ ಪಾಲಿನ ಹಣವನ್ನು ನಿಧಿಗೆ ವಂತಿಗೆಯಾಗಿ ನೀಡಿತ್ತು.

ಎಲ್ಲ ರಾಜ್ಯಗಳಲ್ಲಿಯೂ ಅಖಿಲಭಾರತ ಚರಕಾಸಂಘದ ಶಾಖೆಗಳು ಪ್ರಾರಂಭಿಸಲ್ಪಟ್ಟವು. ಅಂತೆಯೇ ಆಗಿನ ಉತ್ತರ ಕರ್ನಾಟಕದಲ್ಲಿ ಒಂದು ಚರಕಾ ಸಂಘದ ಶಾಖೆಯನ್ನು ತೆರೆಯಲಾಯ್ತು. ಅದಕ್ಕೆ ದಿವಂಗತ ಮಾನ್ಯ ಶ್ರೀ ಗಂಗಾಧರ ದೇಶಪಾಂಡೆಯವರು ಅಧ್ಯಕ್ಷರಾಗಿಯೂ ಅವರೊಡನೆ ಶ್ರೀ ಹನುಮಂತರಾವ್ ಕೌಜಲಗಿಯವರು ಕಾರ್ಯದರ್ಶಿಗಳಾಗಿಯೂ ಬೆಳಗಾವಿಯಲ್ಲಿ ಕಛೇರಿಯನ್ನು ತೆರೆದು ಖಾದಿ ಪ್ರಚಾರಕ್ಕೆ ಪ್ರಯತ್ನ ನಡೆಸಿದರು. ಮೊದಮೊದಲು ಬಿಜಾಪುರ ಜಿಲ್ಲೆಗಳಲ್ಲಿಯೇ ಪ್ರಬುದ್ಧ ಮಾನವಾಗಿ ಹಳೆಯ ಖಾದಿ ಕಾರ್ಯವು ಯಶಸ್ವಿಯಾಗಿ ನಡೆಯಿತು. ಈಗಿನ ಹೈದರಾಬಾದಿನ ಸಂಸ್ಥಾನದಲ್ಲಿದ್ದ ರಾಯಚೂರು ಗುಲ್ಬರ್ಗ ಬಿದರೆ ಜಿಲ್ಲೆಗಳಲ್ಲಿಯೂ ಸಹ ಸಂಘದ ಚಟುವಟಿಕೆ ನಡೆದು ಖಾದಿ ಉತ್ಪಾದನೆಯು ಯಶಸ್ವಿಯಾಗಿ ನಡೆಯಿತು. ಉತ್ತರಕರ್ನಾಟಕ ದಕ್ಷಿಣಕರ್ನಾಟಕ ಜಿಲ್ಲೆಗಳಲ್ಲಿ ಚರಕಾ ಸಂಘದ ಶಾಖೆಗಳಿದ್ದುವಾಗಲಿ ಕೆಲಸ ಅಷ್ಟು ವ್ಯಾಪಕವಾಗಿರಲಿಲ್ಲ, ಬಳ್ಳಾರಿಯಲ್ಲಿ ಸಹಾ ಒಂದು ಶಾಖೆಯಿದ್ದಿತು.

ಮೈಸೂರು ರಾಜ್ಯನ ಜಿಲ್ಲೆಗಳಾದ ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಈ ಜಿಲ್ಲೆಗಳಲ್ಲಿಯೂ ಖಾದಿ ಬಗ್ಗೆ ಅಷ್ಟೇನೂ ಚುರುಕು ಕಾರ್ಯ ನಡೆದಿರಲಿಲ್ಲ. 1925ರಲ್ಲಿ ಮೈಸೂರಿನಲ್ಲಿ ಮಾನ್ಯ ಶ್ರೀ ದಿವಂಗತ ತಾತಯ್ಯನವರ (ಎಂ. ವೆಂಕಟ ಕೃಷ್ಣಯ್ಯ) ಹಾಗೂ ಶ್ರೀ ತಗಡೂರು ರಾಮಚಂದ್ರರಾಯರ ಶ್ರಮದಿಂದ ಒಂದು ವ್ಯಾಪಾರದ ಅಂಗಡಿಯೂ ಸಹ ಸಹಕಾರ ಸಂಘದ ರೂಪದಲ್ಲಿ ಮೈಸೂರು ನಗರದಲ್ಲಿ ಪ್ರಾರಂಭವಾಯ್ತು. ಹಾಗೆಯೇ ತಗಡೂರು ಗ್ರಾಮದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರ ಪರಿಶ್ರಮದಿಂದ ಖಾದಿ ಸಹಕಾರ ಸಂಘ ಸ್ಥಾಪಿತವಾಗಿ ಕೆಲಸ ನಡೆಸಿಕೊಂಡು ಬಂದಿತು. ಮೈಸೂರು ಖಾದಿ ಸಹಕಾರ ಸಂಘದ ಮೊದಲ ಸಂಚಾಲಕರಾದ ಶ್ರೀ ಮದ್ರಾಸಿನ ಪೊನ್ನಶೆಟ್ಟರು ಖಾದಿ ಉತ್ಪತ್ತಿಯನ್ನು ಬೆಳೆಸುವ ಉದ್ದೇಶದಿಂದ ಮೈಸೂರು ಜಿಲ್ಲೆಯಲ್ಲಿ ಸಂಚರಿಸಿ, ಬದನವಾಳು ಗ್ರಾಮಕ್ಕೆ ಸುಮಾರು 5 ಕಿಲೋಮೀಟರು ಅಂತರವಿರುವ ದೇವನೂರು ಗ್ರಾಮದಲ್ಲಿ ಗ್ರಾಮದ ಚಾವಡಿಯಲ್ಲಿ ಖಾದಿ ಕಾರ್ಯದ ಅಂಕುರಾರ್ಪಣೆ ಮಾಡಿದರು. ಗ್ರಾಮದಲ್ಲಿದ್ದ ಹಳೇ ಚರಕಾಗಳನ್ನು ಕಲೆ ಹಾಕಿಸಿ ಸ್ಥಳೀಯ ಜನರ ಸಹಕಾರದಿಂದ ಒಂದು ಪ್ರದರ್ಶನ ಏರ್ಪಡಿಸಿದ್ದರು. ಇವರೊಂದಿಗೆ ತಗಡೂರಿನ ಶ್ರೀ ಟಿ. ಎಸ್. ವೆಂಕಟಗಿರಿ ರಾಯರೂ ಸಹ ಜತೆಗೂಡಿದ್ದರು. ಇವರಿಬ್ಬರೂ ಶ್ರೀ ತಗಡೂರು ರಾಮಚಂದ್ರ ರಾಯರ ಅನುಯಾಯಿಗಳಾಗಿದ್ದರು. ಈಗ ಅವರು ಇಲ್ಲ. ಈ ಕಾರ್ಯವು ಕರ್ನಾಟಕ ಚರಕಾಸಂಘದ ವಶಿಯಿಂದ ಆರಂಭವಾದುದು.

ಸುಮಾರು 1927ನೇ ಸಂವತ್ಸರವಿರಬೇಕು ಆವಾಗ ಮಹಾತ್ಮ ಗಾಂಧೀಜಿ

ಯವರು ತಮ್ಮ ಆರೋಗ್ಯದ ನಿಮಿತ್ತ ನಂದೀಬೆಟ್ಟದಲ್ಲಿ ವಾಸ್ತವ್ಯಮಾಡಿದ್ದರು. ಅವರನ್ನು ನೋಡಿಕೊಳ್ಳಲು ರಾಜ್ಯದ ಪತಿಯಿಂದಲೇ ಒಂದು ಸಮಿತಿಯನ್ನು ಮಾಡಿದ್ದರು ಈ ಸಮಿತಿಯಲ್ಲಿ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ ನಿಟ್ಟೂರು ಶ್ರೀನಿವಾಸ ರಾಯರು ಇವರು ಈಗ ರಾಜ್ಯದ ಮುಖ್ಯ ನ್ಯಾಯಾಧೀಶರಾಗಿ ರಾಜ್ಯಪಾಲರಾಗಿದ್ದು ನಿವೃತ್ತರಾಗಿದ್ದಾರೆ. ಶ್ರೀ ಕೆ. ಸಂಪದಗಿರಿರಾಯರು ಇದ್ದರು. ಈ ಸಮಯದಲ್ಲಿ ಬೆಂಗಳೂರು ಕೋಟೆಯಲ್ಲಿ ಒಂದು ಖಾದಿ ವಸ್ತ್ರಾಲಯವೂ ಕರ್ನಾಟಕ ಚರಕಾ ಸಂಘ ವತಿಯಿಂದ ಕೆಲಸ ನಿರ್ವಹಿಸುತ್ತಿದ್ದಿತು, ಈ ವಸ್ತ್ರಾಲಯದಲ್ಲಿ ತಮಿಳುನಾಡಿನವರಾಗಿದ್ದ ಶ್ರೀ ಸದಾಶಿವಂ ಅಯ್ಯರ್‌ರವರು ಇವರು ಕಲ್ಕಿ ಮಾಸಪತ್ರಿಕೆಯ ಸಂಪಾದಕರೂ ಆಗಿದ್ದರು. ವ್ಯವಸ್ಥಾಪಕರಾಗಿಯೂ ಅವರ ಸಹಾಯಕ್ಕೆ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಬಿ.ಎ., ಬಿ,ಎಸ್ಸಿ. ಇವರೂ ಇದ್ದು ಕೆಲಸ ನಿರ್ವಹಿಸುತ್ತಿದ್ದರು. ಮಹಾತ್ಮ ಗಾಂಧಿಯವರ ಆರು ತಿಂಗಳ ವಾಸ್ತವ್ಯದಲ್ಲಿ ದೇಶದ ಅಗ್ರಗಣ್ಯ ನಾಯಕರೆಲ್ಲಾ ಆಗಮಿಸಿ ಅವರ ದರ್ಶನ ಪಡದು ಸಲಹೆಗಳನ್ನು ಪಡೆದು ಹೋಗುತ್ತಿದ್ದರು,

ಮಹಾತ್ಮ ಗಾಂಧಿಯವರ ಮೊಕ್ಕಾಂನಲ್ಲಿ ಅವರ ಮತ್ತು ಅವರ ಅನುಯಾಯಿಗಳ ಊಟ ಉಪಚಾರದ ಹಾಗೂ ಬರುತ್ತಿದ್ದ ಅತಿಥಿಗಳ ಸತ್ಕಾರದ ಮೇಲ್ವಿಚಾರಣೆಯನ್ನು ನೋಡಿಕೊಳ್ಳಲು ನುರಿತ ರಚನಾತ್ಮಕ ಕಾರ್ಯಕರ್ತರೂ ನಿಷ್ಠರೂ, ವಿನಯಶೀಲರೂ ಆದ ವ್ಯಕ್ತಿಯೊಬ್ಬರು ಬೇಕಾಗಿದ್ದಿತು. ಈ ಗುಣಗಳನ್ನು ಮೈಗೂಡಿಸಿಕೊಂಡಿದ್ದ ಶ್ರೀ ರಾಜಾರಾಮಯ್ಯಂಗಾರ್ರವರನ್ನು ಈ ಕಾರ್ಯಕ್ಕೆ ಸಮಿತಿಯವರು ನಿಯಮಿಸಿದ್ದರು. ಶ್ರೀಯುತರು ತಮಗೆ ಒಪ್ಪಿಸಿದ್ದ ಜವಾಬ್ದಾರಿಯನ್ನು ಒಳ್ಳೆಯ ಸೇವಾಭಾವನೆಯಿಂದ ನಿರ್ವಹಿಸಿ ಮಹಾತ್ಮರ ಕೃಪೆಗೆ ಪಾತ್ರರಾದದ್ದಲ್ಲದೆ ಅವರ ಪ್ರಭಾವದಿಂದ ತಮ್ಮ ಜೀವಿತವನ್ನೇ ಖಾದಿ ಕಾರ್ಯಕ್ಕಾಗಿ ಮೀಸಲಿಟ್ಟರು.

ಶ್ರೀ ರಾಜರಾಮಯ್ಯಂಗಾರ್ರವರು ಮೇಲ್ಕಂಡ ಪದವೀಧರರಾಗಿದ್ದು ಟಾಟಾ ಇನ್ಸಿಟ್ಯೂಟಿನಲ್ಲಿ ರಿಸರ್ಚ್ ಸ್ಕಾಲರ್ ಆಗಿ ಕೆಲಸಮಾಡುತ್ತಿದ್ದು ಮಹಾತ್ಮರ ಕರೆಗೆ ಓಗೊಟ್ಟು ಖಾದಿ ಕ್ಷೇತ್ರಕ್ಕೆ ಧುಮಿಕಿ ಖಾದಿ ಪ್ರಚಾರದಲ್ಲಿ ಬೆಂಗಳೂರು ಪೇಟೆ ಬೀದಿ ಬೀದಿಯಲ್ಲೂ ಖಾದಿಯನ್ನು ಕೈಗಾಡಿಯಲ್ಲಿ ಮಾರಾಟಮಾಡುತ್ತಿದ್ದರು. ಇವರ ಮನೆತನ ಬಹಳ ದೊಡ್ಡದು. ಶ್ರೀವೈಷ್ಣವರು ಇವರ ತಾತ ರಾಜ್ಯಸರ್ಕಾರದಲ್ಲಿ ಸಬ್ ಜಡ್ಜ್‌ರಾಗಿದ್ದರು. ತಂದೆ ಒಳ್ಳೆಯ ವಕೀಲರು. ಇವರ ಚಿಕ್ಕಪ್ಪನವರು ಶ್ರೀಕೃಷ್ಣಸ್ವಾಮಿಅಯ್ಯಂಗಾರ್ರರವರು ಭಾರತದಲ್ಲಿ ಪ್ರಖ್ಯಾತರಾದ ಇತಿಹಾಸ ಮತ್ತು ಅರ್ಥಶಾಸ್ತ್ರದ ಪ್ರೊಫೆಸರಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸುತ್ತಿದ್ದವರು.

ಮಹಾತ್ಮರು ನಂದಿಬೆಟ್ಟದಲ್ಲಿ ತಂಗಿದ್ದ ಸಮಯದಲ್ಲಿ ಮೈಸೂರು ರಾಜ್ಯಕ್ಕೆ ಶ್ರೀ ನಾಲ್ಮಡಿ ಕೃಷ್ಣರಾಜಒಡೆಯರ್‌ರವರು ಮಹಾರಾಜರಾಗಿದ್ದರು. ಹಾಗೂ

ಸರ್ ಎಂ. ಮಿರ್ಜಾ ಇಸ್ಮೇಲ್‌ರವರು ದಿವಾನರಾಗಿದ್ದರು. ದಿವಾನರವರೂ ಮತ್ತು ಇವರ ಕೌನ್ಸಿಲ್ ಮೆಂಬರಾಗಿದ್ದ ಶ್ರೀ ಎ.ಎಸ್. ಕೃಷ್ಣರಾಯರೂ ಆಗಾಗ್ಗೆ ನಂದೀಬೆಟ್ಟಕ್ಕೆ ಹೋಗಿ ಮಹಾತ್ಮರ ಆರೋಗ್ಯವನ್ನು ವಿಚಾರಿಸಿಕೊಂಡು ಬರುತ್ತಿದ್ದರು. ಅಲ್ಲದೆ ಮೈಸೂರಿನ ಪ್ರಸಿದ್ಧ ಡಾಕ್ಟರುಗಳನ್ನೂ ಅವರ ಆರೋಗ್ಯದ ಬಗ್ಗೆ ನೋಡಿಕೊಳ್ಳಲು ಕಳುಹಿಸಿಕೊಡುತ್ತಿದ್ದರು. ಸ್ವತಃ ಮಿರ್ಜಾಸಾಹೇಬರು ಮಹಾತ್ಮರಲ್ಲಿ ಅತೀವ ಶ್ರದ್ಧಾಭಕ್ತಿಗಳನ್ನಿರಿಸಿಕೊಂಡಿದ್ದರು. ಖಾದಿ ಪ್ರೇಮಿಗಳು ಖಾದಿಧಾರಿಗಳೂ ಆಗಿದ್ದರು.

ಮಹಾತ್ಮರ ನಿಕಟವರ್ತಿಗಳಾಗಿದ್ದ ಚಕ್ರವರ್ತಿ ಶ್ರೀ ರಾಜಗೋಪಾಲಾಚಾರಿಯವರು ಹಾಗೂ ಡಿಜೆಂಟರಾಗಿದ್ದ ಶ್ರೀ ಗಂಗಾಧರರಾವ್ ದೇಶಪಾಂಡೆಯವರು ಮೈಸೂರು ರಾಜ್ಯದಲ್ಲಿ ಖಾದಿ ಉತ್ಪಾದನೆ ಮತ್ತು ಬೆಳವಣಿಗೆ ಹಾಗೂ ಅದರ ಪ್ರಕಾರ ಹೇಗೆ ಮಾಡಬೇಕು ಎಂಬ ಆಲೋಚನೆ ನಡೆಸಿದ್ದರು. ಈ ವಿಷಯವನ್ನು ರಾಜ್ಯದ ದಿವಾನರೊಡನೆಯೂ ಮಂತ್ರಿಗಳೊಡನೆಯೂ ಪ್ರಸ್ತಾಪ ಮಾಡಿದ್ದರು. ಅವರೂ ಸಹ ಇತರ ಅಧಿಕಾರಿಗಳೊಡನೆ ಸಮಾಲೋಚಿಸಿದ್ದರು.

ಇದುವರೆವಿಗಾಗಲೇ ಹಿಂದಿನ ದಿವಾನರಾಗಿದ್ದ ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರು ಗ್ರಾಮಾಭಿವೃದ್ಧಿಯ ತಳಪಾಯದ ಅಂಗವಾಗಿ ಎಕನಾಮಿಕ್ ಸೂಪರಿಂಟೆಂಡೆಂಟ್ ಎಂಬ ಹುದ್ದೆಗಳನ್ನು ನಿರ್ಮಿಸಿ ರಾಜ್ಯದ ಎಲ್ಲ ಕಡೆಯಲ್ಲಿಯೂ ಗ್ರಾಮಾಭಿವೃದ್ಧಿ ಯೋಜನೆಯನ್ನು ಕೈಗೊಂಡಿದ್ದರು. ಮುಂದೆ ಅವರು ರೂರಲ್ ಇಂಡಸ್ಟ್ರಿಯಲಿಜೇಷನ್ ಡೈರೆಕ್ಟರೇಟನ್ನೇ ನಿರ್ಮಿಸಿದ್ದರು. ಇದರಿಂದ ಖಾದಿಯೋಜನೆಗೂ ಒಂದು ಹಿನ್ನೆಲೆ ನಿರ್ಮಾಣವಾದಂತಾಗಿದ್ದಿತು.

ಸರ್ಕಾರವು ಮಹಾರಾಜರ ಅನುಮತಿಯಿಲ್ಲದೆ ಏನೂ ಮಾಡಲಾಗುತ್ತಿರಲಿಲ್ಲ. ಶ್ರೀ ನಾಲ್ಮಡಿ ಕೃಷ್ಣರಾಜಒಡೆಯರು ಒಂದೆರಡು ಬಾರಿ ಮಹಾತ್ಮರನ್ನು ಭೇಟಿ ಮಾಡಿದ್ದರೆಂಬುದು ಒಂದು ಸಂಗತಿ. ಆದರೂ ಆಶ್ರಿತ ಸಂಸ್ಥಾನವಾಗಿದ್ದ ಮೈಸೂರು ರಾಜ್ಯದಲ್ಲಿ ಬ್ರಿಟಿಷ್ ಪ್ರಭುತ್ವಕ್ಕೆ ಅಹಿತವಾಗಿದ್ದ ಖಾದಿ ಕೆಲಸ ಆರಂಭಿಸುವುದು ಒಂದು ರೀತಿಯ ಅಳುಕು ಅಥವಾ ದಿಗಿಲು ಆಗಿದ್ದಿತು ಎಂದು ಹೇಳಬಹುದು. ಈ ವಿಷಯವನ್ನು ಮನಸಮಾಡಿಕೊಂಡು ಬದನವಾಳು ಖಾದಿ ಕೇಂದ್ರ ಎನ್ನುವ ಬದಲು ಬದನವಾಳು ನೂಲುವ ಪ್ರಾಂತ್ಯ ಎಂದು ನಾಮಕರಣ ಮಾಡುವ ಯೋಚನೆಮಾಡಿ ಕಾರ್ಯಾನ್ವಿತಗೊಳಿಸಿದರು.

ಬದನವಾಳು ನೂಲುವ ಪ್ರಾಂತ್ಯದ ಸ್ಥಾಪನೆಗಾಗಿ ಸುತ್ತಮುತ್ತಲ ಹಳ್ಳಿಗಳಲ್ಲಿ ಪರಿಶೀಲನೆಮಾಡಲು ಮಾನ್ಯ ಶ್ರೀ ದೇಶಪಾಂಡೆ ಗಂಗಾಧರರಾಯರು, ಪೂಜ್ಯರಾದ ಶ್ರೀ ರಾಜಾಜಿಯವರು, ಕರ್ನಾಟಕ ಚರಕಾ ಸಂಘದ ಪ್ರಧಾನ ಕಾರ್ಯದರ್ಶಿಗಳು

ದೇವನೂರು ಸ್ಥಳಕ್ಕೆ ಸುತ್ತಮುತ್ತಲು ಹಳ್ಳಿಗಳಲ್ಲಿ ವಿಮರ್ಶೆ ಮಾಡಲು ಸುತ್ತಾಡಿದ್ದರು. ದೇವನೂರು, ಚಿಕ್ಕ ಕವಲಂದೆ, ನೇರಳೆ, ಬದನವಾಳು ಗ್ರಾಮಗಳಲ್ಲಿ ಹರಿಜನರು ಕೈಯಿಂದ ನೂತ ನೂಲಿನಲ್ಲಿ ಕೈಮಗ್ಗಗಳಿಂದ ದುಪ್ಪಟಿ, ಮಕ್ಕಳನ್ನು ತೂಗುವ ನೇನೆ ಬಟ್ಟೆ, ಧೋತ್ರ, ಹಸುಬೆ ಚೀಲ ಹಾಗೂ ತುಂಡು ಪಂಚೆಗಳನ್ನು ಮಾಡುತ್ತಿದ್ದರು. ಇದನ್ನು ಇವರುಗಳು ಪರಿಶೀಲಿಸಿದರು. ಮಗ್ಗಗಳು ಹರಿಜನರ ವಶಿಯಿಂದಲೇ ನಡೆಯುತ್ತಿದ್ದಿತು. ನೂಲುವವರು ಮಾತ್ರ ಲಿಂಗಾಯಿತರು ಮತ್ತು ಇತರ ಪಂಗಡ ದವರೂ ಇದ್ದರು. ಆಗ ತಾನೇ ನಂಜನಗೂಡು ಚಾಮರಾಜನಗರದ ವರೆಗೆ ರೈಲು ಮಾರ್ಗ ಏರ್ಪಟ್ಟಿದ್ದಿತು. ಬದನವಾಳು ರೈಲ್ವೆ ಲೈನಿನಲ್ಲಿ ರೈಲ್ವೆ ಸ್ಟೇಷನ್ನಿಗೆ ಅತಿ ಸಮೀಪವಾಗಿಯೇ ಇದ್ದಿತು.

ಬದನವಾಳು ನೂಲುವ ಪ್ರಾಂತ್ಯದ ಕಚೇರಿಯು ರೈಲ್ವೆ ನಿಲ್ದಾಣದ ಎದುರಿಗೆ 5–6 ಎಕರೆ ಜಮೀನು ವಿಸ್ತೀರ್ಣವುಳ್ಳದ್ದಾಗಿದ್ದಿತು. ಈ ಜಮೀನು ಬದನವಾಳು ಗ್ರಾಮದ ಶ್ಯಾನುಭಾಗ ಶ್ರೀ ಹೆಚ್. ಶ್ರೀನಿವಾಸಯ್ಯನವರಿಂದ ತೆಗೆದುಕೊಳ್ಳಲಾಗಿತ್ತು. 1–11–1927ರಲ್ಲಿ ಈ ಕೇಂದ್ರವು ವಿಧ್ಯುಕ್ತವಾಗಿ ಸ್ಥಾಪನೆಯಾಯಿತು.

ಮಹಾರಾಜ ಶ್ರೀ ನಾಲ್ಮಡಿ ಕೃಷ್ಣರಾಜ ವಡೆಯರು, ದಿವಾನ್ ಸರ್ ಮಿರ್ಜಾ ಇಸ್ಮೇಲರು ಸಚಿವರಾದ ಶ್ರೀ ಎಂ. ಎನ್. ಕೃಷ್ಣರಾಯರು ಮತ್ತು ಕೈಗಾರಿಕೆ ವಾಣಿಜ್ಯ ಇಲಾಖೆಯ ಡೈರೆಕ್ಟರು ಸಮಾಲೋಚನೆ ಮಾಡಿ ಈ ಕೇಂದ್ರಕ್ಕೆ ಬದನವಾಳು ನೂಲುವ ಪ್ರಾಂತ್ಯ ಎಂದು ಹೆಸರಿಟ್ಟರು. ಈ ಕೇಂದ್ರಕ್ಕೆ ಮುಖ್ಯ ವ್ಯವಸ್ಥಾಪಕರಾಗಿ ಹಿಂದೆಯೇ ತಿಳಿಸಿರುವ ಶ್ರೀ ಎಸ್.ವಿ. ರಾಜಾರಾಮಯ್ಯಂಗಾರ್ರವರನ್ನು ನಿಯಮಿಸಿಕೊಳ್ಳಲಾಯ್ತು. ಅವರೊಂದಿಗೆ ಸಹಾಯಕರಾಗಿ ಶ್ರೀ ಟಿ. ಎಸ್. ವೆಂಕಟಗಿರಿರಾಯರನ್ನು ಲೆಕ್ಕ ಪತ್ರ ಗಳನ್ನು ನೋಡಿಕೊಳ್ಳಲೂ ನಿಯಮಿಸಿಕೊಳ್ಳಲಾಯ್ತು. ಕರ್ನಾಟಕ ಚರಕಾ ಸಂಘ ದವರು ಸಂಘದ ಪ್ರತಿನಿಧಿಯಾಗಿ ಶ್ರೀ ಸಿದ್ದೂರಾವ್ ಪೂಜಾರ್ ಉಪ್ಪಿನಬೆಟಗೇರಿ ಇವರನ್ನು ಖಾದಿ ಪ್ರಚಾರಕ್ಕಾಗಿ ಆರು ತಿಂಗಳ ಅವಧಿಗೆ ಇಲ್ಲಿಗೆ ಕಳಿಸಿಕೊಟ್ಟರು. ಇವರ ವಾಸ್ತವ್ಯ ಬದನವಾಳು ನೂಲುವ ಕೇಂದ್ರವಾಗಿದ್ದಿತು. ಎರಡು ಮೂರು ತೆಂಗಿನಗರಿ ಜೋಪಡಿ ನಿರ್ಮಾಣವಾಗಿ ಅದರಲ್ಲಿ ಕೆಲಸದ ಅಂಕುರಾರ್ಪಣವಾಯ್ತು. ಮೇಲ್ಛಾವಣಿ ತೆಂಗಿನಗರಿ, ಬಾಗಿಲುಗಳೋ ಬಿದಿರು ತಡಿಕೆ. ಪ್ರಚಾರ ಕಾರ್ಯಕ್ಕಾಗಿ ಹೊರಗಡೆ ಹೊರಟಾಗ ದೇವರ ಮೇಲೆ ಭಾರಹಾಕಿ ಹೋಗಬೇಕಾಗಿತ್ತು. ಕಾವಲಿಗೆ ಯಾರೂ ಇರುತ್ತಿರಲಿಲ್ಲ. ಅಂದಿನ ಜನರಲ್ಲಿ ಒಂದು ರೀತಿಯ ಪಾಪಭೀತಿ ಇದ್ದು ಪರರ ಒಡವೆಗೆ ಆಸೆಪಡುವ ಮನೋವೃತ್ತಿಯಿರಲಿಲ್ಲ. ರಾಜಾಡಳಿತದ ಬಿಗಿ, ಮಹಾರಾಜರ ಔದಾರ್ಯ ಮತ್ತು ಪ್ರಜಾವತ್ಸಲತೆ ಇವುಗಳಿಂದ ಜನರಲ್ಲಿ ಒಂದು ರೀತಿಯ ಮನೋವೈಶಾಲ್ಯವಿದ್ದಿತು. ಅಂತೆಯೇ ಮಹಾತ್ಮಾ ಗಾಂಧಿಯವರು ಮೈಸೂರು ಮಹಾರಾಜ ಶ್ರೀಮನ್ನಾಲ್ಮಡಿ ಕೃಷ್ಣರಾಜ ವಡೆಯರನ್ನು ರಾಜರ್ಷಿ

ಎಂತಲೂ ಹೊಗಳಿ ರಾಜ್ಯವನ್ನು ರಾಮರಾಜ್ಯವೆಂದು ಕರೆದರು : 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಮೈಸೂರು ರಾಜ್ಯದ ಬಗ್ಗೆ ಮೆಚ್ಚುಗೆಯ ಬರಹವನ್ನು ಬರೆದಿದ್ದಾರೆ.

ಆಗಿನ ಕಾಲದ ಕೈಗಾರಿಕೆ ಇಲಾಖೆಯ ಅಧಿಕಾರಿಗಳೂ ಖಾದಿ ಉದ್ಯಮಕ್ಕೆ ತುಂಬಾ ಪ್ರೋತ್ಸಾಹ ಕೊಡುತ್ತಿದ್ದರು. ಈ ಕೆಳಗೆ ಕಾಣಿಸಿರುವ ಅಧಿಕಾರಿಗಳು ಮುಖ್ಯರಾಗಿದ್ದರು.

1) ಶ್ರೀ ಜಹರುದ್ದೀನ್ ಮಕ್ಕೆ ಸಾಹೇಬರು
2) ಶ್ರೀ ಸಿ. ರಂಗನಾಥರಾವ್ ಸಾಹೇಬರು
3) ಶ್ರೀ ಎಸ್. ಗರಳಪುರಿ ಶಾಸ್ತ್ರಿಗಳು
4) ಶ್ರೀ ಡಿ. ವಿ. ರಾಮನಾಥನ್‌ರವರು
5) ಶ್ರೀ ಅಪ್ಪಾದೊರೆ ಮೊದಲಿಯಾರ್ರವರು
6) ಶ್ರೀ ನವರತ್ನ ರಾಮರಾಯರು
7) ಶ್ರೀ ಚಿಕ್ಕನಾರಾಯಣಸ್ವಾಮಿಯವರು
8) ಶ್ರೀ ಜೆ. ಬಿ. ಮಲ್ಲಾರಾಧ್ಯರು
9) ಶ್ರೀ ಬೀರಪ್ಪನವರು
10) ಶ್ರೀ ಇ. ವಿ. ಗಣಪತಿ ಅಯ್ಯರ್
11) ಶ್ರೀ ಆರ್. ರಾಮಕೃಷ್ಣ
12) ಶ್ರೀ ಎಂ. ಎ. ಸೋಮಶೇಖರ್ ಇವರು ಕೊನೆಯಲ್ಲಿ ಡೈರೆಕ್ಟರ್ ಆಗಿದ್ದರು. ಇವರು ಈಗ ಖಾದಿ ಬೋರ್ಡಿನ ಮುಖ್ಯ ಆಡಳಿತಾಧಿಕಾರಿಯಾಗಿದ್ದಾರೆ. (ಇವರ ತಂದೆ ಎಂ. ಕೆ. ಅಪ್ಪಾಜಪ್ಪನವರು ಮೈಸೂರು ರಾಜ್ಯದ ಪಬ್ಲಿಕ್ ಸರ್ವಿಸ್ ಕಮೀಷನ್ ಛೇರ್ಮನ್ನರಾಗಿದ್ದರು)
13) ಶ್ರೀ ಎಂ. ಎಸ್. ರಾಮಚಂದ್ರರಾವ್

—ಇವರುಗಳು ತಮ್ಮ ಅಧಿಕಾರಾವಧಿಯಲ್ಲಿ ಖಾದಿ ಕಾರ್ಯವನ್ನು ಪ್ರೋತ್ಸಾಹ ದಾಯಕವಾಗಿ ನಡೆಸಿಕೊಂಡು ಬಂದಿದ್ದಾರೆ.

ಬದನವಾಳು ನೂಲುವ ಪ್ರಾಂತ್ಯವು 3,500 ರೂ. ಬಂಡವಾಳದೊಡನೆ ದಿನಾಂಕ 1–11–1927ರಂದು ಪ್ರಾರಂಭಿಸಲ್ಪಟ್ಟಿತು. ಹಿಂದೆ ತಿಳಿಸಿದಂತೆ ಜೋಪಡಿಗಳಲ್ಲಿ ವಾಸ, ಬೆಂಗಾಡು ಪ್ರದೇಶ, ನೀರಿಗಾಗಿ ಮೈಲಿಗಟ್ಟಲೆ ಹೋಗಬೇಕು. ಒಂದು ಮೈಲಿ ದೂರದ ಒಂದು ನೆಲ ಬಾವಿಯಲ್ಲಿಂದ ನೀರು ತರಬೇಕು. ಇದಕ್ಕಾಗಿ ಕೊಡ ಹೊತ್ತು ಬಾವಿ ಬಳಿ ಹೋಗಿ ಅಲ್ಲೇ ತಣ್ಣೀರು ಸ್ನಾನ ಮುಗಿಸಿ ಹೆಗಲ ಮೇಲೆ ಒಂದೊಂದು ಬಿಂದಿಗೆ ನೀರು ಹೊತ್ತುತಂದು ಅಡಿಗೆ ಮಾಡಿಕೊಂಡು, ನಿತ್ಯದ ಕೆಲಸ ಮುಗಿಸಿಕೊಂಡು

ಸುತ್ತಲಿನ ಹಳ್ಳಿಗಳಿಗೆ ಹೋಗಿ ಚರಕಾ ಪ್ರಚಾರ, ದಿನನಿತ್ಯದ ಪ್ರಥಮ ಕಾರ್ಯ ವಾಗಿದ್ದಿತು. ಕೈರಾಟೆಯಿಂದ ನೂಲಿರಿ ಎನ್ನುವುದು ಘೋಷಣೆ ಮತ್ತು ನೂತ ನೂಲನ್ನು ಕೊಂಡುಕೊಳ್ಳುವ ಆಶ್ವಾಸನೆಯಾಗಿದ್ದಿತು. ಹಳ್ಳಿಹಳ್ಳಿಗೆ ದಾರಿ ತೋರಿಸಲು ಶ್ರೀ ನಂಜಪ್ಪನವರನ್ನು ಸಹಾಯಕರನ್ನಾಗಿ ನೇಮಕ ಮಾಡಿಕೊಂಡಿದ್ದರು. ಇವರು ಸ್ಥಳೀಯ ಕೆಲಸಗಾರರಾಗಿದ್ದರು. ಹಾಗೂ ಟಿ. ನಾರಣಪ್ಪ ಎಂಬವರು ತಗಡೂರು ಕೇಂದ್ರದಲ್ಲಿ ತರಬೇತಿ ಪಡೆದಿದ್ದವರು ಜತೆಗೂಡಿ ಪ್ರವಾಸಮಾಡುತ್ತಿದ್ದರು.

ಕಾರ್ಯ ವ್ಯಾಪ್ತಿಯು ನಂಜನಗೂಡು, ಗುಂಡ್ಲುಪೇಟೆ, ಚಾಮರಾಜನಗರ ಈ ತಾಲ್ಲೂಕಿನ ಹಳ್ಳಿಗಳು. ಪ್ರಚಾರ ಕಾರ್ಯವು ಚೆನ್ನಾಗಿ ಫಲಿಸಿತು. ಆರು ತಿಂಗಳ ಕಾಲದಲ್ಲಿಯೇ ಸರ್ಕಾರದ ಕಡೆಯಿಂದ ಒದಗಿದ್ದ 3,500 ಸಾಲದೇ ಹೋಯಿತು. ಆಗ ಸರ್ಕಾರದವರು ಲೆಕ್ಕಪತ್ರಗಳ ಅಜಮಾಯಿಷಿ ಮಾಡಿಸಿ ಮತ್ತೆ ಕಾಲಕಾಲಕ್ಕೆ ಹತ್ತು, ಇಪ್ಪತ್ತು, ಮೂವತ್ತು ಸಾವಿರ ರೂಪಾಯಿಗಳಿಗೆ ಒಂದು ಗಡುವು ಮಾಡಿ, ಹೆಚ್ಚಿಗೆ ಸಿಬ್ಬಂದಿ ನೇಮಿಸಿಕೊಳ್ಳುವಲ್ಲಿ ಕೇಂದ್ರದ ಉತ್ಪತ್ತಿ ಮತ್ತು ಮಾರಾಟದ ಮೇಲಿನ ಲಾಭಾಂಶ ಉಪಯೋಗಿಸಿಕೊಂಡು ನೇಮಿಸಿಕೊಳ್ಳಬಹುದೆಂದು ನಿಶ್ಚಿತವಾದ ಆದೇಶವನ್ನು ನೀಡಿದ್ದರು.

ಇದುವರೆವಿಗಾಗಲೇ ಸರ್ಕಾರದವರು ಮಹಾರಾಜರ ಅನುಮೋದನೆಯಿಂದ ಗ್ರಾಮಾಂತರ ಕೈಗಾರಿಕೆ ಅಭಿವೃದ್ಧಿಗಾಗಿ ಆಗಿನ ಮೈಸೂರು ರಾಜ್ಯದ ಎಂಟು ಜಿಲ್ಲೆ ಗಳಿಗೂ ಒಬ್ಬೊಬ್ಬರು ರಾಟೆ ನೂಲುವ ಪ್ರಚಾರಕ ಸಿಬ್ಬಂದಿಯವರನ್ನು ನೇಮಿಸಿ ಅವರಿಗೆ ಬದನವಾಳು ಖಾದಿ ಕೇಂದ್ರದಲ್ಲಿ ತರಬೇತಿಯನ್ನು ಕೊಡಿಸಿ ಆಯಾ ಜಿಲ್ಲೆಗಳಿಗೆ ವಾಪಸ್ ಕಳಿಸುತ್ತಿದ್ದರು. ಇವರಲ್ಲಿ ಒಬ್ಬರು ಶ್ರೀ ಹೆಚ್. ಎಸ್. ನಂಜುಂಡಯ್ಯ ಎಂಬವರು ರಾಜಕೀಯದಲ್ಲಿ ನುರಿತವರು. ಸತ್ಯಾಗ್ರಹದಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದು ಬದನವಾಳಿನಲ್ಲಿ ಸೇವೆ ಸಲ್ಲಿಸಲು ಸೇರಿಕೊಂಡರು.

ಆಗಿನ ಮೈಸೂರು ಸರ್ಕಾರವು ಎಲ್ಲ ಜಿಲ್ಲೆಗಳಲ್ಲಿ ಸ್ವಯಂ ಆಡಳಿತವುಳ್ಳ ಜಿಲ್ಲಾ ಬೋರ್ಡುಗಳನ್ನು ಸ್ಥಾಪಿಸಿದ್ದಿತು. ಆ ಬೋರ್ಡುಗಳಲ್ಲಿ ಅನೇಕ ರಾಜಕೀಯ ಮುಂದಾಳುಗಳು, ಜಿಲ್ಲೆಯ ಪ್ರಮುಖರು ಅಲ್ಲದೆ ಚುನಾಯಿತ ಸದಸ್ಯರೂ ಇದ್ದರು. ಈ ಸದಸ್ಯರಲ್ಲಿ ಒಬ್ಬರು ಚುನಾಯಿತ ಅಧ್ಯಕ್ಷರೂ ಮತ್ತೊಬ್ಬ ಉಪಾಧ್ಯಕ್ಷರೂ ಇರು ತ್ತಿದ್ದರು. ಸ್ವಾಯತ್ತ ಆಡಳಿತ ಸಂಸ್ಥೆ ಎಂದ ಮೇಲೆ ಅಪಾರ ನಿಯಮಿತ ಅಧಿಕಾರ ಸೂತ್ರಗಳು ಜಿಲ್ಲಾ ಮಟ್ಟದಲ್ಲಿರುತ್ತಿದ್ದುವು. ಅವರಲ್ಲಿ ಕೆಲವರು ಆಗಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರೂ ಕೆಲವರು ನ್ಯಾಯ ವಿಧಾಯಕ ಸಭಾ ಸದಸ್ಯರೂ ಆಗಿರುತ್ತಿದ್ದರು. ಇವರೆಲ್ಲರೂ ಸಾಮಾನ್ಯವಾಗಿ ಪ್ರತಿಷ್ಠಿತರೂ, ವಿದ್ಯಾವಂತರೂ, ಮೇಧಾವಿಗಳೂ, ವರ್ತಕ ಪ್ರತಿಷ್ಠಿತರೂ ಆಗಿರುತ್ತಿದ್ದರು. ಅಲ್ಪ ಸಂಖ್ಯಾತರು ಹಾಗು ಹಿಂದುಳಿದವರ

ಪರವಾಗಿ ಕೆಲವು ಸದಸ್ಯರನ್ನು ಸರ್ಕಾರದವರೇ ನಾಮಕರಣ ಮಾಡುತ್ತಿದ್ದರು. ಜತೆಗೆ ಸರ್ಕಾರದ ಅಧಿಕಾರಿಗಳನ್ನು ಆಯಾ ಕ್ಷೇತ್ರಕ್ಕನುಗುಣವಾಗಿ ನಾಮಕರಣಮಾಡು ತ್ತಿದ್ದರು. ಹೇಗಾದರೂ ಸಹ ಈ ಮಂಡಲಿಗಳು ಸ್ವಾಯತ್ತ ಸಂಸ್ಥೆಗಳಾಗಿದ್ದುವೆಂದು ಮೇಲೆ ಉಲ್ಲೇಖಿಸಿದೆ. ಈ ಸಂಸ್ಥೆಗಳಿಗೆ ಸರ್ಕಾರದ ಆಯವ್ಯಯದಲ್ಲಿ ಕೆಲವು ಬಾಬು ಗಳನ್ನು ಸಹ ಒದಗಿಸಿಕೊಟ್ಟು ಅವುಗಳನ್ನು ಕಾಯಿದೆ ಪ್ರಕಾರ ವ್ಯವಸ್ಥಿತ ರೀತಿಯಲ್ಲಿ ವೆಚ್ಚಮಾಡಲು ಹಾಗೂ ಆದಾಯ ವೆಚ್ಚಗಳನ್ನು ಸರಿತೂಗಿಸಿಕೊಳ್ಳುವ ಅಧಿಕಾರವೂ ಸಹ ಕೊಡಲ್ಪಟ್ಟಿದ್ದಿತು. ಜಿಲ್ಲಾ ಬೋರ್ಡು ಅಧ್ಯಕ್ಷರುಗಳಲ್ಲಿ ಮತ್ತು ಸದಸ್ಯರುಗಳಲ್ಲಿ ಅನೇಕರು ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿದ್ದವರೂ ಇದ್ದರು. ರಚನಾತ್ಮಕ ಕಾರ್ಯದಲ್ಲಿ ಆಸಕ್ತಿ ಶ್ರದ್ಧೆಯುಳ್ಳವರೂ ಆಗಿದ್ದರು.

ಅಂತೆಯೇ ಚಿಕ್ಕಮಗಳೂರು ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಹೊಸಕೊಪ್ಪ ಕೃಷ್ಣರಾಯರು ತಮ್ಮ ಜಿಲ್ಲೆಯಲ್ಲಿ ಬದನವಾಳು ಮಾದರಿಯ ಖಾದಿ ಕೇಂದ್ರವನ್ನು ಸ್ಥಾಪಿಸಲು ಪ್ರಯತ್ನ ನಡೆಸಿ ಅಜ್ಜಂಪುರ ರೈಲ್ವೆ ನಿಲ್ದಾಣದ ಸಮೀಪ ವಿರುವ ಒಂದು ಪ್ರದೇಶದಲ್ಲಿ ಒಂದು ಖಾದಿ ಕೇಂದ್ರವನ್ನು ಸ್ಥಾಪಿಸಿದರು. ಅದಕ್ಕೆ ಮಂಗಳೂರಿನವರಾದ ಶ್ರೀ ಹೆಚ್. ನಾರಾಯಣರಾಯರು ಎಂಬವರನ್ನು ನೇಮಿಸಿ ಖಾದಿ ಕಾರ್ಯದ ಚಾಲನೆಯನ್ನು ಆರಂಭಿಸಿದರು. ಇದಕ್ಕೆ ಬದನವಾಳು ನೂಲುವ ಪ್ರಾಂತ್ಯದ ವ್ಯವಸ್ಥಾಪಕರವರು ಸಲಹೆಗಾರರಾಗಿದ್ದರು. ಈ ಅಜ್ಜಂಪುರ ಖಾದಿ ಕೇಂದ್ರವು ಈಗಲೂ ಸಹ ಕೆಲಸ ನಿರ್ವಹಿಸುತ್ತಿದೆ.

ಹಾಗೆಯೇ ಮೈಸೂರು ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಎ. ವಿ. ರಾಮನಾಥನ್, ಜಿಲ್ಲಾಧಿಕಾರಿಗಳು ಕಾಂಗ್ರೆಸ್ ಮುಂದಾಳುಗಳಾಗಿದ್ದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಸೇರಿ ತಮ್ಮ ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡು ಆಶ್ರಯದಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆಯಬೇಕೆಂದು ಆಲೋಚಿಸಿ ಗುಂಡ್ಲುಪೇಟೆ ತಾಲ್ಲೂಕು ತೆರಕಣಾಂಬಿಯಲ್ಲಿ ವೃದ್ಧ ಪಿತಾಮಹ ಶ್ರೀ ವೆಂಕಟಕೃಷ್ಣಯ್ಯನವರ ಸಲಹೆ ಮೇರೆಗೆ ಕೇಂದ್ರವನ್ನು ಆರಂಭಿಸಿದರು. ಅಲ್ಲಿಗೆ ಮೈಸೂರಿನ ಓಂ ಇಂಡಸ್ಟ್ರೀಸ್ ಸಂಸ್ಥೆಯನ್ನು ನಡೆಸುತ್ತಿದ್ದ ಶ್ರೀ ಎಂ. ಪಿ. ಲಿಂಗಪ್ಪಯ್ಯ ಎಂಬವರನ್ನು ವ್ಯವಸ್ಥಾಪಕರನ್ನಾಗಿ ನಿಯಮಿಸಿದರು. ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ನಿರ್ದೇಶನ ದಂತೆ ಬದನವಾಳು ಕೇಂದ್ರದ ಮಾರ್ಗದರ್ಶನ ಪಡೆಯತಕ್ಕದೆಂತಲೂ ಸರ್ಕಾರದ ಆದೇಶವಿದ್ದಿತು.

ಬದನವಾಳು ಖಾದಿ ಕೇಂದ್ರದ ಚಟುವಟಿಕೆಗಳು ಗುಂಡ್ಲುಪೇಟೆ ತಾಲ್ಲೂಕನ್ನೂ ಪ್ರವೇಶಿಸಿದ್ದಿತು. ಕೆಲಸವೂ ಸಮರ್ಪಕವಾಗಿ ನಡೆದು ತಾಲ್ಲೂಕಿನ ಅನೇಕ ಹಳ್ಳಿಗಳು ಕಾರ್ಯವ್ಯಾಪ್ತಿಗೆ ಒಳಗಾಗಿದ್ದವು. ಆ ಪೈಕಿ ಕೆಲವು ಹಳ್ಳಿಗಳನ್ನು ತೆರಕಣಾಂಬಿ

ಕೇಂದ್ರದ ಕೆಲಸಗಳಿಗಾಗಿ ವಹಿಸಿಕೊಡಲಾಯ್ತು. ಕೇಂದ್ರದ ವ್ಯವಸ್ಥಾಪಕರ ಕಾರ್ಯ ವಿಧಾನವು ಅಷ್ಟು ತೃಪ್ತಿಕರವಾಗಿಲ್ಲದರ ಕಾರಣ ಹೊಸ ಹೊಸ ಸಮಸ್ಯೆಗಳು ಉದ್ಭವ ವಾಗಿ ಸುಗಮಕಾರ್ಯಕ್ಕೆ ಅಡಚಣೆಯಾಗುತ್ತಿದ್ದಿತು. ಸರ್ಕಾರದವರು ವ್ಯವಸ್ಥಾಪಕ ರನ್ನು ಬೇರೆ ಇಲಾಖೆಗೆ ವರ್ಗಮಾಡಿ ಅದರ ಚಟುವಟಿಕೆಗಳನ್ನು ಬದನವಾಳು ನೂಲುವ ಪ್ರಾಂತ್ಯಕ್ಕೇ ವಹಿಸಿಕೊಟ್ಟರು.

1932ನೇ ಇಸವಿಯಲ್ಲಿ ಚಿತ್ರದುರ್ಗ ಜಿಲ್ಲೆಗೆ ಜಿಲ್ಲಾ ಮಂಡಲಿಯ ಅಧ್ಯಕ್ಷರಾಗಿ ಶ್ರೀ ಜಿ. ಚನ್ನಪ್ಪನವರು ಅಧ್ಯಕ್ಷರಾಗಿದ್ದರು. ಅವರು ತಮ್ಮ ಜಿಲ್ಲೆಯಲ್ಲಿ ಖಾದಿ ಕೇಂದ್ರವನ್ನು ಆರಂಭಿಸಬೇಕೆಂದು ಅದಕ್ಕಾಗಿ ಬದನವಾಳು ಖಾದಿ ಕೇಂದ್ರದ ವ್ಯವಸ್ಥಾಪಕರು ಯೋಗ್ಯವಾದ ಸ್ಥಳವನ್ನು ಪರಿಶೀಲಿಸಿ ಸರಿಯಾದ ಯೋಜನೆಯನ್ನು ಮಾಡಿಕೊಡಬೇಕೆಂದು ಸರ್ಕಾರದವರ ಮೂಲಕ ಕೇಳಿಕೊಂಡಿದ್ದರು. ಅದರಂತೆ ಬದನವಾಳು ಕೇಂದ್ರದ ವ್ಯವಸ್ಥಾಪಕರು ಶ್ರೀ ಎಸ್.ವಿ. ರಾಜಾರಾಮಯ್ಯಂಗಾರ್ರವರು ಚಿತ್ರದುರ್ಗದಲ್ಲಿ ಹತ್ತಿ ಬೆಳೆಯುವ ಪ್ರದೇಶವಾದ ಹಿರಿಯೂರು ತಾಲ್ಲೂಕಿನ ಐಮಂಗಲದ ಪ್ರವಾಸೀಮಂದಿರದಲ್ಲಿ ಕೇಂದ್ರವನ್ನು ಪ್ರಾರಂಭಿಸಬಹುದಾಗಿ ವರದಿಯನ್ನು ಒಪ್ಪಿಸಿ, ಬದನವಾಳಿಂದಲೇ ಒಬ್ಬರು ನುರಿತ ಕೆಲಸಗಾರರನ್ನೂ ಕಳಿಸಿಕೊಡಲು ಒಪ್ಪಿಗೆ ಸೂಚಿಸಿದ್ದರು. ಅದರಂತೆ ಶ್ರೀ ಹೆಚ್. ಎಸ್. ನಂಜುಂಡಯ್ಯನವರನ್ನು ಎರವಲಾಗಿ ಆ ಕೇಂದ್ರದ ಸಂಚಾಲನೆಗಾಗಿ ಕಳಿಸಿದರು. ಅವರು ಕೆಲವು ಕಾಲ ಪ್ರಚಾರಮಾಡಿ ನೂಲುವ ಮತ್ತು ನೇಯ್ಗೆ ಕೆಲಸ ಪ್ರಾರಂಭಿಸಿ ಬಂದರು. ಅವರ ಸ್ಥಳಕ್ಕೆ ಶ್ರೀ ಟಿ. ಎಸ್. ವೆಂಕಟಗಿರಿರಾಯರನ್ನು ಸಹ ಎರವಲಾಗಿ ಕಳಿಸಿಕೊಟ್ಟರು. ಅವರೊಡನೆ ಸ್ಥಳೀಯ ಕೆಲಸಗಾರರಾದ ಎಸ್. ಹನುಮಂತಪ್ಪ ಎಂಬುವರನ್ನು ಅವರೊಡನೆ ಕೆಲಸ ಮಾಡಲು ನೇಮಕಮಾಡಿದರು.

ಐಮಂಗಲ ಖಾದಿ ಕೇಂದ್ರವು ಬಹಳ ಯಶಸ್ವಿಯಾಗಿ ಕೆಲಸ ನಿರ್ವಹಿಸಿತು. ಕೆಲಸ ಹೆಚ್ಚಿದಂತೆಲ್ಲಾ ವ್ಯವಸ್ಥಾಪಕರು ಜಿಲ್ಲಾ ಮಂಡಲಿಯ ಅನುಮತಿ ಪಡೆದು ಹೆಚ್ಚು ಜನರನ್ನು ನೇಮಿಸಿಕೊಂಡು ಕೇಂದ್ರವನ್ನು ಅಭಿವೃದ್ಧಿಗೊಳಿಸಿದರು. ಇದಕ್ಕೆ ಮುಖ್ಯ ಕಾರಣಕರ್ತರು ಶ್ರೀ ಟಿ. ಎಸ್. ವೆಂಕಟಗಿರಿರಾಯರು. ಹಿರಿಯೂರು ತಾಲ್ಲೂಕು ಹರಿಯಬ್ಬೆ, ಸೊಂಡೆಕೊಪ್ಪ, ದೊಡ್ಡಸಿದ್ದವ್ವನಹಳ್ಳಿ ವರೆಗೂ ಕಾರ್ಯವು ವ್ಯಾಪಿಸಿ ಚಳ್ಳಕೆರೆಯಲ್ಲೂ ಒಂದು ಶಾಖಾ ಕೇಂದ್ರವನ್ನು ತೆರೆಯಿತು. ಇದುವರೆವಿಗೆ ಈ ಕೇಂದ್ರದ ವ್ಯವಸ್ಥಾಪಕರು ಬದನವಾಳು ಕೇಂದ್ರದ ಮತ್ತು ಅಖಿಲ ಭಾರತ ಚರಕಾ ಸಂಘದ ಮಾರ್ಗದರ್ಶನವನ್ನನುಸರಿಸಿ ಕಾರ್ಯ ನಿರ್ವಹಿಸುತ್ತಾ ಬಂದು ಕೇಂದ್ರದ ಅಭಿವೃದ್ಧಿಗೆ ಶಕ್ತಿ ಮೀರಿ ದುಡಿದರು. ಇವರು ಬದನವಾಳಿನ ಬಣ್ಣದ ವಿಭಾಗದಲ್ಲೂ ಆಫೀಸಿನ ಇತರ ಕೆಲಸಗಳಲ್ಲೂ ನಿಷ್ಣಾತರಾಗಿದ್ದರು.

ಬದನವಾಳು ಖಾದಿ ಕೇಂದ್ರದಲ್ಲಿ ನೂಲು ಮತ್ತು ಖಾದಿ ಉತ್ಪತ್ತಿಯೂ ವರ್ಷೇ

ವರ್ಷೇ ಹೆಚ್ಚುತ್ತಾ ಬಂದಿದ್ದಿತು. ನೇಯ್ಗೆಯಿಂದ ಬಂದ ಕೋರಾ ಬಟ್ಟೆಗಳನ್ನು ಮಡಿಮಾಡುವುದು, ಬಟ್ಟೆಗಳಿಗೆ ಬಣ್ಣ ಹಾಕುವುದು ಮತ್ತು ಅಚ್ಚು ಹಾಕುವುದು, ಈ ಕೆಲಸಗಳೆಲ್ಲಾ 1930ರಿಂದಲೇ ಆರಂಭವಾಗಿದ್ದುವು. ಇಲ್ಲಿನ ಪಂಡಿತ್ ಶಾಲು, ದುಪ್ಪಟಿ, ಅಂಗವಸ್ತ್ರ ಇತ್ಯಾದಿ ಬಣ್ಣದ ಮತ್ತು ಅಚ್ಚುಹಾಕಿದ ಬಟ್ಟೆಗಳು ಬಹಳ ಪ್ರಸಿದ್ಧವಾಗಿದ್ದವು. ಬಣ್ಣದ ಮನೆಯ ವ್ಯವಸ್ಥಾಪಕರಾಗಿದ್ದ ಶ್ರೀ ಟಿ. ಎಸ್. ವೆಂಕಟಗಿರಿರಾಯರು ಐಮುಂಗಲಕ್ಕೆ ಹೋದ ಮೇಲೆ ಈ ಕೆಲಸ ನಿರ್ವಹಣೆಗಾಗಿ ತಮಿಳು ನಾಡಿನಿಂದ ಒಬ್ಬರು ಶ್ರೀ ಆರ್. ಕೃಷ್ಣರಾಯರು ಎಂಬವರನ್ನು ಕರೆಸಿಕೊಂಡು ನಂಜನಗೂಡಿನಲ್ಲಿ ಬಣ್ಣ ಹಾಕುವ ಹಾಗೂ ಅಚ್ಚು ಹಾಕುವ ಕೆಲಸಕ್ಕೆ ನಿಯಮಿಸಿ ಕೊಳ್ಳಲಾಯ್ತು. ಬಣ್ಣದ ಕೆಲಸಕ್ಕೆ ಬೇಕಾಗುವ ನೀರಿನ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗಿತ್ತು. ಆಗಿನ ಕಾಲದಲ್ಲಿದ್ದ ಡೈರೆಕ್ಟರ್ ಆಗಿದ್ದ ಶ್ರೀ ಎ. ವಿ. ರಾಮನಾಥ ರವರು ಖುದ್ದು ಸ್ಥಳಕ್ಕೆ ಭೇಟಿಕೊಟ್ಟು ಪರಿಶೀಲಿಸಿ ಸಾಕಷ್ಟು ಉತ್ತೇಜನಕೊಟ್ಟರು.

ಅಂದಿನ ನಂಜನಗೂಡು ಮುನಿಸಿಪಾಲಿಟಿ ಅಧ್ಯಕ್ಷರಾದ ಶ್ರೀ ಕೆ. ಶ್ರೀನಿವಾಸ್ ರವರು ಮುತುವರ್ಜಿ ವಹಿಸಿ ಬಣ್ಣದ ಮನೆಗೆ ಸುಮಾರು ಒಂದು ಫರ್ಲಾಂಗ್ ದೂರ ದಿಂದ ಪೈಪನ್ನು ಹಾಕಲು ಅನುಮತಿ ಕೊಟ್ಟು ನೀರಿನ ಅನುಕೂಲತೆಯನ್ನು ಒದಗಿಸಿ ಕೊಟ್ಟರು.

ನಂತರ ಮುನಿಸಿಪಲ್ ಪ್ರೆಸಿಡೆಂಟರಾಗಿದ್ದ ಶ್ರೀ ಕೆ. ನರಸೇಗೌಡರು ಸಹ ತಮ್ಮ ಕಾಲದಲ್ಲಿ ಮತ್ತೊಂದು ಪೈಪ್‌ಲೈನ್ ಹಾಕಿಸಿಕೊಳ್ಳಲು ಅನುಮತಿ ಕೊಟ್ಟರು. ಬದನವಾಳ ಕೇಂದ್ರದ ಆವರಣದಲ್ಲಿ 90 ಅಡಿ ಆಳವಾದ ಒಂದು ಬಾವಿಯನ್ನು ತೆಗೆಸಿ ಅದರ ತಳಭಾಗದಲ್ಲಿ 18 ಅಡಿ ಆಳದ ಒಂದು ರಂಧ್ರವನ್ನು ಕೊರೆಸಿ ಕೇಂದ್ರದ ಕಾರ್ಯಕರ್ತರುಗಳಿಗೆ ಕುಡಿಯುವ ನೀರಿನ ಸೌಲಭ್ಯವನ್ನು ಸರ್ಕಾರದವರು ಕಲ್ಪಿಸಿ ಕೊಟ್ಟರು. ವಸತಿಗಾಗಿ ಜಿಂಕ್‌ಷೀಟ್ ಹೊದಿಸಿದ ಕೆಲವು ವಸತಿಗೃಹಗಳನ್ನೂ ಮಾಡಿಸಿಕೊಟ್ಟರು. ಹಾಗೂ ಕೆಲವು ಜೋಪಡಿಗಳೂ ನಿರ್ಮಿತವಾಗಿ ಕಾರ್ಯಕರ್ತರಿಗೆ ಬಾಡಿಗೆ ರಹಿತವಾದ ಮನೆಗಳನ್ನು ಒದಗಿಸಿಕೊಟ್ಟರು. ಇದರಿಂದ ಕಾರ್ಯಕರ್ತರಿಗೆ ತುಂಬಾ ಅನುಕೂಲವಾದಂತಾಯಿತು. ಕೇಂದ್ರದ ಕೆಲಸವು ದಿನದಿನಕ್ಕೆ ವೃದ್ಧಿಗೊಳ್ಳುತ್ತ ಖಾದಿ ಉತ್ಪತ್ತಿ ಮತ್ತು ಮಾರಾಟವು ವೃದ್ಧಿಯಾಯಿತು.

ಸರ್ಕಾರದವರು ಪ್ರತಿ ವರ್ಷ ನಾಲ್ಕನೆ ದರ್ಜೆ ನೌಕರರುಗಳಿಗೆಲ್ಲಾ ಬೇಕಾದ ಪೂರ್ತ ಬಟ್ಟೆಗಳನ್ನು ಖಾದಿಯಿಂದಲೇ ತಯಾರಿಸಿಕೊಡುವಂತೆಯೂ ಸಹಾ ಆದೇಶ ಪಡೆದಿತ್ತು. ಆಗ್ಗೆ ಮೈಸೂರು ಸರ್ಕಾರಕ್ಕೆ ಕೆಲವು ರೈಲ್ವೆ ಲೈನುಗಳಿದ್ದವು. ಮೈಸೂರಿನಲ್ಲಿ ರೈಲ್ವೆ ವರ್ಕ್‌ಷಾಪಿದ್ದಿತು. ರೈಲ್ವೆ ಸಿಬ್ಬಂದಿಗೆಲ್ಲಾ ಖಾದಿಯಿಂದಲೇ ತಯಾರಿಸಿದ ಉಡುಪುಗಳನ್ನು ಧರಿಸಲೂ ಸಹಾ ಅವಕಾಶವಿದ್ದಿತು. ನೀಲಿ ಬಟ್ಟೆಯನ್ನು ಉಪಯೋಗಿಸಲು ಹುಬ್ಬಳ್ಳಿ ಕಡೆಯ ಭಾರತಿ ಮಿಲ್ಲಿನಲ್ಲಿ ಬಣ್ಣ ಹಾಕಿಸಿ ತರುತ್ತಿರಲಾಗು

ತ್ತಿತ್ತು. ಇದನ್ನು ತಪ್ಪಿಸಲು ನಂಜನಗೂಡಿನ ಬಣ್ಣದ ಆಫೀಸಿನಲ್ಲಿಯೇ ನೀಲಿ ಬಟ್ಟೆ ತಯಾರಿಸಲು ಮತ್ತು ಮುದ್ರಣದ ಅಚ್ಚುಗಳನ್ನು ತಯಾರಿಸಲು ಹಾಗೂ ಬಟ್ಟೆಗಳಿಗೆ ಅಚ್ಚು ಹಾಕಿಸಲು ಶ್ರೀ ಟಿ. ಎಸ್. ವೆಂಕಟಗಿರಿರಾಯರನ್ನು ತಿರುಪ್ಪೂರಿಗೆ ಕಳಿಸಿ ತರಪೇತಿ ಪಡೆದ ಅವರನ್ನು ಡೈಯಿಂಗ್ ಮತ್ತು ಪ್ರಿಂಟಿಂಗ್ ಅಸಿಸ್ಟೆಂಟರಾಗಿ ನೇಮಕಮಾಡಿ ಬಣ್ಣದ ಆಫೀಸನ್ನು ವಿಸ್ತರಿಸಿ ಕೈಯಿಂದಲೇ ನಡೆಸುವ ಜಿಗ್ಗರ್‌ವ್ಯಾಟುಗಳನ್ನು ಸ್ಥಾಪಿಸಿ ಆ ಮೂಲಕ ಬಟ್ಟೆಗಳಿಗೆ ಬಣ್ಣ ಹಾಕುವುದು. ಅಚ್ಚು ಹಾಕುವುದು ಈ ಕೆಲಸಗಳು ವ್ಯಾಪಕವಾಗಿ ನಡೆಸಲ್ಪಡತೊಡಗಿದವು. ಬದನವಾಳು ಖಾದಿ ಉತ್ಪತ್ತಿಯ ಮತ್ತು ಮಾರಾಟದ ತಃಖ್ತೆಯನ್ನು ಆದಿಯಿಂದ ಕೊಡಲಾಗಿದೆ.

ಇದುವರಿಗಾಗಲೆ ಬದನವಾಳು ಖಾದಿಯ ಪ್ರಚಾರವು ಬಹಳವಾಗಿ ನಡೆದಿದ್ದಿತು. ಅಖಿಲ ಭಾರತ ಚರಕಾ ಸಂಘದ ಮಹಾ ಕಾರ್ಯದರ್ಶಿಗಳಾದ ಶ್ರೀ ಶಂಕರಲಾಲ್ ಬ್ಯಾಂಕರ್‌ರವರು ವರ್ಷದಲ್ಲಿ ಎರಡು ಸಾರಿ ಬದನವಾಳಿಗೆ ಭೇಟಿಕೊಟ್ಟು ಕೆಲಸ ಕಾರ್ಯಗಳನ್ನು ಅವಲೋಕಿಸಿ ಹೊಸಹೊಸ ಸಲಹೆಗಳನ್ನು ಕೊಡುತ್ತ ಬಂದಿದ್ದರು. ಅಂತೆಯೇ ಕರ್ನಾಟಕ ಚರಕಾ ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ ಹನುಮಂತ ರಾವ್ ಕೌಜಲಗಿಯವರೂ ಆಗಾಗ್ಗೆ ಬಂದು ವೀಕ್ಷಿಸಿ ಖಾದಿ ಉತ್ಪಾದನಾ ಹೆಚ್ಚಳಕ್ಕೆ ಸೂಕ್ತ ಮಾರ್ಗದರ್ಶನ ಕೊಡುತ್ತಿದ್ದರು.

ಬೆಂಗಳೂರು ಖಾದಿ ವಸ್ತ್ರಾಲಯವನ್ನು ಇದುವರೆಗಾಗಲೇ ತಮಿಳ್ನಾಡು ಖಾದಿ ಸಂಘದ ವತಿಯಿಂದ ಕರ್ನಾಟಕ ಚರಕಾ ಸಂಘಕ್ಕೆ ತೆಗೆದುಕೊಂಡು ಅದರಲ್ಲಿ ಮಾನ್ಯ ಶ್ರೀ ತುಳಸಿಗಿರಿ ಭೀಮರಾಯರು ಮತ್ತು ಅವರ ನಂತರ ಶ್ರೀ ಶಂಕರರಾವ್ ಕುರ್ತಕೋಟಿ ಇವರುಗಳು ಚರಕಾ ಸಂಘದ ವತಿಯಿಂದಲೇ ವಸ್ತ್ರಾಲಯದ ವ್ಯವಸ್ಥಾಪಕರಾಗಿದ್ದರು ಮತ್ತು ಅಲ್ಲಿಗೆ ಸಾಕಾದಷ್ಟು ಬದನವಾಳು ಖಾದಿಯನ್ನು ಕೊಂಡು ವ್ಯಾಪಾರಮಾಡು ವಂತೆ ನಿರ್ದೇಶಿಸಿ, ಬದನವಾಳು ಖಾದಿ ಕೇಂದ್ರಕ್ಕೂ ಮತ್ತು ಚರಕಾ ಸಂಘಕ್ಕೂ ಒಂದು ಒಪ್ಪಂದವಾಗಿದ್ದಿತು. ಚರಕಾ ಸಂಘವು ಚಿಕ್ಕಮಗಳೂರಿನಲ್ಲೂ ಸಹ ಒಂದು ಖಾದಿ ಭಂಡಾರವನ್ನು ತೆರೆದಿದ್ದಿತು. ಅಲ್ಲಿಯ ವ್ಯಾಪಾರವೂ ಸಮರ್ಪಕವಾಗಿ ನಡೆ ದಿತ್ತು. ಇದರ ವ್ಯವಸ್ಥಾಪಕರಾಗಿ ಶ್ರೀ ಎಂ. ಆರ್. ವೆಂಕಟರಾಮಯ್ಯ ಮತ್ತು ಹೆಚ್. ಎಸ್. ವೆಂಕಟರಮಣಯ್ಯರವರೂ ಇದ್ದರು.

ಕೋಲಾರದ ಜಿಲ್ಲಾ ಬೋರ್ಡ್ ಅಧ್ಯಕ್ಷರಾಗಿ ಚಂಗಲ್‌ರಾಯ ರೆಡ್ಡಿಯವರು ಇದ್ದರು. ಅವರೂ ಸಹ ತಮ್ಮ ಅಧಿಕಾರ ವ್ಯಾಪ್ತಿಯೊಳಗೆ ಕೋಲಾರ ಜಿಲ್ಲೆಯ ಗೋರಿಬಿದನೂರು ತಾಲ್ಲೂಕು ಹೊಸೂರಿನಲ್ಲಿ ಗೋರಿಬಿದನೂರು ಮಧುಗಿರಿ ರಸ್ತೆಯ ಮಗ್ಗುಲಲ್ಲಿದ್ದ ಪ್ರವಾಸಿ ಮಂದಿರದಲ್ಲಿ ಖಾದಿ ಕೇಂದ್ರವನ್ನು ಸ್ಥಾಪಿಸಿದರು. ಈ ಕೇಂದ್ರಕ್ಕೆ ಸಹಾ ಬದನವಾಳಿಂದಲೇ ನುರಿತ ಕೆಲಸಗಾರರಾದ ಶ್ರೀ ಕೆ. ಎನ್.

ಸುಬ್ರಹ್ಮಣ್ಯಂ ಎಂಬವರನ್ನು ಕಳುಹಿಸಿಕೊಡಲಾಗಿದ್ದಿತು. ಅವರು ಅಲ್ಲಿನ ಕೆಲಸ ಕಾರ್ಯಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿ ಕೇಂದ್ರವನ್ನು ಬೆಳೆಸಿ ವಾಪಸ್ಸಾದರು.

ಹಾಸನ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಹೆಚ್. ಬಿ. ಗುಂಡಪ್ಪಗೌಡರೂ ಶ್ರದ್ಧೆವಹಿಸಿ ಅವರ ಜಿಲ್ಲೆಯ ಗೊರೂರು ಗ್ರಾಮದಲ್ಲಿ ಒಂದು ಕೇಂದ್ರವನ್ನು ತೆರೆದರು. ಅಲ್ಲಿಗೆ ಬದನವಾಳಿಂದ ಶ್ರೀ ಹೆಚ್. ಎಸ್. ನಂಜುಂಡಯ್ಯನವರನ್ನು ಕಳಿಸಿಕೊಡಲಾಗಿದ್ದಿತು. ಗ್ರಾಮವು ಮಲೆನಾಡಿಗೆ ಸೇರಿದ್ದು ಕೆಲಸಕಾರ್ಯಕ್ಕೆ ಉತ್ತೇಜನ ದೊರಕದೆ ಜಿಲ್ಲೆಯ ಪಶ್ಚಿಮ ಭಾಗದಲ್ಲಿದ್ದ ಕೇರಳಾಪುರದಲ್ಲಿ ಕೆಲಸ ಪ್ರಾರಂಭಿಸಿದರೂ ಅಲ್ಲಿಯೂ ಪರಿಸ್ಥಿತಿ ಸರಿಹೋಗದ ಕಾರಣ ಕೇಂದ್ರದ ಚಟುವಟಿಕೆಗಳು ಸ್ಥಗಿತವಾಗಿ ಬಾಗೇಶಪುರ ಗ್ರಾಮಕ್ಕೆ ಕೇಂದ್ರ ಮುಂದುವರೆದು ಅದೂ ಕೆಲವು ದಿನಗಳಲ್ಲಿ ನಿಂತುಹೋಯಿತು.

ಬೆಂಗಳೂರು ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಗುರವಾ ರೆಡ್ಡಿಯವರು ಆನೆಕಲ್ ತಾಲ್ಲೂಕು ಸರ್ಜಾಪುರದಲ್ಲಿ ಒಂದು ಖಾದಿ ಕೇಂದ್ರವನ್ನು ತೆರೆಯಲು ಬದನವಾಳಿಂದ ಒಬ್ಬರನ್ನು ಎರವಲಾಗಿ ಪಡೆದು ಕೆಲಸಮಾಡಿಸಲು ಆಶಿಸಿದರು. ಅಂತೆಯೇ ಶ್ರೀ ಹೆಚ್. ಡಿ. ರಂಗಣ್ಣ ಎಂಬುವರನ್ನು ಅಲ್ಲಿಗೆ ಕಳಿಸಿಕೊಡಲಾಯ್ತು. ಅಲ್ಲಿ ಸಹ ಕೆಲಸ ತೃಪ್ತಿಕರವಾಗಿ ನಡೆಯಲು ಅನುಕೂಲವಾಗದೆ; ನಿಲ್ಲಿಸಲ್ಪಟ್ಟಿತು.

ಶಿವಮೊಗ್ಗ ಜಿಲ್ಲಾ ಮಂಡಲಿ ಅಧ್ಯಕ್ಷರಾಗಿದ್ದ ಶ್ರೀ ಹೆಚ್. ಎಸ್. ರುದ್ರಪ್ಪನವರು ಅವರ ಜಿಲ್ಲೆ ಹೊನ್ನಾಳಿ ತಾಲ್ಲೂಕಿನಲ್ಲಿ ಕೆಲವು ಕಡೆ ಖಾದಿ ಕೇಂದ್ರಗಳನ್ನು ತೆರೆಯಬೇಕೆಂದು ಸರ್ಕಾರಕ್ಕೆ ಬರೆದಿದ್ದರು. ಸರ್ಕಾರದ ಕರೆ ಮೇರೆಗೆ ಬದನವಾಳ ವ್ಯವಸ್ಥಾಪಕರಾದ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಒಬ್ಬರು ಸಹಾಯಕರೊಡನೆ ಅಲ್ಲಿಗೆ ಹೋಗಿದ್ದು ಜಿಲ್ಲಾಧಿಕಾರಿಗಳನ್ನು ಭೇಟಿಮಾಡಿದರು. ಆಗ ದೇಶದ ಸ್ವಾತಂತ್ರ್ಯ ಚಳವಳಿಯ ಕಾಲ. ಮೈಸೂರಿನಿಂದಲೇ ಸಿ.ಐ.ಡಿ.ಗಳು ಅವರ ಬೆನ್ನು ಹತ್ತಿದರು. ಅವರು ಹೋದಕಡೆಗಳಲ್ಲೆಲ್ಲಾ ಅವರ ದರ್ಶನವಾಗುತ್ತಿತ್ತು. ಕಡೂರಿಂದ ಚಿಕ್ಕಮಗಳೂರು, ಅಲ್ಲಿಂದ ಶಿವಮೊಗ್ಗ ಇಲ್ಲಿಗೆಲ್ಲಾ ಹಿಂಬಾಲಿಸಿ ಬರುತ್ತಿದ್ದರು. ಜಟಕಾ ಸ್ಟ್ಯಾಂಡಿಗೆ ಬಂದಾಗ ಅವರನ್ನು ವಿಚಾರಿಸಿದರು. ಅವರು ಸಾವಧಾನದಿಂದ ನಾವು ಖಾದಿ ಕೆಲಸದವರು, ನಮಗೂ ರಾಜಕೀಯಕ್ಕೂ ಸಂಬಂಧವಿಲ್ಲ. ಬಿಡುವಿದ್ದರೆ ನೀವು ಮಧ್ಯಾಹ್ನ 3 ಘಂಟೆಗೆ ಜಿಲ್ಲಾಧಿಕಾರಿಗಳ ಕಚೇರಿಗೆ ಬರುವುದು. ನಾವು ಅವರನ್ನು ಭೇಟಿಮಾಡಿ ಮಾತುಕತೆ ನಡೆಸುತ್ತೇವೆ ಎಂದು ಅವರು ಇರಬೇಕಾಗಿದ್ದ ಸ್ಥಳಕ್ಕೆ ಹೋದರು. ಅಲ್ಲಿಂದ ಸಾಹೇಬರೊಡನೆ ಮಾತುಕತೆ ನಡೆಸಿ ಹೊನ್ನಾಳಿ ಟವನ್ನಿಗೆ ಹೋದರು. ಅಲ್ಲಿಯೂ ಸಹ ಸಿ.ಐ.ಡಿ. ಹಾಜರು. ಅಲ್ಲಿಂದ ತಾಲ್ಲೂಕು ಅಮಲ್ದಾರರ ಮನೆಗೆ ಹೋದೆವು. ಅಲ್ಲಿ ಅವರ ಸ್ನೇಹವಾಯ್ತು. .ರಾತ್ರಿ ಅವರ ಮನೆಯಲ್ಲಿಯೇ ಮೊಕ್ಕಾಂ ಮಾಡಿ ಮರುದಿನ ಅಕ್ಕಪಕ್ಕದ ಹಳ್ಳಿಗಳನ್ನು ನೋಡಿ, ಹರಳಹಳ್ಳಿ,

ಗೋವಿನಕೋವಿಗಳಿಗೆ ಭೇಟಿಕೊಟ್ಟು ಅವಶ್ಯಮಾಹಿತಿಗಳನ್ನು ಸಂಗ್ರಹಿಸಿ ಸಂತೆಬನ್ನೂರು ಮಾರ್ಗವಾಗಿ ಹೊಳಲ್ಕೆರೆ ರೈಲ್ವೆ ನಿಲ್ದಾಣದಿಂದ ವಾಪಸ್ಸಾಗಿ ಬದನವಾಳನ್ನು ತಲುಪಿದ ಮೇಲೆ ಹರಳಹಳ್ಳಿ ಗ್ರಾಮದಲ್ಲಿ ಖಾದಿ ಕೇಂದ್ರವನ್ನು ಆರಂಭಿಸಲು ಶ್ರೀ ಜಿ. ವಿ. ಸೀತಾರಾಮಯ್ಯನವರು ಮತ್ತು ಅವರ ಸಹಾಯಕರಾಗಿ ಶ್ರೀ ಸೊರಬದ ಕೇಶವ ಮೂರ್ತಿಯವರನ್ನು ಕಳುಹಿಸಿ ಕೊಡಲಾಯಿತು. ಸರ್ಕಾರದ ವತಿಯಿಂದಲೇ ಇದು ವರೆವಿಗಾಗಲೇ ಬದನವಾಳು ಖಾದಿ ಕೇಂದ್ರದ ಕೆಲಸಗಳು ಚುರುಕಾಗಿ ಬೆಳೆಯುತ್ತಾ ಬಂದವು.

ಬ್ರಿಟಿಷ್ ಆಡಳಿತ ಕಾಲದಲ್ಲಿ ದೇಶೀಯ ರಾಜ್ಯಗಳು ಚರಕ, ಖಾದಿ ಈ ಶಬ್ದ ಗಳನ್ನು ಉಚ್ಚರಿಸಲೂ ಹಿಂಜರಿಯುತ್ತಿದ್ದ ಕಾಲದಲ್ಲಿ ಮೈಸೂರು ರಾಜ್ಯವು ಆಗಿನ ದೊರೆ ಶ್ರೀ ನಾಲ್ಮಡಿ ಕೃಷ್ಣರಾಜವಡೆಯರು ಮತ್ತು ದಿವಾನ್ ಮಿರ್ಜಾರವರು ಹಾಗೂ ಶ್ರೀ ಎಂ. ಎನ್. ಕೃಷ್ಣರಾಯರು ಧೈರ್ಯದಿಂದ ಮುಂದೆ ಬಂದು ಮಹಾತ್ಮ ಗಾಂಧೀಜಿಯವರ ಆಶೀರ್ವಾದದಿಂದ ಖಾದಿ ಕೆಲಸವನ್ನು ಆರಂಭಿಸಿದ್ದೂ ಒಂದು ಹೆಮ್ಮೆ ವಿಷಯ. ಶ್ರೀ ಕೃಷ್ಣರಾಜ ವಡೆಯರವರು ಖಾದಿ ಧರಿಸುತ್ತಲಿದ್ದರೆಂತಲೂ ಮಹಾತ್ಮರ 'ಯಂಗ್ ಇಂಡಿಯಾ' ಪತ್ರಿಕೆಯನ್ನು ತರಿಸಿಕೊಂಡು ಓದುತ್ತಿದ್ದರೆಂತಲೂ ವದಂತಿಯಿತ್ತು. ಸ್ವತಃ ಮಿರ್ಜಾ ಸಾಹೇಬರೂ ತಮ್ಮ ಅಭಿರುಚಿಗೆ ತಕ್ಕಂತಹ ಖಾದಿ ಬಟ್ಟೆಯನ್ನು ತಯಾರಿಸಿಕೊಂಡು ಧರಿಸುತ್ತಿದ್ದುದೂ ಉಂಟು. ಇಷ್ಟೆಲ್ಲಾ ನಡೆಯಿತು. ರಾಜವಂಶದವರಲ್ಲಿ ಮೊದಲಿಂದಲೂ ಕೆಲವು ಬಗೆಯ ಕೈಮಗ್ಗದ ಹತ್ತಿ ಮತ್ತು ರೇಷ್ಮೆ ಬಟ್ಟೆಗಳನ್ನು ಕೊಳ್ಳುವ ಪರಿಪಾಠವೂ ಇದ್ದಿತು.

1938ನೇ ಇಸವಿಯ ವೇಳೆಗಾಗಲೇ ಬದನವಾಳಲ್ಲಿ ಖಾದಿ ಬೆಳವಣಿಗೆ ಹೆಚ್ಚಳ ದಿಂದ ಕಾರ್ಯಕರ್ತರ ಬೇಡಿಕೆ ಬಹಳವಾಗಿತ್ತು. ಬೇರೆ ಕಡೆ ಖಾದಿ ಕೆಲಸ ಮಾಡಲು ಚಿತ್ರದುರ್ಗದ ತುರುವನೂರು ಕಡೆಯ ಜನಗಳಿಂದ ಬಹಳ ಒತ್ತಾಯ ಬಂದಿತು. ಸರ್ಕಾರದ ಕಡೆಯಿಂದಲೂ ಖಾದಿ ಉತ್ಪಾದನೆ ದ್ವಿಗುಣಗೊಳಿಸಬೇಕೆಂತಲೂ ತನ್ಮೂಲಕ ಹಳ್ಳಿ ಜನರಿಗೆ ಉದ್ಯೋಗಾವಕಾಶ ಹೆಚ್ಚಿಸಬೇಕೆಂತಲೂ ಸರ್ಕಾರದ ಕಳಕಳಿಯ ಆದೇಶ ವಾಗಿದ್ದಿತು. ಜತೆಯಲ್ಲಿ ಉಣ್ಣೆ ನೂಲುವ ಹಾಗೂ ನೇಯ್ಗೆ ಕೇಂದ್ರವನ್ನೂ ಸಹ ಕೋಲಾರದಲ್ಲಿ ಸ್ಥಾಪಿಸಲಾಗಿದ್ದು ಅಲ್ಲಿಗೆ ಬದನವಾಳು ಕೇಂದ್ರದ ಸಹಾಯಕ ವ್ಯವಸ್ಥಾಪಕರಾಗಿದ್ದ ಶ್ರೀ ಬಿ. ಎಸ್. ರಂಗಸ್ವಾಮಿಯವರನ್ನು ವ್ಯವಸ್ಥಾಪಕರನ್ನಾಗಿ ಕಳಿಸಿಕೊಡಲಾಗಿದ್ದಿತು. ಇದು ಸರ್ಕಾರದ ಆದೇಶದಂತೆ ಬದನವಾಳು ಕೇಂದ್ರದ ಮುಖ್ಯ ಶಾಖಾ ಕೇಂದ್ರವಾಯಿತು. ನುರಿತ ಕೆಲಸಗಾರರ ಕೊರತೆಯಿದ್ದಿತು. ಬದನವಾಳು ಕೇಂದ್ರದಲ್ಲಿ ಕಾರ್ಯಕರ್ತರ ತರಬೇತಿಯೂ ನಡೆದು ಎಂಟು ಹತ್ತು ಜನ ಕಾರ್ಯಕರ್ತರನ್ನು ತಯಾರಿಸಿದ್ದೂ ಅವರುಗಳೂ ಬೇರೆ ಬೇರೆ ಕಡೆಗೆ ಹೊರಟು ಹೋಗಿದ್ದರು.

ಚಿತ್ರದುರ್ಗದ ತುರವನೂರು ಖಾದಿ ಕೇಂದ್ರಕ್ಕೆ ಹಳಬರಾಗಿ ಮದ್ರಾಸಿನ ತಿರಪೂರಿನಲ್ಲಿ ಮತ್ತು ಮಹಾರಾಷ್ಟ್ರದ ಸಾವಲಿ ಕೇಂದ್ರದಲ್ಲಿಯೂ ಖಾದಿ ವೃತ್ತಿಯ ಅಭ್ಯಾಸ ನಡೆಸಿ ಬಂದಿದ್ದ ಶ್ರೀ ಡಿ. ರಂಗಶೆಟ್ಟಿಯವರು ಬದನವಾಳಿಂದ ಅಲ್ಲಿಗೆ ವ್ಯವಸ್ಥಾಪಕರಾಗಿ ಹೋದರು. ಅಲ್ಲಿ ನಿರೀಕ್ಷೆಗಿಂತಲೂ ಗುರಿ ಮೀರಿ ಕೆಲಸಕಾರ್ಯಗಳು ನಡೆದವು. ತುರುವನೂರು ಸುತ್ತಲಿನ ಹಳ್ಳಿಗಳಲ್ಲಿಂದ ಹಳೆಯ ರಾಟೆಗಳನ್ನು ಕಲೆಹಾಕಿ ಒಂದು ವರ್ಷದ ಅವಧಿಯಲ್ಲಿಯೇ ಮಾಹೆಯಾನ ಮೂರು ಸಾವಿರ ಪೌಂಡುಗಳಷ್ಟು ನೂಲು ಉತ್ಪತ್ತಿಯಾಗತೊಡಗಿತು. ಬಟ್ಟೆಗೆ ಈ ನೂಲು ಪರಿವರ್ತನೆಯಾಗಿ ಬಟ್ಟೆ ಯಾಗಬೇಕಾದ್ದರಿಂದ ನಾಯಕನಹಟ್ಟಿ, ತಳಕು ಮತ್ತು ಮೊಳಕಾಲ್ಮುರು ಈ ಸ್ಥಳಗಳಲ್ಲಿ ಯೂ ಪ್ರದೇಶದಲ್ಲಿರುವ ನೇಯ್ಗೆಯವರಿಗೆ ನೂಲು ಒದಗಿಸಿ ಬಟ್ಟೆ ತಯಾರಿಸಲ್ಪಡು ತ್ತಿದ್ದಿತು.

ಕಾಲಕ್ಕೆ ತಕ್ಕಂತೆ ಹೊಸದಾಗಿ ಕೆಲಸಗಾರರನ್ನು ತರಬೇತಿ ಮಾಡಿ ಅವರನ್ನು ಕೆಲಸಕ್ಕೆ ನಿಯಮಿಸಿಕೊಳ್ಳುವ ಉದ್ದೇಶದಿಂದ ಖಾದಿ ಮತ್ತು ಗ್ರಾಮೋದ್ಯೋಗಗಳ ತರಬೇತಿ ಕೇಂದ್ರವನ್ನೂ ತೆರೆದು 10 ಜನಕ್ಕೆ ತರಬೇತಿ ಕೊಡುವ ಯೋಜನೆಯು ಸರ್ಕಾರದಿಂದ ಮಂಜೂರಾಗಿದ್ದಿತು. ಅದರಂತೆ ಮಾಹೆಯಾನ ತಲಾ 6 ರೂಪಾಯಿ ವಿದ್ಯಾರ್ಥಿ ವೇತನದ ಮೇರೆಗೆ ಜಿಲ್ಲೆಗೆ ಒಬ್ಬರಂತೆ 10 ಜನರನ್ನು ಈ ಅಭ್ಯಾಸಕ್ಕೆ ಕರೆಯಲಾಗಿತ್ತು. ಅವರ ವಸತಿ, ಊಟ ಇತ್ಯಾದಿಗಳಿಗೂ ಅನುಕೂಲಪಡಿಸಲಾಗಿತ್ತು. ಈ ವಿದ್ಯಾರ್ಥಿ ನಿಲಯದಲ್ಲಿ ಯಾವ ಭೇದಭಾವವೂ ಇಲ್ಲದೆ ಎಲ್ಲ ಜನರಿಗೂ ಅವಕಾಶ ವಿತ್ತು. ಈ ಸಮೂಹದಲ್ಲಿ ಹರಿಜನರೂ, ಕ್ರಿಶ್ಚಿಯನ್ನರೂ, ಮುಸಲ್ಮಾನರೂ ಸಹ ಇದ್ದರು.

ಪೂಜ್ಯ ಗಾಂಧೀಜಿಯವರ ವಾರ್ಧಾ ಆಶ್ರಮದಲ್ಲಿ ಗಾಂಧಿಯವರ ನೇತೃತ್ವದಲ್ಲಿ ಒಂದು ವರ್ಷ ಮಗನವಾಡಿ ಮತ್ತು ಸೇವಾಗ್ರಾಮದಲ್ಲಿ ಗ್ರಾಮೋದ್ಯೋಗಗಳಲ್ಲಿ ತರಬೇತಿ ಪಡೆದು ಗಾಂಧೀಜಿಯವರು ಮತ್ತು ಶ್ರೀ ಜೆ. ಸಿ. ಕುಮಾರಪ್ಪನವರ ಪಾಠ ಪ್ರವಚನಗಳ ಸಂಸ್ಕಾರ ಹೊಂದಿದ್ದ ಶ್ರೀ ಟಿ. ಆರ್. ಗೋವಿಂದರಾವ್ ಮತ್ತು ತಗಡೂರಿನವರೇ ಆದ ಶ್ರೀ ಕೇಶವಮೂರ್ತಿ ಇವರುಗಳನ್ನು ಗ್ರಾಮೋದ್ಯೋಗದ ವಿಭಾಗಕ್ಕೆ ಸಂಚಾಲಕರಾಗಿ ನಿಯಮಿಸಿಕೊಳ್ಳಲಾಗಿತ್ತು. ತರಬೇತಿಯ ಉದ್ಯೋಗಗಳು ಈ ಕೆಳಗಿನಂತಿದ್ದವು.

1) ಹತ್ತಿ ಬಿಡಿಸಿ ಹಂಜಿಮಾಡುವುದು ಮತ್ತು ನೂಲುವುದು.
2) ನೂತನೂಲಿಂದ ಬಟ್ಟೆ ನೇಯ್ಗೆ
3) ಕೈಕಾಗದ ತಯಾರಿಕೆ
4) ಜೇನು ಸಾಕಾಣಿಕೆ ಮತ್ತು ಚಾಪೆ ನೇಯ್ಗೆ

5) ಗಾಣದಿಂದ ಎಣ್ಣೆ ಮಾಡುವುದು (ಸುಧಾರಿತ ಗಾಣ)
6) ಚೌಳು ಮತ್ತು ಸುಣ್ಣ ಹಾಗೂ ಕಹಿ ಎಣ್ಣೆಯಿಂದ ಸಾಬೂನು ತಯಾರಿಕೆ
7) ಚರ್ಮೋದ್ಯೋಗ
8) ಬಟ್ಟೆಗಳಿಗೆ ಬಣ್ಣ ಮತ್ತು ಅಚ್ಚು ಹಾಕುವುದು.

—ಈ ಉದ್ಯೋಗಗಳಲ್ಲಿ ಆರು ತಿಂಗಳ ತರಬೇತಿ ನಡೆದವು. ಇವರುಗಳಲ್ಲಿ ಹಲವರನ್ನು ಖಾಲಿ ಬಿದ್ದ ಜಾಗಕ್ಕೆ ತೆಗೆದುಕೊಳ್ಳಲಾಯಿತು. ಇವರಲ್ಲಿ ಕೆಲವರು ಉನ್ನತ ಹುದ್ದೆಗಳ ವರೆಗೂ ತಲುಪಿ ನಿಷ್ಠೆಯಿಂದ ಕೆಲಸಮಾಡಿದ್ದಾರೆ. ಒಳ್ಳೆಯ ಹೆಸರು ಗಳಿಸಿ ಈಗ ನಿವೃತ್ತರಾಗಿದ್ದಾರೆ.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸಿದರೆ ಅನುಚಿತವೆನಿಸಲಾರದು. ಬದನವಾಳು ನೂಲುವ ಪ್ರಾಂತ್ಯದ ವ್ಯವಸ್ಥಾಪಕರು ಶ್ರೀ ರಾಜಾರಾಮ ಅಯ್ಯಂಗಾರರವರೂ ಅವರ ಅನುಯಾಯಿಗಳೂ ಯಾವ ಜಾತಿಭೇದವನ್ನೂ ಇಟ್ಟುಕೊಂಡಿರಲಿಲ್ಲ. ಹರಿಜನರ ಬೀದಿಗೆ ಹೋಗಿ ಅವರ ಬೀದಿಯನ್ನು ಚೊಕ್ಕಟಗೊಳಿಸುವುದಲ್ಲದೆ ಅವರ ಮನೆ ಮನೆಗಳಿಗೆ ಹೋಗಿ ಅಸ್ಪೃಶ್ಯತಾ ನಿವಾರಣೆಗೆ ಸಹಾಯಕವಾಗಿ ಕುಡಿತವೇ ಮೊದಲಾದ ದುಶ್ಚಟಗಳನ್ನು ಬಿಡುವಂತೆ ಬುದ್ಧಿವಾದವನ್ನು ಹೇಳುವ ಪರಿಪಾಠವನ್ನು ಸಹ ಇಟ್ಟುಕೊಂಡಿದ್ದರು. ಒಂದು ಸಹಕಾರ ಸಂಘವನ್ನು ರಚಿಸಿ ಹರಿಜನ ನೇಯ್ಗೆಯವರಿಗೆ ಹೊಸ ಮಗ್ಗಗಳನ್ನು ತರಿಸಿ ರಿಯಾಯ್ತಿ ಬೆಲೆಗೆ ಮಾರಾಟಮಾಡಿದ್ದಲ್ಲದೆ ಅನೇಕರಿಗೆ ತರಬೇತಿಯನ್ನು ಕೊಟ್ಟು ಸಹ ಅವರವರ ಮನೆಗಳನ್ನು ಸ್ವಚ್ಛಗೊಳಿಸಲೂ ಸಹ ಮತ್ತು ಹೊಸದಾಗಿ ಮನೆ ಕಟ್ಟಲೂ ಮುಂಗಡವನ್ನು ನೀಡಿ ಕಂತುಗಳಲ್ಲಿ ಅವರ ನೇಯ್ಗೆ ಮಜೂರಿಯಲ್ಲಿ ಅಲ್ಪಸ್ವಲ್ಪ ಜಮಾಮಾಡಿ ಅವರ ಸಾಲವನ್ನು ತೀರಿಸಲು ಸಹಾ ಸಹಾಯಮಾಡುತ್ತಿದ್ದರು. ಅವರುಗಳ ಅನುಕೂಲಕ್ಕಾಗಿ ಕಬ್ಬಳ್ಳಿ ಮಾಡ್ರಹಳ್ಳಿಯಲ್ಲಿ ಸಾಮೂಹಿಕ ರಾಮಮಂದಿರಗಳನ್ನು ಕಟ್ಟಿಸಿಕೊಡಲಾಯಿತು. ಅನೇಕ ಕಡೆ ಕುಡಿತ ಮೊದಲಾದ ದುಶ್ಚಟಗಳನ್ನು ಬಿಡುವಂತೆ ಬೋಧೆಮಾಡಿ ಬಹಳಷ್ಟು ಯಶಸ್ವಿಯಾಗಿ ಅನೇಕರು ಕುಡಿಯುವುದನ್ನು ವರ್ಜಿಸಿದರು. ಮಕ್ಕಳನ್ನು ಶಾಲೆಗೆ ಸೇರಿಸುವಂತೆ ಅವರ ಮನ ಒಲಿಸಲಾಗಿತ್ತು. ಈಗಲೂ ಸಹ ಬದನವಾಳಲ್ಲಿ ಕುಡಿತದ ಅಂಗಡಿ ತಮ್ಮೂರಿಗೆ ಬೇಕಾಗಿಲ್ಲವೆಂದು ಹಟಮಾಡಿ ಹರಿಜನರು ಅಂಗಡಿಯನ್ನು ಬಹಿಷ್ಕರಿಸಿದ ಮೇಲೆ ಕಂಟ್ರಾಕ್ಟರು ಬೇರೆ ಕಡೆ ಸಾಗಿಸಿದ್ದಾರೆ.

ಬದನವಾಳು ಗ್ರಾಮದಲ್ಲಿ ಕುಡಿಯುವ ನೀರಿನದು ಸಮಸ್ಯೆಯಾಗಿದ್ದಿತು. ಹರಿಜನರಂತೂ ಒಂದೂವರೆ ಮೈಲಿ ದೂರದಿಂದ ನೀರು ಹೊತ್ತು ತರಬೇಕಾಗಿತ್ತು. ದೂರದಲ್ಲಿ ಒಂದು ಬಾವಿಯಿದ್ದಿತು. ಅದೇ ಅವರಿಗೆ ನೀರಿನ ಆಸರೆ. ಬದನವಾಳು ಖಾದಿ ಆವರಣದಲ್ಲಿದ್ದ ಬಾವಿಯಿಂದ ಮೊದಲು ಇತರರೊಡನೆ ಹರಿಜನರೂ ನೀರು

ತೆಗೆದುಕೊಳ್ಳುವ ಪರಿಪಾಠವನ್ನು ಆರಂಭಿಸಲಾಯ್ತು. ಪ್ರತಿಭಟನೆಯನ್ನು ಲೆಕ್ಕಿಸದೆ ಈ ಕಾರ್ಯಕ್ರಮವನ್ನು ಜಾಗರೂಕತೆಯಿಂದ ಜಾರಿಗೊಳಿಸಲಾಯ್ತು. ಇದಕ್ಕೆಲ್ಲಾ ಆಗಿನ ವ್ಯವಸ್ಥಾಪಕರಾದ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರ ನಿಷ್ಠೆ ಹಾಗೂ ಚಾತುರ್ಯದ ಪ್ರಯತ್ನದ ಫಲವಾಗಿದ್ದಿತು. ಮಹಾತ್ಮಾ ಗಾಂಧಿಯವರು ಬದನವಾಳು ಖಾದಿ ಕೇಂದ್ರದ ಈ ಸಮಗ್ರ ಸೇವಾಕಾರ್ಯಕ್ರಮದ ಬಗ್ಗೆ ಮೆಚ್ಚಿ ಹರಿಜನ ಪತ್ರಿಕೆಯಲ್ಲಿ ಇದರ ವಿಷಯವಾಗಿ ಮೆಚ್ಚುಗೆಯ ಮಾತುಗಳನ್ನು ಬರೆದು ಶ್ಲಾಘಿಸಿದ್ದರು. ಪ್ರತಿ ತಿಂಗಳೂ ಇಲ್ಲಿನ ಕಾರ್ಯಕ್ರಮಗಳ ಹಾಗೂ ಖಾದಿ ಉತ್ಪತ್ತಿ ಮತ್ತು ಮಾರಾಟದ ವರದಿಗಳನ್ನು ಹರಿಜನ ಪತ್ರಿಕೆ, ಸರ್ಕಾರ ಹಾಗೂ ಕರ್ನಾಟಕ ಚರಕಾ ಸಂಘಗಳಿಗೂ ಕಳಿಸಿಕೊಡಲಾಗುತ್ತಿತ್ತು. ಹಾಗೂ ಹರಿಜನರಿಗೆ ನೀರಿನ ಸಹಾಯ ಸೌಲಭ್ಯಗಳನ್ನು ಸಹಾ ಏರ್ಪಡಿಸಿ ವರದಿಯನ್ನು ಕಳುಹಿಸಲಾಗುತ್ತಿತ್ತು.

ಈ ವರದಿಯ ಪ್ರತಿಗಳು ಸರ್ಕಾರಕ್ಕೆ ಕಳಿಸಲ್ಪಡುತ್ತಿದ್ದುದಲ್ಲದೆ ಮಹಾರಾಜರ ಗಮನಕ್ಕೂ ಬರುತ್ತಿದ್ದಿತು. ಅಂದಿನ ಪ್ರಜಾಪ್ರತಿನಿಧಿ ಸಭೆ ನಡೆಯುತ್ತಿದ್ದ ಜಗನ್ಮೋಹನ ಬಂಗಲೆಯ ಮೇಲ್ಭಾಗದ ಆವರಣ (ಸೀಲಿಂಗ್) ಕ್ಕೆ ಬದನವಾಳ ಖಾದಿ ಬಟ್ಟೆಯ ಚಿತ್ರಿತ ಬಟ್ಟೆಯನ್ನು ಬಳಸಲಾಗಿತ್ತು. ವರ್ಷಕ್ಕೊಮ್ಮೆ ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವೂ ಇದೇ ಬಂಗಲೆಯಲ್ಲಿ ನಡೆಯುತ್ತಿದ್ದಿತು. ಆ ವೇಳೆಯಲ್ಲಿ ಕುಲಪತಿಗಳಾಗಿದ್ದ ಶ್ರೀ ನಾಲ್ಮಡಿ ಕೃಷ್ಣರಾಜ ವಡೆಯರವರೂ ಈ ಮೇಲ್ಹಾಸಿನ ಬಟ್ಟೆಯನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸಿದ್ದರು ಹಾಗೂ ಪ್ರಸಿದ್ಧ ವರ್ತಮಾನ ಪತ್ರಿಕೆಗಳ ಮೂಲಕ ಪ್ರಶಂಸಾ ವರದಿಗಳನ್ನು ಕಳಿಸಿದ್ದರು.

ಅರಮನೆ, ರಾಜವಂಶೀಯರು, ಅರಳೆ ಖಾದಿ, ರೇಷ್ಮೆ ಮತ್ತು ಉಣ್ಣೆ ಖಾದಿ ಬಟ್ಟೆಗಳನ್ನು ಉಪಯೋಗಿಸುತ್ತಿದ್ದರು. ಪ್ರತಿ ವರ್ಷದ ದಸರಾ ಉತ್ಸವ ಸಂದರ್ಭದಲ್ಲಿ ಏರ್ಪಡಿಸುತ್ತಿದ್ದ ದಸರಾ ವಸ್ತು ಪ್ರದರ್ಶನದಲ್ಲಿ ರಾಣೀವಾಸದವರಿಗೆ ಪ್ರತ್ಯೇಕವಾದ ಏರ್ಪಾಡು ಇದ್ದಿತು. ಆ ಸಮಯದಲ್ಲಿ ಅರಮನೆಯ ಜನಾನಾದವರೆಲ್ಲ ಬಂದು ತಮಗೆ ಬೇಕಾದ ಖಾದಿ ಟವೆಲ್‌ಗಳು, ಧೋತ್ರ, ರೇಷ್ಮೆ ಸೀರೆ, ಉಣ್ಣೆ ಬಟ್ಟೆಗಳು ಇವನ್ನು ಕೊಂಡುಕೊಳ್ಳುತ್ತಿದ್ದರು. "ರಾಜಮನೆತನದವರು ಖಾದಿ ಬಗ್ಗೆ ತೋರುತ್ತಿದ್ದ ಪ್ರೀತಿ ಅಭಿಮಾನ ಎಷ್ಟಿದ್ದಿತೆಂಬುದನ್ನು ತೋರಿಸಲು ಇದನ್ನು ತಿಳಿಸುತ್ತಿರಲಾಗಿದೆ".

ಶ್ರೀ ನಾಲ್ಮಡಿ ಕೃಷ್ಣರಾಜ ವಡೆಯರವರು ಐಮಂಗಲ ಖಾದಿ ಕೇಂದ್ರಕ್ಕೆ ಭೇಟಿ ಕೊಟ್ಟು ಕೆಲಸಕಾರ್ಯಗಳನ್ನು ವೀಕ್ಷಿಸಿ ಅದರಿಂದ ಗ್ರಾಮೀಣ ಕೆಲಸಗಾರರಿಗೆ ಎಷ್ಟು ಅನುಕೂಲವಾಗುತ್ತದೆಂಬುದನ್ನು ಕಣ್ಣಾರೆ ಕಂಡು ಧೃಢಪಡಿಸಿಕೊಂಡಿದ್ದರು. ಮುಂದೆ ಶ್ರೀ ಜಯಚಾಮರಾಜ ವಡೆಯರವರು ಬದನವಾಳು ಕೇಂದ್ರಕ್ಕೆ ಭೇಟಿಕೊಟ್ಟು ಅಲ್ಲಿ ನಡಿಯುತ್ತಿದ್ದ ಖಾದಿ ಕೆಲಸಗಳು ಮತ್ತು ಗ್ರಾಮೋದ್ಯೋಗ ಶಿಕ್ಷಣ ಶಿಬಿರಗಳನ್ನು

ನೋಡಿ ಅದರ ಚಟುವಟಿಕೆಗಳ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದರು. ಇದಲ್ಲದೆ ಮೈಸೂರು ಊಟಿ ರಸ್ತೆಯ ಬಾಜುವಿನಲ್ಲಿ ಗುಂಡ್ಲುಪೇಟೆಗೆ ಹತ್ತಿರವಿದ್ದ ಮಾದ್ರಹಳ್ಳಿ ಕೇಂದ್ರಕ್ಕೂ ಪ್ರಮುಖ ಪ್ರವಾಸಿಗರು ಭೇಟಿಕೊಡುತ್ತಿದ್ದರು. ಹಾಗೂ ತಮ್ಮ ಮೆಚ್ಚುಗೆಯನ್ನು ಸಹಾ ವ್ಯಕ್ತಪಡಿಸುತ್ತಿದ್ದರು. ಅಂದಿನ ಸುಪ್ರಸಿದ್ಧ ನೇಕಾರರೂ ಹೆಸರಾಂತ ವಕೀಲರೂ ಆಗಿದ್ದ ಶ್ರೀ ಭುಲಾಭಾಯಿ ದೇಸಾಯಿಯವರೂ, ಆಂಧ್ರದ ಮಟ್ಟುಪಲ್ಲಿ ಖಾದಿ ಕೇಂದ್ರದ ವ್ಯವಸ್ಥಾಪಕರಾದ ಶ್ರೀ ಲೇಲೆಯವರೂ ಬದನವಾಳಿಗೆ ಭೇಟಿಕೊಟ್ಟು ಹರಿಜನರಿಗೆ ಸಹಾಯಮಾಡುತ್ತಿದ್ದುದನ್ನು ಹಾಗೂ ಖಾದಿ ಕೆಲಸ ಕಾರ್ಯ ಗಳನ್ನು ವೀಕ್ಷಿಸಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಗೊಳಿಸಿದ್ದರು. ಈ ಮೊದಲು ಶ್ರೀ ಸಂತ ನಿಹಾಲ್ ಸಿಂಗ್ ಪಂಜಾಬಿನ ಪತ್ರಿಕಾ ಪ್ರತಿನಿಧಿಯವರು ಬದನವಾಳಿಗೆ ಬಂದಿದ್ದು ಇಲ್ಲಿನ ಕೆಲಸಕಾರ್ಯಗಳನ್ನು ಅವಲೋಕಿಸಿ ಪತ್ರಿಕೆಗಳಲ್ಲೆಲ್ಲಾ ಇದರ ಬಗ್ಗೆ ಮೆಚ್ಚುಗೆಯ ಲೇಖನಗಳನ್ನು ಬರೆದಿದ್ದರು.

ಕರ್ನಾಟಕ ಚರಕಾ ಸಂಘದ ಸೆಕ್ರೆಟರಿಗಳಾಗಿದ್ದ ಶ್ರೀ ಹಣಮಂತರಾವ್ ಕೌಜಲಗಿ, ಸಾವುಕಾರ್ ಮಾಸ್ತರು, ಸರದಾರ್ ವೆಂಕಟರಾಮಯ್ಯನವರು, ವಡವಿ ಮಾಸ್ತರು ಇವರುಗಳು ಕ್ರಮವಾಗಿ ಈ ಕೇಂದ್ರಕ್ಕೆ ಹಾಗೂ ತುರುವನೂರು ಕೇಂದ್ರವನ್ನೂ ಭೇಟಿ ಮಾಡಿ ತಯಾರಾಗುತ್ತಿದ್ದ ಖಾದಿ ಬಟ್ಟೆ ವಿಲೇವಾರಿಗಳ ಬಗ್ಗೆ ಮತ್ತು ಅಭಿವೃದ್ಧಿ ಬಗ್ಗೆ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನಮಾಡುತ್ತಿದ್ದುದಲ್ಲದೆ ಬೆಂಗಳೂರು ಖಾದಿ ವಸ್ತ್ರಾಲಯಕ್ಕೆ ಮತ್ತು ಇತರ ಕಡೆಗಳಿಗೂ ಖಾದಿಯನ್ನು ತರಿಸಿಕೊಂಡು ಸಹಾಯ ಮಾಡುತ್ತಿದ್ದರು.

ಇದೇ ಸಮಯದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಚರಕದ ಬಗ್ಗೆ ಕೆಲ ಸಂಶೋಧನೆ ಗಳು ವಾರ್ಧಾದಲ್ಲಿಯೂ ಗುಜರಾತಿನಲ್ಲಿಯೂ ನಡೆಯುತ್ತಿದ್ದಿತು. ಚರಕಾದಲ್ಲಿ ವೇಗ ಹೆಚ್ಚಿಸುವುದಕ್ಕೆ ಗತಿಚಕ್ರಗಳು ಹಾಕಲ್ಪಟ್ಟಿತು. ಇದರ ಪರಿಣಾಮವಾಗಿ ನೂಲು ಉತ್ಪಾದನೆ ಹೆಚ್ಚಾಗತೊಡಗಿತು. ಮಹಾತ್ಮಾಜಿಯವರು ಖಾದಿ ಸೂತ್ರವೊಂದನ್ನು ಅಳವಡಿಸಿದರು. "ನೂಲಿರಿ, ಅರಿತು ನೂಲಿರಿ. ನೂಲುವವರು ಖಾದಿ ತೊಡಿರಿ" ಎಂಬುದು. ಈ ಘೋಷಣೆಯ ಬಲವೂ ಈ ಕಾರ್ಯಕ್ಕೆ ಇಂಬುಗೊಟ್ಟಿತು. ಉತ್ಪತ್ತಿ ಹೆಚ್ಚಾಗಹತ್ತಿತು. ಹೆಚ್ಚಳದ ಖಾದಿಯನ್ನು ಪಟ್ಟಣಗಳಿಗೂ ಸಾಗಿಸುವ ಪ್ರಯತ್ನ ನಡೆದಿದ್ದಿತು. ಅಂತೆಯೇ ಬದನವಾಳು ಖಾದಿ ಕೇಂದ್ರವು ಮೈಸೂರಿನಲ್ಲಿ ಒಂದು ಖಾದಿ ಭಂಡಾರವನ್ನು ತೆರೆಯಿತು. ಬೆಂಗಳೂರಲ್ಲಿಯೂ ಒಂದು ಭಂಡಾರವು ತೆರೆಯ ಲ್ಪಟ್ಟಿತು. ಇದು 1939ನೇ ಇಸವಿಯಲ್ಲಿ ಚಾಂದ್ರಮಾನ ಯುಗಾದಿಯಂದು ಮೈಸೂರು ಬ್ಯಾಂಕ್ ಬಿಲ್ಡಿಂಗಿನಲ್ಲಿ ಪ್ರಾರಂಭವಾಯ್ತು. ಶ್ರೀ ಡಿ. ರಂಗಶೆಟ್ಟರು ಪ್ರಾರಂಭಮಾಡಿದರು. ನಂತರ ಬದನವಾಳು ಖಾದಿ ಕೇಂದ್ರದಲ್ಲಿ ಅಸಿಸ್ಟೆಂಟ್ ಮ್ಯಾನೇಜರಾಗಿದ್ದ ಶ್ರೀ ಕೆ. ಎಸ್. ಬಸವಯ್ಯನವರು ಅಲ್ಲಿಗೆ ವ್ಯವಸ್ಥಾಪಕರಾಗಿ

ನಿಯುಕ್ತರಾದರು. ಇವರಿಗೆ ಸಹಾಯಕರಾಗಿ ಶ್ರೀ ಕಬ್ಬಳ್ಳಿ ಪುಟ್ಟಮಾದಪ್ಪನವರು ಮತ್ತು ನಗರ್ಲೆ ಲಿಂಗಪ್ಪ ಎಂಬವರು (ಬದನವಾಳು ಶಾಖಾ ಕೇಂದ್ರಗಳಲ್ಲಿ ಕೆಲಸಮಾಡಿ ನುರಿತವರು) ನಿಯುಕ್ತರಾದರು. ಮೈಸೂರು ಮತ್ತು ಬೆಂಗಳೂರು ಭಂಡಾರಗಳು ಯಶಸ್ವಿಯಾಗಿ ಕಾರ್ಯನಿರ್ವಹಿಸಿಕೊಂಡು ಲಾಭದಾಯಕವಾಗಿದ್ದುವು.

ಅಖಿಲ ಭಾರತ ಮಟ್ಟದಲ್ಲಿ ಜರುಗುತ್ತಿದ್ದ ಖಾದಿ ವಸ್ತುಪ್ರದರ್ಶನಗಳಲ್ಲಿಯೂ ಬದನವಾಳು ಖಾದಿಯು ಭಾಗವಹಿಸುತ್ತಿದ್ದಿತು. ತಮಿಳುನಾಡಿನ ತಿರುಚಿನಾಪಳ್ಳಿ, ಒಂದೆರಡು ಬಾರಿ ಮದ್ರಾಸಿನಲ್ಲಿ ಜರುಗಿದ ಪ್ರದರ್ಶನದಲ್ಲಿಯೂ ಭಾಗವಹಿಸಿದ್ದಿತು. 1936ನೇ ಇಸ್ವಿಯಲ್ಲಿ ಲಕ್ನೋ ಕಾಂಗ್ರೆಸ್ ಸಮ್ಮೇಳನದ ಅಂಗವಾಗಿ ಏರ್ಪಡಿಸಿದ್ದ ವಸ್ತುಪ್ರದರ್ಶನದಲ್ಲಿ ಸಹ ಖಾದಿ ಮಾರಾಟದ ಹಾಗೂ ನೂಲುವ ಪ್ರದರ್ಶನದಲ್ಲೂ ಬದನವಾಳು ಭಾಗವಹಿಸಿದ್ದಿತು. ಈ ಕುಶಲ ಕಲೆಗಳ ಸಾಮಗ್ರಿಗಳನ್ನು ಸಹ ಈ ಪ್ರದರ್ಶನದಲ್ಲಿ ಇಡಲಾಗಿದ್ದಿತು. ಕಲಾವಸ್ತುಗಳನ್ನು ಸರ್ಕಾರದವರೇ ಕಳಿಸಿದ್ದರು. 1938ರ ತ್ರಿಪುರಾ ಕಾಂಗ್ರೆಸ್ ಪ್ರದರ್ಶನದಲ್ಲಿ ಸಹ ಭಾಗವಹಿಸಲಾಗಿತ್ತು. ಈ ಈ ಪ್ರದರ್ಶನಕ್ಕೆ ಶ್ರೀ ಕೆ. ಎಸ್. ಬಸವಯ್ಯ ಹಾಗೂ ಶ್ರೀ ಟಿ. ಕೆ. ರಾಮಕೃಷ್ಣ ಎಂಬವರನ್ನು ಕಳಿಸಲಾಗಿದ್ದಿತು. ಬದನವಾಳಿಗೆ ಖಾದಿ ಪ್ರಶಸ್ತಿ ದೊರಕಿತು.

ಇಂಗ್ಲೆಂಡಿನಲ್ಲಿ ಒಂದು ಪ್ರಪಂಚದ ಎಲ್ಲ ರಾಜ್ಯಗಳ ಬೃಹತ್ ಪ್ರದರ್ಶನ ಏರ್ಪಟ್ಟಿದ್ದಿತು. ಲಂಡನ್ನಿನಲ್ಲಿ ಮೈಸೂರು ರಾಜ್ಯದ ಟ್ರೇಡ್ ಕಮೀಷನರ್ ಆಫೀಸು ಇದ್ದಿತು. ಅವರ ಮುಖಾಂತರ ಬದನವಾಳು ಖಾದಿ ಕೋಲಾರದ ಕಂಬಳಿಗಳನ್ನು ಪ್ರದರ್ಶನಕ್ಕಾಗಿ ಕಳುಹಿಸಿಕೊಡಲಾಗಿದ್ದಿತು. ಖಾದಿ ಬಟ್ಟೆಗಳಿಗೆ ಬಹಳಷ್ಟು ಗ್ರಾಹಕ ರಿದ್ದು ಬೇಡಿಕೆಗಳು ಬರತೊಡಗಿದವು. ಆದರೆ ಮೈಸೂರಿಂದ ಕಳುಹಿಸುವುದು ಸಾರಿಗೆ ಖರ್ಚು ಮತ್ತು ಸಮಯ. ಇವುಗಳಿಂದಾಗಿ ಪುನಃ ಬಟ್ಟೆಗಳನ್ನು ಕಳಿಸಲಾಗಲಿಲ್ಲ. ಈ ರೀತಿ ಬದನವಾಳು ಖಾದಿ ಸಮುದ್ರದಾಚಿನ ದೇಶಗಳಲ್ಲೂ ತನ್ನ ಕೀರ್ತಿಪತಾಕೆ ಯನ್ನು ಹಾರಿಸಿ ಬಂದಿತು.

ಈ ಮಧ್ಯಕಾಲದಲ್ಲಿ ಮೈಸೂರು ಜಿಲ್ಲೆಗೆ ಸೇರಿದ್ದ ಮಂಡ್ಯವನ್ನು ಪ್ರತ್ಯೇಕಿಸಿ ಮಂಡ್ಯ ಜಿಲ್ಲೆಯನ್ನು ನಿರ್ಮಿಸಿದ್ದರು. ಅದಕ್ಕೆ ಶ್ರೀ ಕೆ. ಎಂ. ಕೃಷ್ಣಪ್ಪಗೌಡರು ಜಿಲ್ಲಾ ಬೋರ್ಡ್ ಅಧ್ಯಕ್ಷರಾದರು. ಅವರು ತಮ್ಮ ಜಿಲ್ಲೆಯಲ್ಲೂ ಒಂದು ಖಾದಿ ಕೇಂದ್ರವನ್ನು ಸ್ಥಾಪಿಸಲು ಆಸಕ್ತರಾಗಿ ಈ ಸರ್ಕಾರಕ್ಕೆ ಬರೆದು ಬದನವಾಳಿನ ನೆರವನ್ನು ಕೋರಿದ್ದರು. ಅವರ ಕೋರಿಕೆಯಂತೆ ಸರ್ಕಾರವು ಬದನವಾಳ ಕೇಂದ್ರದ ನೆರವು ದೊರಕಿಸಿಕೊಟ್ಟಿದ್ದಿತು. ಬದನವಾಳ ಕೇಂದ್ರದ ಪ್ರತಿನಿಧಿಗಳು ಜಿಲ್ಲೆಯಲ್ಲಿ ಸಂಚಾರ ಮಾಡಿ ಮೇಲುಕೋಟೆಯಲ್ಲಿ ನೇಕಾರರಿರುವುದನ್ನು ಗಮನಿಸಿ, ಹೊಸಕೆರೆ ಎಂಬ ಗ್ರಾಮ ವನ್ನು ಸೂಚಿಸಿದರು. ಅದರಂತೆ ಹೊಸಕೆರೆಯಲ್ಲಿ ಕೇಂದ್ರವನ್ನು ಸ್ಥಾಪಿಸಿದರು.

ಅದು ಲೋಕಪಾವನಿ ನದಿ ದಡದಲ್ಲಿದ್ದುದರಿಂದ ಲೋಕಪಾವನಿ ಖಾದಿ ಕೇಂದ್ರವೆಂಬ ಹೆಸರಿಂದ ಖಾದಿ ಬೋರ್ಡಿನ ಆಳ್ವಿಕೆಯವರೆಗೂ ಕೆಲಸಮಾಡಿ ಖಾದಿ ಬೋರ್ಡಿನ ಆಡಳಿತಾವಧಿಯಲ್ಲಿಯೇ ಮುಚ್ಚಲಾಯಿತು.

1934ನೇ ಇಸವಿ ಜನವರಿ 30, 31ನೇ ತಾರೀಖು ಮಹಾತ್ಮಾ ಗಾಂಧಿಯವರು ಕರ್ನಾಟಕದ ಹರಿಜನರ ಏಳಿಗೆಗಾಗಿ ಧನಸಂಗ್ರಹಮಾಡಲು ವ್ಯಾಪಕ ಪ್ರವಾಸವನ್ನು ಕೈಗೊಂಡಿದ್ದರು. ಬದನವಾಳು ಖಾದಿಕೇಂದ್ರಕ್ಕೂ ಸಹ ಭೇಟಿಯಿತ್ತು ಸುಮಾರು ಎರಡು ತಾಸುಗಳಷ್ಟು ಸಮಯದಲ್ಲಿ ಕೇಂದ್ರದ ಎಲ್ಲ ವಿಭಾಗಗಳನ್ನೂ ಸಂದರ್ಶಿಸಿ ಕೆಲಸ ಕಾರ್ಯಗಳನ್ನು ಅವಲೋಕಿಸಿ ಸಮಾಧಾನವನ್ನು ವ್ಯಕ್ತಪಡಿಸಿದರು. ನೆರೆದಿದ್ದ ಸುಮಾರು ಎರಡು ನೂರು ನೂಲುವವರನ್ನುದ್ದೇಶಿಸಿ ಭಾಷಣಮಾಡಿದರು. ಮತ್ತು ಅವರೆಲ್ಲರನ್ನೂ ಹೃತ್ಪೂರ್ವಕ ಆಶೀರ್ವದಿಸಿದರು. ಆಫೀಸಿನ ಮಳಿಗೆಯ ಮುಂದುಗಡೆ ಚಪ್ಪರದಲ್ಲಿ ಕುಳಿತು ಹಿತವಚನ ಹೇಳುತ್ತಿರುವುದನ್ನು ತರ್ಜುಮೆಮಾಡಿ ಹೇಳುತ್ತಿರುವ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರನ್ನೂ, ಮಹಾತ್ಮಾಜಿಯವರ ಸೆಕ್ರೆಟರಿಯಾಗಿದ್ದ ಶ್ರೀ ಆಚಾರ್ಯ ಕೃಪಲಾನಿಯವರನ್ನೂ ಬದನವಾಳು ಆಫೀಸಿನಲ್ಲಿ ಇಟ್ಟಿರುವ ಫೋಟೋದಲ್ಲಿ ನೋಡಬಹುದು. ಹರಿಜನ ನಿಧಿಗಾಗಿ ಹಾಜರಿದ್ದ ಜನರಿಂದ ಸುಮಾರು 250 ರೂಪಾಯಿಗಳನ್ನು ಅರ್ಪಿಸಲಾಯ್ತು. ಕೇಂದ್ರದ ಕಾರ್ಯಕರ್ತರಲ್ಲೊಬ್ಬರಾದ ಶ್ರೀ ಡಿ. ರಂಗಶೆಟ್ಟರು ಹಾಗೂ ನಂಜನಗೂಡಿನ ವಕೀಲರಾದ ಶ್ರೀ ಬಿ. ಎಂ. ಶಿವರಾಮಯ್ಯನವರನ್ನೂ ಸಹ ಫೋಟೋದಲ್ಲಿ ಕಾಣಬಹುದಾಗಿದೆ.

ಇದುವರೆಗಾಗಲೇ ತಗಡೂರು ರಾಮಚಂದ್ರರಾಯರ ಸ್ವಪ್ರಯತ್ನದಿಂದ ರೂಪುಗೊಂಡ ಖಾದಿ ಸಂಸ್ಥೆಯು ತಗಡೂರು ಗ್ರಾಮದಲ್ಲಿ ಒಂದು ಪ್ರಬಲ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿತ್ತು. ರಾಯರ ರಾಜಕೀಯ ಚಟುವಟಿಕೆ ಕೇಂದ್ರಬಿಂದುವಾಗಿ ತಗಡೂರು ಸತ್ಯಾಗ್ರಹಾಶ್ರಮವೂ ರೂಪುಗೊಂಡಿತ್ತು. ಆಶ್ರಮವು ಊರ ಪಶ್ಚಿಮದಲ್ಲಿ ತೆಂಗಿನ ಗರಿಗಳ ಮೇಲ್ಹೊವಣಿಯಿಂದ ನಿರ್ಮಿತವಾಗಿದ್ದಿತು. ಆಶ್ರಮದ ಚಟುವಟಿಕೆಗಳನ್ನು ನೋಡಿ ಸಹಿಸಲಾರದ ಕೆಲವು ಸ್ವಾರ್ಥಿಗಳ ಪ್ರಯತ್ನದಿಂದ ಒಂದು ರಾತ್ರಿ ಆಶ್ರಮದ ಗುಡಿಸಲುಗಳಿಗೆ ಬೆಂಕಿ ಹಚ್ಚಿ ಭಸ್ಮ ಮಾಡಿದರು. ರಾಯರು ಅಳುಕಲಿಲ್ಲ, ಅಂಜಲಿಲ್ಲ. ಅದಕ್ಕಾಗಿ ಕೋರ್ಟು ಕಛೇರಿಯ ನೆರವು ಪಡೆಯಲಿಲ್ಲ. ತಮ್ಮ ಪ್ರಭಾವವನ್ನು ಬೀರಿ ಯಾರು ಬೆಂಕಿ ಹಾಕಿದ್ದರೋ ಅವರ ಕೈಯಲ್ಲೇ ಒಂದು ಕಟ್ಟಡವನ್ನು ಕಟ್ಟಿಸಿದರು. ಇದೊಂದು ಪವಾಡವೇ ಸರಿ. ಹೊಸದಾಗಿ ಕಟ್ಟಿಸಿದ ಕಟ್ಟಡ ಜೋಪಡಿಗಿಂತಲೂ ಉತ್ತಮವಾಯಿತು. ಯಥಾ ಪ್ರಕಾರ ಕೆಲಸಕಾರ್ಯಗಳು ಮುಂದುವರಿಯತೊಡಗಿತು.

ತಗಡೂರಿನಲ್ಲಿ ಖಾದಿ ಕಾರ್ಯವೇನೋ ಆರಂಭವಾಗಿದ್ದಿತು. ಖದ್ದರ್ ಪರಸ್ಪರ ಸಹಕಾರ ಸಂಘದ ಬಂಡವಾಳದಿಂದ ಖಾದಿ ಕಾರ್ಯದ ಉನ್ನತಿಯಾಗುವುದು

ಸಂಭವನೀಯವಾಗಿ ಕಾಣಲಿಲ್ಲ. ಖದ್ದರ್ ಪರಸ್ಪರ ಸಹಾಯ ಸಂಘದ ಬಂಡವಾಳಕ್ಕಾಗಿ ಪ್ರಪ್ರಥಮವಾಗಿ ನಂಜನಗೂಡಿನ ಹತ್ತಿರದ ಹದಿನಾರು ಗ್ರಾಮದಲ್ಲಿ ಉಪಾಧ್ಯಾಯರಾಗಿದ್ದ ತಗಡೂರವರೇ ಆದ ಶ್ರೀ ಬಾಲಚಂದ್ರಯ್ಯನವರು ಮನೆಮನೆಗೆ ಹೋಗಿ ಧಾನ್ಯ ಸಂಗ್ರಹಮಾಡಿ ಅದನ್ನು ರಾಯರಿಗೆ ಕೊಡಿಸಿದ್ದರು. ಅದನ್ನು ಮಾರಿ ಸೊಸೈಟಿಯ ಬಂಡವಾಳ ಮಾಡಿಕೊಂಡರು. ನೂಲುವ ಹಾಗೂ ನೇಯ್ಗೆ ಕೆಲಸಕ್ಕೆ ಸಹಕಾರ ಸಂಘದ ಸೀಮಿತ ಬಂಡವಾಳದಿಂದ ಸಾಧ್ಯವಾಗುತ್ತಿರಲಿಲ್ಲ. ಆದ್ದರಿಂದ ರಾಯರು ಒಂದು ಯೋಚನೆಮಾಡಿದರು. ರಾಜ್ಯದ ಕೆಲವು ಧನಿಕರು ಹಾಗೂ ವ್ಯಾಪಾರಸ್ಥರಿಂದ ಹಣ ವಸೂಲು ಮಾಡಬೇಕೆಂಬುದು. ಅದಕ್ಕಾಗಿ ಮೈಸೂರು ಬೆಂಗಳೂರು ಇಲ್ಲಿ ವಸೂಲುಮಾಡತೊಡಗಿದರು. ಆದರೆ ಇದರಿಂದ ಸಾಕಷ್ಟು ಯಶಸ್ಸು ಲಭಿಸಲಿಲ್ಲ. ಸತ್ಯಾಗ್ರಹದ ಹಾದಿಯನ್ನು ಹಿಡಿದರು. ಉಪವಾಸ ಸತ್ಯಾಗ್ರಹ. ಅದೂ ಕೇವಲ 50 ರೂಪಾಯಿಗಳಷ್ಟು ಒಬ್ಬೊಬ್ಬ ಧನಿಕನು ಕೊಡಬೇಕೆಂಬುದು. ನಾಲ್ಕಾರು ಕಡೆ ಉಪವಾಸ ಮಾಡಿದರು. ಆಗಿನ ಪ್ರಸಿದ್ಧ ವಾಣಿಜ್ಯೋದ್ಯಮಿ ಶ್ರೀ ಸುಬ್ಬರಾಮಶೆಟ್ಟರು, ಗರುಡಾಚಾರ್ರವರು ಪ್ರತಿಭಟಿಸಿದರೂ ಕಡೆಗೆ ರಾಯರ ಕರೆಗೆ ಓಗೊಟ್ಟು ವಂತಿಗೆಯನ್ನು ಕೊಟ್ಟರು. ಮೈಸೂರಿನ ಪ್ರಸಿದ್ಧ ವರ್ತಕ ಶ್ರೀ ಡಿ. ಬನುಮಯ್ಯನವರೂ ಉದಾರವಾಗಿ 500 ರೂ. ಕೊಟ್ಟಿದ್ದನ್ನೂ ಇಲ್ಲಿ ಸ್ಮರಿಸಬಹುದಾಗಿದೆ. ಅಂತೂ ಖಾದಿ ಕಾರ್ಯಕ್ಕೆ ಸಾಕಾಗುವಷ್ಟು ನಿಧಿ ಸಂಗ್ರಹವಾಗಿ ಕೆಲಸ ಉತ್ತಮ ರೀತಿಯಿಂದ ಮುಂದುವರಿಯಿತು. ಮೈಸೂರಿನಲ್ಲಿ ಇಂದ್ರಭವನದ ಮಾಲೀಕರಾದ ಶ್ರೀ ಬದರೀಪ್ರಸಾದರು ರಾಯರ ನಿಸ್ವಾರ್ಥ ಸೇವೆಗಾಗಿ ಮನಸೋತು ಅವರ ಪ್ರತಿಯೊಂದು ಕಾರ್ಯದಲ್ಲೂ ಸಹಾಯಕರಾಗಿದ್ದು ನೆರವು ನೀಡುತ್ತಾ ಬಂದಿದ್ದಾರಲ್ಲದೆ ಅವರ ಮನೆಯ ಯೋಗಕ್ಷೇಮವನ್ನೂ ಸಹ ನೋಡಿಕೊಳ್ಳುತ್ತಿದ್ದರು.

ರಾಯರು ಕೇವಲ ರಚನಾತ್ಮಕ ಕಾರ್ಯಗಳಲ್ಲೇ ನಿರತರಾಗುತ್ತಿರಲಿಲ್ಲ. ಖಾದಿ ಸಂಸ್ಥೆಯನ್ನು ರಚಿಸಿ ರೂಪುಗೊಳಿಸಿದರು. ಅದರ ಕೆಲಸ ಕಾರ್ಯಗಳನ್ನು ಶ್ರೀ ಬಾಲಚಂದ್ರಪ್ಪನವರಿಗೂ ಶ್ರೀ ಎಸ್. ಶ್ರೀಕಂಠಯ್ಯನವರಿಗೂ ಒಪ್ಪಿಸಿದ್ದರು. ಬಾಲಚಂದ್ರಯ್ಯನವರು ರಾಯರ ಕೆಲಸ ಕಾರ್ಯಗಳಲ್ಲಿ ಬಲಗೈಬಂಟರಾಗಿದ್ದವರು. ಅಂತೆಯೇ ಶ್ರೀಕಂಠಯ್ಯನವರೂ ರಾಯರ ಸೋದರರು. ಇವರು ಸೇವಾಭಾವನೆಯಿಂದ ಕಾರ್ಯ ನಿರ್ವಹಿಸುತ್ತ ಬಂದರು. ರಾಯರು ಸಂಸ್ಥೆಯ ಹೊರಗಿನ ಜವಾಬ್ದಾರಿಯನ್ನು ಮಾತ್ರ ನಿರ್ವಹಿಸುತ್ತಿದ್ದರು.

ಸತ್ಯಾಗ್ರಹಾಶ್ರಮವು ರಾಯರ ರಾಜಕೀಯ ಚಟುವಟಿಕೆಯ ಕೇಂದ್ರಬಿಂದುವಾಗಿದ್ದಿತು. ರಾಯರ ಆರಂಭ ಕಾರ್ಯಚಟುವಟಿಕೆ ಪ್ರಾರಂಭವಾದದ್ದು ತಗಡೂರು ಗ್ರಾಮದ ಮಧ್ಯಭಾಗದಲ್ಲಿರುವ ಲಕ್ಷ್ಮೀನರಸಿಂಹಸ್ವಾಮಿಯ ಪುರಾತನ ಪಾಳುಗುಡಿಯಲ್ಲಿ. ದೇವರಿಗೆ ಪೂಜೆಪುನಸ್ಕಾರವಿರಲಿಲ್ಲ. ಮುಚ್ಚಿದ ಗರ್ಭಗುಡಿ ಹಾವುಗಳಿಗೂ ಕಪಟದ

ಹಕ್ಕಿಗಳಿಗೂ ಆವಾಸಸ್ಥಾನವಾಗಿದ್ದಿತು. ಈ ತಾಣವನ್ನು ರಾಯರು ಆರಿಸಿಕೊಂಡರು. ಗರ್ಭಗುಡಿಯ ಪಕ್ಕದ ಸಭಾಂಗಣದಲ್ಲಿ ಒಂದು ಮೂಲೆಯಲ್ಲಿ ಸಣ್ಣದಾದ ಒಂದು ಕೋಣೆಯನ್ನು ನಿರ್ಮಿಸಿಕೊಂಡು ಅಲ್ಲಿ ಇವರ ವಾಸ. ಊರಲ್ಲಿ ತಿರುಗಾಡಿಕೊಂಡು ಒಂದಿಷ್ಟು ಸಂಗ್ರಹಿಸಿದ ಧಾನ್ಯದಲ್ಲಿ ಇವರ ಅಡಿಗೆ ಊಟ. ಇದನ್ನು ನೋಡಲಾರದ ಗ್ರಾಮದ ಜನ ದಿನಕ್ಕೊಬ್ಬರ ಮನೇಲಿ ಊಟ ಹಾಕುವ ಏರ್ಪಾಡಾಯ್ತು. ಇವರಿಗೆ ಊಟದ ಚಿಂತೆ ದೂರವಾಯ್ತು. ದೇಶದ ಪ್ರಮುಖ ಮುಂದಾಳುಗಳ ಭಾವಚಿತ್ರಗಳು ಅದರ ವಿವರಣೆ, ಮುಂದಾಳುಗಳ ಕಾರ್ಯಚಟುವಟಿಕೆ, ಅವರ ತ್ಯಾಗ, ದೇಶಭಕ್ತಿ ಇತ್ಯಾದಿಗಳನ್ನು ಜನರಿಗೆ ಬೋಧಿಸಿ ಅವರ ಗಮನವನ್ನು ರಾಷ್ಟ್ರದ ಕಡೆ ತಿರುಗಿಸುವ ಪ್ರಯತ್ನ ಮಾಡತೊಡಗಿದರು. ಇವರ ಕರೆಗೆ ಓಗೊಟ್ಟು ಜನಪ್ರವಾಹವೇ ಇವರ ಕಡೆ ಬರತೊಡಗಿತು. ವರ್ಷದಲ್ಲಿ ಪ್ರಾಯಶಃ ಚೈತ್ರಮಾಸ ಇರಬಹುದು, 7 ದಿನ ಅಖಂಡ ಭಜನೆ. ಕಡೇ ದಿನ ಶ್ರೀರಾಮನ ಹಾಗೂ ಗಾಂಧೀಜಿಯವರ ಭಾವಚಿತ್ರದ ಮೆರವಣಿಗೆ. ಇದು ಬಹು ವಿಜೃಂಭಣೆಯಿಂದ ನಡೆಯತೊಡಗಿತು.

ಗ್ರಾಮದ ಕೆಲ ಮುಖಂಡರಿಗೆ ಇವರ ಬೆಳವಣಿಗೆ ಸಹಿಸದಾಯ್ತು. ಸರ್ಕಾರಕ್ಕೆ ಅರ್ಜಿ ಬರೆದು ಈತ ಜನಗಳನ್ನು ಎತ್ತಿಕಟ್ಟಿ ಸರ್ಕಾರದ ವಿರುದ್ಧ ಕೆಲಸಮಾಡುತ್ತಿದ್ದಾನೆ ಎಂದು ದೂರಿದರು. ಸರಿ, ಅಮಲ್ದಾರರೂ ಪೊಲೀಸ್ ಇನ್ಸ್‌ಪೆಕ್ಟರೂ ಒಂದು ದಿನ ಇದ್ದಕ್ಕಿದ್ದಂತೆ ಬಂದು ಬೂಟ್ಸು ಕಾಲಲ್ಲಿ ದೇವಸ್ಥಾನ ಪ್ರವೇಶಿಸಿ ರಾಯರ ಎಲ್ಲ ಸಾಮಾನನ್ನೂ ಜಪ್ತಿಮಾಡಿ ಕೊಂಡೊಯ್ದರು. ಈ ಸಮಯದಲ್ಲಿ ರಾಯರು ಊರಲ್ಲಿ ಇರಲಿಲ್ಲ. ಬಂದಮೇಲೆ ಸಮಾಚಾರ ತಿಳಿದು ಇವರ ಅಕ್ರಮ ಪ್ರವೇಶ ಮತ್ತು ಬೂಟ್ಸು ಕಾಲಲ್ಲಿ ದೇವಸ್ಥಾನ ಪ್ರವೇಶಮಾಡಿ ಅಪವಿತ್ರಗೊಳಿಸಿದ್ದು ಇವೆಲ್ಲವನ್ನೂ ಸವಿಸ್ತಾರವಾಗಿ ವಿವರಿಸಿ ಮಹಾರಾಜರ ವರೆಗೂ ದೂರನ್ನು ಇತ್ತರು. ಇದರ ಪರಿಣಾಮವಾಗಿ ಇನ್ಸ್‌ಪೆಕ್ಟರೂ ಅಮಲ್ದಾರರೂ ತಮ್ಮ ತಪ್ಪನ್ನು ಸಭೆಯ ಮುಂದೆ ಒಪ್ಪಿಕೊಂಡು ರಾಯರ ಎಲ್ಲ ಸಾಮಗ್ರಿಗಳನ್ನೂ ತಗಡೂರಿಗೇ ತರಿಸಿ ಎಲ್ಲರ ಸಮ್ಮುಖ ರಾಯರಿಗೆ ಒಪ್ಪಿಸಿದರು. ಇಲ್ಲಿಂದ ಆರಂಭವಾದ ಚಳವಳಿ ಬೃಹತ್ತಾಗಿ ಬೆಳೆದು ಸ್ವಾತಂತ್ರ್ಯ ಸಂಗ್ರಾಮದಲ್ಲೂ ಸಹ ರಾಯರು ಮುಂಚೂಣಿಯಲ್ಲಿದ್ದು ಪ್ರಸಿದ್ಧರಾದರು.

ಶ್ರೀ ತಗಡೂರು ರಾಮಚಂದ್ರರಾಯರು ಕೇವಲ ಖಾದಿ ಕಾರ್ಯಕ್ರಮವನ್ನೇ ಹಮ್ಮಿಕೊಂಡಿರಲಿಲ್ಲ. ಖಾದಿ ಕಾರ್ಯ ಇವರ ಇತರ ಚಟುವಟಿಕೆಗಳ ಕೇಂದ್ರ ಬಿಂದು ಮಾತ್ರವಾಗಿದ್ದಿತು. ಅಸ್ಪೃಶ್ಯತಾ ನಿವಾರಣೆ, ಸಾಮಾಜಿಕ ನ್ಯಾಯ, ಮದ್ಯಪಾನ ನಿವಾರಣೆ ಇತ್ಯಾದಿ ಕೆಲಸಗಳೂ ಇವರ ಕಾರ್ಯವ್ಯಾಪ್ತಿಗೆ ಒಳಪಟ್ಟಿದ್ದವು. ಅಸ್ಪೃಶ್ಯತಾ ನಿವಾರಣೆ ಕಾರ್ಯಕ್ರಮದಲ್ಲಿ ಇವರ ಒಂದು ವೈಶಿಷ್ಟ್ಯವಿದ್ದಿತು. ಹರಿಜನರ ದೌರ್ಬಲ್ಯ ವನ್ನು ಉಪಯೋಗಿಸಿಕೊಂಡು ಕ್ರೈಸ್ತ ಪಾದರಿಗಳು ಅವರಿಗೆ ಹಣ, ಹೆಣ್ಣು, ಔಷಧಿ ಇತ್ಯಾದಿಗಳ ಪ್ರಲೋಭನೆಯಿಂದ ಅನೇಕರನ್ನು ಮತಾಂತರಗೊಳಿಸಿ ಕ್ರಿಶ್ಚಿಯನ್ ಮತಕ್ಕೆ

ಪರಿವರ್ತಿಸಿಕೊಳ್ಳುತ್ತಿದ್ದರು. ಈ ಕಾರ್ಯಕ್ರಮ ಸತತವಾಗಿ ನಡೆಯುತ್ತಿದ್ದಿತು. ಆ ಕಾಲದಲ್ಲಿ ಒಮ್ಮೆ ಮತಾಂತರಗೊಂಡವರು ಪುನಃ ಸ್ವಂತ ಮತಕ್ಕೆ ಹಿಂತಿರುಗುವಂತಿರಲಿಲ್ಲ. ಸಮಾಜವು ಅವರನ್ನು ಸೇರಿಸಿಕೊಳ್ಳುತ್ತಿರಲಿಲ್ಲ. ಈ ಒಂದು ಅನುಕೂಲ ಪರಿಸ್ಥಿತಿ ಕ್ರಿಶ್ಚಿಯನ್ ಪಾದ್ರಿಗಳಿಗೆ ಲಭಿಸುತ್ತಿತ್ತು. ಇದಕ್ಕಾಗಿ ರಾಯರು ಶ್ರಮವಹಿಸಿ ಸಮಾಜದ ಮನ ಒಲಿಸಿದರು. ಅನೇಕ ಮತಾಂತರಗೊಂಡಿದ್ದ ಹರಿಜನರನ್ನು ಪುನಃ ಸ್ವಂತ ಜಾತಿಗಳಿಗೆ ಸೇರಿಸಿಕೊಳ್ಳತೊಡಗಿದರು. ಇದಕ್ಕೆ ಹವನ ಹೋಮ ಮಂತ್ರ ಪುರಸ್ಸರವಾಗಿ ಅವರನ್ನು ವಾಪಸ್ಸು ತೆಗೆದುಕೊಳ್ಳಲಾಗಿತ್ತು. ಇದರ ಪೌರೋಹಿತ್ಯವನ್ನು ಮೈಸೂರಿನ ಶ್ರೀ ಶೇಷಾದ್ರಿ ಎಂಬವರು ನಿರ್ವಹಿಸುತ್ತಿದ್ದರು. ಶ್ರೀ ಎಂ. ಎನ್. ಜೋಯಿಸರೂ ರಾಯರ ಜತೆಗೂಡುತ್ತಿದ್ದರು.

ಸವರ್ಣೀಯರಲ್ಲಿ ಕಣಿಯರೆಂಬ ಒಂದು ಪಂಗಡದವರು ಇತ್ತ ಹರಿಜನರೂ ಅಲ್ಲ ಅತ್ತ ಉತ್ತಮರೂ ಅಲ್ಲ, ಈ ಪರಿಸ್ಥಿತಿ ಅವರದಾಗಿತ್ತು. ಅವರು ವೈಷ್ಣವ ಸಂಪ್ರದಾಯದವರು. ನೇಯ್ಗೆ ಅವರ ಕಸುಬು. ಇವರನ್ನು ದೇವಸ್ಥಾನಕ್ಕೆ ಸೇರಿಸುತ್ತಿರಲಿಲ್ಲ. ಈ ಜನಾಂಗದವರ ದುರವಸ್ಥೆಯನ್ನು ಕಂಡು ರಾಯರು ಅದಕ್ಕಾಗಿ ಚಳವಳಿಯನ್ನೇ ನಡೆಸಬೇಕಾಗಿ ಬಂದಿತು. ಟಿ. ನರಸೀಪುರದ ಗುಂಜಾ ನರಸಿಂಹಸ್ವಾಮಿ ದೇವಾಲಯಕ್ಕೆ ಅವರ ಪ್ರವೇಶ ಮಾಡಿಸುವ ಕಾರ್ಯಕ್ರಮ ಹಾಕಿಕೊಂಡರು. ಅನೇಕ ಜನರು ಈ ಕಾರ್ಯಕ್ಕೆ ನೆರವಾಗಿ ನಿಂತರು. ಕಡೆಗೆ ಜನತೆ ಮತ್ತು ಸರ್ಕಾರದೊಂದಿಗೆ ಹೋರಾಡಿ ಅವರಿಗೆ ಸಾಮಾಜಿಕ ಸ್ಥಾನಮಾನ ತಂದುಕೊಟ್ಟರು. ಇವರು ನಿರಂತರ ಹೋರಾಟಗಾರರು. ಭೂದಾನ ಚಳವಳಿಯಲ್ಲೂ ಪೂಜ್ಯ ವಿನೋಬಾರ ಅನುಯಾಯಿ. ಗ್ರಾಮದಾನ ಗ್ರಾಮಸ್ವರಾಜ್ಯದಿಂದಲೇ ದೇಶದ ಏಳಿಗೆ ಎಂಬುದು ಇವರ ಆದರ್ಶ. ತಗಡೂರು ಖಾದಿ ಸಂಸ್ಥೆ ತನ್ನದೇ ಆದ ವೈಶಿಷ್ಟ್ಯವನ್ನು ಪಡೆದಿತ್ತು. ಅದರ ಸಂಪಾದನೆಯಲ್ಲಿ ಸುಮಾರು 1 ಲಕ್ಷದಷ್ಟು ಮೌಲ್ಯದ ಹೈಸ್ಕೂಲು ಕಟ್ಟಡವನ್ನು ತಗಡೂರಲ್ಲಿ ಕಟ್ಟಿಸಿಕೊಟ್ಟಿದೆ.

ಶ್ರೀ ತಗಡೂರು ರಾಮಚಂದ್ರರಾಯರು ತಮ್ಮ ಇಡೀ ಜೀವನವನ್ನು ನಿಸ್ವಾರ್ಥ ಸೇವೆಗಾಗಿ ಮುಡುಪಿಟ್ಟು ದೀನದರಿದ್ರರ ಸೇವೆಯಲ್ಲಿಯೇ ತಮ್ಮ ಈ ಇಳಿವಯಸ್ಸಿನಲ್ಲೂ ಕಾರ್ಯತತ್ಪರರಾಗಿದ್ದಾರೆ. ತಗಡೂರು ಖಾದಿ ಸಂಸ್ಥೆಯನ್ನು ಬೆಳಸಿ ಪೋಷಿಸಿಕೊಂಡು ಬಂದು ಈಗ ಅದನ್ನು ಕರ್ನಾಟಕ ಸರ್ವೋದಯ ಸಂಘಕ್ಕೆ ವಹಿಸಿಕೊಟ್ಟಿರುತ್ತಾರೆ. ಇವರ ಬಹುಮುಖವಾದ ಸೇವೆ ಮತ್ತು ಗಾಂಧೀಪ್ರಣೀತ ರಚನಾತ್ಮಕ ಕಾರ್ಯಗಳನ್ನು ಗುರುತಿಸಿ ಪ್ರತಿಷ್ಠಿತ ಜಮ್ನಾಲಾಲ್ ಬಜಾಜ್ ಪ್ರಶಸ್ತಿಯಾದ ಒಂದು ಲಕ್ಷ ರೂ. ಗೌರವಧನ ಹಾಗೂ ಪದಕವನ್ನು ಕೊಟ್ಟು ಗೌರವಿಸಿದೆ. ಇದರ ಕೀರ್ತಿಯು ಮೈಸೂರು ರಾಜ್ಯದ ಖಾದಿ ಕಾರ್ಯಕರ್ತರು ಹಾಗೂ ತಗಡೂರು ಬದನವಾಳ ಖಾದಿ

ಕಾರ್ಯಕರ್ತರಿಗೂ ಸಂದ ಗೌರವವಾಗಿದೆ ಎಂಬುದು ಹೆಮ್ಮೆಯ ವಿಷಯ. ಅಲ್ಲದೆ ರಾಯರ ಕೀರ್ತಿಯು ಭಾರತದೇಶವ್ಯಾಪಿಯಾಗಿದೆ.

ಮಹಾತ್ಮಾ ಗಾಂಧಿಯವರ ನಿಧನಾನಂತರ ಅವರು ಸ್ಥಾಪಿಸಿದ್ದ ರಚನಾತ್ಮಕ ಸಂಘ ಸಂಸ್ಥೆಗಳನ್ನೆಲ್ಲಾ ಒಂದುಗೂಡಿಸಿ ಅದಕ್ಕೆ ಸರ್ವ ಸೇವಾ ಸಂಘ (ಅಖಿಲ ಭಾರತ) ಎಂಬುದಾಗಿ ಹೆಸರಿಟ್ಟು ಒಂದೇ ಆಡಳಿತ ಹಾಗೂ ಪೂಜ್ಯ ವಿನೋಬಾಜಿಯವರ ಮಾರ್ಗದರ್ಶನದಿಂದ ಕೆಲಸ ಮುಂದುವರಿಯಲು ಏರ್ಪಾಡಾಯ್ತು. ಈ ಸಂದರ್ಭದಲ್ಲಿ ಕರ್ನಾಟಕ ಚರಕಾ ಸಂಘವು ತನ್ನ ಚಟುವಟಿಕೆಗಳನ್ನು ವಿಕೇಂದ್ರೀಕರಿಸಿ ಆಯಾಯ ಸ್ಥಳೀಯ ಸಂಸ್ಥೆಗಳಿಗೇ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಟ್ಟಿತು. ಇದೇ ಸಂದರ್ಭದಲ್ಲಿ ತನ್ನ ವ್ಯಾಪಾರದ ಭಂಡಾರವನ್ನು ಸಹ ಬೆಂಗಳೂರಿನಲ್ಲಿ ಕೋಟೆ ವಸ್ತ್ರಾಲಯ ಎಂದು ಹೆಸರಿದ್ದುದನ್ನು ಈಗಿನ ಕರ್ನಾಟಕ ಸರ್ವೋದಯ ಸಂಘಕ್ಕೆ ವಹಿಸಿಕೊಟ್ಟಿತು. ಈ ಸಂಘವು ಒಂದು ಟ್ರಸ್ಟ್ ಕಮಿಟಿ ಇದರಲ್ಲಿ ಮಾನ್ಯ ಶ್ರೀ ವಿ. ಎಸ್. ನಾರಾಯಣ ರಾಯರು ಸುಪ್ರಸಿದ್ದ ಕಾಂಗ್ರೆಸ್ ಕಾರ್ಯಕರ್ತರೂ ವಿಧಾಯಕ ಕಾರ್ಯಕರ್ತರೂ ಆಗಿದ್ದವರು. ಮತ್ತು ಕೋಲಾರದ ಸುಪ್ರಸಿದ್ಧ ವಕೀಲರೂ ಕಾಂಗ್ರೆಸ್ಸಿಗರೂ ಆಗಿದ್ದ ಶ್ರೀ ಪಟ್ಟಾಭಿರಾಮಯ್ಯರವರೂ ಕೆಲವು ಕಾಲ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ರವರೂ ಕ್ರಮವಾಗಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ. ಆರಂಭದಿಂದಲೂ ಸಂಘದ ಸೆಕ್ರೆಟರಿಯವರಾಗಿದ್ದು ಸೇವೆ ಸಲ್ಲಿಸಿದ್ದ ಶ್ರೀ ಹೆಚ್. ಆರ್. ವೆಂಕಟರಮಣಯ್ಯಂಗಾರ್ರವರೂ ಸದ್ಯದಲ್ಲಿ ಅಧ್ಯಕ್ಷರಾಗಿದ್ದಾರೆ. ಚರಕಾ ಸಂಘದಲ್ಲಿದ್ದು ನಿಸ್ಪೃಹ ಸೇವೆ ಸಲ್ಲಿಸಿದ್ದು ನಿಧನರಾದ ಶ್ರೀ ಹೆಚ್. ಎಸ್. ನಂಜುಂಡರಾಯರೂ, ತಿರುಮಲರಾಯರೂ ಸ್ಮರಣೀಯರಾಗಿದ್ದಾರೆ.

ಕರ್ನಾಟಕ ಚರಕಾ ಸಂಘವು ಶ್ರೀ ಹೆಚ್. ಆರ್. ವೆಂಕಟರಮಣ ಅಯ್ಯರ್ರವರ ನೇತೃತ್ವದಲ್ಲಿ ಶ್ರೀ ವೆಂಕಟರಾಮಯ್ಯನವರು, ದಿ॥ ತಿರುಮಲರಾಯರು, ಶ್ರೀ ನಾಗರಾಜ ರಾಯರು, ಶ್ರೀ ರಾಮಣ್ಣನವರು ಮುಂತಾದ ಗಣ್ಯರ ಸಹಕಾರ ಸಹಯೋಗದಿಂದ ಒಂದು ಆದರ್ಶ ಕೇಂದ್ರವಾಗಿ ಮುಂದುವರಿಯುತ್ತಿದೆ. ಇದರ ಶಾಖಾ ಕೇಂದ್ರಗಳು ಮಲ್ಲಾಡಿಹಳ್ಳಿ, ಚಿಕ್ಕಜಾಜೂರು, ಹೊಳಲ್ಕೆರೆ ಇವು ಚಿತ್ರದುರ್ಗ ಜಿಲ್ಲೆಯವು, ತಗಡೂರು ಕೇಂದ್ರವೂ ಈಚೆಗೆ ಕರ್ನಾಟಕ ಸರ್ವೋದಯ ಸಂಘದ ಆಡಳಿತಕ್ಕೆ ವಹಿಸಲ್ಪಟ್ಟಿದೆ. ಇವೆಲ್ಲಾ ಉತ್ಪಾದನಾ ಕೇಂದ್ರಗಳು. ಚಿಕ್ಕಮಗಳೂರು, ಅರಸೀಕೆರೆ, ಬೆಂಗಳೂರು ಕೋಟೆ ವಸ್ತ್ರಾಲಯ, ಹೊಳಲ್ಕೆರೆ, ಚಿಕ್ಕಬಳ್ಳಾಪುರ, ಗೌರಿಬಿದನೂರು ಇವು ವ್ಯಾಪಾರ ಕೇಂದ್ರಗಳು.

ಸುಮಾರು 1940–42ರಲ್ಲಿ ಮೈಸೂರು ಚರಕಾ ಪ್ರಚಾರ ಸಂಘ ಸ್ಥಾಪಿತವಾಯ್ತು. ಇದು ಚಿತ್ರದುರ್ಗದ ಮದಕೇರಿಪುರದಲ್ಲಿ ರಚಿತವಾಯ್ತು. ಅಧ್ಯಕ್ಷರು

ಶ್ರೀ ಟಿ ಸುಬ್ರಹ್ಮಣ್ಯರವರು ಮೈಸೂರು ಸರ್ಕಾರದಲ್ಲಿ ಮಂತ್ರಿಗಳಾಗಿದ್ದವರು. ಶ್ರೀ ಎಸ್. ವಾಸುದೇವರಾಯರು ಇದರ ಕಾರ್ಯದರ್ಶಿಗಳಾಗಿ ಮುಂದುವರಿಯುತ್ತಿದ್ದಾರೆ. ಇದಕ್ಕೆ ಒಂದು ಸಂಚಾಲಕ ಮಂಡಲಿಯೂ ಇದೆ. ಶಿವಮೊಗ್ಗದ ಶ್ರೀ ಎಸ್. ಆರ್. ನಾಗಪ್ಪ ಶೆಟ್ಟರೂ ಕೆಲಕಾಲ ಉಪಾಧ್ಯಕ್ಷರಾಗಿದ್ದರು. ಶ್ರೀ ನಾಗಪ್ಪ ಶೆಟ್ಟರೂ ಶಿವಮೊಗ್ಗಾದಲ್ಲಿ ಒಂದು ಖಾದಿ ಭಂಡಾರವನ್ನು ನಡೆಸುತ್ತಿದ್ದರು. ಈ ಸಂಘವು ಖಾದಿ ಉತ್ಪತ್ತಿ ಮತ್ತು ಮಾರಾಟದ ವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಿಕೊಂಡು ಬಂದಿದೆ. ಈ ರೀತಿಯಿಂದ ಮೈಸೂರು ಪ್ರಾಂತ್ಯದ ಎಲ್ಲ ಖಾದಿ ಕೇಂದ್ರಗಳಿಗೂ ಬದನವಾಳು ಸ್ಫೂರ್ತಿಯ ನೆಲೆಯಾಗಿದ್ದಿತು.

ಖಾದಿ ಉತ್ಪಾದನೆಯೇನೋ ವೃದ್ಧಿಯಾಗುತ್ತಾ ಬಂದಿತು. ಆದರೆ ಉತ್ಪಾದನಾ ಪ್ರಮಾಣಕ್ಕೆ ತಕ್ಕ ಹಾಗೆ ವ್ಯಾಪಾರದ ಪ್ರಮಾಣ ಹೆಚ್ಚಲಿಲ್ಲ. ಒಮ್ಮೆ ಬದನವಾಳು ಖಾದಿ ಕೇಂದ್ರದಲ್ಲಿ ಉತ್ಪತ್ತಿಯಾದ ಖಾದಿಯು ಬಹಳಷ್ಟು ಉಳಿದುಹೋಗಿದ್ದಿತು. ನೂಲುವವರಿಗೆ ನೇಯ್ಗೆಯವರಿಗೆ ಮಜೂರಿ ಹಣ ಕೊಡಲೂ ಬಹಳ ತೊಡಕಾಯಿತು. ಹಾಗೂ ಹೀಗೂ ನೂಲುವವರಿಗೂ ನೇಯ್ಗೆಯವರಿಗೂ ಅವರ ದುಡಿತದ ಮಜೂರಿ ಪೂರೈಸಲಾಯ್ತು. ಆದರೆ ಕಾರ್ಯಕರ್ತರಿಗೆ ಸಂಬಳ ಬಟವಾಡೆ ಮಾಡಲು ಸಾಧ್ಯ ವಾಗಲಿಲ್ಲ. ಈ ಸಂದರ್ಭದಲ್ಲಿ ಆಗಿನ ವ್ಯವಸ್ಥಾಪಕರಾಗಿದ್ದ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಒಬ್ಬ ಸಹಾಯಕನೊಡನೆ, ರೈಲಿನಲ್ಲಿ ಖಾದಿ ಟವಲ್ಲು ಲುಂಗಿಗಳು ಇತ್ಯಾದಿ ಬಟ್ಟೆಗಳನ್ನು ಮಾರಾಟಮಾಡತೊಡಗಿದರು. ನರಸಾಂಬುಧಿ ಯಿಂದ ಅರಸೀಕೆರೆಯವರೆಗೂ ರೈಲಿನಲ್ಲಿ ಈ ವ್ಯಾಪಾರ ಸಾಗುತ್ತಿತ್ತು. ಈ ಹಣದಿಂದ ಕೆಲವು ಕಾರ್ಯಕರ್ತರುಗಳಿಗೆ ವೇತನ ಕೊಡಲು ಸಾಧ್ಯವಾಯಿತು.

ಈ ವ್ಯವಸ್ಥೆಯನ್ನು ನೋಡಿ ಅರಿವುಮಾಡಿಕೊಂಡ ಇಲಾಖೆಯ ಡೈರೆಕ್ಟರ್‌ರವರು ಪರಿಸ್ಥಿತಿಯನ್ನು ವಿವರಿಸಿ ಸರ್ಕಾರದಿಂದ ಮೂಲಧನವಾಗಿ ಮತ್ತೆ 35,000 ರೂ. ಗಳನ್ನು ತರಿಸಿಕೊಟ್ಟರು.

ಒಮ್ಮೆ ನೂಲುವವರಿಗೆ ಮಜೂರಿ ಹೆಚ್ಚಿಸಬೇಕೆಂದು ತೀರ್ಮಾನವಾದ ಮೇಲೆ ಚರಕಾ ಸಂಘದವರ ಆದೇಶದಂತೆ, ನೂಲುವವರ ಮಜೂರಿಯನ್ನು ದಿನಕ್ಕೆ 8 ಘಂಟೆ ಕೆಲಸಮಾಡುವವರಿಗೆ 50 ಪೈಸೆ (ಎಂಟಾಣೆ) ಯಂತೆ ಕೊಡಲು ನಿಶ್ಚಯವಾಗಿತ್ತು. ಇದನ್ನು ಬದನವಾಳು ನೂಲುವ ಪ್ರಾಂತದ ಮತ್ತು ಅದರ ಶಾಖಾ ಕೇಂದ್ರಗಳಲ್ಲೂ ಜಾರಿಗೆ ಕೊಡಲಾಯ್ತು.

ಕಬ್ಬಹಳ್ಳಿ ಗ್ರಾಮವು ಬಹಳ ಹೆಸರುವಾಸಿಯಾದ ದೊಡ್ಡ ಗ್ರಾಮ. ಅಲ್ಲಿಯೂ ಸಹ ಖಾದಿ ಕೇಂದ್ರವಿದ್ದಿತು. ನೂಲು ಮಜೂರಿ ಹೆಚ್ಚಿದ ಮೇಲೆ ಆ ಗ್ರಾಮದ ಸುತ್ತಲಿನ ಹಳ್ಳಿಗಳಲ್ಲಿ ಜಮೀನು ಕೆಲಸಕ್ಕೆ ಆಳುಗಳು ದೊರಕದೆ ಜಮೀನು ಮಾಲೀಕರಿಗೆ

ತೊಂದರೆಯಾಗತೊಡಗಿತು. ಜಮೀನು ಕೆಲಸಕ್ಕೆ ಹೆಣ್ಣಾಳಿಗೆ ದಿನಕ್ಕೆ 3 ಆಣೆಗಿಂತ ಹೆಚ್ಚು ದೊರಕುತ್ತಿರಲಿಲ್ಲ. ಇದರಿಂದ ಕೋಪಗೊಂಡ ಹೊಲದೊಡೆಯರು ಆಫೀಸಿನ ಮುಂದೆ ಬಂದು ಈ ಖಾದಿಕಾರ್ಯದಿಂದ ಜಮೀನು ಕೆಲಸಕ್ಕೆ ಆಳುಗಳು ಸಿಗುತ್ತಲಿಲ್ಲ ಇವರನ್ನು ಇಲ್ಲಿಂದ ಕಾಲ್ತೆಗೆಯುವಂತೆ ಮಾಡಬೇಕು ಮುಂತಾಗಿ ಗಲಾಟೆ ಮಾಡುತ್ತಿದ್ದರು. ಆಗ ಖಾದಿ ಕೆಲಸಗಾರರನ್ನು ಗಾಂಧಿ ಅನುಯಾಯಿಗಳೆಂದು ಗುರುತಿಸಿದ್ದು ಖಾದಿಜನ ಎಂತ ಕರೆಯುತ್ತಿದ್ದರು.

ಈ ಖಾದಿ ನೂಲು ವ್ಯಾಪಾರದಲ್ಲಿ ನಂಜನಗೂಡು-ಗುಂಡ್ಲುಪೇಟೆ ರಸ್ತೆಯ ಮಗ್ಗುಲಲ್ಲಿ ಒಂದು ನೂಲುಗರ ಸಂತೆಯನ್ನು ಏರ್ಪಡಿಸಲಾಗಿದ್ದಿತು. ಇದಕ್ಕೆ ಗಾಂಧಿಸಂತೆ ಎಂದು ಕರೆದರು. ಕೆಲವಾರು ವರ್ಷಗಳು ಕಳೆದ ಮೇಲೆ ಜಿಲ್ಲಾ ಬೋರ್ಡಿನ ಹೆಚ್. ಎಂ. ಚನ್ನಬಸಪ್ಪನವರು ಅಗತಗೌಡನಹಳ್ಳಿಯಲ್ಲಿ ಸಂತೆಯನ್ನು ಸ್ಥಾಪಿಸಿದರು. ಆದ್ದರಿಂದ ಖಾದಿ ಸಂತೆಯು ಕಲುಷಿತವಾಗಬಾರದೆಂದು ನೂಲು ಕೊಳ್ಳುವಿಕೆಯನ್ನು ನಿಲ್ಲಿಸಲಾಯ್ತು ಹಾಗೂ ಹಳ್ಳಿಗಳಿಗೆ ಹೋಗಿ ನೂಲು ಕೊಳ್ಳುವ ಪದ್ಧತಿಯನ್ನು ಜಾರಿಗೆ ತರಲಾಯ್ತು. ಇದರಿಂದ ನೂಲುವವರಿಗೂ ನೂಲು ಕೊಳ್ಳುವವರಿಗೂ ಅನುಕೂಲವಾಯ್ತು. ಯಾವ ಹಳ್ಳಿಗೆ ಹೋದರೂ ನೂಲುವ ಹೆಣ್ಣುಮಕ್ಕಳು ಗಾಂಧಿಯವರು ಬಂದಿದ್ದಾರೆಂದು ತಿಳಿದು ಚಾಪಡಿಯನ್ನು ಗುಡಿಸಿ ಒಂದು ಚಾಪೆಯನ್ನು ಹಾಸಿರುತ್ತಿದ್ದರು. ಗೊತ್ತಾದ ದಿನಗಳಲ್ಲಿ ಆ ಹಳ್ಳಿಗೆ ಕಾರ್ಯಕರ್ತರ ಪಾದಯಾತ್ರೆ ನಡೆಯುತ್ತಿತ್ತು. ಇನ್ನು ಕೆಲವು ಕಡೆಗಳಲ್ಲಿ ನೂಲುವವರು ತಮ್ಮ ನೂಲಿಗೆ ಹಣ ಬೇಕಾದಲ್ಲಿ ಆ ಊರಿನ ಅಂಗಡಿಗೆ ನೂಲು ಕೊಟ್ಟು ಹಣವನ್ನಾಗಲಿ ಸಾಮಾನನ್ನಾಗಲಿ ಒಯ್ಯುತ್ತಿದ್ದರು. ಆ ಹಳ್ಳಿಗೆ ಕೇಂದ್ರದವರು ಹೋದಾಗ ಆ ನೂಲನ್ನು ಅವರಿಂದ ಪಡೆದು ಅವರಿಗೆ ಹಣ ಪಾವತಿ ಮಾಡುತ್ತಿದ್ದರು. ಆಗಿನ ಮೈಸೂರು ರಾಜ್ಯದಲ್ಲಿ ಖಾದಿ ಮಾರಾಟಮಾಡುತ್ತಿದ್ದ ಸ್ಥಳಗಳಲ್ಲಿ ಶಿವಮೊಗ್ಗ ಟವನ್ನಲ್ಲಿ ಶ್ರೀ ಎಸ್. ನಾಗಪ್ಪ ಶೆಟ್ಟರು ಎಂಬವರು ಶ್ರೀ ಕೆ. ಶಂಕರಪ್ಪ ಎಂಬವರ ಸಹಾಯದೊಡನೆ ಒಂದು ಖಾದಿ ಭಂಡಾರವನ್ನು ಸ್ಥಾಪಿಸಿ ಖಾದಿ ಮಾರಾಟವನ್ನು ಬಹಳ ಹೆಚ್ಚಳವಾಗಿ ಆ ಜಿಲ್ಲೆಯಲ್ಲಿ ಪ್ರಚಾರ ವ್ಯಾಪಾರ ಎರಡನ್ನೂ ನಡೆಸಿದ್ದರು. ಮೈಸೂರು ಚರಕಾ ಪ್ರಚಾರ ಸಂಘದ ಶ್ರೀ ವಾಸುದೇವರಾಯರು ಚಿತ್ರದುರ್ಗ ಜಿಲ್ಲೆ ಶಿವಮೊಗ್ಗ ಜಿಲ್ಲೆ ಇವುಗಳ ಹಲವು ತಾಲ್ಲೂಕುಗಳಲ್ಲಿ ವ್ಯಾಪಾರದ ಅಂಗಡಿಗಳನ್ನು ತೆರೆದು ವ್ಯಾಪಾರ ವೃದ್ಧಿ ಪಡಿಸಿದ್ದರು. ಈಗ ಅವುಗಳೆಲ್ಲವೂ ಸ್ವತಂತ್ರ ಸಹಕಾರ ಸಂಘಗಳ ರೂಪದಲ್ಲಿ ಕೆಲಸ ನಿರ್ವಹಿಸುತ್ತಿವೆ.

ಕೆಲವು ಘಟನೆಗಳು

ಈ ಸಂದರ್ಭದಲ್ಲಿ ಖಾದಿ ಪ್ರಚಾರದ ವಿಷಯವಾಗಿ ಒಂದೆರಡು ಘಟನೆಗಳನ್ನು ನೆನಪಿಸಬಹುದು. ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕು ತಳಕು ಗ್ರಾಮ ಚಳ್ಳಕೆರೆ ಮೊಳಕಾಲ್ಮುರು ರಸ್ತೆ ಪಕ್ಕದಲ್ಲಿ ಒಂದು ಮುಸಾಫಿರ್‌ಖಾನೆಯಿದ್ದಿತು. ಆ ಸ್ಥಳವನ್ನು ಆಗಿನ ಜಿಲ್ಲಾ ಬೋರ್ಡು ಅಧ್ಯಕ್ಷರು ಶ್ರೀ ವೀರಬಸಪ್ಪನವರು ಬದನವಾಳು ನೂಲುವ ಪ್ರಾಂತದ ಶಾಖಾ ಕೇಂದ್ರವಾದ ತುರುವನೂರು ಖಾದಿ ಕೇಂದ್ರಕ್ಕೆ ವಹಿಸಿಕೊಟ್ಟಿದ್ದರು. ಖಾದಿ ಕೆಲಸಕ್ಕಾಗಿ ಅಲ್ಲಿನ ಸುತ್ತಮುತ್ತಲಿನ ನೇಕಾರರೆಲ್ಲ ವಾರಕ್ಕೊಮ್ಮೆ ತಾವು ನೇಯ್ದ ಬಟ್ಟೆಗಳನ್ನು ಕೊಟ್ಟು ಮಜೂರಿ ಪಡೆದುಕೊಂಡು ಹೋಗುತ್ತಿದ್ದರು. ಅಲ್ಲಿ ಕೆಲಸದಲ್ಲಿದ್ದ ಶ್ರೀ ಟಿ. ಕೆ. ರಾಮಕೃಷ್ಣ ಎಂಬವರು ರಜಾದ ಮೇಲೆ ಹೋಗಿದ್ದರು. ತುರುವನೂರಿಂದ ರಾತ್ರಿವೇಳೆ ನೂಲು ಹೇರಿಕೊಂಡು ಗಾಡಿಯಲ್ಲಿ ಶ್ರೀ ಡಿ. ರಂಗಶೆಟ್ಟರು ಒಬ್ಬ ಸಹಾಯಕನೊಡನೆ ತಳಕನ್ನು ತಲುಪಿದರು. ತಳಕು ಸುಪ್ರಸಿದ್ಧ ಸಾಹಿತಿ ಹಾಗೂ ಮೈಸೂರು ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾಗಿದ್ದ ತಳುಕಿನ ವೆಂಕಣ್ಣಯ್ಯನವರ ಊರು. ಅಲ್ಲಿ ಶನಿವಾರದ ದಿನ ಸಂತೆ ನಡೆಯುತ್ತಿತ್ತು. ಬೆಳಗಿನ ಕೆಲಸ ಮುಗಿಸಿಕೊಂಡು ಹೊಟ್ಟೆಪಾಡಿಗೆ ಶ್ರೀ ರಾಮಕೃಷ್ಣರವರು ರೂಮಿನಲ್ಲಿ ಹುಡುಕಾಡಿದರೂ ಒಂದು ಹಿಡಿ ಅಕ್ಕಿ ಸಿಗಲಿಲ್ಲ. ರೇಷನ್ ಕಾಲವಾದ್ದರಿಂದ ಬಹಿರಂಗ ಮಾರುಕಟ್ಟೆಯಲ್ಲಿ ಆಹಾರಧಾನ್ಯಗಳು ಸಿಗುತ್ತಿರಲಿಲ್ಲ. ಆಗ ಸಂತೆಯಲ್ಲಿ ದೊರೆತ ಚಪ್ಪರದವರೆಕಾಯಿ, ಬದನೆಕಾಯಿ, ಈರುಳ್ಳಿ, ಹಸಿರುಮೆಣಸಿನಕಾಯಿಯಲ್ಲಿ ಬೇಯಿಸಿ ತೆಂಗಿನ ತುರಿಯನ್ನು ಹಾಕಿಕೊಂಡು ಅದನ್ನೇ ಗಾಡಿಯವನಿಗೂ ತಿನ್ನಿಸಿ ತಾವೂ ಕೂಡ ಅದನ್ನೇ ತಿಂದು ಆ ದಿನದ ಕೆಲಸಗಳನ್ನು ತೂಗಿಸಿದರು. ನೇಕಾರರಿಂದ ಪಡೆದು ಅವರಿಗೆ ನೂಲು ಮತ್ತು ಹಣವನ್ನು ಪಾವತಿಮಾಡಿ ಕಳುಹಿಸಿ ಕೊಡಲಾಯಿತು. ಸಂಜೆಯ ಹೊತ್ತಿಗೆ ನಾವುಗಳು ಹಸಿದಿರುವ ವಿಷಯ ಶ್ರೀ ಶಂಕರಪ್ಪ ಎಂಬುವರ ಕಿವಿಗೆ ಬಿದ್ದಿತು. ಅವರು ಕಂಟ್ರಾಕ್ಟರರಾಗಿದ್ದರಲ್ಲದೆ ಪ್ರಸಿದ್ಧ ಸಾಹಿತಿ ಶ್ರೀ ತ. ರಾ. ಸು.ರವರ ಚಿಕ್ಕಪ್ಪನವರು. ಅವರು ಬಂದು ಒತ್ತಾಯ ಮಾಡಿ ತಮ್ಮ ಮನೆಗೆ ಕರೆದುಕೊಂಡುಹೋಗಿ ನಾವು ಮೂವರಿಗೂ ಬಿಸಿಯಾದ ಅಡುಗೆಮಾಡಿಸಿ ಊಟ ಹಾಕಿಸಿದರು. ಇವರು ಮಾನ್ಯ ಶ್ರೀ ತಳುಕಿನ ವೆಂಕಣ್ಣಯ್ಯನವರ ಸಹೋದರರೆಂದು ಆನಂತರ ತಿಳಿಯಿತು.

ಇನ್ನೊಮ್ಮೆ ತುರವನೂರಿನಲ್ಲಿ ಶ್ರೀ ಡಿ. ರಂಗಶೆಟ್ಟರು ಸಂಸಾರ ಸಮೇತ ವಾಸವಾಗಿದ್ದರು. ಅಲ್ಲಿ ಖಾದಿ ಕೇಂದ್ರವನ್ನು ಉತ್ತಮ ಸ್ಥಿತಿಗೆ ತಂದಿದ್ದರು. ಸುತ್ತಲಿನ ಗ್ರಾಮದಲ್ಲಿ ಖಾದಿ ಕೇಂದ್ರದ ಮೇಲೆ ಒಳ್ಳೆಯ ಅಭಿಪ್ರಾಯವಿದ್ದಿತು. ರೇಷನ್ ಕಾಲವಾದ್ದರಿಂದ ಆಹಾರಧಾನ್ಯಗಳೂ ಸರಿಯಾಗಿ ದೊರಕುತ್ತಿರಲಿಲ್ಲ. ಹೊರಗೆ ಹೋಗಿದ್ದವರು 2–3 ದಿನಗಳು ವಾಪಸ್ಸು ಬರುವುದಾಗಲಿಲ್ಲ. ಮಾಮೂಲಾಗಿ ಕೊಡುತ್ತಿದ್ದ ಅಂಗಡಿಗಳಲ್ಲಿ ಮತ್ತು ಇತರ ಅಂಗಡಿಗಳಲ್ಲೂ ಧಾನ್ಯಗಳು ಸಿಗಲಿಲ್ಲ. ಮನೆಗೆ

ಬಂದ ದಿನ ಎಲ್ಲರಿಗೂ ಏಕಾದಶಿಯೇ. ಹಸಿವೆಯಿಂದ ಇದ್ದುದರಿಂದ ಊಟಕ್ಕೆ ಕೇಳಲು ಮೌನವಾಗಿದ್ದರು. ಏನೂ ಮಾಡಿರಲಿಲ್ಲ. ಮಕ್ಕಳನ್ನು ಸಮಾಧಾನ ಪಡಿಸಿ ಆಹಾರ ಧಾನ್ಯಕ್ಕಾಗಿ ಪ್ರಯತ್ನಪಡಲಾಯ್ತು. ಆ ವೇಳೆಗೆ ಅಲ್ಲಿನ ಎಂ.ಎಲ್.ಎ. ಆಗಿದ್ದ ಹನುಮಕ್ಕ ಎಂಬವರಿಗೆ ಸುದ್ದಿ ತಿಳಿದು ಅವರ ಮನೆಯಿಂದ ಜೋಳದ ತರಿ ಮತ್ತು ಹಿಟ್ಟು ತೆಗೆದುಕೊಂಡು ಬಂದು ನಮ್ಮ ಮನೆಯಲ್ಲಿರಿಸಿ ನನ್ನ ಶ್ರೀಮತಿಯನ್ನು ತರಾಟೆಗೆ ತೆಗೆದುಕೊಂಡರು. ತಂದಿದ್ದ ಸಾಮಾನನ್ನು ಇರಿಸಿ ಹೋದರು. ಮತ್ತೆ ಊರ ಗೌಡರು, ರೆಡ್ಡಿಗಳ ಕಡೆಯಿಂದ ಒಂದೆರಡು ವಾರಗಳಿಗಾಗುವಷ್ಟು ದಿನಸಿ ಸಾಮಗ್ರಿಗಳು ಪ್ರಾಪ್ತವಾದವು. ಮುಂದೆ ಈ ರೀತಿ ಬರುವ ಸಾಮಗ್ರಿಗಳನ್ನು ವಾಪಸ್ಸು ಕಳಿಸ ಬೇಕಾಯ್ತು. ರಾತ್ರಿ ಪುಷ್ಕಳವಾದ ಊಟವಾದ ನಂತರ ಆಲೋಚನೆಮಾಡಿ ಮುಖ್ಯ ಕಛೇರಿಯಾದ ಬದನವಾಳು ಕೇಂದ್ರಕ್ಕೆ ಇಲ್ಲಿನ ಸ್ಥಿತಿಗಳನ್ನು ವಿವರಿಸಿ ಪತ್ರ ಬರೆದಿದ್ದಾಯ್ತು. ಆದರಲ್ಲಿ 100 ರೂ.ಗಳಷ್ಟು ಉಪಯೋಗಿಸಿಕೊಂಡಿರುವುದಾಗಿ ಬರೆದೆ. ಮೇಲೆ ಮಾನವೀಯತೆಯ ದೃಷ್ಟಿಯಿಂದ, ಸರ್ಕಾರಕ್ಕೆ ಪರಿಸ್ಥಿತಿಯನ್ನು ಮನವರಿಕೆ ಮಾಡುವ ಪತ್ರ ಬರೆದು 1000 ಅಡ್ವಾನ್ಸ್ ಮಂಜೂರ್ಮಾಡಿಸಿ ಕಳುಹಿಸಿಕೊಟ್ಟರು. ಅಲ್ಲಿಂದ ಮುಂದೆ ಬೇಕಾಗುವಷ್ಟು ಹಣವನ್ನುಪಯೋಗಿಸಿಕೊಂಡು ಆಹಾರದ ವಿಷಯದಲ್ಲಿ ತೊಂದರೆಯುಂಟಾಗಲಿಲ್ಲ.

ಒಮ್ಮೆ ಶ್ರೀ ರಾಜಾರಾಮಯ್ಯಂಗಾರ್ರವರು ಮತ್ತು ಶ್ರೀ ಡಿ. ರಂಗಶೆಟ್ಟರು ತುರುವನೂರಿಂದ ಹೊರಟು ಬಳ್ಳಾರಿ ಜಿಲ್ಲೆಗೆ ಸೇರಿದ ಹತ್ತಿರದ ಹಳ್ಳಿಗಳಲ್ಲಿ ಸಂಚರಿಸಿ, ರಾತ್ರಿವೇಳೆ ಜಗಳೂರು ತಾಲ್ಲೂಕು ಸೊಕ್ಕ ಗ್ರಾಮಕ್ಕೆ ತಲುಪಿದರು. ಇಂದಿನಂತೆ ಆಗ ಬಸ್ಸು ಸಂಚಾರವಿರಲಿಲ್ಲ. ರಾತ್ರಿ ಹೊತ್ತು ಶ್ರೀ ಚನ್ನಯ್ಯ ವಡೆಯರನ್ನು ವಿಚಾರಿಸಿದೆವು. ಶ್ರೀ ವಡೆಯರು ಖಾದಿ ಪ್ರೇಮಿಗಳು. ಡಬ್ಬಲ್ ಗ್ರಾಜುಯೇಟ್ ಆಗಿದ್ದರು. ರಾಜಕೀಯಕ್ಕೆ ಪ್ರವೇಶಿಸಿರಲಿಲ್ಲ. ಖಾದಿಧಾರಿಗಳೂ ಗಾಂಧಿವಾದಿಗಳೂ ಆಗಿದ್ದರು. ಆದರೆ ಅಂದು ಅವರು ಊರಲ್ಲಿರಲಿಲ್ಲ. ಮತ್ಯಾರೂ ಪರಿಚಿತರಿಲ್ಲ. ಮಾಡುವುದೇನು ? ಶ್ರೀ ರಾಜಾರಾಮಯ್ಯಂಗಾರ್ರವರು "ಅನಾಥೋ ದೈವ ರಕ್ಷಕಃ" ಎಂದು ಉದ್ಗಾರ ತೆಗೆದು, ಒಂದುಕಡೆ ಕುಳಿತುಕೊಂಡರು. ಅಲ್ಲಿಗೆ ಶ್ರೀ ಭೀಮರಾಯರೆಂಬವರು ತಾವಾಗಿಯೇ ಬಂದು ನಮ್ಮನ್ನು ವಿಚಾರಿಸಿಕೊಂಡು ನಮ್ಮನ್ನು ತಮ್ಮ ಮನೆಗೆ ಆಹ್ವಾನಿಸಿದರು. ಅವರೊಂದಿಗೆ ಮನೆ ತಲಪಿದೆವು. ರಾತ್ರಿ ಬಿಸಿ ಬಿಸಿಯಾಗಿ ಅಡುಗೆ ಮಾಡಿಸಿ ಊಟ ಮಾಡಿಸಿದರು. ಅಲ್ಲಿಯೇ ಅಂದು ರಾತ್ರಿ ಉಳಿದಿದ್ದು ಮರುದಿನ ಅವರ ಬೆಳಗಿನ ಆತಿಥ್ಯವನ್ನು ಸ್ವೀಕರಿಸಿ ತುರುವನೂರಿಗೆ ವಾಪಸ್ಸಾದೆವು.

ಇನ್ನೊಮ್ಮೆ ಎಸ್. ಆರ್. ನಾಗಪ್ಪ ಶೆಟ್ಟರೊಡಗೂಡಿ ಶಿವಮೊಗ್ಗ ಜಿಲ್ಲೆಯಲ್ಲಿ ಖಾದಿ ಕೇಂದ್ರ ಸ್ಥಾಪಿಸುವ ಸಲುವಾಗಿ ಹೊನ್ನಾಳಿ ತಾಲ್ಲೂಕಿನಲ್ಲಿ ಪ್ರವಾಸ ಕೈಗೊಂಡಿದ್ದೆವು. ನ್ಯಾಮತಿ ಅಕ್ಕಪಕ್ಕದ ಹಳ್ಳಿಗಳನ್ನು ಸಂದರ್ಶಿಸಿ ಹರಳಹಳ್ಳಿ ಮತ್ತು

ಗೋವಿನ ಕೋವಿ ಹಳ್ಳಿಗಳನ್ನು ನೋಡಲು ಹೊರಟೆವು, ಈಗಿನಂತೆ ಹೋಟೇಲಿನ ಸೌಕರ್ಯವು ಇರಲಿಲ್ಲ. ಹಳ್ಳಿಗಳನ್ನು ನೋಡಿಕೊಂಡು ತುಂಗಭದ್ರೆಯನ್ನು ದಾಟಿ ಆಚೆ ದಡದಲ್ಲಿರುವ ರಾಮಪುರ ಮತ್ತು ಗೋವಿನಕೊಪ್ಪದ ಹೊಳೆಯಲ್ಲಿ ಸ್ನಾನ ಮುಗಿಸಿ, ಹೊಟ್ಟೆ ತಳಮಳಗುಟ್ಟುತ್ತಿದ್ದುದರಿಂದ ಹೊಟ್ಟೆ ತುಂಬಾ ಹೊಳೆ ನೀರನ್ನು ಕುಡಿದು ಹಸಿವನ್ನು ಶಮನ ಮಾಡಿಕೊಂಡು, ಗೋವಿಯನ್ನು ತಲುಪಿದೆವು. ಬೈಸಿಕಲ್ ಪ್ರವಾಸದಿಂದ ಇಬ್ಬರಿಗೂ ದಣಿವಾಗಿತ್ತು, ಹಸಿವೆಯೂ ಜೋರಾಗಿತ್ತು. ಶ್ರೀ ನಾಗಪ್ಪ ಶೆಟ್ಟರಿಗೆ ಪರಿಚಯವಿದ್ದ ಗೌಡರ ಮನೆಗೆ ಹೋದೆವು. ಅವರ ಮನೇಲಿ ಎಲ್ಲರ ಊಟವೂ ಮುಗಿದಿದ್ದಿತು. ನಮ್ಮನ್ನು ಸ್ವಲ್ಪ ವಿಶ್ರಮಿಸಿಕೊಳ್ಳುವಂತೆ ಹೇಳಿ, ಎರಡೆರಡು ಜೋಳದ ರೊಟ್ಟಿ, ಗುರೆಳ್ಳು ಚಟ್ನಿ ಮತ್ತು ಬೆಣ್ಣೆ ಹಾಕಿಕೊಟ್ಟರು. ಜತೆಯಲ್ಲಿ ಒಂದು ಬಟ್ಟಲು ಮೊಸರು ಸಹಾ ಇದ್ದಿತು. ಇಬ್ಬರಿಗೂ ಅಮೃತ ಸಮಾನವಾಯಿತು. ಅದನ್ನು ತಿಂದು ನೀರು ಕುಡಿದು ಸ್ವಲ್ಪ ವಿಶ್ರಮಿಸಿಕೊಂಡು ನಂತರ ನ್ಯಾಮತಿಯಲ್ಲಿ ಬಾಡಿಗೆ ಸೈಕಲನ್ನು ಒಪ್ಪಿಸಿ, ಶಿವಮೊಗ್ಗಕ್ಕೆ ರಾತ್ರಿ ಬಂದು ಸೇರಿದೆವು.

ಕ್ಷಾಮ ಪರಿಹಾರದ ಕೆಲಸ

1945–46ನೇ ಸಾಲಿನಲ್ಲಿ ಚಿತ್ರದುರ್ಗ ಜಿಲ್ಲೆ ಭೀಕರ ಕ್ಷಾಮದ ದವಡೆಯಲ್ಲಿ ಸಿಕ್ಕಿದ್ದಿತು. ಜನರಲ್ಲಿ ಹಾಹಾಕಾರವೆದ್ದಿದ್ದಿತು. ರಾಜ್ಯ ಸರ್ಕಾರದವರೂ ಬಹಳ ಕಾತುರರಾಗಿದ್ದರು. ರಾಜ್ಯದ ದಿವಾನರಾಗಿದ್ದ ಶ್ರೀ ಎನ್. ಮಾಧವರಾಯರು ಹಾಗೂ ಆಗಿನ ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಕೊಂಡಜ್ಜಿ ಬಸಪ್ಪನವರು ಇವರುಗಳ ಜತೆಯಾಗಿ ಚಿತ್ರದುರ್ಗ ತಾಲ್ಲೂಕು, ಜಗಳೂರು ತಾಲ್ಲೂಕು, ಚಳ್ಳಕೆರೆ ತಾಲ್ಲೂಕುಗಳಲ್ಲಿ ಪರಿಶೀಲನೆಗೆ ಬಂದಿದ್ದರು. ಆಗ ಶ್ರೀ ಡಿ. ರಂಗಶೆಟ್ಟರು ತುರುವನೂರು ಖಾದಿ ಕೇಂದ್ರದ ಮ್ಯಾನೇಜರಾಗಿದ್ದರು. ದಿವಾನರ ಕಾರ್ಯಕ್ರಮ ತುರುವನೂರಿಗೂ ಇದ್ದಿತು. ಅವರು ಬರುವ ವಿಷಯ ಮೊದಲೇ ಗೊತ್ತಿದ್ದಿತು. ಅದುವರೆಗಾಗಲೇ ನೂಲುವವರಿಗೆಲ್ಲಾ ದಿವಾನರು ಬರುವ ವಿಷಯ ತಿಳಿವಳಿಕೆ ಕೊಡಲಾಗಿದ್ದಿತು. ಅವರು ಬಂದವರೆ ಊರಿನಲ್ಲಿದ್ದ ಒಂದೇ ಕುಡಿಯುವ ನೀರಿನ ಬಾವಿಯ ಹತ್ತಿರ ಹೋದರು. ದಿವಾನರೊಡನಿದ್ದವರೆಂದರೆ, ಜಿಲ್ಲಾ ಬೋರ್ಡು ಅಧ್ಯಕ್ಷರಾಗಿದ್ದ ಶ್ರೀ ಕೊಂಡಜ್ಜಿ ಬಸಪ್ಪನವರು. ಚಿತ್ರದುರ್ಗದ ಜಿಲ್ಲಾಧಿಕಾರಿಗಳು ಹಿಂದೆಯೇ ಉಳಿದಿದ್ದರು. ಖಾದಿ ಕೇಂದ್ರದ ಅಂಕಿ ಅಂಶಗಳನ್ನು ಹುಡುಕಿಕೊಂಡು ಒಂದು ಪಟ್ಟಿ ತಯಾರಿಸಿಟ್ಟುಕೊಂಡಿರಲಾಗಿತ್ತು. ದಿವಾನರು ಕೇಂದ್ರಕ್ಕೆ ಭೇಟಿ ಕೊಡುವುದಾಗಿ ತಿಳಿಸಿದ್ದರು. 3/4 ಮೈಲು ದೂರ ನಡೆದೇ ಬರಬೇಕಾಗಿತ್ತು. ನೂಲುವವರೆಲ್ಲಾ ದಾರಿಯ ಎರಡೂ ಕಡೆ ಜಗುಲಿಯ ಮೇಲೆ ಕುಳಿತು ನೂಲಲು ಏರ್ಪಾಡಾಗಿತ್ತು. ವಿಷಯ ತಿಳಿದ ಮೇಲೆ ನಾನು ದೌಡಾಯಿಸಿ ಹೋದೆ. ದಿವಾನರನ್ನು ಭೇಟಿ ಮಾಡುವುದಾಗಲಿ, ಮಾತಾಡು

ವುದಾಗಲಿ, ಒಂದು ರೀತಿಯ ದಿಗಿಲು ಹಾಗೂ ಮನಸ್ಸಿಗೆ ಅಳುಕಾಗಿದ್ದಿತು. ಶ್ರೀ ಕೊಂಡಜ್ಜಿಯವರೇ ದಿವಾನರಿಗೆ ಖಾದಿ ಕೇಂದ್ರದ ಮ್ಯಾನೇಜರೂ ಬಂದಿದ್ದಾರೆಂದು ತಿಳಿಸಿದರು. ದಿವಾನರು ರಸ್ತೆಯಲ್ಲಿ ಹಾದು ಬರುತ್ತಿದ್ದಾಗಲೇ ನೂಲು ಪ್ರದರ್ಶನವನ್ನು ವೀಕ್ಷಿಸಿದ್ದರು, ಕೇಳಿದರು ಇದೇನು ನೂಲುವ ಪ್ರದರ್ಶನವೆ ಎಂತು. ಅದಕ್ಕೆ ವ್ಯವಸ್ಥಾಪಕರು ಹೇಳಿದರು. ತಾವು ಬರುವ ವಿಷಯ ಜನರಿಗೆ ಗೊತ್ತಾಗಿದ್ದಿತು. ತಮ್ಮ ದರ್ಶನ ಬಯಸಿದ್ದರು. ಅದಕ್ಕಾಗಿ ಜಗುಲಿಯ ಮೇಲೆ ನೂಲುತ್ತಾ ಇದ್ದು ತಮ್ಮ ದರ್ಶನ ಲಾಭವಾಗಲಿ ಅಂತ ಈ ಪ್ರದರ್ಶನ ಏರ್ಪಾಡಾಗಿದೆ ಎಂದು ತಿಳಿಸಿದರು. ಸಾಹೇಬರು ಕಾಲ್ನಡಿಗೆಯಲ್ಲಿ ಬರುತ್ತಿದ್ದಾಗ್ಗೆ ಹಾಗೆಯೇ ಮೂರು ನಾಲ್ಕು ಜನ ನೂಲುವವರ ಬಳಿಗೆ ಹೋಗಿ, ಅವರ ಕೆಲಸ ಕಾರ್ಯಗಳನ್ನು ಲೆಕ್ಕವನ್ನೂ ಪರಿಶೀಲಿಸಿದ್ದರು. ಹಾಗೆಯೇ ವ್ಯವಸ್ಥಾಪಕರನ್ನುದ್ದೇಶಿಸಿ ಹೇಳಿದರು. ಕ್ಷಾಮ ನಿವಾರಣೆ ಕಾರ್ಯಕ್ರಮದಲ್ಲಿ ನಿಮ್ಮದೇನು ಪಾತ್ರ ಮತ್ತು ನೀವು ಏನು ಮಾಡುತ್ತಿದ್ದೀರಿ ಎಂದು ಪ್ರಶ್ನೆ ಮಾಡಿದರು. ಅದಕ್ಕೆ ವ್ಯವಸ್ಥಾಪಕರು ಈ ಕೇಂದ್ರಕ್ಕೆ ಹೆಚ್ಚಿನ ಬಂಡವಾಳ ಬೇಕಾಗುತ್ತದೆ. ತಾತ್ಕಾಲಿಕವಾಗಿ 25,000 ರೂಪಾಯಿಗಳಷ್ಟಾದರೂ ಸಹಾಯ ಬೇಕಾಗುತ್ತದೆ. ಇದರ ಬಗ್ಗೆ ಒಂದು ಯೋಜನೆ ತಯಾರಿಸಿ ಬದನವಾಳಕ್ಕ ಕಳಿಸಿಡಲಾಗಿದೆ ಮತ್ತು ನಾನು ಸಹ ಬದನವಾಳಕ್ಕೆ ಖುದ್ದು ಹೋಗಿದ್ದು ಮ್ಯಾನೇಜರನ್ನು ಭೇಟಿ ಮಾಡಿ ವಿವರಣೆ ಕೊಟ್ಟು ಬರೋಣವೆಂದಿದ್ದೆ ಅಷ್ಟರಲ್ಲಿ ತಮ್ಮ ಆಗಮನ ಮತ್ತು ಭೇಟಿ ಮುಗಿಸಿಕೊಂಡು ಹೋಗೋಣವೆಂತ ನಿಧಾನಮಾಡಿದ್ದೇನೆ. ಎಂದು ಭಿನ್ನವಿಸಿದೆ. ಅದಕ್ಕೆ ಸಾಹೇಬರು ನಗುತ್ತ ನಿಮ್ಮ ಬೇಡಿಕೆ ಕೇವಲ 25,000. ಎಂಥ ಸಣ್ಣ ಮೊಬಲಗು ಎಂದು ತಿಳಿಸಿದರು. ಅದಕ್ಕೆ ಕೊಂಡಜ್ಜಿ ಬಸಪ್ಪನವರು It is his limitation of power ಎಂದು ಹೇಳಿದರು. ಅದಕ್ಕೆ ಸಾಹೇಬರು ನನ್ನೊಡನೆ ಹೇಳಿದರು. ನೀನು ಬದನವಾಳ ಮ್ಯಾನೇಜರಿಗೆ ದಿವಾನರನ್ನು ಡೈರೆಕ್ಟರೊಡನೆ ಭೇಟಿಯಾಗುವಂತೆ ತಕ್ಷಣ ಟೆಲಿಗ್ರಾಂ ಮಾಡು ಎಂದು ತಿಳಿಸಿದರು.

ದಿವಾನ್ ಸಾಹೇಬರು ಕೇಂದ್ರದ ಒಳಗಡೆ ಆಗಮಿಸಿ, ಅಲ್ಲಿನ ಚಟುವಟಿಕೆಗಳನ್ನು ಗಮನಿಸಿ, ತಯಾರಾದ ಖಾದಿಬಟ್ಟೆ ಹಾಗೂ ನೂಲು ಇವುಗಳನ್ನು ವೀಕ್ಷಿಸಿ ಸಮಾಧಾನ ವ್ಯಕ್ತಪಡಿಸಿದರು. ಮ್ಯಾನೇಜರವರೂ ಒಂದು ಕೇಂದ್ರದ ಇದುವರೆಗಿನ ಚಟುವಟಿಕೆಗಳ ವಿಸ್ತೃತ ವಿವರಣಗಳನ್ನೊಳಗೊಂಡ ಒಂದು ವರದಿಯನ್ನು ದಿವಾನರಿಗೆ ಒಪ್ಪಿಸಿದರು. ಅದಕ್ಕೆ ದಿವಾನರು Don't fail in your duty go ahead with the work ಎಂದು ತಿಳಿಸಿ, ಮುಂದಿನ ಗ್ರಾಮದ ಕಡೆಗೆ ತೆರಳಿದರು.

ಬದನವಾಳ ಮ್ಯಾನೇಜರಿಗೆ ಇಲ್ಲಿನ ವರದಿಯನ್ನು ತಿಳಿಸಲಾಯ್ತು. ಶ್ರೀ ರಾಜಾ ರಾಮಯ್ಯಂಗಾರ್ರವರು ಶ್ರೀ ಬಿ. ಕೆ. ಮೂರ್ತಿ ಅಂದಿನ ಡೈರೆಕ್ಟರವರೊಡಗೂಡಿ

ದಿವಾನರನ್ನು ಭೇಟಿ ಮಾಡಿ ಸುಮಾರು 7–8 ಲಕ್ಷ ರೂಪಾಯಿಗಳ ಡಿಸ್ಟ್ರೆಸ್‌ರಿಲೀಫ್ ಫಂಡಿನಿಂದ ಮಂಜೂರ್ಮಾಡಿಸಿಕೊಂಡು ಬದನವಾಳು ಮುಖ್ಯ ಕಛೇರಿಯನ್ನು ಚಿತ್ರದುರ್ಗದಲ್ಲಿ ತಾತ್ಕಾಲಿಕವಾಗಿ ತೆರೆದು, ಶ್ರೀ ಡಬ್ಲ್ಯೂ. ಜೆ. ಹನುಮಂತರಾಯರ ಬಾಡಿಗೆ ಮನೆಯಲ್ಲಿ ರಿಲೀಫ್ ಸೆಂಟರನ್ನು ಆರಂಭಿಸಿದರು.

ಹಳೆಯ ಹಾಗೂ ನುರಿತ ಕೆಲಸಗಾರರಾದ ಶ್ರೀ ಆರ್. ಎನ್. ಸುಬ್ರಹ್ಮಣ್ಯಂ ಎಂಬುವರನ್ನೂ ಮತ್ತು ಶ್ರೀ ಡಿ. ರಂಗಶೆಟ್ಟಿಯುವರನ್ನೂ ಸಹಾಯಕರನ್ನಾಗಿ ನಿಯಮಿಸಿ ಕೊಂಡು ಚಿತ್ರದುರ್ಗ ಜಿಲ್ಲೆಯ ಜಗಳೂರು, ಹಿರಿಯೂರು, ಹೊಳಲ್ಕೆರೆ, ಮೊಳ ಕಾಲ್ಮುರು ಈ ತಾಲ್ಲೂಕುಗಳ ಹಲವಾರು ಹಳ್ಳಿಗಳಲ್ಲಿ ಖಾದಿ ನೂಲುವ ಮತ್ತು ನೇಯುವ ಕೇಂದ್ರಗಳನ್ನು ಸ್ಥಾಪಿಸಿ ದಿನಗೂಲಿಯಂತೆ ನೇಯ್ಗೆಯವರಿಗೂ ನೂಲು ವವರಿಗೂ ಮಜೂರಿ ಪಾವತಿ ಮಾಡುತ್ತ ಜನರಿಗೆ ಸಾಧ್ಯವಾದಷ್ಟು ಪರಿಹಾರ ಕಲ್ಪಿಸಿ ಕೊಟ್ಟರು. ಈ ರಿಲೀಫ್ ಕೇಂದ್ರಗಳು ಸುಮಾರು 1946–47 ಜನವರಿ ನವಂಬರ್ ತಿಂಗಳ ತನಕ ನಡೆದು ಆಯಾ ಹಳ್ಳಿಗಳಲ್ಲಿ ಜನರಿಗೆ ಒಂದು ಮುಖ್ಯ ಉಪಕಸುಬನ್ನು ಕಲ್ಪಿಸಿಕೊಟ್ಟಿತು. ಖಾದಿ ಕೆಲಸದಲ್ಲಿ ಇದೊಂದು ಮಹತ್ತರ ಸಾಧನೆ ಎಂದು ಹೇಳ ಬಹುದು.

1950–51ರಲ್ಲಿ ಕೃಷ್ಣರಾಜ ಸಾಗರವು ಒಣಗಿ ಹೋಗಿದ್ದು ಕಟ್ಟೆಯು ಬರಿ ದಾಗಿದ್ದಿತು. ಕಾವೇರಿನದಿ ಅತಿ ಸಣ್ಣಗೆ ಕಾಲುವೆಯಾಗಿ ತನ್ನ ಪಾತ್ರದಲ್ಲಿ ಪ್ರವಹಿಸು ತ್ತಿತ್ತು. ಮಂಡ್ಯದ ಜಮೀನೆಲ್ಲಾ ಬರಡಾಯಿತು. ಈ ಸಮಯ ಮಂಡ್ಯ ಜಿಲ್ಲೆಯ ಸಾತನೂರು ಉಣ್ಣೆ ಕೇಂದ್ರಕ್ಕೂ ಕ್ಷಾಮದ ಬಿಸಿ ತಟ್ಟಿತ್ತು. ಡೈರೆಕ್ಟರ್ ಶ್ರೀ ಬೀರಪ್ಪ ನವರು 25,000 ರೂ ಮಂಜೂರ್ಮಾಡಿಸಿ ಅಲ್ಲೊಂದು ಉಣ್ಣೆ ನೂಲುವ ರಿಲೀಫ್ ಸೆಂಟರನ್ನು ತೆಗೆದು ಪರಿಹಾರವನ್ನೊದಗಿಸಿಕೊಟ್ಟರು. ಇದು ಲೋಕಪಾವನಿ ಖಾದಿ ಕೇಂದ್ರದ ನೇತೃತ್ವದಲ್ಲಿ ನಡೆಯಿತು.

1935ನೇ ಇಸವಿಯಲ್ಲಿ ಸರ್ದಾರ್ ಕೆ. ಎ. ವೆಂಕಟರಾಮಯ್ಯನವರು, ಬೆಂಗಳೂರು ಖಾದಿ ವಸ್ತ್ರಾಲಯದ ವ್ಯವಸ್ಥಾಪಕರಾಗಿದ್ದರು. ಅವರು ಒಂದು ಖಾದಿ ಗ್ರಾಮೋದ್ಯೋಗ ವಸ್ತು ಪ್ರದರ್ಶನವನ್ನು ಬೆಂಗಳೂರಿನ ಒಕ್ಕಲಿಗರ ಹಾಸ್ಟಲ್ ಕಟ್ಟಡ ದಲ್ಲಿ ಏರ್ಪಡಿಸಿದ್ದರು. ಹತ್ತಿಯ ಕ್ರಿಯೆಯಿಂದ ಹಿಡಿದು ನೂಲುವ ನೇಯುವ ಕೆಲಸವನ್ನು ಅಂದವಾಗಿ ಪ್ರದರ್ಶಿಸಲಾಗಿದ್ದಿತು. ಗ್ರಾಮೋದ್ಯೋಗಗಳಾದ ಕೊಟ್ಟಣದ ಅಕ್ಕಿ, ಕುಂಭಗಾರಿಕೆ, ಚಾಪೆನೇಯ್ಗೆ, ಕಂಬಳಿನೇಯ್ಗೆ, ಗಾಣದಎಣ್ಣೆ ಮೊದಲಾದವು ಪ್ರದರ್ಶಿಸಲ್ಪಡುತ್ತಿದ್ದಿತು. ಈ ವೇಳೆಯಲ್ಲಿ ಒಂದು ನೂಲುವ ಸ್ಪರ್ಧೆಯೂ ಏರ್ಪಾ ಡಾಗಿತ್ತು. ಉತ್ತರ ಕರ್ನಾಟಕದ ಹಾಗೂ ಬದನವಾಳ ನೂಲುವ ಪ್ರಾಂತ್ಯದ ಅನೇಕ ನೂಲುಗರು ಭಾಗವಹಿಸಿದ್ದರು. ಇದಕ್ಕಾಗಿ ಒಂದು ಬೆಳ್ಳಿಯ ಪಾತ್ರೆ ಬಹುಮಾನ

ವಾಗಿಟ್ಟಿದ್ದರು. ಬದನವಾಳದ ಶ್ರೀ ಬಿ. ಎನ್. ರಂಗಸ್ವಾಮಿಯವರು ಸ್ಪರ್ಧೆಯಲ್ಲಿ ವಿಜೇತರಾಗಿ ಬೆಳ್ಳಿಬಟ್ಟಲನ್ನು ಗೆದ್ದುಕೊಂಡರು.

1934ನೇ ಜನವರಿ 30ರಂದು ಮಹಾತ್ಮಾ ಗಾಂಧಿಯವರು ತಗಡೂರು ಖಾದಿ ಕೇಂದ್ರಕ್ಕೂ ಹಾಗೂ ಬದನವಾಳು ಖಾದಿ ಕೇಂದ್ರಕ್ಕೂ ಭೇಟಿ ನೀಡಿದರು. ಅವರ ಪ್ರವಾಸವು ಹರಿಜನರ ಏಳ್ಗೆಗಾಗಿ ನಿಧಿ ಸಂಗ್ರಹಿಸುವುದಾಗಿದ್ದಿತು. ಬದನವಾಳ ಕೇಂದ್ರದಲ್ಲಿ ಸುಮಾರು 250–300 ಜನರು ರಾಟೆಯಿಂದ ನೂಲುವ ಪ್ರದರ್ಶನ ಏರ್ಪಟ್ಟಿದ್ದಿತು. ಸುತ್ತಣ ಗ್ರಾಮದ ಜನರು ಮಹಾತ್ಮರ ದರ್ಶನಕ್ಕಾಗಿ ನೆರೆದಿದ್ದರು. ಮಹಾತ್ಮರು ಖಾದಿ ಕೇಂದ್ರದ ಚಟುವಟಿಕೆಗಳನ್ನು ವೀಕ್ಷಿಸಿ ಅವರ ಪ್ರವಚನಕ್ಕಾಗಿ ನಿರ್ಮಿಸಿದ್ದ ಮಂಟಪಕ್ಕೆ ಆಗಮಿಸಿದರು ; ಚರಕದ ಮಹತ್ವವನ್ನು ವಿವರಿಸಿದರು. ಹರಿಜನರ ಏಳ್ಗೆಗಾಗಿ ಜನರಿಂದ ಪಡೆದಿದ್ದ ಸುಮಾರು 250 ರೂಗಳ ಕಾಣಿಕೆಯನ್ನು ಅವರಿಗೆ ಅರ್ಪಿಸಲಾಯ್ತು. ಶ್ರೀ ರಾಜಾರಾಮಯ್ಯಂಗಾರ್ರವರ ಕುಟುಂಬ ಶ್ರೀ ಪಂಕಜಮ್ಮನವರು ತಮ್ಮ ಮಗಳ ಹತ್ತಿರ ಇದ್ದ ಎರಡು ತೊಲ ಬಂಗಾರದ ಸರವನ್ನು ಮಹಾತ್ಮರಿಗೆ ಕಾಣಿಕೆಯಾಗಿ ಇತ್ತರು. ಶ್ರೀ ರಾಜಾರಾಮಯ್ಯಂಗಾರ್ರವರೂ ಅವರ ಕುಟುಂಬವೂ ಆದರ್ಶ ಜೀವಿಗಳೂ, ಖಾದಿ ಪ್ರೇಮಿಗಳೂ ಆಗಿ ಒಬ್ಬರಿಗೊಬ್ಬರು ಸಹಕರಿಸಿಕೊಂಡು ಈ ಕ್ಷೇತ್ರದಲಿ ಅಕ್ಕರೆ ಆಸಕ್ತಿಯಿಂದ ಏಕೀಭವಿಸಿ ಕೆಲಸ ಮಾಡುತ್ತ ಬಂದಿದ್ದಾರೆ. ಮಹಾತ್ಮರು ಸುಮಾರು 2 ಘಂಟೆಗಳಷ್ಟು ತಮ್ಮ ಸಮಯವನ್ನು ವಿನಿಯೋಗಿಸಿ ಅಲ್ಲಿಂದ ಬೀಳ್ಕೊಂಡರು. ಅಲ್ಲಿಂದ ಹರಿಜನ ಬೀದಿಗೆ ಹೋಗಿ ಖಾದಿ ಕೇಂದ್ರದ ಹಾಗೂ ಗ್ರಾಮೀಣ ಜನರಿಂದ ನಿರ್ಮಿತವಾಗಿದ್ದ ರಾಮ ಮಂದಿರವನ್ನು ಉದ್ಘಾಟಿಸಿದರು. ಹರಿಜನ ಕೇರಿಯವರೂ 101 ರೂಗಳ ನಿಧಿಯನ್ನು ಮಹಾತ್ಮರಿಗೆ ಅರ್ಪಿಸಿದರು.

ಬದನವಾಳು ಕೇಂದ್ರದ ಪ್ರತಿವರ್ಷದ ಖಾದಿ ಉತ್ಪತ್ತಿ ಈ ಕೆಳಗಿನ ಅಂಕಿ ಅಂಶಗಳಿಂದ ವ್ಯಕ್ತಪಡುತ್ತದೆ.

1927–28	6,000	1935–36	45,000
28–29	16,000	36–37	46,000
29–30	26,000	37–38	48,000
30–31	42,000	38–39	59,000
31–32	"	39–40	60,000
32–33	"	40–41	50,000
33–34	"	41–42	56,000
34–35	45,000	42–43	86,000

43–44	86,000	46–47	1,00,025
44–45	1,000,25	47–48	”
45–46	”	48–49	80,000
		52–53	”

1927ರಿಂದ ಮಾರಾಟವಾದದ್ದು ಈ ಕೆಳಗಿನಂತಿದೆ.

1927-28	4,000	1940-41	82,000
28-29	20,000	41-42	1,00,000
29-30	29,000	42-43	,,
30-31	42,000	43-44	1,00,058
31-32	50,000	44-45	,,
32-33	,,	45-46	1,00,030
33-34	40,000	46-47	1,00,014
34-35	44,000	47-48	1,00,028
35-36	48,000	48-49	1,00,058
36-37	56,000	49-50	55,000
37-38	64,000	50-51	78,000
38-39	70,000	51-52	90,000
39-40	80,000	52-53	63,000

ಮಾರಾಟದ ಹಾಗೂ ಉತ್ಪಾದನೆಯ ಅಂಕಿ ಅಂಶಗಳನ್ನು ಬದನವಾಳು ಖಾದಿ ಕೇಂದ್ರದಲ್ಲಿರುವ ಪಟ್ಟಿಯಿಂದ ತೆಗೆದುಕೊಳ್ಳಲಾಗಿದೆ. ಕೆಲವು ಏರಿಳಿತಗಳ ಕಾರಣ ಈಗ ಗೊತ್ತಾಗುತ್ತಲಿಲ್ಲ. 1954 ವರ್ಷದಲ್ಲಿ ಖಾದಿ ಕಮೀರ್ಷ ಬೊಂಬಾಯಿ ಆಫೀಸಿನವರು ಹುಂಡಿ ಸ್ಕೀಮನ್ನು ಅಳವಡಿಸಿ ಆಗಿನ ಮೈಸೂರು ರಾಜ್ಯಕ್ಕೂ ಅನ್ವಯಿಸುವಂತೆ ಸರ್ಕಾರದ ವಶಕ್ಕೆ ಹತ್ತು ಲಕ್ಷ ರೂ ಮೌಲ್ಯದ ಹುಂಡಿಯನ್ನು ಬಿಡುಗಡೆ ಮಾಡಿದ್ದಿತು. ಈ ವರ್ಷಗಳಲ್ಲಿ ಖಾದಿ ವ್ಯಾಪಾರ ಕುಂಠಿತವಾಗಿದ್ದುದರಿಂದ ಹುಂಡಿ ಸ್ಕೀಮು ಜಾರಿಗೊಳಿಸಲಾಗಿತ್ತು. ಈ ಕಾರಣದಿಂದ ಉತ್ಪತ್ತಿಯೂ ಸಹ ಕುಂಠಿತ ಗೊಂಡಿದ್ದಿತು. ಸರ್ಕಾರದವರು ತಮ್ಮ ವಿವಿಧ ಇಲಾಖೆಗಳ ಮೂಲಕ ಹತ್ತು ಲಕ್ಷ ಮೌಲ್ಯದ ಹುಂಡಿ ಎಲ್ಲವನ್ನೂ ಮಾರಾಟಮಾಡಿದರು. ಗ್ರಾಹಕರಿಗೆ ಬಟ್ಟೆಗಳನ್ನು ಒದಗಿಸುವುದೂ ಒಂದು ಸಮಸ್ಯೆಯಾಯಿತು. ಆಗಿನ ಡೈರೆಕ್ಟರಾಗಿದ್ದ ಶ್ರೀ ಬೀರಪ್ಪ ಬಿ.ಎ., ಐ.ಎ.ಎಸ್ ಅವರಿಗೆ ಇದರ ಜವಾಬ್ದಾರಿ ಬಿದ್ದಿತು. ಅವರು ಸುಬೇದಾರ್ ಛತ್ರಂ ರಸ್ತೆಯಲ್ಲಿನ ಒಂದು ದೊಡ್ಡ ಮನೆಯನ್ನು ಹಿಡಿದು ಅದನ್ನು ಮಾರ್ಪಾಟು ಮಾಡಿಸಿ ಅದಕ್ಕೆ ಸೆಂಟ್ರಲ್ ಖಾದಿ ಎಂಪೋರಿಯಂ ಎಂದು ನಾಮಕರಣ ಮಾಡಿ

ರಾಜ್ಯದಲ್ಲಿ ಉತ್ಪತ್ತಿಯಾಗುತ್ತಿದ್ದ ಖಾದಿ ಹಾಗೂ ರಾಜ್ಯದ ಹೊರಗಡೆಯಿಂದಲೂ ಸಾಕಾದಷ್ಟು ಬಟ್ಟೆ ತರಿಸಿ ದಾಸ್ತಾನು ಮಾಡಲು ಏರ್ಪಡಿಸಿದರು. ಮತ್ತು ಇದನ್ನು ವಿತರಣೆ ಮಾಡಲು ಹಾಸನ, ಕೆ.ಜಿ.ಎಫ್. ಸ್ಥಳಗಳಲ್ಲಿ ಒಂದೊಂದು ಖಾದಿ ಭಂಡಾರವನ್ನು ತೆಗೆಸಿ ಶ್ರೀ ಕೆ. ಸಿ. ಚಾಮಶೆಟ್ಟಿ ಎಂಬುವರನ್ನು ಹಾಸನಕ್ಕೂ ಶ್ರೀ ಎಸ್. ಎನ್. ಶರ್ಮ ಎಂಬುವರನ್ನೂ ಕೆ ಜಿ ಎಫ್ ಭಂಡಾರಕ್ಕೂ ವರ್ಗ ಮಾಡಿದರು ಮತ್ತು ಎಂಪ್ರೋರಿಯಂಗೆ ಶ್ರೀ ಡಿ. ರಂಗಶೆಟ್ಟರನ್ನು ಮ್ಯಾನೇಜರನ್ನಾಗಿ ನಿಯುಕ್ತ ಮಾಡಿದರು ಮತ್ತು ಇವರ ಸಹಾಯಕ್ಕಾಗಿ ಕೆಲವರು ಸಿಬ್ಬಂದಿಯವರನ್ನು ನೇಮಿಸಿದರು. ಹಾಗೂ ಖಾದಿ ಹುಂಡಿ ವ್ಯಾಪಾರದ ವಹಿವಾಟನ್ನು ನಡೆಸಿದರು. ಈ ಅಂಕಿ ಅಂಶಗಳು ಪಟ್ಟಿಯಲ್ಲಿ ಸೇರಿರುವುದಿಲ್ಲ.

ಖಾದಿ ಬೆಲೆ : ಹಿಂದಿನ ಲೆಕ್ಕಾಚಾರದಂತೆ.

1 ಅರಳೆ ಬೆಲೆ : 1 ಪೌಂಡು ಅರಳೆಗೆ $3\frac{1}{2}$ ಆಣೆಯಿಂದ 4 ಆಣೆ

2 ನೂಲುವವರ ಮಜೂರಿ : 1 ಪೌಂಡು ನೂಲಿಗೆ 12 ಆಣೆ

3 ನೇಯ್ಗೆ ಮಜೂರಿ : 1 ಚದರ ಗಜಕ್ಕೆ 4 ಆಣೆ ಇದ್ದಿತು.

ಈಗಿನ ಧಾರಣೆಯಂತೆ ಲೆಕ್ಕ ಹಾಕಿ ನೋಡಿದರೆ ಆಗಿನ ಲಕ್ಷರೂ ಬೆಲೆಯು ಖಾದಿಗೆ ಈವಾಗಿನ ಧಾರಣೆ 25 ಲಕ್ಷ ರೂಪಾಯಿಗಳಾಗುತ್ತದೆ. ಈಗ ಉತ್ಪಾದನೆಯನ್ನು ತೂಕದ ಮೇಲೆ ಲೆಕ್ಕ ಹಾಕುತ್ತಲಿಲ್ಲ. ಹಣದ ರೂಪದಲ್ಲಿ ಲೆಕ್ಕ ಮಾಡಲಾಗುತ್ತಿದೆ. ಅಂದ ಮೇಲೆ ಈಗಿನ ಉತ್ಪತ್ತಿಗೂ ಹಿಂದಿನ ಉತ್ಪತ್ತಿಗೂ ಅಷ್ಟೇನೂ ವ್ಯತ್ಯಾಸಕಂಡುಬರುತ್ತಲಿಲ್ಲ. ತೂಕದಲ್ಲಾಗಲಿ, ಚದರ ಗಜದಲ್ಲಾಗಲಿ ಲೆಕ್ಕ ಮಾಡಿದಲ್ಲಿ ಹಿಂದಿನ ಮತ್ತು ಇಂದಿನ ಉತ್ಪಾದನೆ ಪ್ರಮಾಣವು ಖಚಿತವಾಗಿ ಗೊತ್ತಾಗುತ್ತದೆ. ಬದನವಾಳು ನೂಲುವ ಪ್ರಾಂತ್ಯದ ಉತ್ಪಾದನೆ ಮತ್ತು ಮಾರಾಟದ ಲಾಭಾಂಶದಲ್ಲಿಯೇ ಕಾರ್ಯಕರ್ತರ ವೇತನ ಭತ್ಯ ಇತ್ಯಾದಿಗಳು ವೆಚ್ಚವಾಗುತ್ತಿತ್ತು. ಮೂಲಧನ ಸುರಕ್ಷಿತವಿದ್ದಿತು. ಖಾದಿ ಮಾಡಲಿ ಪ್ರವೇಶದವರೆಗೂ ಇದು ಸರಿಯಾಗಿ ನಡೆದುಕೊಂಡುಬಂದಿತು.

ಖಾದಿ ಗ್ರಾಮೋದ್ಯೋಗ ಮಂಡಲಿಯು ಅಸ್ತಿತ್ವಕ್ಕೆ ಬಂದು ಬದನವಾಳು ಮತ್ತು ಐಮಂಗಲ ಕೇಂದ್ರಗಳ ವಹಿವಾಟನ್ನು ಮಂಡಲಿಯು ವಹಿಸಿಕೊಂಡಿತು. ಈ ಆಡಳಿತದಲ್ಲಿ ಆವಶ್ಯಕತೆಗಿಂತ ಹೆಚ್ಚು ಮಂದಿ ಅನುಭವ ಇಲ್ಲದ ಕೆಲಸಗಾರರ ನೇಮಕಾತಿಯಾಗಿ ಅನವಶ್ಯಕ ಖರ್ಚು ಹೆಚ್ಚಾಗಿ ತಕ್ಕಷ್ಟು ಪ್ರಮಾಣದಲ್ಲಿ ಉತ್ಪಾದನೆಯಾಗಲು ಆಗದೆ ನಷ್ಟದಲ್ಲಿ ಮುಂದುವರಿಯತೊಡಗಿತು. ಮಂಡಳಿಯು ಹೊರಡಿಸಿರುವ ಒಂದು ವರದಿಯಂತೆ $34\frac{1}{2}$ ಲಕ್ಷ ರೂಪಾಯಿನಷ್ಟು ನಷ್ಟವಾಗಿದೆ ಎಂದು 25 ವರ್ಷಗಳಾದ ಮೇಲೆ ಸೂಚಿಸಿದ್ದಾರೆ. ನಂತರ ಬೋರ್ಡಿನವರು ಕೇಂದ್ರಗಳನ್ನು

ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಅದಕ್ಕೆ ವಹಿಸಿಕೊಟ್ಟರು. ಅವುಗಳಿಗೆ ಬಂಡವಾಳದ ಕೊರತೆಯಿಂದಾಗಿ ಶಕ್ತಿಗುಂದಿದೆ. ಖಾದಿ ಮಂಡಲಿಯಿಂದ ಯಾವ ರಕ್ಷಣೆಯೂ ದೊರೆಯುತ್ತಲಿಲ್ಲ.

ಹಿಂದಿನ ಮೈಸೂರು ಸಂಸ್ಥಾನದಲ್ಲಿನ ಖಾದಿ ಕ್ಷೇತ್ರದಲ್ಲಿ ಸೇವಾ ಭಾವನೆಯಿಂದ ನಿಷ್ಠರಾಗಿ ಕೆಲಸ ಮಾಡಿದ ಖಾದಿ ಕಾರ್ಯಕರ್ತರನ್ನು ಈ ಕೆಳಗೆ ನಮೂದಿಸಲಾಗಿದೆ.

ಸರ್ವಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಬಿ.ಎ., ಬಿ.ಎಸ್.ಸಿ. (ವ್ಯವಸ್ಥಾಪಕರು), ಬಿ. ಎನ್. ರಂಗಸ್ವಾಮಿಯವರು, (ಸಹಾಯಕರು), ಕೆ. ಎಸ್. ಬಸವಯ್ಯನವರು, ಕೆ. ಎನ್. ಸುಬ್ರಹ್ಮಣ್ಯ, ಟಿ. ಎಸ್. ವೆಂಕಟಗಿರಿರಾಯರು, ಡಿ. ರಂಗಶೆಟ್ಟರು, ಎಸ್. ಎನ್. ಶರ್ಮರವರು, ಎಸ್. ಬಿ. ರಾಮಸ್ವಾಮಯ್ಯನವರು, ಕೆ. ಪುಟ್ಟಮಾದಯ್ಯನವರು, ಎನ್. ಲಿಂಗಪ್ಪನವರು, ಡಿ. ಎನ್. ಭೀಮಣ್ಣನವರು, ಟಿ. ನಂಜಯ್ಯನವರು, ಟಿ. ವೆಂಕಟನಾರಾಯಣಪ್ಪನವರು, ಟಿ. ಬಾಲಕೃಷ್ಣನವರು ಬಸವನಾಯ್ಕ, ಬಿ. ಸಿದ್ದಲಿಂಗಯ್ಯ, ಕೆ. ಸಿ. ಚಾಮಶೆಟ್ಟಿ, ಬಿ. ಕಪನಯ್ಯ, ಬಿ. ಶ್ರೀಕಂಠಯ್ಯ, ಗೆದರೆ ನರಸಿಂಗರಾವ್, ಟಿ. ಕೆ. ರಾಮಕೃಷ್ಣ, ಎಸ್. ನಾರಾಯಣ ಸ್ವಾಮಿ, ಜಿ. ವಿ. ಸೀತಾರಾಮಯ್ಯ, ಎಸ್. ಕೇಶವಮೂರ್ತಿ, ಸಣ್ಣಮಾದಯ್ಯ, ಚೌಡಯ್ಯ, ಸಿ. ಕೆ. ಪುಟ್ಟಯ್ಯ, ಮಾದನಾಯ್ಯ, ಚಿಕ್ಕರಂಗಯ್ಯ, ಕೆ. ಎಚ್. ಮಾದಯ್ಯ, ವಂತ್ರಹಳ್ಳಿ ನಾಗಯ್ಯ, ವಿಶ್ವಕರ್ಮ, ಎಸ್. ಹನುಮಂತಪ್ಪ, (ಚಿತ್ರದುರ್ಗ) ಎನ್. ಶಿವಯ್ಯ, ಎಚ್. ಡಿ. ರಂಗಣ್ಣ, ಹಿರಿಯೂರು ರಹಿಮಾನ್ ಸಾಹೇಬರು, ಲಿಂಗಯ್ಯ, ಬಸಪ್ಪದೇವರು, ಶ್ರೀನಿವಾಸನಾಯ್ಕ, ಹೊಳಲ್ಕೆರೆ ಶ್ರೀನಿವಾಸ ನಾಯ್ಕರು, ಎನ್. ನಂಜುಂಡಯ್ಯ, ಚನ್ನಬಸವಯ್ಯ, ಚಿಕ್ಕೀರಯ್ಯ ಇನ್ನೂ ಹಲವಾರು ಕಾರ್ಯಕರ್ತರು ಅಲ್ಲಲ್ಲಿ ಚದುರಿ ಹೋಗಿದ್ದಾರೆ.

ಈ ಮಹನೀಯರುಗಳೆಲ್ಲರ ನಿಷ್ಟ ಸೇವೆಯ ಬಲದಿಂದ ಬದನವಾಳ ನೂಲುವ ಪ್ರಾಂತ್ಯವು ಯಶಸ್ವಿಯಾಗಿ ಮುಂದುವರೆಯಿತು.

ಇತರ ಗ್ರಾಮೋದ್ಯೋಗಗಳು

ಖಾದಿ ಕಾರ್ಯದ ಜತೆಯಲ್ಲಿ ಇತರ ಕೆಲವು ಗ್ರಾಮೋದ್ಯೋಗಗಳನ್ನು ಕೂಡ ಆರಂಭಿಸಿ ನಡೆಸಿಕೊಂಡು ಬಂದಿದೆ. 1938ರಷ್ಟು ಹಿಂದೆಯೇ ಕೈ ಕಾಗದ, ಗ್ರಾಮೀಣ ಎಣ್ಣೆ, ಕೊಟ್ಟಣದ ಅಕ್ಕಿ, ಚಾಪೆನೇಯ್ಗೆ, ಚರ್ಮದ ಕೆಲಸ ಇವುಗಳು ಪ್ರಮುಖವಾದವು. ಇಲ್ಲಿ ತಯಾರಾದ ವಸ್ತುಗಳು ಗುಣಮಟ್ಟದಲ್ಲಿ ಉತ್ಕೃಷ್ಟವಾಗಿದ್ದವು. ಕೈ ಕಾಗದದ ಬೇಡಿಕೆಯು ಹೆಚ್ಚಾಗಿದ್ದು ಆಫೀಸು ಕೆಲಸಗಳಿಗೆಲ್ಲಾ ಇದನ್ನೇ ಬಳಸಲಾಗುತ್ತಿತ್ತು. ಇಲ್ಲಿ ತಯಾರಾಗುತ್ತಿದ್ದ ಟೈಪಿಂಗ್ ಕಾಗದ ಶ್ರೀ ಶಂಕರಲಾಲ್ ಬ್ಯಾಂಕರ್ರವರ ಹಾಗೂ ಇತರ ಗಣ್ಯರ ಮೆಚ್ಚುಗೆ ಪಡೆದಿದ್ದಿತು. ಈ ಉದ್ಯೋಗಗಳ ಸ್ಥಾಪನೆ ಮತ್ತು ಪೋಷಣೆ

ಕಾರ್ಯದಲ್ಲಿ ಶ್ರೀ ರಾಜಾರಾಮಯ್ಯಂಗಾರ್ರವರಿಗೆ ಸಹಾಯಕರಾಗಿ ನಿಂತವರೆಂದರೆ ಶ್ರೀ ಟಿ. ಆರ್. ಗೋವಿಂದರಾಯರು ಮತ್ತು ಶ್ರೀ ಟಿ. ಕೇಶವಮೂರ್ತಿಯವರು. ಶ್ರೀ ಗೋವಿಂದರಾಯರು ಬೆಂಗಳೂರಿನ ರಾಮಕೃಷ್ಣಾಶ್ರಮದಲ್ಲಿ ವಿದ್ಯಾಭ್ಯಾಸ ಮಾಡು ತ್ತಿದ್ದು ಗಾಂಧೀಜಿಯವರ ಕರೆಗೆ ಓಗೊಟ್ಟು ವಾರ್ಧಾದ ಮಗನವಾಡಿಯಲ್ಲಿ ಗ್ರಾಮೋ ದ್ಯೋಗ ಶಿಕ್ಷಣ ಪಡೆದಿದ್ದವರು. ಅಂತೆಯೇ ಶ್ರೀ ಟಿ. ಕೇಶವಮೂರ್ತಿಯವರೂ ಗೋವಿಂದರಾಯರ ಸಮಕಾಲೀನರಾಗಿ ಮಹಾತ್ಮಾಜಿಯರ ಆಶೀರ್ವಾದ ಪಡೆದು ವಾರ್ಧಾದಿಂದ ವಾಪಸ್ಸು ಆಗಿ ಶ್ರೀ ರಾಜಾರಾಮಯ್ಯಂಗಾರ್ರವರ ಆಹ್ವಾನವನ್ನು ಸ್ವೀಕರಿಸಿ ಬದನವಾಳಿನಲ್ಲಿ ಗ್ರಾಮೋದ್ಯೋಗ ವಿಭಾಗದ ಆಗುಹೋಗುಗಳಲ್ಲಿ ಭಾಗಿ ಗಳಾದರು. ಇವರೆಲ್ಲ ಕರ್ನಾಟಕ ಅದರಲ್ಲೂ ಮೈಸೂರು ರಾಜ್ಯದಲ್ಲಿ ಪ್ರಪ್ರಥಮವಾಗಿ ಗ್ರಾಮೋದ್ಯೋಗ ಸ್ಥಾಪನೆಗೆ ಮೂಲ ಪುರುಷರೆಂದು ಹೇಳಬಹುದಾಗಿದೆ. ಶ್ರೀ ಗೋವಿಂದರಾಯರು ಅಕಾಲ ಮೃತ್ಯುವಿಗೀಡಾದರು. ಶ್ರೀ ಟಿ. ಕೇಶವಮೂರ್ತಿ ಯವರು ಇದೇ ಕ್ಷೇತ್ರದಲ್ಲಿ ತಮ್ಮ ಇಳಿವಯಸ್ಸಿನಲ್ಲೂ ಕೆಲಸ ಮಾಡುತ್ತಿದ್ದಾರೆ. ಇದೇ ವೇಳೆಯಲ್ಲಿ ಮಂಡಲಿಗೆ ನೇಯ್ಗೆ ಕೆಲಸವೂ ಶ್ರೀ ಮಾಲೂರು ಶ್ರೀನಿವಾಸಯ್ಯ ನವರಿಂದ ಆರಂಭವಾಯ್ತು. ಇದರಲ್ಲಿ ಶ್ರೀ ಆರ್. ವಿ. ನರಸಿಂಗರಾಯರು ಮತ್ತು ತಗಡೂರು ನಾಗಭೂಷಣ ಇವರುಗಳು ತರಬೇತಿ ಪಡೆದು ಕೈಗಾರಿಕೆ ಇಲಾಖೆಯಲ್ಲಿ ಕೆಲಸ ಮಾಡಿದರು.

ಬದನವಾಳ ನೂಲುವ ಪ್ರಾಂತ್ಯದ ಬೆಳ್ಳಿಹಬ್ಬ

1954ನೇ ಇಸವಿ ಸೆಪ್ಟೆಂಬರ್ ತಿಂಗಳಲ್ಲಿ ಬದನವಾಳು ಖಾದಿಯ ಬೆಳ್ಳಿಹಬ್ಬ ನಡೆಯಿತು. ಸರ್ಕಾರದಿಂದ ಸುಮಾರು 5,000 ರೂಗಳು ಹಣ ಮಂಜೂರ್ಮಾಡಿ ಕೊಟ್ಟರು. ಅಷ್ಟು ಹೊತ್ತಿಗಾಗಲೇ ಐಮಂಗಲ ಖಾದಿ ಕೇಂದ್ರವು ಅದರ ಶಾಖಾ ಕೇಂದ್ರಗಳೊಡನೆ ಬದನವಾಳ ಕೇಂದ್ರಕ್ಕೆ ಸೇರ್ಪಡೆಯಾಗಿದ್ದಿತು. ಎಲ್ಲ ಕೆಲಸ ಗಾರರನ್ನು ಕಲೆಹಾಕಿ ಸಾಧ್ಯವಾದಷ್ಟು ನೂಲುವವರನ್ನು ಮತ್ತು ನೇಯ್ಗೆಯವರನ್ನು ಇತರ ಕೆಲಸಗಾರರೊಡನೆ ಕೂಡಿಸಿ ಉತ್ಸವವನ್ನು ಆಚರಿಸಲಾಯ್ತು. ಕಲ್ಕತ್ತದ 24 ಪರಗಣದ ಪ್ರಾಂತ್ಯದಲ್ಲಿ ಖಾದಿ ಸಂಚಾಲಕರೂ ಗಾಂಧೀಜಿಯವರ ಆಪ್ತರಲ್ಲೂ ಒಬ್ಬರಾಗಿದ್ದ ಶ್ರೀ ಸತೀಶಚಂದ್ರದಾಸ್‌ಗುಪ್ತ ಎಂಬ ಮಹನೀಯರು ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಕೈಗಾರಿಕಾ ಇಲಾಖೆ ಡೈರೆಕ್ಟರಾಗಿದ್ದ ಶ್ರೀ ಚಿಕ್ಕ ನಾರಾಯಣಸ್ವಾಮಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷತೆ ವಹಿಸಬೇಕಾಗಿದ್ದ ಆಗಿನ ಮಂತ್ರಿಗಳಾದ ಶ್ರೀಮಾನ್ ಸಿದ್ದವೀರಪ್ಪನವರು ಕಾರಣಾಂತರದಿಂದ ಭಾಗವಹಿಸ ಲಾಗಲಿಲ್ಲ.

ಬೆಳ್ಳಿಹಬ್ಬದ ಉತ್ಸವವು ಬಹಳ ವಿಜೃಂಭಣೆಯಿಂದ ನೆರವೇರಿತು. ಶ್ರೀ ಸತೀಶಚಂದ್ರದಾಸಗುಪ್ತರವರು ಬದನವಾಳು ಕಾರ್ಯ ಕ್ಷೇತ್ರವನ್ನು ಸುಮಾರು 2 ತಾಸುಗಳವರೆಗೆ ನಿರೀಕ್ಷಿಸಿ ತಮ್ಮ ಅಮೋಘ ಆಶೀರ್ವಾದ ಮಾಡಿ, ಕಾರ್ಯಕ್ಷೇತ್ರದ ವೃದ್ಧಿಯ ಬಗ್ಗೆ ಹಿತವಚನಗಳನ್ನು ನೀಡಿದರು.

ಸಮಾರಂಭವು ಮುಕ್ತಾಯವಾದ ನಂತರ ಎರಡು–ಮೂರು ತಿಂಗಳಲ್ಲಿ ಶ್ರೀ ಎಸ್. ವಿ. ರಾಜಾರಾಮಯ್ಯಂಗಾರ್ರವರು ಬದನವಾಳ ಕಾರ್ಯಕ್ಷೇತ್ರದಿಂದ ನಿವೃತ್ತರಾದರು. ಬದನವಾಳ ಪ್ರಾಂತ್ಯದಲ್ಲಿ ಖಾದಿ ಕೆಲಸವನ್ನು ಆರಂಭಿಸಿ ಗಾಂಧಿ ಮಾರ್ಗದಲ್ಲಿ ಈ ಕ್ಷೇತ್ರವನ್ನು ಬೆಳೆಸಿ ರಚನಾತ್ಮಕ ಕಾರ್ಯ ರಂಗದಲ್ಲಿಯೇ ಬದನವಾಳ ಖಾದಿ ಕೇಂದ್ರವನ್ನು ಒಂದು ಮಾದರಿ ಕೇಂದ್ರವನ್ನಾಗಿ ಮಾಡಿಸಿದ ಕೀರ್ತಿಯು ಶ್ರೀಯುತರಿಗೆ ಸಲ್ಲುತ್ತದೆ.

1954ನೇ ಡಿಸೆಂಬರ್ ವೇಳೆಯಲ್ಲಿ ಶ್ರೀ ಕೆ. ಎಸ್. ಬಸವಯ್ಯನವರು, ಬಿ. ಎನ್. ರಂಗಸ್ವಾಮಿಯವರು ಮತ್ತು ಡಿ. ರಂಗಶೆಟ್ಟರು, ಸಂಘದ ಮೇಲ್ವಿಚಾರಕರಾಗಿದ್ದು ಕೆಲಸ ನಿರ್ವಹಿಸಿಕೊಂಡು ಬಂದು 1958ರಂದು ಆಗ ತಾನೇ ಪ್ರಾರಂಭವಾಗಿದ್ದ ಖಾದಿ ಗ್ರಾಮೋದ್ಯೋಗ ಮಂಡಲಿಗೆ ಸರ್ಕಾರದ ಆಜ್ಞೆಯಂತೆ, ಖಾದಿ ಕೇಂದ್ರಗಳು ಭಂಡಾರಗಳು ಇವನ್ನೆಲ್ಲಾ ವಹಿಸಿಕೊಡಲಾಯಿತು. ಖಾದಿ ಮಂಡಲಿಯವರು, ಕೇಂದ್ರಗಳನ್ನು ಕೆಲವು ಕಾಲ ತಮ್ಮದೇ ಆದ ರೀತಿಯಲ್ಲಿ ನಡೆಸಿಕೊಂಡು ಬಂದರು. ಪ್ರಗತಿಯ ಮಾರ್ಗದಲ್ಲಿ ನಡೆಸಲಾಗಲಿಲ್ಲ. ಫಲ ಸ್ವರೂಪವಾಗಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆ ಸಂಸ್ಥೆಗಳಿಗೆ ತಮ್ಮ ಕೇಂದ್ರಗಳನ್ನು ವಹಿಸಿಕೊಟ್ಟರು. ಸಂಸ್ಥೆಗಳ ಆಡಳಿತವೂ ಸಮರ್ಪಕವಾಗಿ ನಡೆಯಲಿಲ್ಲ. ಇದರಲ್ಲೂ ರಾಜಕೀಯ ಪ್ರಭಾವ ಬೆಳೆಯ ತೊಡಗಿ ಹೀನ ಸ್ಥಿತಿಗೆ ಬಂದವು. ಬದನವಾಳ ಖಾದಿ ಕೇಂದ್ರವು 20–25 ವರ್ಷಗಳು ರಾಜಕೀಯ ಪ್ರಭಾವಕ್ಕೆ ಒಳಗಾಗದೆ ಕೇವಲ ರಚನಾತ್ಮಕ ದೃಷ್ಟಿಕೋಣದಿಂದ ನಡೆಸಿಕೊಂಡು ಕೀರ್ತಿಯನ್ನು ಪಡೆದಿದ್ದಿತು. ಈಗ ಅವನತಿಯ ಹೊಸ್ತಿಲಲ್ಲಿದೆ. ಕಾರ್ಯ ಕರ್ತರೂ, ನೂಲುವವರೂ, ನೇಯ್ಗೆ ಹಾಗೂ ಇತರ ಕಸಬುದಾರರೂ ಕಂಗಾಲು ಸ್ಥಿತಿಯಲ್ಲಿದ್ದಾರೆ. ಹೊಸದಾಗಿ ಇದಕ್ಕೆ ಚೈತನ್ಯ ಲಭಿಸಿದಲ್ಲಿ ಇದು ಮುಂದುವರಿಯಬೇಕಾಗುತ್ತದೆ. ಅನ್ಯಥಾ ಖಾದಿ ಕಾರ್ಯವೂ ಸಹ ಘೋಷಣೆಯ ರೂಪದಲ್ಲೇ ಇರಬೇಕಾಗುತ್ತದೆ.

ಖಾದಿ ಕಾರ್ಯಕರ್ತರ ಸ್ಥಿತಿಗತಿಗಳು

ಬದನವಾಳು ನೂಲುವ ಪ್ರಾಂತ್ಯದ ಕಾರ್ಯಕರ್ತರನ್ನು 1956 ರವರೆಗೂ ಹಂಗಾಮಿ ಕೆಲಸಗಾರರೆಂದೇ ಪರಿಗಣಿಸಲಾಗಿತ್ತು. ಸಂಬಳ ಸಾರಿಗೆಯೂ ಬಹಳ

ಕಡಿಮೆಯಿದ್ದಿತು. ಆರಂಭದಿಂದಲೂ ಸೇವಾ ಭಾವನೆಯಿಂದ ಹಣಕ್ಕೆ ಆಸೆ ಪಡದೆ ಇದ್ದುದರಲ್ಲೆ ಸಮಾಧಾನ ಪಟ್ಟುಕೊಂಡು ಕಾರ್ಯಕರ್ತರು ನಿಷ್ಠೆಯಿಂದ ಕೆಲಸ ಮಾಡುತ್ತ ಬಂದಿದ್ದರು. ಒಂಟಿಯಾಗಿ ಕೆಲಸಕ್ಕೆ ಸೇರಿದವರು ಗೃಹಸ್ಥರಾಗಿದ್ದರು. ಸಂಸಾರದ ಭಾರವೂ ಹೆಚ್ಚಾಗಿದ್ದಿತು. ರಾಜ್ಯದ ಆಡಳಿತವೂ ಬದಲಾಗಿ ಪ್ರಜಾ ಮುಖಂಡರಿಗೆ ಆಡಳಿತ ವರ್ಗಾಯಿಸಲ್ಪಟ್ಟಿದ್ದು ಈ ಪರಿಸ್ಥಿತಿಯಲ್ಲಿ ಶ್ರೀ ರಾಜಾ ರಾಮಯ್ಯಂಗಾರ್ರವರು ಸಂಬಂಧಿಸಿದ ಕಾರ್ಯಕರ್ತರೊಡಗೂಡಿ ಇಲಾಖೆಗೆ ಒಂದು ಮನವಿಯನ್ನು ಸಲ್ಲಿಸಿ ಕುಂದು ಕೊರತೆಗಳನ್ನು ನಿವೇದಿಸಿಕೊಂಡರು. ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು ಅರ್ಥ ಮಂತ್ರಿಯಾಗಿದ್ದೂ, ಕೈಗಾರಿಕೆ ವಿಭಾಗವನ್ನೂ ನೋಡಿಕೊಳ್ಳುತ್ತಿದ್ದರು. ಇವರು ಗಾಂಧಿಯವರ ಅನುಯಾಯಿಗಳಾಗಿದ್ದು ಅವರ ಸಾಮೀಪ್ಯದಲ್ಲೇ ವರ್ಷಾನುಗಟ್ಟಲೆ ಇದ್ದು ಅವರ ವಿಶ್ವಾಸವನ್ನೂ ಗಳಿಸಿದ್ದವರು. ಖಾದಿ ಗ್ರಾಮೋದ್ಯೋಗಗಳ ತಾತ್ವಿಕ ಹಿನ್ನೆಲೆಯನ್ನು ಚೆನ್ನಾಗಿ ಅರಿತುಕೊಂಡಿದ್ದವರು. ಆದರೂ ಕಾರ್ಯಕರ್ತರ ಬೇಡಿಕೆಗೆ ಗಮನಕೊಡಲಿಲ್ಲ. ಅವರಿಗೆ ಏನು ಅಡಚಣೆಯಿತ್ತೋ ತಿಳಿಯದು. ರಾಜ್ಯ ಸರ್ಕಾರದ ವತಿಯಿಂದ ಕೆಲಸ ಮಾಡುತ್ತಿದ್ದ ಎಲ್ಲ ಕಾರ್ಯ ಕರ್ತರು ಸೇರಿ ಶ್ರೀ ಡಿ. ರಂಗಶೆಟ್ಟರ ಮುಂದಾಳುತ್ವದಲ್ಲಿ ಸಂಘಟಿತರಾಗಿ ಶ್ರೀ ತಗಡೂರು ರಾಮಚಂದ್ರರಾಯರ ಸಲಹೆಯಂತೆ ಸತ್ಯಾಗ್ರಹ ಮಾಡಲು ನಿರ್ಧರಿಸಿ ಸರ್ಕಾರಕ್ಕೆ ತಿಳಿವಳಿಕೆಕೊಟ್ಟು ಹೋರಾಟಕ್ಕೆ ಸಿದ್ಧರಾಗಬೇಕಾಯ್ತು. ಪತ್ರಿಕೆಗಳಿಗೆ ಹೇಳಿಕೆಕೊಟ್ಟು ಸತ್ಯಾಗ್ರಹ ಆರಂಭಿಸುವ ದಿನ ನಿಶ್ಚಿತಗೊಳಿಸಿ ಪ್ರಕಟಿಸಿದರು.

ಆಗ ಸರ್ಕಾರದವರು ರಚನಾತ್ಮಕ ಕಾರ್ಯ ಧುರೀಣರೂ ಖಾದಿ ಕ್ಷೇತ್ರದಲ್ಲಿ ಮಹಾತ್ಮರ ಬಲಭುಜವಾಗಿಯೂ ಕೆಲಸ ಮಾಡುತ್ತಿದ್ದ ಶ್ರೀ ಕೃಷ್ಣದಾಸ್ ಗಾಂಧಿ ಯವರನ್ನು ಕರೆಸಿ ಅವರಿಗೆ ಈ ವಿಷಯದಲ್ಲಿ ಒಂದು ವರದಿಯನ್ನು ಒಪ್ಪಿಸಲು ಕೇಳಿ ಕೊಂಡರು. ಅವರು ರಾಜ್ಯದಲ್ಲಿ ಪ್ರವಾಸ ಮಾಡಿ ಒಂದು ವರದಿಯನ್ನು ಒಪ್ಪಿಸಿದರು. ಅದರ ಆಧಾರದ ಮೇಲೆ ಸರ್ಕಾರವು ಒಂದು ಕಮಿಟಿಯನ್ನು ರಚಿಸಿತು. ಆ ಕಮಿಟಿ ಯಲ್ಲಿ ಅಡಿಷನಲ್ ಡೈರೆಕ್ಟರವರಾದ ಶ್ರೀ ಚಿಕ್ಕ ನಾರಾಯಣಸ್ವಾಮಿಯವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಎಚ್. ಎಂ. ಚನ್ನಬಸಪ್ಪನವರು, ಎಸ್. ವಾಸುದೇವ ರಾಯರು ಮತ್ತು ಸರದಾರ್ ವೆಂಕಟರಾಮಯ್ಯನವರು ಇವರುಗಳನ್ನು ಸದಸ್ಯ ರನ್ನಾಗಿಯೂ ನೇಮಕಮಾಡಿತು. ಇವರುಗಳು ಆಗಾಗ್ಗೆ ಸಭೆ ಸೇರಿ ಒಂದು ವರದಿ ಯನ್ನು ಸರ್ಕಾರಕ್ಕೆ ಸಲ್ಲಿಸಿತು. ಇವರ ಪರಿಣಾಮವಾಗಿ ಶ್ರೀ ಎಚ್. ಸಿ. ದಾಸಪ್ಪ ನವರು ಕಾರ್ಯಕರ್ತರಿಗೆ ವರ್ಷಕ್ಕೆ ಒಂದು ರೂಪಾಯಿಯಂತೆ ಬಡ್ತಿ ಕೊಡಲು ಆರ್ಡರ್ ಮಾಡಿದರು.

ಇದಕ್ಕೆ ಮುನ್ನ 1946–47ರಲ್ಲಿ ಒಂದು ರೂರಲ್ ಡೆವಲಪ್‌ಮೆಂಟ್ ಕಮಿಟಿ ಯೊಂದು ಸ್ಥಾಪಿತವಾಗಿದ್ದಿತು. ಅದರಲ್ಲಿ ಡೈರೆಕ್ಟರ್ ಆಗಿದ್ದ ಶ್ರೀ ಅಪ್ಪಾದೊರೆ

ಮೊದಲಿಯಾರ್ರವರು ಅಧ್ಯಕ್ಷರಾಗಿಯೂ, ಶ್ರೀ ರಾಜಾರಾಮಯ್ಯಂಗಾರ್ರವರು ಕಾರ್ಯದರ್ಶಿಗಳಾಗಿಯೂ ಇದ್ದರು. ದಿ॥ ಶ್ರೀ ಕೆ. ಸಿ. ರೆಡ್ಡಿ ಮತ್ತು ಶಿವಮೊಗ್ಗದ ಶ್ರೀ ಎಚ್. ರಾಮಕೃಷ್ಣರಾಯರು, ಶ್ರೀ ರಜ್ವಿ ಸಾಹೇಬರು ಇವರುಗಳನೊಳಗೊಂಡ ಕಮಿಟಿಯೂ ಕೆಲವು ಕಾರ್ಯ ಕಲಾಪಗಳನ್ನು ನಡೆಸಿತು. ನಂತರ ದಿ॥ ಕೆ. ಎಸ್. ಶ್ರೀಕಂಠ ಎಂಬವರನ್ನು ಈ ಕಮಿಟಿಗೆ ಕಾರ್ಯದರ್ಶಿಯನ್ನಾಗಿ ನಿಯುಕ್ತಗೊಳಿಸಿದರು. ಈ ಕಮಿಟಿಯಿಂದ ಪರಿಣಾಮಕಾರಿಯಾದ ಯಾವ ಕಾರ್ಯವೂ ನಡೆಯಲಿಲ್ಲ. ಕಾರ್ಯಕರ್ತರ ಬವಣೆಗೂ ಪರಿಹಾರ ದೊರಕಲಿಲ್ಲ.

1956ನೇ ಇಸವಿ ಸೆಪ್ಟಂಬರ್ 15ರಂದು ಶ್ರೀ ಸರ್ ಎಂ. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬ. ಆಗಿನ ಸರ್ಕಾರದ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು. ಕೈಗಾರಿಕಾ ಮಂತ್ರಿಯಾಗಿ ಶ್ರೀ ಎಚ್. ಎಂ. ಚನ್ನಬಸಪ್ಪನವರೂ ಇದ್ದರು. ಡೈರೆಕ್ಟರ್ ಶ್ರೀ ಬಿ. ಬೀರಪ್ಪನವರ ಪರಿಶ್ರಮದಿಂದ ಖಾದಿ ಕೆಲಸಗಾರರಿಗೆ ಕೆಲವು ಅನುಕೂಲಗಳು ದೊರೆತವು. ಸರ್ಕಾರದಿಂದ ಖಾದಿ ಕೆಲಸಗಾರರಿಗೂ ನಿವೃತ್ತಿವೇತನ ಕೊಡುವಂತೆ ಆಜ್ಞೆಯೂ ಹೊರಬಿದ್ದಿತು. ಈ ಒಂದು ಅನುಕೂಲ ಕಲ್ಪಿಸಿಕೊಟ್ಟಿದ್ದಕ್ಕಾಗಿ ಶ್ರೀ ಬೀರಪ್ಪನವರನ್ನು ಸ್ಮರಿಸಿಕೊಳ್ಳಬೇಕಾಗಿದೆ. ಈ ಲೇಖಕನಿಗಂತೂ ಅವರು ತುಂಬಾ ಆತ್ಮೀಯರೇ ಆಗಿದ್ದರು.

ಬದನವಾಳಿನ ಮತ್ತು ತುರವನೂರಿನ ಶಾಖಾ ಕೇಂದ್ರಗಳ ವಿವರ

ಬದನವಾಳು	**ತುರವನೂರು**
ಬದನವಾಳು	ತುರವನೂರು
ನೇರಳೆ	ಬೆಳಗಟ್ಟ
ಕಬ್ಬೆಪುರ	ಮುಸ್ಟೂರು
ಅರಳೀಕಟ್ಟೆ	ನಾಯಕನ ಹಟ್ಟಿ
ಹರವೆ	ತಳಕು
ನಂಜೇದೇವನಪುರ	ಕೊಂಡಲಹಳ್ಳಿ
ಉಡೀಗಾಲ	ಮೊಳಕಾಲ್ಮುರು
ರಾಮಸಮುದ್ರ	ರಾಂಪುರ
ಬದನಗುಪ್ಪೆ	ಹೊಳಲ್ಕೆರೆ
ನಂಜನಗೂಡು	ಸಂತೆಬೆನ್ನೂರು
ಬೇಗೂರು	ನಾತಿಗೆರೆ
ಅರೆಹಟ್ಟಿ	ನೂಲೆನೂರ್
ಮಾಡ್ರಹಳ್ಳಿ	ರಾಮಗಿರಿ

	ರಿಲೀಫ್ ಕೇಂದ್ರ
ಮಾದಾಪಟ್ಟಣ	ಚಿತ್ರದುರ್ಗ
ಸೋಮಹಳ್ಳಿ	ಮದಕೇರಿಪುರ
ಕಬ್ಬಹಳ್ಳಿ	ಇಂಗಳದಾಳು
ಮೂಡಗೂರು	ಹಮಾಲ್
ಮಲೆಯೂರು	ಕಲ್ಲೇದೇವನಪುರ
ತೆರಕಣಾಂಬಿ	ಬಿದಿರುಕೆರೆ
ಗುಂಡ್ಲುಪೇಟೆ	ದೊಣ್ಣೆಹಳ್ಳಿ

ಐಮಂಗಲ ಖಾದಿ ಕೇಂದ್ರ ಮತ್ತು ಶಾಖಾ ಕೇಂದ್ರ

ಐಮಂಗಲ, ದೊಡ್ಡ ಸಿದ್ದವ್ವನ ಹಳ್ಳಿ, ಬುಕ್‌ಜನಕೊಪ್ಪ ಕೇಂದ್ರ, ಹಿರಿಯೂರು, ಹಿರಿಯಬ್ಬೆ, ಸೊಂಡೇಕೆರೆ, ಚಳ್ಳಕೆರೆ, ನೆರೆನಾಳು, ಗಣ್ಣನಾಯ್ಕನ ಹಳ್ಳಿ, ಹೊರಕೆರೆದೇವನಪುರ, ಹೊಸದುರ್ಗ.

ಈ ಕೇಂದ್ರಗಳ ಸುತ್ತಣ ನಾಲ್ಕಾರು ಹಳ್ಳಿಗಳಲ್ಲಿ ನೂಲುವ ಹಾಗೂ ನೇಯುವ ಕೆಲಸಗಾರರಿದ್ದರು. ಅವರುಗಳು ತಾವು ನೂತ ನೂಲನ್ನು ಹಾಗೂ ನೇದ ಬಟ್ಟೆಗಳನ್ನು ಆಯಾ ಕೇಂದ್ರಗಳಿಗೆ ತಂದು ಮಜೂರಿಯನ್ನು ಪಡೆದುಕೊಳ್ಳುತ್ತಿದ್ದರು. ಹಾಗೂ ಬೇಕಾಗುವ ಅರಳೆ, ನೇಯ್ಗೆಗೆ ಬೇಕಾಗುವ ನೂಲನ್ನೂ ಪಡೆಯುತ್ತಿದ್ದರು.

ಕೆಲವು ಘಟನೆಗಳ ನೆನಪು

ಒಮ್ಮೆ ಶ್ರೀ ಟಿ. ಎಸ್. ವೆಂಕಟಗಿರಿರಾಯರು ಮತ್ತು ಶ್ರೀ ಕೆ. ಎನ್. ಸುಬ್ರಹ್ಮಣ್ಯಂರವರೂ ಕಬ್ಬಹಳ್ಳಿ ಕೇಂದ್ರದಿಂದ ಹೊರಟು ಮಾದ್ರಹಳ್ಳಿ ಕೇಂದ್ರಕ್ಕೆ ಹೋಗುತ್ತಿದ್ದರು. ದಾರಿಯಲ್ಲಿ ಅಗತಗೌಡನಹಳ್ಳಿಯ ಹತ್ತಿರ ಒಂದು ವಿಶಾಲವಾದ ಬಯಲು ಪ್ರದೇಶವಿದ್ದಿತು. ಈ ಪ್ರದೇಶದಲ್ಲಿಯೇ ಸಂತೆ ನಡೆಯುತ್ತಿದ್ದಿತು. ಬಯಲಿನ ಒಂದು ಪಕ್ಕದಲ್ಲಿ ಸ್ನಾನಕ್ಕೆ ಅನುಕೂಲವಿದ್ದ ಒಂದು ಹಳೆಯ ಕಾಲದ ಕೊಳವಿದ್ದಿತು. ಆ ಕೊಳದ ಏರಿಯ ಮೇಲೆ ತಮ್ಮ ಸಾಮಾನುಗಳನ್ನಿಟ್ಟು ಸ್ನಾನ ಮಾಡಲು ಇಬ್ಬರೂ ನೀರಿಗಿಳಿದರು. ಶ್ರೀ ಸುಬ್ರಹ್ಮಣ್ಯಂರವರಿಗೆ ಕೊಂಚಮಟ್ಟಿಗೆ ಈಜಲು ಬರುತ್ತಿತ್ತು. ಸ್ವಲ್ಪ ಮುಂದೆ ಧಾವಿಸಿದರು. ಕಲಿತಿರುವ ಈಜು ಉಪಯೋಗಕ್ಕೆ ಬರಲಿಲ್ಲ. ಮುಳುಗು ಹಾಕಲು ಉಪಕ್ರಮ, ಗಾಬರಿಯಿಂದ ಕೂಗಿಕೊಂಡರು. ಶ್ರೀ ಗಿರಿಯಪ್ಪನವರಿಗೂ ಗಾಬರಿ, ಏನು ಮಾಡಲು ತೋಚದು, ಈಜು ಬರುತ್ತಿರಲಿಲ್ಲ. ಸರಿ, ದಿಕ್ಕು ತೋಚದೆ ಉಟ್ಟಿದ್ದ ಪಂಚೆಯನ್ನೇ ಬಿಚ್ಚಿ ನೀರಿಗೆ ಎಸೆದರು. ಅದರ ಒಂದು ಕೊನೆಯನ್ನು ಹಿಡಿದುಕೊಂಡು ಇನ್ನೊಂದನ್ನು ಹಿಡಿದು ಕೊಳ್ಳುವಂತೆ ಕೂಗಿ

ಕೊಂಡರು. ಅದರಂತೆ ಶ್ರೀ ಸುಬ್ರಹ್ಮಣ್ಯಂರು ಒಂದು ತುದಿಯನ್ನು ಹಿಡಿದು ಕೊಂಡರು. ದಡದಲ್ಲಿ ನಿಂತ ಗಿರಿರಾಯರು ನಿಧಾನವಾಗಿ ಅವರನ್ನು ಹತ್ತಿರಕ್ಕೆ ಎಳೆದು ಕೊಂಡು ಅವರ ಜೀವ ಉಳಿಸಿದರು.

ಬದನವಾಳು ನೂಲುವ ಪ್ರಾಂತ್ಯದ ಪ್ರದೇಶವು ಒಂದು ಬೇಚರಾಕ್ ಭೂಮಿ ಹಾಗೂ ಊರವರ ರುದ್ರಭೂಮಿಯಾಗಿತ್ತು. ಕಟ್ಟಡ ಕಟ್ಟುವಾಗ ಪಾಯ ತೋಡು ತ್ತಿದ್ದಂತೆ ಮೂಳೆಗಳೂ ದೊರಕುತ್ತಿದ್ದಿತು. ಈ ಪ್ರದೇಶ ಸರ್ಪಗಳಿಗೂ ಆವಾಸ ಸ್ಥಾನವಾಗಿತ್ತು. ನಾಗರಾಜನ ಪ್ರಭಾವವೂ ಸಾಕಷ್ಟಿತ್ತು. ಶ್ರೀ ಕೆ. ಎಸ್. ಬಸವಯ್ಯ ನವರು ಒಂದು ಜಿಂಕ್‌ಷೀಟ್ ಷೆಡ್ಡಿನಲ್ಲಿ ವಾಸವಿದ್ದರು. ಅವರ ಚೊಚ್ಚಲ ಮಗು ಚಿ. ಸೋಮುವನ್ನು ಸ್ನಾನಮಾಡಿಸಿ ಒಂದು ಕಡೆ ಹಾಸಿಗೆ ಮೇಲೆ ಮಲಗಿಸಿ ತಾಯಿಯು ಬೇರೆ ಕಡೆ ಮನೆಗೆಲಸದಲ್ಲಿ ತೊಡಗಿದ್ದರು. ಕೆಲಸ ಮುಗಿಸಿ ಬಂದು ನೋಡುವಲ್ಲಿ ಒಂದು ನಾಗರಹಾವು ಮಗುವಿನ ಪಕ್ಕದಲ್ಲೇ ಇದ್ದಿತು. ಮಗುವಿನ ತಾಯಿ ತಂದೆ ಯರಿಗೆ ದಿಕ್ಕು ತೋಚದೆ ಕೂಗಿಕೊಂಡರು. ಕೆಲಸಗಾರರು ಓಡಿಬಂದರು. ಅವರಿಗೂ ಏನು ಮಾಡಬೇಕೆಂಬುದು ತೋಚದೆ ಸುಮ್ಮನೆ ನಿಂತುಬಿಟ್ಟರು. ಗಲಾಟೆ ಮಾಡಿದರೆ ಅಥವಾ ಅದನ್ನು ಕೆಣಕಿದರೆ ಮಗುವಿಗೆ ಅಪಾಯವಾಗುವ ಭಯವಿತ್ತು. ಆ ಸಮಯ ದಲ್ಲಿ ಶ್ರೀ ರಾಜಾರಾಮಯ್ಯಂಗಾರ್ರವರು ಒಂದು ಬಿದಿರು ಗಳುವನ್ನು ತಂದು ಶಬ್ದ ಮಾಡಿದರು. ಹಾವು ಸರಿಯಿತು ಹೆಡೆ ಮೇಲೆತ್ತಿತ್ತು. ಶ್ರೀಯುತರು ಗಳುವಿನಿಂದ ಅದರ ಹೆಡೆಗೆ ಅಡ್ಡಲಾಗಿ ಹಿಡಿದು ಮಗುವಿನ ಕಾಲು ಹಿಡಿದು ಎಳೆದು ಬಿಟ್ಟರು. ಮಗು ಬಚಾವ್ ಆಯಿತು. ನೆರೆದಿದ್ದ ಜನರು ಹಾವನ್ನು ಮುಗಿಸಿದರು.

ಇನ್ನೊಬ್ಬ ಕಾರ್ಯಕರ್ತ ಶ್ರೀ ಎಚ್. ಡಿ. ರಂಗಣ್ಣನವರು ಸ್ನಾನಮಾಡಿ ಬಟ್ಟೆ ಬದಲಿಸಿ ಕೊಳ್ಳ ತೊಡಗಿದಾಗ ಅವರ ಹಿಂದುಗಡೆ ಒಂದು ಭಾರಿ ನಾಗರಹಾವು ಬುಸುಗುಟ್ಟುವ ಸದ್ದು ಕೇಳಿ ತಿರುಗಿ ನೋಡಿ ಬಟ್ಟೆಯನ್ನೂ ಹಾಕಿಕೊಳ್ಳದೆ ಗಾಬರಿ ಯಿಂದ ಹೇಗೋ ಹೊರಕ್ಕೆ ಓಡಿಬಂದರು. ಸರಿ ಕೆಲಸಗಾರರು ಜಮಾಯಿಸಿ ನಡುಗು ತ್ತಿದ್ದ ರಂಗಣ್ಣನವರನ್ನು ಸಮಾಧಾನಮಾಡಿ ಅವರಿಗೆ ಬಟ್ಟೆ ತೊಡಿಸಿ ಎಲ್ಲಿಯೂ ಅಲುಗಾಡದೆ ಇದ್ದ ಹಾವನ್ನು ಬಡಿದು ಹಾಕಿದರು. ಆದರೂ ರಂಗಣ್ಣನವರು ಸಮಾಧಾನ ತಂದುಕೊಳ್ಳಲು ಕೆಲವಾರು ಗಂಟೆಗಳೇ ಬೇಕಾಯ್ತು.

ಒಂದು ಸಾರಿ ಕೆ.ಜಿ.ಎಫ್. ನಲ್ಲಿ ಹೊಸದಾಗಿ ಖಾದಿ ಸೆಂಟರನ್ನು ಆರಂಭಿಸಲು ಸರ್ಕಾರದ ಆದೇಶವಿತ್ತು. 1938–39ನೇ ಇಸವಿ ಇರಬಹುದು. ರಾಜ್ಯದಲ್ಲೆಲ್ಲಾ ಪಾನ ನಿರೋಧದ ಅಂಗವಾಗಿ ಈಚಲಮರ ಕಡಿಯುವ ಹೋರಾಟ ನಡೆದಿತ್ತು. ಈ ಸಮಯದಲ್ಲಿ ಖಾದಿ ಉಡುವವರ ಮೇಲೆ ಪೋಲೀಸರ ಕಣ್ಣು ಇರುತ್ತಿತ್ತು. ಶ್ರೀ ಕೆ. ಎಸ್. ಬಸವಯ್ಯನವರು, ಟಿ. ಬಾಲಕಷ್ಣ ಮತ್ತು ನರಸಿಂಹಶಾಸ್ತ್ರಿ

ಎಂಬುವರನ್ನು ಕೆ.ಜಿ.ಎಫ್.ಗೆ ಕಳಿಸಲಾಯ್ತು. ಅವರು ಕೆ ಜಿ ಎಫ್ ನಲ್ಲಿ ಬಸ್ಸು ಇಳಿದ ತಕ್ಷಣ ಪೋಲೀಸರು ಇವರುಗಳನ್ನು ನಾವು ಖಾದಿ ಕೆಲಸಗಾರರು ಎಂತ ಹೇಳಿ ಕೊಂಡರೂ ಬಿಡಲಿಲ್ಲ. ಠಾಣೆಗೆ ಒಯ್ದರು. ಒಂದು ಕೋಣೆಯಲ್ಲಿ ಗೃಹ ಬಂಧನ ದಲ್ಲಿಟ್ಟು ಅವರಿಗೆ ಊಟಕ್ಕೆ ತೊಂದರೆಯಾಗದಂತೆ ನೋಡಿಕೊಂಡರು. ಆಗ ಶ್ರೀ ಬಸವಯ್ಯನವರಿಂದ ಬದನವಾಳಿಗೂ ಡೈರೆಕ್ಟರವರಿಗೂ ತಂತಿ ಮೂಲಕ ಸಮಾಚಾರ ಕಳಿಸಿದರು. ಶ್ರೀ ರಾಜಾರಾಮಯ್ಯಂಗಾರ್ರವರು ಬೆಂಗಳೂರಿಗೆ ಧಾವಿಸಿ ಬಂದು ಡೈರೆಕ್ಟರಾಗಿದ್ದ ಎಂ. ಎಸ್. ರಾಮಚಂದ್ರರಾಯರನ್ನು ಭೇಟಿಯಾಗಿ ಪರಿಸ್ಥಿತಿ ವಿವರಿಸಿದರು. ಡೈರೆಕ್ಟರೊಡಗೂಡಿ ಮಂತ್ರಿಗಳಾಗಿದ್ದ ಶ್ರೀ ಏ. ವಿ. ರಾಮನಾಥ ರವರನ್ನೂ ಭೇಟಿಯಾಗಿ ವಿಷಯ ತಿಳಿಸಿದರು. ಅವರಿಗೆ ಪೋಲೀಸು ಮತ್ತು ಕೈಗಾರಿಕೆ ವಾಣಿಜ್ಯದ ಅಧಿಕಾರವೂ ಇದ್ದಿತು. ಎರಡು ಕಡೆ ಫೈಲುಗಳನ್ನೂ ಅವರು ನೋಡ ಬೇಕಾಗಿತ್ತು. ನಗುತ್ತ ಅವರಿಗೆ ಹೇಳಿದರಂತೆ. ಒಂದು ಫೈಲಿನ ಮೇಲೆ ಅವರನ್ನು ಬಂಧನದಲ್ಲಿಡಿ ಎಂತ ಬರೆದಿದ್ದೇನೆ, ಇನ್ನೊಂದರಲ್ಲಿ ಇವರು ಇಲಾಖೆಯವರು ತಕ್ಷಣ ಬಿಡುಗಡೆ ಮಾಡಿ ಎಂತ ಬರೆದಿವೆ. ಎಂತಹ ವಿಪರ್ಯಾಸ ಎಂದು ಹೇಳುತ್ತಾ ಅವರು ಗಳ ಬಿಡುಗಡೆಗೆ ಆರ್ಡರ್ ಮಾಡಿದರಂತೆ.

ಪಿರಿಯಾಪಟ್ಟಣದ ಶ್ರೀ ಎಚ್. ಎಂ. ಚನ್ನಬಸಪ್ಪನವರು ಮೈಸೂರು ಜಿಲ್ಲೆಯ ಕಾಂಗ್ರೆಸ್ ಮುಂದಾಳಾಗಿದ್ದರು. ಒಳ್ಳೆಯ ವ್ಯವಸಾಯಗಾರರು. ಸರ್ಕಾರದಿಂದ 300 ಎಕರೆ ಅರಣ್ಯವನ್ನು ದರಖಾಸ್ತಿನಲ್ಲಿ ಪಡೆದು ಅದನ್ನು ಸರಕಾರೀ ಬೇಸಾಯ ಪದ್ಧತಿಯಂತೆ ವ್ಯವಸಾಯ ಮಾಡಿಸುತ್ತಿದ್ದರು. ಜಿಲ್ಲಾ ಬೋರ್ಡಿನಲ್ಲಿ ಕಾಂಗ್ರೆಸ್ ವತಿಯಿಂದ ಆರಿಸಿ ಬಂದು ಮುಖ್ಯಸ್ಥರಾಗಿದ್ದರು. ನಂತರ ಇವರು ಕೈಗಾರಿಕಾ ಮಂತ್ರಿಗಳೂ ಆದರು. ಆ ಸಮಯದಲ್ಲಿ ಒಂದು ಸಾರಿ ಕೈಗಾರಿಕಾ ಡೈರೆಕ್ಟರಿಗೆ ಫೋನ್ ಮಾಡಿ, ಖಾದಿ ಬಟ್ಟೆ ಬೇಕೆಂದು ತಿಳಿಸಿದರು. ಡೈರೆಕ್ಟರವರು ಖಾದಿ ಎಂಪೋರಿಯಂನಲ್ಲಿ ಮ್ಯಾನೇಜರಾಗಿದ್ದ ಡಿ. ರಂಗಶೆಟ್ಟರಿಗೆ ಟೆಲಿಫೋನಿನ ಮೂಲಕ ತಿಳಿಸಿ ಮಂತ್ರಿಗಳಿಗೆ ಬೇಕಾದ ಬಟ್ಟೆ ತಲುಪಿಸುವಂತೆ ತಿಳಿಸಿದರು. ಮಾನ್ಯ ಮಂತ್ರಿಗಳಿಗೆ ಬದನವಾಳು ಖಾದಿ ಕೋಲಾರದ ಕಂಬಳಿ ಮೇಲೆ ತುಂಬಾ ಅಭಿಮಾನವಿತ್ತು. ಸರಿ, ಮಂತ್ರಿಗಳಿಗೆ ಸುದ್ದಿ ತಿಳಿಸಿ ತಮಗೆ ಬೇಕಾದ ಬಟ್ಟೆ ತಿಳಿಸಬೇಕೆಂದು ಕೇಳಲಾಯ್ತು.

ಸಂಜೆ ಹೊತ್ತಿಗೆ ಎಂಪೋರಿಯಂ ಬಳಿಗೆ ಅವರ ಕಾರನ್ನು ಕಳಿಸಿಕೊಟ್ಟರು. ಅದರಲ್ಲಿ ವಿವಿಧ ನಮೂನೆಯ ಖಾದಿಯನ್ನು ಹಾಕಿಕೊಂಡು ಅವರ ಬಳಿ ತೆಗೆದುಕೊಂಡು ಹೋಗಲಾಯಿತು. ಮಂತ್ರಿಗಳು ತಮಗೆ ಬೇಕಾದ ಬಟ್ಟೆಯನ್ನು ತೆಗೆದುಕೊಂಡು ಉಳಿದದ್ದನ್ನು ವಾಪಸು ಮಾಡಿದರು. ಈ ಸಂದರ್ಭದಲ್ಲಿ ಶ್ರೀ ರಂಗಶೆಟ್ಟರು ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಪುಟ್ಟರಾಜ ಅರಸ್‌ರವರ ಪ್ರತಿಭಟನೆಯನ್ನು ಕಿವಿಗೆಹಾಕಿಕೊಳ್ಳದೆ ಖಾದಿ ಮತ್ತು ಟೆಕ್ಸ್‌ಟೈಲ್ ನೌಕರರಿಗೂ ಪೆನ್ಶನ್ ಆರ್ಡರ್‌ಮಾಡಿಕೊಡಬೇಕೆಂದು ಕೇಳಿ

ಕೊಂಡರು. ಮರುದಿನ ಡೈರೆಕ್ಟರನ್ನು ಭೆಟ್ಟಿಯಾದರು. ಅವರಿಗಾಗಲೆ ಸುದ್ದಿ ಮುಟ್ಟಿದ್ದಿತು. ಮಂತ್ರಿಗಳೊಂದಿಗೆ ನಡೆದ ಮಾತುಕತೆಯನ್ನು ವಿವರಿಸಿದರು. ಅವರು ನಿಮಗೆಲ್ಲಾ ಪೆನ್ಶನ್ ಬರುವಂತೆ ಬರೆದಿದ್ದೇನೆ ಎಂದು ಹೇಳಿದರು. ಕೆಲ ಸಮಯಾನಂತರ ಸರ್ ಎಂ. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದಂದು ಖಾದಿ ಕೆಲಸಗಾರರಿಗೆ ಪೆನ್ಶನ್ ಕೊಡುವ ಆರ್ಡರ್ ಬಂದಿತು. ಆಗಿನ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ ನವರೂ ಶ್ರೀ ಎಚ್. ಎಂ. ಚನ್ನಬಸಪ್ಪನವರೂ ಇವರ ಜತೇಲಿ ಶ್ರೀ ಬೀರಪ್ಪನವರೂ ಅಭಿನಂದನಾರ್ಹರೂ ಚಿರಸ್ಮರಣೀಯರೂ ಆಗಿದ್ದಾರೆ.

ಖಾದಿ ಮಂಡಲಿಯವರು ಬದನವಾಳು ಕಾಂಪೋಜಿಟ್ ಸೆಂಟರ್ ಇದ್ದಾಗ ಬದನವಾಳು ಖಾದಿ ಕೇಂದ್ರದ ಸುವರ್ಣಮಹೋತ್ಸವವನ್ನು ನೆರವೇರಿಸಬೇಕೆಂಬ ಅಭಿಲಾಷೆಯಿಂದ ಸರ್ಕಾರದ ವತಿಯಿಂದ ಹತ್ತು ಸಾವಿರ ರೂಪಾಯಿಗಳನ್ನು ಮೊದಲ ಕಂತಿನಲ್ಲಿ ಮಂಜೂರ್ಮಾಡಿಸಿಕೊಳ್ಳಲಾಯಿತು. ಖಾದಿ ಮಂಡಲಿಯಲ್ಲಿ ಒಬ್ಬ ಮಾನ್ಯ ಸದಸ್ಯರು ಈ ಸಮಾರಂಭಕ್ಕೆ ಪ್ರಧಾನಮಂತ್ರಿ ಶ್ರೀಮತಿ ಇಂದಿರಾಜಿಯವರನ್ನೇ ಕರೆತರಬೇಕೆಂಬುದಾಗಿ ಬೆಂಗಳೂರಿನಿಂದ ಎರಡು ಮೂರು ಸಾರಿ ವಿಮಾನದಲ್ಲಿ ದೆಹಲಿ ಯಾತ್ರೆ ಮಾಡಿ ಖರ್ಚುಮಾಡಿ ಮುಗಿಸಿದರು. ಮುಂದೆ ಈ ಸಮಗ್ರ ಗ್ರಾಮೋದ್ಯೋಗ ಕೇಂದ್ರದಲ್ಲಿ ಹಣ ದುರುಪಯೋಗವಾಗಿದೆ ಎಂಬ ಕಾರಣದಿಂದ ಈ ಕಾಂಪೋಜಿಟ್ ಸೆಂಟರನ್ನು. ಬದನವಾಳ ಖಾದಿ ಸಂಘಕ್ಕೆ ವಹಿಸಿಬಿಟ್ಟು ಸುಮ್ಮನಾದರು. ಸಂಘ ದವರು ತಮ್ಮ ದೌರ್ಬಲ್ಯದಿಂದ ಈ ಕೆಲಸಕ್ಕೆ ಮುಂದಾಗಲಿಲ್ಲ. ಸ್ವರ್ಣ ಮಹೋತ್ಸವವು ವಿವರ್ಣವಾಗಿಯೇ ಉಳಿಯಿತು.

ಸಮಗ್ರ ಗ್ರಾಮೋದ್ಯೋಗ ಕೇಂದ್ರವೂ ಈ ಕಾರಣದಿಂದ ತನ್ನ ಅಗ್ರಮಾನ್ಯತೆ ಯನ್ನು ಕಳೆದುಕೊಂಡು ಪುನಃ ಬದನವಾಳು ಖಾದಿ ಗ್ರಾಮೋದ್ಯೋಗ ಸಂಘಕ್ಕೆ ತನ್ನನ್ನು ಅರ್ಪಿಸಿಕೊಂಡಿತು. ಇದು 1972 ರಲ್ಲಿ ಜರುಗಿತು. ಶ್ರೀ ವಿ. ಟಿ. ಮಾಗಡಿ ಯವರು ಆಗ ಖಾದಿ ಬೋರ್ಡಿನ ಅಧ್ಯಕ್ಷರಾಗಿದ್ದರು. ಈವಾಗ ಸಮಗ್ರ ಗ್ರಾಮೋ ದ್ಯೋಗ ಕೇಂದ್ರ ಬದನವಾಳ ಖಾದಿ ಗ್ರಾಮೋದ್ಯೋಗ ಸಂಘದಲ್ಲಿ ಮಿಳಿತವಾಗಿ ಕೆಲಸ ಸಾಗಿಸುತ್ತಿದೆ. ಇದನ್ನೊಳಗೊಂಡ ಈ ಕ್ಷೇತ್ರವು ಆರ್ಥಿಕವಾಗಿ ತುಂಬಾ ಸಂಕಷ್ಟಗಳನ್ನು ಅನುಭವಿಸುತ್ತ ಮುನ್ನಡೆಯುತ್ತಿದೆ. ಭವಿಷ್ಯದ ಪಥದತ್ತ-ದೃಷ್ಟಿಹಾಯಿಸಿ ಇತರ ಆಶ್ರಯದಿಂದ ಮುಕ್ತಿ ಹೊಂದಿ ಸ್ವಾವಲಂಬನ ಧ್ಯೇಯವಿಟ್ಟುಕೊಂಡು ಮುನ್ನಡೆಯು ತ್ತಿದೆ. ಇದರ ಈ ಉದ್ದೇಶ ಸಾಧನೆಗೆ ಭಗವಂತನು ಸಹಾಯ ಮಾಡಲಿ ಎಂದು ಪ್ರಾರ್ಥಿಸುತ್ತೇನೆ. ಸಾರ್ವಜನಿಕರು ಹಾಗೂ ಜನತಾ ಸರ್ಕಾರವೂ ಸಹಾಯವಿತ್ತು ಇದನ್ನು ಮುನ್ನಡೆಸಿ ಬಡಜನತೆಗೆ ನೆರವಾಗುತ್ತಾರೆಂದು ಆಶಿಸಲಾಗಿದೆ.

* * * *



ಬದನವಾಳು ಕೇಂದ್ರದ ಪ್ರತಿಷ್ಠಾಪನೆಗೆ ಕಾರಣಕರ್ತ ಗವರ್ನರ್ ಜನರಲ್ ರಾಜಾಜಿಯವರು
ಮೈಸೂರಿಗೆ ಭೇಟಿಕೊಟ್ಟಾಗ ಶ್ರೀ ಮನ್ಮಹಾರಾಜರೊಂದಿಗೆ ಮೆರವಣಿಗೆಯಲ್ಲಿ
ಬದನವಾಳು ವಿಷಯ ಪ್ರಸ್ತಾಪಿಸಿದ್ದರು



ಬದನವಾಳಿನ ತರಬೇತಿ ವರ್ಗದ ಶಿಷ್ಯರು


ಮೈಸೂರು ರಾಜ್ಯದಲ್ಲಿನ ವಡೆಯರ ಆಳ್ವಿಕೆಯಲ್ಲಿ ಖಾದಿಯ ಸೇರ್ಪಡೆ

ಶ್ರೀ ಡಿ. ರಂಗಶೆಟ್ಟಿ

ವಿಜಯನಗರದ ಪತನಾನಂತರ ದಕ್ಷಿಣ ಭಾರತದಲ್ಲಿ ಅನೇಕ ಸಣ್ಣಪುಟ್ಟ ಪ್ರಾಂತ್ಯಗಳು ಹುಟ್ಟಿಕೊಂಡವು. ಅಂಥವುಗಳಲ್ಲಿ ಮೈಸೂರು ಸಂಸ್ಥಾನವು ಪ್ರಮುಖವಾದದು. 1399ರಲ್ಲಿ ಮೈಸೂರು ಪ್ರದೇಶಕ್ಕೆ ಆಗಮಿಸಿದ ಯದುರಾಯರು ಮತ್ತು ಅವರ ಸೋದರರಾದ ಕೃಷ್ಣರಾಯರು ಮೈಸೂರು ವಡೆಯರ ಮೂಲ ಪುರುಷರು. ದ್ವಾರಕೆ ಇವರ ಮೂಲಸ್ಥಾನ. ಕೃಷ್ಣನ ವಂಶೀಯರಾದ ಇವರನ್ನು ಯದುವಂಶೀಯರೆಂದು ಕರೆಯಲಾಗಿದೆ. ಈ ವೇಳೆಯಲ್ಲಿ ಶ್ರೀ ಚಾಮರಾಜ ಎಂಬವರು ಶ್ರೀರಂಗಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಮೈಸೂರನ್ನು 1399ರ ವರೆಗೂ ಆಳಿ ಮಗಳು ಮತ್ತು ಮಡದಿಯನ್ನು ಬಿಟ್ಟು ಕಾಲವಾದರು. ಭೀತಿಗೊಂಡ ಈ ತಾಯಿ ಮಗಳು ಹದಿನಾಡೆಂಬ ಗ್ರಾಮಕ್ಕೆ ಬಂದು ನೆಲೆಸಿದರು. ಕಾರುಗಳ್ಳಿ ಪಾಳೆಯಗಾರ ಮಾರನಾಯ್ಕನು ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡನು. ಭಯಗ್ರಸ್ತರಾದ ವಿಧವೆ ದೇವಾಜಮ್ಮಣ್ಣಿಯನ್ನು ಆಕೆಯ ಮಗಳಾದ ಚಿಕ್ಕದೇವರಸಿಯನ್ನು ಮದುವೆಮಾಡಿಕೊಡಬೇಕೆಂದು ಪೀಡಿಸತೊಡಗಿದ. ಶ್ರೀ ಚಾಮುಂಡಾಂಬಿಕೆಯ ಪ್ರೇರಣೆಯಿಂದ ಶ್ರೀ ಯದುರಾಯರು ಮತ್ತು ಕೃಷ್ಣರಾಯರು ಇವರ ಸಹಾಯಕ್ಕೆ ಬಂದು ಕಾರುಗಳ್ಳಿ ಪಾಳೆಯಗಾರನನ್ನು ಸಂಹರಿಸಿದರು. ಸಂತುಷ್ಟಳಾದ ದೇವಾಜಮ್ಮಣ್ಣಿಯು ಮಗಳನ್ನು ಯದುರಾಯರಿಗೆ ಮದುವೆಮಾಡಿಕೊಟ್ಟಳು. ಇಲ್ಲಿಂದ ಮುಂದಿನ ಪೀಳಿಗೆಯವರು ವಡೆಯ ಎಂದು ಬಿರುದಾಂಕಿತರಾದರು.

ಯದುರಾಯರ ನಂತರ ಇವರ ಮಗ ಬೆಟ್ಟದ ಚಾಮರಾಜ ವಡೆಯ ತರುವಾಯ ತಿಮ್ಮರಾಜ ವಡೆಯರು, ಒಂದನೆಯ ಚಾಮರಾಜ ವಡೆಯರು, ಎರಡನೆಯ ಬೆಟ್ಟದ ಚಾಮರಾಜ ವಡೆಯರು, ಬೋಳ ಚಾಮರಾಜ ವಡೆಯರು, ಮೂರನೆ ಬೆಟ್ಟದ ಚಾಮರಾಜ ವಡೆಯರು ಕ್ರಮವಾಗಿ ರಾಜ್ಯವಾಳಿದರು. ನಂತರ ಆಳಿದ ರಾಜ ವಡೆಯರ (ಕ್ರಿ. ಶ. 1578–1617) ಕಾಲದಲ್ಲಿ ರಾಜ್ಯವು ದಕ್ಷಿಣದ ಉಮ್ಮತ್ತೂರು ವರೆಗೂ ವಿಸ್ತಾರಗೊಂಡಿತು.

ಚಾಮರಾಜ ಒಡೆಯರು (ಕ್ರಿ.ಶ. 1617–37): ಇವರು ರಾಜ ಒಡೆಯರ ಮೊಮ್ಮಗ. ಇವರ ಆಡಳಿತದಲ್ಲಿ ದಳವಾಯಿ ಪ್ರಬಲನಾಗಿ ಸಿಂಹಾಸನ ಏರುವ ಪ್ರಯತ್ನ ಮಾಡಿದನು. ಇದನ್ನು ತಿಳಿದ ಅರಸರು ಅವನ ಕಣ್ಣು ಕೀಳಿಸಿ ಸೆರೆಯಲ್ಲಿರಿಸಿದರು. ಇವರ ಕಾಲದಲ್ಲಿ ರಾಜ್ಯವು ಸರ್ವತೋಮುಖ ವೃದ್ಧಿ ಹೊಂದಿತು. ನಂತರ ಇವರ ಚಿಕ್ಕಪ್ಪ ರಾಜ ಒಡೆಯರು 1 ವರ್ಷ ಮಾತ್ರ ಅಧಿಕಾರ ನಡೆಸಿದರು. ಇವರನ್ನು ದಳವಾಯಿ ವಿಕ್ರಮರಾಯನು ಕೊಲೆಮಾಡಿದ.



ಮೈಸೂರು ಒಡೆಯರ ಸಂತತಿಯವರು

ಕಂಠೀರವ ನರಸರಾಜ ವಡೆಯರು (1638–59) : ಇವರು ಮೈಸೂರು ಅರಸರಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದರು. ಇವರ ಆಡಳಿತದಲ್ಲೂ ರಾಜ್ಯವು ಇನ್ನಷ್ಟು ವಿಸ್ತಾರ ಹೊಂದಿತು. ಸ್ವತಂತ್ರವಾದ ಟಂಕಸಾಲೆ ನಿರ್ಮಿಸಿ ಕಂಠೀರಾಯ ವರಹ ಎಂದು ನಾಣ್ಯವನ್ನು ಚಲಾವಣೆಗೆ ತಂದರು.

ದೊಡ್ಡ ದೇವರಾಜ ವಡೆಯರು (1659–72) : ಇವರು ಕಂಠೀರವ ನರಸರಾಜ ವಡೆಯರ ದತ್ತು ಪುತ್ರರು. ಇವರು ಕೆಳದಿ ಶಿವಪ್ಪನಾಯ್ಕ ಹಾಗೂ ಬಿಜಾಪುರದ ರಣದುಲ್ಲಾಖಾನನನ್ನೂ ಮತ್ತು ಮಧುರೆಯ ನಾಯಕನನ್ನೂ ಸೋಲಿಸಿ, ರಾಜ್ಯದ ಗಡಿಯನ್ನು ವಿಸ್ತರಿಸಿದರು. ಚಾಮುಂಡಿ ಬೆಟ್ಟಕ್ಕೆ ಮೆಟ್ಟಿಲುಗಳನ್ನು ಕಟ್ಟಿಸಿದರು. ಇವರಿಗೆ ಪರರಾಯ ಭಯಂಕರ, ಹಿಂದೂರಾಯ ಸುತ್ರಾಣ ಮುಂತಾದ ಬಿರುದು ಗಳಿದ್ದವು.

ಚಿಕ್ಕ ದೇವರಾಜ ವಡೆಯರು (1672–1704) : ಇವರು ಬಹಳ ದಕ್ಷ ಆಡಳಿತ ಗಾರರಾಗಿದ್ದರು. ದೆಹಲಿಯ ಸುಲ್ತಾನ ಔರಂಗಜೇಬನೊಡನೆ ಸಂಧಿ ಮಾಡಿಕೊಂಡು ಅವನ ವಿಶ್ವಾಸಕ್ಕೆ ಪಾತ್ರರಾಗಿದ್ದರು. ಇವರ ಕಾಲದಲ್ಲಿಯೇ ಅಠಾರ ಕಛೇರಿ ಎಂಬ 18 ಆಡಳಿತ ಶಾಖೆಯನ್ನು ಏರ್ಪಡಿಸಿದ್ದರು. ರಾಜ್ಯ ಭಂಡಾರವನ್ನು ಕ್ರಮಗೊಳಿಸಿ ನವಕೋಟಿ ನಾರಾಯಣ ಎಂಬ ಬಿರುದಿಗೆ ಪಾತ್ರರಾದರು. ಇವರ ಆಡಳಿತದಲ್ಲಿ ರಾಜ್ಯವು ವಿಸ್ತಾರಗೊಂಡುದೇ ಅಲ್ಲದೆ ಸರ್ವತೋಮುಖವಾಗಿ ಅಭಿವೃದ್ಧಿಗೊಂಡಿತು. ಇವರ ನಂತರ ಅಸಮರ್ಥರಾದ ಅರಸರಿಗೆ ರಾಜ್ಯಾಡಳಿತ ದೊರೆತು, ದಳವಾಯಿಗಳು ಆಡಳಿತವನ್ನು ಕೈಗೆ ತೆಗೆದುಕೊಂಡು ಸರ್ವಾಧಿಕಾರಿಗಳಂತೆ ವರ್ತಿಸಿದರು. ಸೈನ್ಯದಲ್ಲಿ ಸಾಮಾನ್ಯ ಅಧಿಕಾರಿಯಾಗಿದ್ದ ಹೈದರನು ಪ್ರಬಲನಾಗಿ 20 ವರ್ಷ ಸ್ವತಂತ್ರವಾಗಿ ರಾಜ್ಯಭಾರ ಮಾಡಿದನು. ಅನಂತರ ಅವನ ಮಗ ಟಿಪ್ಪುವು ರಾಜ್ಯಾಡಳಿತವನ್ನು ತನ್ನ ವಶಮಾಡಿಕೊಂಡನು. ಆಗಿನ ರಾಜರು ಕೇವಲ ಅಸಮರ್ಥರಾಗಿದ್ದುದರಿಂದ ಅವರನ್ನು ಲಕ್ಷ್ಯಕ್ಕೆ ತಾರದೆ 17 ವರ್ಷ ಸ್ವತಂತ್ರವಾಗಿಯೇ ರಾಜ್ಯಭಾರ ಮಾಡಿದನು.

ಹೈದರ್ ಮತ್ತು ಟಿಪ್ಪು ಇವರ ಅವಧಿಯಲ್ಲಿ ಬ್ರಿಟಿಷರು ನಾಲ್ಕು ಬಾರಿ ಮೈಸೂರ ಮೇಲೆ ದಂಡಯಾತ್ರೆ ನಡೆಸಿ 4ನೇ ಯುದ್ಧದ ನಂತರ ಮೈಸೂರನ್ನು ವಶ ಪಡಿಸಿಕೊಂಡರು. ವಿಶಾಲವಾಗಿದ್ದ ಮೈಸೂರು ರಾಜ್ಯವನ್ನು 3 ಭಾಗ ಮಾಡಿ ಒಂದು ಭಾಗವನ್ನು ರಾಜಮನೆತನದ ಮುಮ್ಮಡಿ ಕೃಷ್ಣರಾಜ ವಡೆಯರಿಗೆ ಒಪ್ಪಿಸಿದರು.

ಮುಮ್ಮಡಿ ಕೃಷ್ಣರಾಜ ವಡೆಯರು (1799–1868) : ಇವರಿಗೆ ರಾಜ್ಯವನ್ನು ಒಪ್ಪಿಸಿದಾಗ ಕೇವಲ 3 ವರ್ಷದವರಾಗಿದ್ದರು. ಮಹಾರಾಣಿ ಲಕ್ಷಮ್ಮಣಿಯವರು ಕೃಷ್ಣರಾಜ ವಡೆಯರು ಪ್ರಾಪ್ತ ವಯಸ್ಕರಾಗುವವರೆಗೂ ರೀಜಂಟರಾಗಿ ರಾಜಕಾರ್ಯ ವನ್ನು ಸಮರ್ಥವಾಗಿ ನೆರವೇರಿಸಿದರು. ಈ ಮೂರನೆ ಕೃಷ್ಣರಾಜ ವಡೆಯರ ಕಾಲವು

ಅಷ್ಟೇನೂ ಸುಸೂತ್ರವಾಗಿರಲಿಲ್ಲ. ಅತೃಪ್ತಿಗೊಂಡ ಕೆಲವು ಅಧಿಕಾರಿಗಳ ಪ್ರೇರಣೆಯಿಂದ ಅಲ್ಲಲ್ಲಿ ದಂಗೆಗಳಾದವು. ಬೊಕ್ಕಸ ಖಾಲಿಯಾಯ್ತು. ಕೊಂಚಮಟ್ಟಿನ ಅನಾಯಕತೆ ಉಂಟಾಯ್ತು. ಆಗಿನ ರೆಸಿಡೆಂಟನು ಗೌರ್ನರ್ ಜನರಲ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕನಿಗೆ ಇಲ್ಲಿನ ವೈಪರೀತ್ಯವನ್ನು ವರದಿ ಮಾಡಿದ್ದರ ಮೇಲೆ ಬ್ರಿಟಿಷರೇ ಮೈಸೂರು ಆಡಳಿತವನ್ನು ತಮ್ಮ ಕೈಗೆ ತೆಗೆದುಕೊಂಡು 50 ವರ್ಷಕಾಲ ಆಡಳಿತ ನಡೆಸಿ ಪುನಃ ರಾಜ ಮನೆತನಕ್ಕೆ ಒಪ್ಪಿಸಿದರು.

ಹತ್ತನೆಯ ಚಾಮರಾಜ ಒಡೆಯರು (1881–94) : ಮುಮ್ಮಡಿ ಕೃಷ್ಣರಾಜ ಒಡೆಯರು ಕಾಲವಾದ ಮೇಲೆ ಹತ್ತನೆಯ ಚಾಮರಾಜ ಒಡೆಯರು ಅಧಿಕಾರ ವಹಿಸಿಕೊಂಡರು. ಇದಕ್ಕೆ ಮೊದಲು 3 ಜನ ಆಂಗ್ಲ ಕಮೀಷನರುಗಳೇ ಆಡಳಿತಗಾರರಾಗಿದ್ದರು. ಚಾಮರಾಜ ಒಡೆಯರಿಗೆ ದಿವಾನ್ ರಂಗಾಚಾರ್ಲು ಅವರು ದಿವಾನರಾಗಿಯೂ ಅವರ ಸಲಹೆಗಾರರಾಗಿ ಇಬ್ಬರು ಕೌನ್ಸಿಲರ್‌ಗಳೂ ಇದ್ದರು. ಇವರ ಕಾಲದಲ್ಲಿ ಮೈಸೂರು ರಾಜ್ಯವು ಆರ್ಥಿಕ ಅಭಿವೃದ್ಧಿಗಾಗಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಯಶಸ್ವಿಯಾಗಿ ನಿರ್ವಹಿಸಿತು. 1894ರಲ್ಲಿ ಡಿಫ್ತೀರಿಯಾ ಖಾಯಿಲೆಗೆ ತುತ್ತಾಗಿ ಡಿಸೆಂಬರ್ 28ರಂದು ನಿಧನರಾದರು.

ನಾಲ್ಮಡಿ ಕೃಷ್ಣರಾಜ ಒಡೆಯರು (1895–1940) : ಇವರ ಕಾಲದಲ್ಲಿ ಮೈಸೂರು ಮಾದರಿ ರಾಜ್ಯವೆಂದು ಖ್ಯಾತಿ ಹೊಂದಿತ್ತು. ಅನೇಕ ಕೈಗಾರಿಕೋದ್ಯಮಗಳು ತಲೆಎತ್ತಿದ್ದವು. ಖಾದಿ ಗ್ರಾಮೋದ್ಯೋಗಕ್ಕೆ ತುಂಬ ಪ್ರೋತ್ಸಾಹ ದೊರೆತು, ಬದನವಾಳದಲ್ಲಿ ಬದನವಾಳು ನೂಲು ಪ್ರಾಂತ್ಯ ರಚಿತವಾಗಿ ಸಾವಿರಾರು ಗ್ರಾಮೀಣ ಬಡ ಕುಟುಂಬಗಳಿಗೆ ಜೀವನಕ್ಕೆ ಆಸರೆ ದೊರಕಿತು. ಮಹಾತ್ಮಾ ಗಾಂಧಿಯವರು ಮೈಸೂರನ್ನು ರಾಮರಾಜ್ಯಕ್ಕೆ ಹೋಲಿಸಿದರು. ಇವರ ಕಾಲದಲ್ಲಿ ಕನ್ನಂಬಾಡಿ ಕೃಷ್ಣರಾಜ ಸಾಗರ, ಭದ್ರಾವತಿ ಉಕ್ಕಿನ ಕಾರ್ಖಾನೆ ಪ್ರಮುಖವಾದ ಕೈಗಾರಿಕೆಗಳಾಗಿದ್ದವು. ಜನಜೀವನ ಸಾಕಷ್ಟು ನೆಮ್ಮದಿಯಾಗಿದ್ದಿತು.

ಜಯಚಾಮರಾಜ ಒಡೆಯರು (1940–47) : ಇವರು ಸಮರ್ಥ ಆಡಳಿತಗಾರರಾಗಿದ್ದು ಯದುವಂಶದ ಕಡೇ ರಾಜರು. ಭಾರತ ಸ್ವತಂತ್ರವಾದ ಮೇಲೆ ದೇಶೀಯ ಎಲ್ಲ ರಾಜರುಗಳೂ ರಾಜ್ಯವನ್ನು ಅನಿವಾರ್ಯವಾಗಿ ಕಳೆದುಕೊಳ್ಳಬೇಕಾಯ್ತು. ಅವರಲ್ಲಿ ಇವರೂ ಒಬ್ಬರಾದರು. ಸ್ವಾತಂತ್ರ್ಯ ಚಳವಳಿಯ ಬಿಸಿ ಮೈಸೂರಿಗೂ ಹಬ್ಬಿದ್ದು ಜವಾಬ್ದಾರಿ ಸರ್ಕಾರಕ್ಕೆ ಚಳವಳಿ ನಡೆಯಿತು. ನಂತರ ಚಾಮರಾಜ ಒಡೆಯರು ರಾಜ ಪ್ರಮುಖರಾದರು. ಕಡೆಗೆ ಗೌರ್ನರಾಗಿದ್ದು ನಿವೃತ್ತಿ ಹೊಂದಿದರು.

ಈ ಎಲ್ಲ ರಾಜರುಗಳ ಕಾಲದಲ್ಲಿ ಎಲ್ಲ ರಾಜಮನೆತನದವರೂ ಕೈನೂಲು ಮತ್ತು ಕೈಮಗ್ಗಗಳಿಗೆ ಪ್ರೋತ್ಸಾಹವಿತ್ತು, ಅದನ್ನು ಪೋಷಿಸಿಕೊಂಡು ಬಿದಿದ್ದಾರೆ.

ಗಾಂಧಿಯವರು ಈ ನೂಲು ಮತ್ತು ಮಗ್ಗದಿಂದ ತಯಾರಾದ ಬಟ್ಟೆಗೆ ''ಖಾದಿ'' ಎಂದು ಹೆಸರು ಕೊಟ್ಟು ಈ ಉದ್ಯಮವನ್ನು ಗ್ರಾಮ ಕೈಗಾರಿಕೆಗಳ ಉದ್ಯಮಕ್ಕೆ ಆದ್ಯತೆ ಕೊಟ್ಟು ಈ ಉದ್ಯಮವನ್ನು ಸೌರವ್ಯೂಹದ ಸೂರ್ಯನಿಗೆ ಹೋಲಿಸಿ ಭಾರತ ದೇಶಾದ್ಯಂತ ಇದನ್ನು ಜಾರಿಗೆ ತಂದರು. ಮೈಸೂರಿನ ರಾಜರು ಅದರಲ್ಲೂ ಮುಖ್ಯ ವಾಗಿ ನಾಲ್ಮಡಿ ಕೃಷ್ಣರಾಜ ಒಡೆಯರು ಶ್ರೀ ಜಯಚಾಮರಾಜ ಒಡೆಯರು ಖಾದಿ ಉಡುಪುಗಳನ್ನು ಸ್ವತಹ ಉಪಯೋಗಿಸುತ್ತಿದ್ದುದೇ ಅಲ್ಲದೆ ಕೆಲವು ಇಲಾಖೆ ನೌಕರರು ಗಳು ಕಡ್ಡಾಯವಾಗಿ ಉಪಯೋಗಿಸುವಂತೆ ಮಾಡಿದ್ದರು.


* * * *

ಸತ್ಯಾಗ್ರಹವಿಲ್ಲದೆ ಸರ್ವೋದಯ ಅಸಂಭವ. ಅಹಿಂಸೆ ಇಲ್ಲದೆ ಸತ್ಯದ ಆಗ್ರಹ ಮಾಡಲು ಸಾಧ್ಯವಿಲ್ಲ. ಅಂತೆಲೇ ಸರ್ವೋದಯ ಸಿದ್ಧಿ ತಪಶ್ಚರ್ಯವನ್ನಾಧರಿಸಿದೆ. ತಪಶ್ಚರ್ಯೆ ಸಾತ್ವಿಕವಾಗಬೇಕು. ಶುದ್ಧ ತಪದಲ್ಲಿ ಶುದ್ಧ ಜ್ಞಾನವಿರುತ್ತದೆ. ಜನ ಅಹಿಂಸೆಯ ಮಾತನ್ನೇನೋ ಆಡುತ್ತಾರೆ. ಆದರೆ ಅವರು ವಸ್ತುಸ್ಥಿತಿಯ ಪರಿಚಯ ಮಾಡಿಕೊಳ್ಳುವಷ್ಟು ಪರಿಶ್ರಮವನ್ನೂ ಮಾಡುವುದಿಲ್ಲ. ಹೆಚ್ಚು ಜನರಲ್ಲಿ ಮಾನಸಿಕ ಆಲಸ್ಯ ಮನೆ ಮಾಡಿಕೊಂಡಿರುತ್ತದೆ. ಇದು ಅನುಭವದ ಮಾತು. ಉದಾ : ಭಾರತಕ್ಕೆ ಬರಗಾಲ ಬಂದಿದೆ ಎಂದಿಟ್ಟುಕೊಳ್ಳಿ. ನಾವಿದನ್ನು ದೂರಗೊಳಿಸ ಬಯಸುತ್ತೇವೆ. ಆದರೆ ಈ ಬರಗಾಲ ಹೇಗಾಯಿತು ? ಇದನ್ನು ದೂರಗೊಳಿಸು ವುದು ಹೇಗೆ ? ಈ ವಿಷಯವಾಗಿ ಎಷ್ಟು ಜನ ಅಭ್ಯಾಸ ಮಾಡುತ್ತಾರೆ ? ಅಹಿಂಸೆಯ ಭಕ್ತನಾದವನ ಹತ್ತಿರ ಇವುಗಳ ಜ್ಞಾನ ಭಂಡಾರವೇ ತುಂಬಿರಬೇಕು.

—ಮಹಾತ್ಮ ಗಾಂಧಿ

ಬದನವಾಳು ಖಾದಿ, ನಾ ಕಂಡಂತೆ

ಕೆ. ಬಿ. ಸೋಮಶೇಖರ್
ನಂಜನಗೂಡು



ಬದನವಾಳು ಖಾದಿ ನೂಲುವ ಪ್ರಾಂತ್ಯ ಕಛೇರಿಯು ಬದನವಾಳು ಗ್ರಾಮದ ರೈಲ್ವೆ ನಿಲ್ದಾಣದ ಮುಂಭಾಗದ ಪ್ರದೇಶದಲ್ಲಿದೆ. ಆಗಿನ ಸರ್ಕಾರವು ಮಹಾರಾಜರ ಆಡಳಿತಕೊಳಪಟ್ಟಿದ್ದು, ಆ ಸರ್ಕಾರದ ನಿರ್ಧಾರದ ಮೂಲಕ ಸ್ಥಳ ಪರಿಶೀಲನೆ ನಡೆಸಿ, ಖಾದಿ ನೂಲುವ ಪ್ರಾಂತ್ಯ ಕಛೇರಿಯು 1927 ರಲ್ಲಿ ಸ್ಥಾಪಿತವಾಯಿತು. ಬಹಳ ಹಿಂದುಳಿದ ಪ್ರದೇಶವೆನಿಸಿದ ಗುಂಡ್ಲುಪೇಟೆ, ನಂಜನಗೂಡು, ಚಾಮರಾಜನಗರ ತಾಲ್ಲೂಕುಗಳಿಗೆ ಒಳಪಟ್ಟಿದ್ದ ಹಳ್ಳಿಗಳಲ್ಲಿ ಖಾದಿ ನೂಲುವ ಪ್ರಚಾರವು ವ್ಯವಸ್ಥಿತವಾಗಿ ಸಾಗಿ ಖಾದಿ ನೂಲುವ ಪ್ರಾಂತ್ಯದ ವ್ಯವಸ್ಥೆಯು ಸುವ್ಯವಸ್ಥಿತವಾಗಿತ್ತು. ಈ ಕಛೇರಿಗೆ ನಿಸ್ವಾರ್ಥ ಸೇವಾ ಮನೋಭಾವದಿಂದ ಸೇವೆಗೆ ಸೇರಿದ ಕಾರ್ಯಕರ್ತರ ಶ್ರಮದಿಂದ ಈ ಸಂಸ್ಥೆಯು ಪ್ರಚಾರ ಪಡೆದು ನಂಜನಗೂಡಿನ ವಿಭಾಗದ ಪ್ರದೇಶಕ್ಕೆ ಒಳಪಟ್ಟಿದ್ದ ಹಳ್ಳಿಗಳಲ್ಲಿ ಇದು ಗೃಹ ಕೈಗಾರಿಕೆಯ ರೂಪದಲ್ಲಿ ಹರಡಿತು. ಆ ಕಾರ್ಯಕರ್ತರಲ್ಲಿ ಒಬ್ಬರಾಗಿ ನಮ್ಮ ತಂದೆಯವರಾದ ದಿ॥ ಕಬ್ಬಹಳ್ಳಿ ಬಸಪ್ಪ ನವರು ಸೇವೆಗೆ ಸೇರಿದ್ದರು.

ಬದನವಾಳು ನೂಲುವ ಪ್ರಾಂತ್ಯವು ಆಶ್ರಮದ ವಾತಾವರಣವನ್ನು ಹೋಲುತ್ತಿತ್ತು. ವಾಸಸ್ಥಳ, ಕಛೇರಿಗಳು, ಕಾರ್ಯಾಲಯಗಳು, ಮಾರಾಟ ಕೇಂದ್ರ, ವಿತರಣಾ ಕೇಂದ್ರಗಳು ಎಲ್ಲಾ ಶಾಂತ ವಾತಾವರಣದಿಂದ ಕೂಡಿತ್ತು. ಬೆಳಿಗ್ಗೆ ಮತ್ತು ಸಂಜೆ ಬಂದು ಹೋಗುವ ರೈಲು ಸಂಚಾರ ಬಿಟ್ಟರೆ ಹೆಚ್ಚು ಸದ್ದು ಗದ್ದಲವಿಲ್ಲದ ಸ್ಥಳ. ಹತ್ತಾರು ಸಂಸಾರಗಳ ಭೇದ ಭಾವನೆಯಿಲ್ಲದ ಸಹಬಾಳ್ವೆಯುತ ತಾಣ. ಅಂತಹ ವಾತಾವರಣದಲ್ಲಿ ನಾನು 1931ರ ಜುಲೈ 5ನೇ ದಿನಾಂಕ ಜನ್ಮ ತಾಳಿದ್ದು. ನನ್ನ

ಜೀವನಕ್ಕೆ, ಬಾಲ್ಯ, ಪ್ರಾಥಮಿಕ ವಿದ್ಯಾಭ್ಯಾಸ ಎಲ್ಲಾ ಬದನವಾಳು ಖಾದಿ ನೂಲುವ ಪ್ರಾಂತ್ಯದಲ್ಲಿ ಮತ್ತು ಬದನವಾಳು ಗ್ರಾಮದ ಶಾಲೆಯಲ್ಲಿ.

ಅಲ್ಲಿನ ಜೀವನವು ಶಿಸ್ತಿನ ವಾತಾವರಣದಿಂದ ಕೂಡಿದ ಆಶ್ರಮ ಮಾದರಿಯದ್ದು. ಪ್ರಾತಃಕಾಲ 5½ ಗಂಟೆಗೆ ಪ್ರಾರ್ಥನಾ ಸಭೆ ನಡೆಸುವ ಪದ್ಧತಿ ರೂಢಿಯಲ್ಲಿತ್ತು. ಇದನ್ನು ಆಗಿನ ಮುಖ್ಯ ವ್ಯವಸ್ಥಾಪಕರಾಗಿದ್ದ ಶ್ರೀಮಾನ್ ರಾಜಾರಾಮಯ್ಯಂಗಾರ್ ರವರು ರೂಢಿಸಿದ್ದರು. ಗೀತಾ ಪಠಣ, ರಾಮಭಜನೆ ಇತ್ಯಾದಿ ಬಹಳ ಇಂಪಾದ ಧ್ವನಿಯು ಮುಂಜಾನೆ ಮನಸ್ಸಿಗೆ, ದೇಹಕ್ಕೆ ಶಾಂತಿ ಉಲ್ಲಾಸವನ್ನು ಕೊಡುತ್ತಿದ್ದು, ದೈನಂದಿನ ಚಟುವಟಿಕೆಗಳಿಗೆ ಉತ್ತೇಜನ ನೀಡುತ್ತಿತ್ತು. ಸಾಯಂಕಾಲದ ಸಮಯ ಆಟ ನಂತರ ವ್ಯಾಸಂಗ ಇತ್ಯಾದಿ ನಮ್ಮ ದೈನಂದಿನ ಚಟುವಟಿಕೆಗಳಾಗಿತ್ತು. ನಾನು ಪ್ರಾಥಮಿಕ ಶಾಲೆ ಅಭ್ಯಾಸ ಮುಗಿದ ನಂತರ ಮಾಧ್ಯಮಿಕ ಶಾಲೆಗೆ ನಂಜನಗೂಡಿನಲ್ಲಿ ಸೇರಬೇಕಾಯಿತು. ನಾನು ನನ್ನ ಸಹಪಾಠಿಗಳು ಪ್ರತಿನಿತ್ಯ ರೈಲಿನಲ್ಲಿ ನಂಜನಗೂಡಿಗೆ ಬಂದು ಹೋಗಿ ವ್ಯಾಸಂಗ ಮಾಡುತ್ತಿದ್ದೆವು. ಆಗ ಎರಡೇ ಹೊತ್ತು ರೈಲು ಸಂಚಾರ ಇದ್ದುದು ಶನಿವಾರ ಬೆಳಿಗ್ಗೆ ತರಗತಿ ಮುಗಿದ ಕೂಡಲೇ ಸಂಜೆಯವರೆಗೆ ಕಾಯಲು ಆಗದೆ ರೈಲು ಹಳಿಯ ಮೇಲೆಯೇ ಉದ್ದಕ್ಕೂ ನಡೆದು ಬದನವಾಳು ತಲುಪುತ್ತಿದ್ದೆವು. ಅದೊಂದು ಸಾಹಸದ ಅನುಭವವೇ ಆಗಿತ್ತು ನಮಗೆ. ಏಕೆಂದರೆ ಆ ವಯಸ್ಸಿನಲ್ಲಿ ನಾವು 6 ಮೈಲಿ ರೈಲು ಹಾದಿಯಲ್ಲಿ ನಡೆದು ಊರು ತಲುಪುತ್ತಿದ್ದೆವೆಂದರೆ ಅದೊಂದು ದೊಡ್ಡ ಸಾಹಸವೇ ಆಗುತ್ತಿತ್ತು. ಶುಕ್ರವಾರ ರಾತ್ರಿ ನಂಜನಗೂಡಿನಲ್ಲಿಯೇ ಉಳಿಯ ಬೇಕಾಗುತ್ತಿತ್ತು. ಕಾರಣ ಶನಿವಾರ ಬೆಳಿಗ್ಗೆ ಕಾಲಕ್ಕೆ ಸರಿಯಾಗಿ ರೈಲಿನಲ್ಲಿ ಶಾಲೆಗೆ ಬರಲಾಗುತ್ತಿರಲಿಲ್ಲ. ಆದ್ದರಿಂದ ರಾತ್ರಿ ನಂಜನಗೂಡಿನಲ್ಲಿರುವ ಬದನವಾಳು ಕೇಂದ್ರದ ''ಬಣ್ಣದ ಮನೆ'' ಎಂದು ಪ್ರಸಿದ್ಧವಾಗಿದ್ದ ಖಾದಿ ಬಟ್ಟೆಗಳಿಗೆ ಬಣ್ಣ ಹಾಕುವ ಮತ್ತು ಅಚ್ಚು ಹಾಕುವ ಕೇಂದ್ರದಲ್ಲಿಯೇ ನಮ್ಮ ವಸತಿ. ಅಲ್ಲಿ ವ್ಯವಸ್ಥಾಪಕ ರಾಗಿದ್ದ ರಾಮಸ್ವಾಮಿಗಳ ಮನೆಯಲ್ಲಿ ಎಷ್ಟೋ ದಿನಗಳು ರಾತ್ರಿ ಊಟ ಮಾಡಿದ್ದುಂಟು. ಅವರು ಮತ್ತು ಅವರ ಮನೆಯವರು ನಮ್ಮನ್ನು ಬಹಳ ಪ್ರೀತಿ ಯಿಂದ ನೋಡಿಕೊಂಡು ನಮಗೆ ವಸತಿ ಏರ್ಪಾಟು ಮಾಡುತ್ತಿದ್ದರು. ಬಣ್ಣದ ಮನೆ ಯಲ್ಲಿ ಕೆಲಸ ಮಾಡುತ್ತಿದ್ದ ಗೋಪಾಲಿ ಕೂಡ ನಮಗೆ ಚಿರಪರಿಚಿತ. ಬಣ್ಣದ ಮನೆಯ ವಾತಾವರಣದಲ್ಲಿ ನಮ್ಮ ವಿರಾಮ ಕಾಲದ ಆಟಪಾಠಗಳೂ ನನ್ನ ನೆನಪಿನಲ್ಲಿ ಹಸಿರಾಗಿವೆ.

ಬದನವಾಳು ಖಾದಿ ನೂಲುವ ಪ್ರಾಂತ್ಯದಲ್ಲಿ ನಮ್ಮ ತಂದೆಯವರ ಸಹೋದ್ಯೋಗಿಗಳಾಗಿ ಕೆಲಸ ನಿರ್ವಹಿಸುತ್ತಿದ್ದ ರಂಗಶೆಟ್ಟರವರು, ವೆಂಕಟಗಿರಿಯಪ್ಪ ನವರು, ಮಹದೇವಯ್ಯನವರು, ಸಿದ್ಧಲಿಂಗಪ್ಪನವರು, ಶ್ರೀಕಂಠಯ್ಯನವರು ಇನ್ನೂ

ಅನೇಕರುಗಳ ಮಕ್ಕಳುಗಳು ನಮ್ಮ ಸಹಪಾಠಿಗಳಾಗಿದ್ದರು. ನಾನು ಪ್ರೌಢಶಾಲೆಗೆ ಸೇರಬೇಕಾದಾಗ ನಾನು ಮೈಸೂರಿಗೆ ಹೋಗಬೇಕಾಯಿತು. ಅನಂತರದ ದಿನಗಳಲ್ಲಿ ನನ್ನ ವಾಸ ಮೈಸೂರಿನ ಹಾಸ್ಟೆಲಿನಲ್ಲಿ. ಆಗ ರಜಾದಿನ ಬಂತೆಂದರೆ ಬದನವಾಳಿಗೆ ಹಿಂತಿರುಗುತ್ತಿದ್ದೆವು. ನಮ್ಮ ತಂದೆಯುವರ ಸೇವಾ ಅವಧಿಯಲ್ಲಿ ಕೆಲವು ವರ್ಷಗಳು ಬೆಂಗಳೂರು ಖಾದಿ ಭಂಡಾರ, ಕೋಲಾರದ ಉಣ್ಣೆ ನೂಲುವ ಕೇಂದ್ರಗಳಲ್ಲಿ ಕೆಲಸ ಮಾಡಬೇಕಾಗಿ ಬಂದು ಆ ವರ್ಷಗಳಲ್ಲಿ ನಾವು ಬದನವಾಳದಿಂದ ಸ್ವಲ್ಪ ಕಾಲ ಹೊರಗೆ ಇದ್ದೆವು. ನಂತರ ನಮ್ಮ ತಂದೆಯುವರು 1959ರಲ್ಲಿ ಸೇವೆಯಿಂದ ನಿವೃತ್ತಿಯಾಗುವ ವರೆಗೂ ಬದನವಾಳಿನಲ್ಲಿಯೇ ನಮ್ಮ ನಿವಾಸವಾಗಿತ್ತು. ನನ್ನ ಮದುವೆಯ (1959 ಮೇನಲ್ಲಿ) ಆರತಕ್ಷತೆ ಸಮಾರಂಭವೂ ಕೂಡ ಬದನವಾಳದಲ್ಲಿನ ಖಾದಿ ನೂಲುವ ಪ್ರಾಂತ್ಯದಲ್ಲಿ ವಿಜೃಂಭಣೆಯಿಂದ ನಡೆಯಿತು. ಅನಂತರದಲ್ಲಿ ನಾವು ಬದನವಾಳು ಪ್ರಾಂತ್ಯದಿಂದ ದೂರಾದೆವು

ಬದನವಾಳು ಪ್ರಾಂತ್ಯಕ್ಕೆ ಆಗಾಗ್ಗೆ ಖಾದಿ ಕ್ಷೇತ್ರದಲ್ಲಿ ಆಸಕ್ತಿಯಿದ್ದವರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುತ್ತಿದ್ದ ಅನೇಕ ಹಿರಿಯ ರಾಜಕಾರಣಿಗಳು ಭೇಟಿ ಕೊಡುತ್ತಿದ್ದರು. ಅವರುಗಳಲ್ಲಿ ನಮ್ಮ ಮನೆಗೆ ಆಗಾಗ್ಗೆ ಭೇಟಿ ಕೊಡುತ್ತಿದ್ದ, ನಮ್ಮ ನೆನಪಿನಲ್ಲಿ ಅಚ್ಚಳಿಯದೆ ಉಳಿದಿರುವವರುಗಳೆಂದರೆ ತಗಡೂರು ರಾಮಚಂದ್ರ ರಾಯರು, ಮಾದಗಳ್ಳಿ ಪುಟ್ಟನಂಜಪ್ಪನವರು, ಡಿ. ಎಂ. ಸಿದ್ಧಯ್ಯನವರು, ಇನ್ನೂ ಅನೇಕ ಮಹನೀಯರುಗಳು. ಬದನವಾಳು ಪ್ರಾಂತ್ಯದಲ್ಲಿ ಅನೇಕ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಸಕ್ರಿಯ ಪಾತ್ರ ವಹಿಸಿದ ಪ್ರಸಿದ್ಧ ಕಂಟ್ರಾಕ್ಟರ್ ಶ್ರೀಕಂಠಯ್ಯನವರು ಈಗಲೂ ನಮ್ಮ ಸಮೀಪವೇ ಇದ್ದಾರೆ.

ಶ್ರೀಮಾನ್ ರಂಗಶೆಟ್ಟರವರ ಶ್ರದ್ಧೆ, ಆಸಕ್ತಿಗಳಿಂದ ನಾವು ಬದನವಾಳಿನ ನೆನಪು ಮಾಡಿಕೊಳ್ಳಲು ಅವಕಾಶ ಸಿಕ್ಕಿ ಈ ಕೆಲವು ಸಂಗತಿಗಳನ್ನು ಬಹಳ ಸಂಕ್ಷಿಪ್ತವಾಗಿ ಬರೆದಿದ್ದೇನೆ.

* * * *

''ಮುಂದಿನ ವಿಶ್ವ ಸಮಾಜ ಅಹಿಂಸೆಯ ಆಧಾರದ ಮೇಲೆಯೇ ನಿಂತೀತು. ಇದು ಸ್ವಪ್ನವಲ್ಲ, ಅವ್ಯಾವಹಾರಿಕವಲ್ಲ, ಅಸಾಧ್ಯವೂ ಅಲ್ಲ. ಮನುಷ್ಯ ತನ್ನನ್ನು ಸಮಾಜಸೇವಕನೆಂದು ಪರಿಗಣಿಸಿದರೆ ಆತನ ಎಲ್ಲ ವ್ಯವಹಾರವೂ ರಚನಾತ್ಮಕವೆನಿಸಿಕೊಳ್ಳುತ್ತದೆ.''

—ಮಹಾತ್ಮ ಗಾಂಧಿ

ಖಾದಿಯ ಕತೆ

ಶ್ರೀ ಕೆ. ಶ್ರೀನಿವಾಸರಾವ್
ಸ್ವಾತಂತ್ರ್ಯ ಹೋರಾಟಗಾರರು
ಸರ್ವೋದಯ ಕಾರ್ಯಕರ್ತರು

ಖಾದಿಯ ಜನ್ಮದ ವಿಷಯವಾಗಿ ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ಹೀಗೆ ಹೇಳಿದ್ದಾರೆ: "1908ನೆಯ ಇಸವಿಯಲ್ಲಿ 'ಹಿಂದ್ ಸ್ವರಾಜ್' ಎಂಬ ಪುಸ್ತಕದಲ್ಲಿ ನಾನು ಚರಖವೇ ಭರತಖಂಡದಲ್ಲಿ ದಿನವೂ ಹೆಚ್ಚುತ್ತಿರುವ ದಾರಿದ್ರ್ಯಕ್ಕೆ ಮದ್ದೆಂದು ವರ್ಣಿಸುವವರೆಗೂ ನಾನು ಚರಖವನ್ನಾಗಲಿ ಮಗ್ಗವನ್ನಾಗಲಿ ನೋಡಿದ್ದಂತೆ ಕಾಣೆ. ಹಿಂದುಸ್ಥಾನದ ಮನುಷ್ಯಕೋಟಿಯ ಕಡು ಬಡತನವನ್ನು ಪರಿಹರಿಸುವ ಸಾಧನವೇ ಸ್ವರಾಜ್ಯ ಸ್ಥಾಪನೆಗೂ ಸಾಧನವೆಂಬುದನ್ನು ನಾನು ಆ ಪುಸ್ತಕದಲ್ಲಿ ಆಧಾರವಾಗಿಟ್ಟು ಕೊಂಡೆನು. 1915ರಲ್ಲಿ ನಾನು ದಕ್ಷಿಣ ಆಫ್ರಿಕದಿಂದ ಭರತಖಂಡಕ್ಕೆ ಹಿಂತಿರುಗಿದಾಗ ಕೂಡ ನಾನು ನೂಲುವ ರಾಟೆಯನ್ನು ನೋಡಿರಲಿಲ್ಲ. ಸಾಬರ್ಮತಿಯಲ್ಲಿ ಸತ್ಯಾಗ್ರಹಾ ಶ್ರಮವನ್ನು ಸ್ಥಾಪಿಸಿದಾಗ ಅಲ್ಲಿ ಒಂದೆರಡು ಕೈಮಗ್ಗಗಳನ್ನು ಹೂಡಿದೆವು. ಒಬ್ಬ ನೇಕಾರನ ಸಹಾಯದಿಂದ, ಮಗನಲಾಲರ ಅವಿರತ ಶ್ರಮ, ಚಾತುರ್ಯದಿಂದ ನೇಯ್ಗೆಯ ಮರ್ಮವನ್ನೆಲ್ಲ ಅರಿತುಕೊಂಡರು. ಆಶ್ರಮದಲ್ಲಿ ಒಬ್ಬರಾದ ಮೇಲೊಬ್ಬ ರಂತೆ ಹಲವರು ನೇಯ್ಗೆಯನ್ನು ಕಲಿತುಕೊಂಡರು."

"ನಾವೇ ತಯಾರುಮಾಡಿದ ಬಟ್ಟೆಯು ನಮ್ಮೆಲ್ಲರಿಗೂ ಸಾಕಾಗಬೇಕೆಂಬುದೇ ನಾವಿಟ್ಟುಕೊಂಡ ಧ್ಯೇಯ. ಆದ್ದರಿಂದ ನಾವು ಒಡನೆಯೇ ಗಿರಣಿಯ ಬಟ್ಟೆ ಉಡುವು ದನ್ನು ಬಿಟ್ಟೆವು. ಆಶ್ರಮವಾಸಿಗಳೆಲ್ಲರೂ ಭರತಖಂಡದಲ್ಲೇ ತಯಾರಾದ ನೂಲಿನಿಂದ ಕೈಮಗ್ಗದಿಂದ ನೇಯ್ದ ಬಟ್ಟೆಯನ್ನೇ ಉಡಲು ಸಂಕಲ್ಪಮಾಡಿದರು.

....ನಮಗೆ ಬೇಕಾದ ಬಟ್ಟೆಯನ್ನೆಲ್ಲಾ ನಾವು ಒಡನೆಯೇ ತಯಾರು ಮಾಡು ವಂತಿದ್ದಿಲ್ಲ. ಆದ್ದರಿಂದ ಕೈಮಗ್ಗದ ನೇಕಾರರಿಂದ ಬಟ್ಟೆಯನ್ನು ತರಿಸಿಕೊಳ್ಳುವು ದೊಂದೇ ಮಾರ್ಗವಾಗಿದ್ದಿತು. ಹಿಂದುಸ್ತಾನದಲ್ಲಿ ತಯಾರಾದ ನೂಲಿನಿಂದ ನೇಯ್ದ ಬಟ್ಟೆಯು ಬಟ್ಟೆ ಅಂಗಡಿಗಳಲ್ಲಾಗಲಿ ನೇಯ್ಗೆಯವರಲ್ಲಿಯೇ ಆಗಲಿ ಸುಲಭವಾಗಿ ದೊರಕುತ್ತಿರಲಿಲ್ಲ. ನೇಕಾರರು ತಾವು ನೇಯುತ್ತಿದ್ದ ನಯವಾದ ಬಟ್ಟೆಗೆಲ್ಲಾ ವಿದೇಶೀ ನೂಲನ್ನು ಉಪಯೋಗಿಸುತ್ತಿದ್ದರು. .... ಗಿರಣಿ ನೂಲಿನಿಂದ ನೇಯ್ದ ಬಟ್ಟೆಯನ್ನು

ನಾವೂ ತೊಟ್ಟು ನಮ್ಮ ಮಿತ್ರರೂ ತೊಡುವಂತೆ ನಾವಾಗಿ ನಾವೇ ಈ ದೇಶದ ನೂಲುವ ಗಿರಣಿಗಳ ಪ್ರತಿನಿಧಿಗಳಂತಾದೆವು.”

ಗಿರಣಿನೂಲಿನ ಬಟ್ಟೆಯನ್ನು ಉಪಯೋಗಿಸುವುದನ್ನು ಬಿಡಬೇಕೆಂಬ ನಿರ್ಧಾರ ಮಾಡಿ, ತಾವೇ ನೂತ ನೂಲನ್ನು ಕೈಮಗ್ಗದಿಂದ ನೇಯ್ದು ಉಪಯೋಗಿಸಬೇಕೆಂಬ ನಿರ್ಧಾರವನ್ನು ಗಾಂಧೀಜಿ ಮಾಡಿದರು. ರಾಟೆಯನ್ನು ಪತ್ತೆಹಚ್ಚಲು ತೀವ್ರ ಪ್ರಯತ್ನ ಸಾಗಿತು. ರಾಟೆಯನ್ನು ಪತ್ತೆಹಚ್ಚಲು ಗಂಗಾಬಾಯಿ ಎಂಬಾಕೆ ಗಾಂಧೀಜಿಗೆ ನೆರವಾದರು.

ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ ರಾಟೆಯನ್ನು ಪತ್ತೆಹಚ್ಚಿದ ಬಗ್ಗೆ ಈ ಬಗೆಯಾಗಿ ವರ್ಣಿಸಿದ್ದಾರೆ : “ಅನೇಕ ದಿನ ಗುಜರಾತಿನಲ್ಲಿ ಅಲೆದ ಮೇಲೆ ಬರೋಡಾ ಸಂಸ್ಥಾನದಲ್ಲಿರುವ ವಿಜಾಪುರವೆಂಬ ಊರಿನಲ್ಲಿ ಗಂಗಾಬಾಯಿಗೆ ಕಟ್ಟಕಡೆಗೆ ಚರಖವು ದೊರಕಿತು. ಅಲ್ಲಿ ಅನೇಕ ಜನರ ಬಳಿ ಚರಖಗಳಿದ್ದವು. ಆದರೆ ಬಹುಕಾಲಕ್ಕೆ ಹಿಂದೆಯೇ ಅವರು ಅವುಗಳನ್ನು ಕಸವೆಂದು ಅಟ್ಟದ ಮೇಲೆಸೆದು ಬಿಟ್ಟಿದ್ದರು. ಯಾರಾದರೂ ತಪ್ಪದೆ ಕ್ರಮವಾಗಿ ಹಂಜಿಗಳನ್ನೊದಗಿಸಿ ತಾವು ನೂತ ನೂಲನ್ನು ಕೊಳ್ಳುವುದಾದರೆ ತಾವು ಪುನಃ ನೂಲಲು ಸಿದ್ಧರಾಗಿರುವೆವೆಂದು ಅವರು ಗಂಗಾಬಾಯಿಗೆ ಹೇಳಿದರು. ಈ ಸಂತೋಷದ ವೃತ್ತಾಂತವನ್ನು ಗಂಗಾಬಾಯಿಯು ನನಗೆ ತಿಳಿಸಿದರು.”

ಸ್ವಲ್ಪಕಾಲ ಉಮರ್ ಸುಭಾನಿಯವರು ತಮ್ಮ ಗಿರಣಿಯಿಂದ ಹಂಜಿಯನ್ನು ಒದಗಿಸಲು ಒಪ್ಪಿ ಕಳುಹಿಸಿಕೊಡುತ್ತಿದ್ದರು. ಆದರೆ ಗಿರಣಿಯಲ್ಲಿ ತಯಾರಾದ ಹಂಜಿಗಳನ್ನು ಉಪಯೋಗಿಸುವುದೇ ಮೊಟ್ಟಮೊದಲ ತಪ್ಪೆಂದು ಗಾಂಧೀಜಿಗೆ ಅನಿಸಿತು. ಹತ್ತಿ ಎಕ್ಕಲು ಪಿಂಜಾರರನ್ನು ಹುಡುಕಿದರು. ಕೆಲವು ಹುಡುಗರು ಹಂಜಿಯನ್ನು ಮಾಡುವ ಕ್ರಮವನ್ನು ಕಲಿತರು. ನೇಕಾರರನ್ನು ನೇಮಿಸಲಾಯಿತು. ಗಂಗಾಬಾಯಿಯ ಸಹಾಯದಿಂದ ಶೀಘ್ರದಲ್ಲಿಯೇ ‘ವಿಜಾಪುರದ ಖಾದಿ’ಯು ಪ್ರಸಿದ್ಧವಾಯಿತು.

ಇತ್ತ ಆಶ್ರಮದಲ್ಲಿ (1917) ಚರಖವು ತ್ವರಿತಗತಿಯಿಂದ ಪ್ರಮುಖ ಸ್ಥಾನವನ್ನು ಪಡೆಯಿತು. ತಮಗೆ ಸಹಜವಾಗಿ ಯಂತ್ರನಿರ್ಮಾಣದಲ್ಲಿದ್ದ ಅದ್ಭುತ ಶಕ್ತಿಯನ್ನೆಲ್ಲ ಉಪಯೋಗಿಸಿ ಮಗನಲಾಲ ಗಾಂಧಿಯವರು ನೂಲುವ ರಾಟೆಯನ್ನು ಅನೇಕ ವಿಧವಾಗಿ ಉತ್ತಮಗೊಳಿಸಿದರು. ರಾಟೆಗಳೂ ಅವುಗಳಿಗೆ ಬೇಕಾದ ಸಾಮಾನು – ಸರಂಜಾಮುಗಳೂ ಆಶ್ರಮದಲ್ಲಿ ಸಿದ್ಧವಾಗತೊಡಗಿದವು.

ಹತ್ತಿಯಿಂದ ಪ್ರಾರಂಭಿಸಿ ಬಟ್ಟೆ ಆಗುವವರೆಗೆ ನಡೆಯಬೇಕಾಗಿದ್ದ ಕ್ರಮಗಳಿಗೆಲ್ಲ ಗಾಂಧೀಜಿಯೊಂದಿಗೆ ಆಗಿನ ಖಾದಿಯ ಪ್ರಾರಂಭ ಕಾಲದಲ್ಲಿ ಗಂಗಾಬಾಯಿ,

ಮಗನಲಾಲ ಗಾಂಧೀಯವರಂತೆಯೇ ಲಕ್ಷ್ಮೀದಾಸರು, ಶಂಕರಲಾಲ್ ಬ್ಯಾಂಕರ್ ಮತ್ತು ಅವರ ಮನೆಯವರು, ಇನ್ನೂ ಅನೇಕರು ಬಹಳ ನಿಷ್ಠೆಯಿಂದ ಕೆಲಸ ಮಾಡಿದುದರಿಂದ ಖಾದಿಯ ಪ್ರಗತಿ–ಪ್ರಚಾರವಾಗಿ ದೇಶದಲ್ಲಿ ಖಾದಿ ಆಂದೋಳನ ಮುಂದೆ ಸಾಗಿತು.

1920ರಲ್ಲಿ ಅಸಹಕಾರ ಆಂದೋಳನ ಪ್ರಾರಂಭವಾಯಿತು. ಸ್ವದೇಶಿ ಚಳವಳಿಯಂತೂ ಇದಕ್ಕಿಂತ ಮೊದಲೇ ನಡೆದಿತ್ತು. ಕಾಂಗ್ರೆಸ್ ಅಧಿವೇಶನಗಳಲ್ಲಿ ಸ್ವದೇಶಿ ಚಳವಳಿಯ ಅಂತರ್ಗತವಾಗಿ ಕೈಯಿಂದ ನೂತ ಕೈಮಗ್ಗದಿಂದ ನೇಯ್ದ ಖಾದಿ ಬಟ್ಟೆಗೆ ಪ್ರಾಶಸ್ತ್ಯ ದೊರೆಯಿತು. ಖಾದಿ ರಾಷ್ಟ್ರೀಯ ಉಡುಗೆಯಾಯಿತು. ಸ್ವಾತಂತ್ರ್ಯದ ಪರಿಣಾಮಕಾರಿ, ದೇಶವ್ಯಾಪಿ ಚಿಹ್ನೆಯಾಯಿತು. ಕಾಂಗ್ರೆಸ್ಸಿನವರೆಲ್ಲ ಖಾದಿಯನ್ನೇ ಧರಿಸಬೇಕೆಂದಾಯಿತು.

1921ರ ವಿಜಯವಾಡಾ ಕಾಂಗ್ರೆಸ್ ಅಧಿವೇಶನದಲ್ಲಿ ಪರದೇಶಿ ವಸ್ತ್ರ ಬಹಿಷ್ಕಾರ ತೀವ್ರಗೊಳಿಸಬೇಕೆಂಬುದರ ಜತೆಗೆ ಕೈನೂಲು–ಕೈಮಗ್ಗದ ಖಾದಿ, ಚರಖಾ ಪ್ರಚಾರ ವ್ಯಾಪಕಗೊಳಿಸಬೇಕೆಂಬ ನಿರ್ಣಯವಾಯಿತು.

ಭಾರತ ಸ್ವಾತಂತ್ರ್ಯಕ್ಕಾಗಿ ಅಸಹಕಾರ ಆಂದೋಳನ, ನಾಗಪುರ ಧ್ವಜ ಸತ್ಯಾಗ್ರಹ (1923), ಇವುಗಳಲ್ಲಿ ಪಾಲುಗೊಂಡ ಸತ್ಯಾಗ್ರಹಿಗಳಿಗೆ ಖಾದಿ ಚರಖಾ ಇವುಗಳ ಬೇಡಿಕೆ ಬಗ್ಗೆ ಜೈಲುಗಳಲ್ಲಿ ಅನೇಕ ಬಗೆಯ ಶಿಕ್ಷೆಗಳನ್ನು ಅನುಭವಿಸ ಬೇಕಾಯಿತು.

1924ರಲ್ಲಿ ಕಾಂಗ್ರೆಸ್ಸಿನ ಸದಸ್ಯರು ಪ್ರತಿದಿನ ಅರ್ಧಘಂಟೆ ನೂತು, ಲಡಿಯನ್ನು ಅಖಿಲ ಭಾರತ ಖಾದಿ ಮಂಡಲಕ್ಕೆ ಕಳುಹಿಸಬೇಕೆಂಬ ನಿರ್ಣಯವು ಕಾಂಗ್ರೆಸ್ಸಿನ ಸಭೆಯಲ್ಲಿ ತೀರ್ಮಾನವಾಯಿತು.

1925ರಲ್ಲಿ ಭಾರತದಲ್ಲಿ ಚರಖಾ ಸಂದೇಶವನ್ನು ವ್ಯಾಪಕಗೊಳಿಸಲು ಆರ್ಥಿಕವಾಗಿ ಜನಸಾಮಾನ್ಯರಿಗೆ ಸಹಾಯವಾಗಲು ಅಖಿಲ ಭಾರತ ಚರಖಾ ಸಂಘದ ಸ್ಥಾಪನೆಯಾಯಿತು. ಭಾರತದ ಪ್ರತಿಯೊಂದು ಪ್ರಾಂತದಲ್ಲೂ ಪ್ರತಿನಿಧಿಗಳನ್ನು ನೇಮಿಸಿ ಖಾದಿ ಕಾರ್ಯವನ್ನು ಅವರಿಗೆ ವಹಿಸಲಾಯಿತು. ಕರ್ನಾಟಕದಲ್ಲಿ ದಿ॥ ದೇಶಪಾಂಡೆ ಗಂಗಾಧರರಾಯರು ಚರಖಾ ಸಂಘದ ಮುಖ್ಯ ಪ್ರತಿನಿಧಿಗಳಾದರು. ಸರ್ವಶ್ರೀ ಕೌಜಲಗಿ ಹಣಮಂತರಾಯರು, ಸರದಾರ್ ವೆಂಕಟರಾಮಯ್ಯನವರು, ವಡವಿಮಾಸ್ತರ್, ಸಾಹುಕಾರ್ ಮಾಸ್ತರ್ ಮುಂತಾದವರು ಚರಖಾ ಸಂಘದ ಕರ್ನಾಟಕ ಶಾಖೆಯ ಕಾರ್ಯದರ್ಶಿಗಳಾಗಿ ಕೆಲಸಮಾಡಿ ಪ್ರಗತಿಯನ್ನು ಸಾಧಿಸುತ್ತ ಬಂದರು.

ಗಾಂಧೀಜಿ ಚರಖಾದ ಬಗ್ಗೆ ಚಿಂತನೆಮಾಡುತ್ತ ಭಾರತಕ್ಕಷ್ಟೇ ಅಲ್ಲ, ಇಡೀ ವಿಶ್ವಕ್ಕೇ ಒಂದು ವಿಚಾರ ಧಾರೆಯನ್ನು ಕೊಟ್ಟರು – 'ಚರಖಾ ಅಹಿಂಸೆಯ ಪ್ರತೀಕ' ಎಂದರು.

ಚರಖಾದ ಪ್ರಾರಂಭದ ಕಾಲದಲ್ಲಿ ಅದು ದೇಶದ ಮುಂದೆ ಸ್ವದೇಶಿ ಧರ್ಮದ ರೂಪವಾಗಿ ಬಂತು. ಅನಂತರ ವಿದೇಶಿವಸ್ತ್ರದ ಬಹಿಷ್ಕಾರದ ಸಾಧನವಾಯಿತು. ಅಲ್ಲದೆ ಕೋಟಿ ಕೋಟಿ ನಿರುದ್ಯೋಗಿ, ಅರೆ ನಿರುದ್ಯೋಗಿಗಳಿಗೆ ಪರಿಹಾರ ಒದಗಿಸುವಂಥದ್ದಾಯಿತು. ವಸ್ತ್ರ ಸ್ವಾವಲಂಬನದ ವಿಚಾರವಂತೂ ಅದರಲ್ಲಿ ಇದ್ದೇ ಇತ್ತು ; ಗ್ರಾಮದ ಮೂಲ ಆವಶ್ಯಕತೆಯನ್ನೊದಗಿಸುವ ಸ್ವಾವಲಂಬನದ ಪ್ರತೀಕವೆನಿಸಿಕೊಂಡಿತು. ಗ್ರಾಮೋದ್ಯೋಗಗಳ ಮಂಡಲದಲ್ಲಿ ಚರಖಾ (ಸೂರ್ಯನಂತೆ) ಮಧ್ಯಬಿಂದುವಾಯಿತು.

ಖಾದಿಯ ವಿಕಾಸ ಕ್ರಮದಲ್ಲಿ ಹಲವು ಘಟ್ಟಗಳು. 1933ರ ವರೆಗೆ ಖಾದಿಯ ಕಾರ್ಯ ಮುಖ್ಯವಾಗಿ ಬಡವರಿಗೆ ಪರಿಹಾರವನ್ನೊದಗಿಸುವುದೇ ಆಗಿತ್ತೆನ್ನಬಹುದು. ಅದರ ನಂತರ 1943ರ ವರೆಗೆ ಜೀವನ ನಿರ್ವಾಹ ಮಜೂರಿಯನ್ನು ಕೊಡುವ, ಒಂದು ನೈತಿಕ ಅರ್ಥಶಾಸ್ತ್ರದ ದೃಷ್ಟಿಯಿಂದ ಕೆಲಸ ಸಾಗಿತು. 1944ರ ನಂತರ 'ಖಾದಿ ಸತ್ಯ ಮತ್ತು ಅಹಿಂಸೆಯ ಪ್ರತೀಕ' ಎಂಬ ವಿಚಾರವೇ ಪ್ರಧಾನವಾಯಿತು. ಹೀಗೆ ಮೂರು ಘಟ್ಟಗಳು : 1) ಪರಿಹಾರದ ಘಟ್ಟ, 2) ಜೀವನ ನಿರ್ವಾಹ ಮಜೂರಿ – 'ಖಾದಿಯ ನೈತಿಕ ಯುಗ', 3) ಖಾದಿಯ ಆಧ್ಯಾತ್ಮಿಕ ಯುಗ.

ಚರಖಾ ಸಂಘವು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮದ ಮೂಲ ಆಧಾರವಾಗಿತ್ತು. ಅದರ ಮೂಲಕ ದೇಶಕ್ಕೆ ಅನೇಕ ಪ್ರಯೋಗಗಳ ಪ್ರವೃತ್ತಿಗಳ ದರ್ಶನವಾಯಿತು. ಚರಖಾ ಸಂಘದ ಇತಿಹಾಸ ಕೇವಲ ಚರಖಾ ಸಂಘದ್ದಷ್ಟೇ ಅಲ್ಲ, ಗಾಂಧೀಜಿಯ ಸಂಪೂರ್ಣ ಮಾನವೀಯ ಭಾವನೆಗಳ ರಚನಾತ್ಮಕ ಕಾರ್ಯಕ್ರಮಗಳ ಇತಿಹಾಸವೂ ಆಗಿದೆ.

1944ರಲ್ಲಿ ಚರಖಾ ಸಂಘದ ಟ್ರಸ್ಟಿ ಮಂಡಲದ ಸಭೆಯಲ್ಲಿ ಖಾದಿ ಕಾರ್ಯದ ಮುಂದಿನ ಹೆಜ್ಜೆಯ ಬಗ್ಗೆ ಗಾಂಧೀಜಿ ತಮ್ಮ ವಿಚಾರಗಳನ್ನು ತಿಳಿಸಿದರು. "ಚರಖಾ ಸಂಘದ ನವಸಂಸ್ಕರಣ" ಎಂದು ದೇಶದಲ್ಲೆಲ್ಲ ಪ್ರಸಾರವಾಯಿತು. ಈ ಹೊಸ ದೃಷ್ಟಿಗನುಸಾರ ಖಾದಿಯಲ್ಲಿ ವ್ಯಾಪಾರಿ ದೃಷ್ಟಿಯನ್ನು ಕಡಿಮೆಮಾಡಿ, ಜನರಿಗೆ ವಸ್ತ್ರ ಸ್ವಾವಲಂಬಿಗಳಾಗಲು ತಕ್ಕ ಶಿಕ್ಷಣ ಕೊಡಬೇಕೆಂದಾಯಿತು. ಖಾದಿ ಕಾರ್ಯಕರ್ತರು, ರಚನಾತ್ಮಕ ಕಾರ್ಯಕರ್ತರು ಸಮಗ್ರ ದೃಷ್ಟಿಯಿಂದ ಗ್ರಾಮಸೇವಾಕಾರ್ಯವನ್ನು

ಮಾಡಬೇಕು, ಖಾದಿ ಕಾರ್ಯವನ್ನು ವಿಕೇಂದ್ರಿತಗೊಳಿಸಿ ಚಿಕ್ಕಚಿಕ್ಕ ಕ್ಷೇತ್ರಗಳಲ್ಲಿ ಸ್ವತಂತ್ರ ಖಾದಿ ಸಂಸ್ಥೆಗಳು ಕೆಲಸಮಾಡಬೇಕೆಂದಾಯಿತು.

ಗಾಂಧೀ ಜಯಂತಿ 'ಚರಖಾ ಜಯಂತಿ' ಎಂದು ದೇಶದಲ್ಲಿ ಆಚರಿಸಲಾಗುತ್ತಿತ್ತು. 78ನೇ ಚರಖಾ ಜಯಂತಿಯಂದು ಕನಿಷ್ಟ ಪಕ್ಷ 78 ಸಾವಿರ ಜನ ಚರಖಾ ಸಂಘದ ಸಹಯೋಗಿ ಸದಸ್ಯರಾಗಬೇಕೆಂದಾಯಿತು. ಹೀಗೆ ಖಾದಿ ಕಾರ್ಯವನ್ನು ವ್ಯಾಪಕ ಗೊಳಿಸಿ ಗಾಂಧೀಜಿ ಸತ್ಯ-ಅಹಿಂಸೆಯ ತತ್ತ್ವವನ್ನು ಪ್ರಬಲವಾಗಿ ಪ್ರತಿಪಾದಿಸಿದರು. ಗಾಂಧೀಜಿಯ ಮರಣಾನಂತರ ಅಖಿಲ ಭಾರತ ಚರಖಾ ಸಂಘವು 1953ರಲ್ಲಿ ಸರ್ವ ಸೇವಾ ಸಂಘದಲ್ಲಿ ವಿಲೀನಗೊಂಡಿತು.

* * *


ಖಾದಿಯೊಂದೇ ನಿಜವಾದ ಆರ್ಥಿಕ ಕಾರ್ಯಕ್ರಮ

"ಗಂಡಸಾಗಲಿ ಹೆಂಗಸಾಗಲಿ ಭಾರತದ ಲಕ್ಷಾಂತರ ಹಳ್ಳಿಗಳ ಹದಿನಾರು ವರ್ಷಕ್ಕೆ ಮೀರಿದ ಪ್ರತಿಯೊಬ್ಬ ಧೃಡಕಾಯ ಮನುಷ್ಯನಿಗೂ ಹೊಲದಲ್ಲೋ, ಮನೆಯಲ್ಲೋ ಅಥವಾ ಕಾರ್ಖಾನೆಯಲ್ಲೋ ಕೆಲಸ ಕೊಡುವ ಹಾಗೂ ಸಾಕಷ್ಟು ಪ್ರತಿಫಲ ಸಿಗುವಂತೆ ಮಾಡುವ ಉತ್ತಮತರ ವಿಧಾನವೊಂದನ್ನು ಯೋಜಿಸಬೇಕು. ಅಥವಾ ಹಳ್ಳಿಗಾಡಿನವರಿಗೆಲ್ಲ ಅವಶ್ಯಕವಾದ ಹಾಗೂ ಅವರ ಹಕ್ಕಾದ ಕ್ರಮಬದ್ಧ ಜೀವನದ ಸೌಕರ್ಯ ಗಳನ್ನು ಕೊಡಲೋಸುಗ ಹಳ್ಳಿಗಳನ್ನೆಲ್ಲಾ ನಿರ್ನಾಮಮಾಡಿ ಅವುಗಳ ಸ್ಥಳದಲ್ಲಿ ಸಾಕಷ್ಟು ನಗರಗಳನ್ನು ನಿಯಮಿಸಬೇಕು; ಅಲ್ಲಿನ ತನಕ ಭಾರತದ ಲಕ್ಷಾಂತರ ಹಳ್ಳಿಗಳಿಗೆ ಖಾದಿಯೊಂದೇ ನಿಜವಾದ ಆರ್ಥಿಕ ಧೃಡ ಕಾರ್ಯಕ್ರಮ."

—ಮಹಾತ್ಮಾ ಗಾಂಧಿ
(ಹರಿಜನ, 1936)

ಸರ್ಕಾರಿ ನೌಕರರು ಮತ್ತು ಖಾದಿ

ಶ್ರೀ ವಿ. ಎಸ್. ನಾರಾಯಣರಾವ್



"ಸರ್ಕಾರಿ ನೌಕರರು ಖಾದಿ ಧರಿಸಬಹುದೇ ?"

'ಮೈಸೂರು ಸರ್ಕಾರದವರೇ ಖಾದಿ ತಯಾರಿಸುವ ಕೇಂದ್ರ ಸ್ಥಾಪಿಸಿರುವುದು ತಮಗೆ ತಿಳಿದೇ ಇದೆ. ಹೀಗಿರುವಾಗ ಖಾದಿ ಧರಿಸಬಾರದೆಂದು ಸರ್ಕಾರ ಹೇಳೀತೆ ?'

ಈ ಸಂವಾದ ನಡೆದುದು ಖಾದಿಯ ಜನಕ ಮಹಾತ್ಮ ಗಾಂಧಿ ಮತ್ತು ಮೈಸೂರಿನ ಆಗಿನ ದಿವಾನ್ ಸರ್ ಮಿರ್ಜಾ ಮಹಮ್ಮದ್ ಇಸ್ಮಾಯಿಲ್ ಅವರ ನಡುವೆ.

ಮಿರ್ಜಾ ಅವರಿಗೆ ಮಹಾತ್ಮರಲ್ಲಿ ಅಪರಿಮಿತ ಗೌರವ. 1926–27ನೆಯ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಮಹಾತ್ಮರಲ್ಲಿ ತಮಗಿರುವ ಅಪಾರ ಗೌರವವನ್ನು ಈ ವಾಕ್ಯಗಳಲ್ಲಿ ಹೇಳಿರುತ್ತಾರೆ. "ದೇಶದ ಆತ್ಮ ಸ್ವರೂಪಿಯಾದ ಓರ್ವ ಮಹಾನ್ ದೇಶಭಕ್ತ ಜನತೆಯ ಆಸೆ ಆಕಾಂಕ್ಷೆಗಳನ್ನು ಜ್ವಲಂತ ವಾಕ್ಯಗಳಿಂದ ಸಾರಿ ಹೇಳುತ್ತಿದ್ದಾರೆ. ದೇಶದ ಇಷ್ಟಾರ್ಥಗಳನ್ನು ಅರಿತು ತಿಳಿಸಲು ಇವರಿಗಿಂತ ಹೆಚ್ಚಿನ ಸಮರ್ಥರು ಬೇರೊಬ್ಬರಿರಲಾರರು ?" ಒಂದು ಕಡೆ ಇವರು ಮತ್ತೊಂದು ಕಡೆ ಉದಾರ ಚರಿತರಾದ ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿ ಲಾರ್ಡ್ ಇರ್ವಿನ್ ಭಾರತದ ಜನತೆಯ ಸಹೃದ್ ಬಾಂಧವರಾದ ಗಾಂಧೀಜಿ ಮತ್ತು ಪ್ರಭುತ್ವವನ್ನು ಪ್ರತಿನಿಧಿಸುವ ಲಾರ್ಡ್ ಇರ್ವಿನ್, ಇವರಿಬ್ಬರ ಪ್ರಯತ್ನದಿಂದ ಪ್ರಜೆ ಮತ್ತು ಪ್ರಭು ಇವರೀರ್ವರ ನಡುವಿನ ಕಂದರಕ್ಕೆ ಸೇತುವೆ ನಿರ್ಮಿಸುವುದು ಅಸಾಧ್ಯವಾಗದು.

ಮಹಾತ್ಮರ ನಾಯಕತ್ವದಲ್ಲಿ ಭಾರತ ಬಹಳ ಪರಿಣಾಮಕಾರಿಯಾಗಿ ಬ್ರಿಟಿಷ್ ವಸ್ತುಗಳ ಬಹಿಷ್ಕಾರ ನಡೆಸಿತು. ಇದರ ಪರಿಣಾಮವಾಗಿ ಲ್ಯಾಂಕ್‌ಷೈರ್‌ನಲ್ಲಿ ಅನೇಕ ಗಿರಣಿಗಳು ಸ್ಥಗಿತಗೊಂಡವು. ಸಾವಿರಾರು ಗಿರಣಿ ಕಾರ್ಮಿಕರು ನಿರುದ್ಯೋಗಿಗಳಾದರು.

ಚಕ್ರ ಗೋಷ್ಠಿಯಲ್ಲಿ ಕಾಂಗ್ರೆಸ್‌ನ ಪ್ರತಿನಿಧಿಯಾಗಿ ಭಾಗವಹಿಸಲು ಲಂಡನ್ನಿಗೆ ಮಹಾತ್ಮರು ತೆರಳಿದ್ದರು. ಈ ಸಮಯ ಬಳಸಿಕೊಂಡು ಲ್ಯಾಂಕ್‌ಷೈರಿನ ಕಾರ್ಮಿಕರನ್ನು ಭೇಟಿಯಾಗುವ ತಮ್ಮ ಬಯಕೆಯನ್ನು ಬ್ರಿಟಿಷ್ ಸರ್ಕಾರಕ್ಕೆ ತಿಳಿಸಿದರು. ಪ್ರಭುತ್ವ ಪೇಚಿಗೆ ಸಿಕ್ಕಿಕೊಂಡಿತು. ಗಾಂಧೀಜಿ ಇಂಗ್ಲೆಂಡಿಗೆ ದಯಮಾಡಿಸಿದ್ದುದು ಸರ್ಕಾರದ ಅತಿಥಿಯಾಗಿ. ಬಟ್ಟೆಯ ಗಿರಣಿಗಳು ಮುಚ್ಚಲ್ಪಟ್ಟಿರುವುದು ಬ್ರಿಟಿಷ್ ವಸ್ತುಗಳ ಅದರಲ್ಲೂ ಮುಖ್ಯವಾಗಿ ಜವಳಿಯ ಬಹಿಷ್ಕಾರದಿಂದ. ಈ ಚಳವಳಿಯ ನಾಯಕರು ಮಹಾತ್ಮರು.

ಹೀಗಿರುವಲ್ಲಿ ಮಹಾತ್ಮರು ಅಲ್ಲಿಗೆ ಹೋಗುವುದಾದರೆ ನಿರುದ್ಯೋಗಿ ಕಾರ್ಮಿಕರು ಕೋಪೋದ್ರಿಕ್ತರಾಗಿ ಅವರಿಗೆ ತೊಂದರೆ ಕೊಡಬಹುದು, ಪ್ರಾಣಕ್ಕೆ ಅಪಾಯವಾಗಬಹುದು. ಈ ಬಗೆಯ ಪೇಚಿಗೆ ಸಿಕ್ಕಿಕೊಂಡಿತು ಬ್ರಿಟಿಷ್ ಸರ್ಕಾರ.

ಆದರೆ ಮಹಾತ್ಮರ ಕೋರಿಕೆಯನ್ನು ಕಡೆಗಣಿಸಿರುವುದು ಉಚಿತವಲ್ಲ. ಸರ್ಕಾರ ದೀರ್ಘ ಆಲೋಚನೆ ಮಾಡಿ ಇಬ್ಬರು ನುರಿತ ಅನುಭವಿ ಗುಪ್ತದಳದ ಪೋಲಿಸ್ ಅಧಿಕಾರಿಗಳನ್ನು ಗಾಂಧೀಜಿಯವರ ಬೆಂಗಾವಲಾಗಿ ನೇಮಿಸಿ ಲ್ಯಾಂಕ್‌ಷೈರಿಗೆ ಕಳುಹಿಸಿಕೊಟ್ಟರು.

ಶತ್ರುಗಳನ್ನು ಮಿತ್ರರಾಗಿ ಪರಿವರ್ತಿಸಿಕೊಳ್ಳಬಲ್ಲ ಮಹಾತ್ಮರ ಸಾಮರ್ಥ್ಯ ಅಪೂರ್ವ ಅಸದಳ. ಮಹಾತ್ಮರು ಲ್ಯಾಂಕ್‌ಷೈರ್ ಗಿರಣಿ ಪ್ರದೇಶಕ್ಕೆ ಹೋದಾಗ ಗಿರಣಿಗಳು ಕೆಲಸದಲ್ಲಿ ತೊಡಗಿದ್ದವು. ಮಹಾತ್ಮರು ಬಂದಿದ್ದಾರೆ ಗಿರಣಿ ಕಾರ್ಮಿಕರನ್ನು ನೋಡಬಯಸುತ್ತಾರೆ ಎಂಬ ಸಂಗತಿಯನ್ನು ಗಿರಣಿಯ ಚಾಲಕರಿಗೆ ಪೋಲೀಸರು ತಿಳಿಸಿದರು. ಘಂಟೆ ಬಾರಿಸಿ ಗಿರಣಿಯ ಕೆಲಸ ಸ್ಥಗಿತಗೊಳಿಸಲಾಯಿತು. ತಮ್ಮನ್ನು ನಿರುದ್ಯೋಗಿಗಳಾಗಿ ಮಾಡಿರುವ ಮಹಾತ್ಮರನ್ನು ಕಾಣುವ ಕೋಪತಾಪಗಳಿಂದ ಸಮ್ಮಿಶ್ರವಾದ ಕುತೂಹಲದಿಂದ ಸ್ತ್ರೀ ಪುರುಷರಾದಿಯಾಗಿ ಕಾರ್ಮಿಕರು ಧಾವಿಸಿ ಹೊರಬಂದರು.

''ಧೈರ್ಯಂ ಸರ್ವತ್ರ ಸಾಧನಂ'' ಎಂಬ ನಾಣ್ಣುಡಿಯಂತೆ ಗಾಂಧೀಜಿ ಮೋಟಾರಿನಿಂದ ಇಳಿದು ನಿರ್ಭಯವಾಗಿ ಕಾರ್ಮಿಕರ ನಡುವೆ ನಡೆದ ಈ ಅರೆನಗ್ನ ಫಕೀರ. ಆ ಚಳಿಯಲ್ಲೂ ಅವರು ಹೊದ್ದಿದ್ದು ಖಾದಿ ಶಾಲು, ಉಟ್ಟಿದ್ದುದು ತುಂಡು ಪಂಚೆ. ಈ ವೇಷಧಾರಿಯಾದ ವ್ಯಕ್ತಿಯನ್ನು ನೋಡುತ್ತಲೇ ಕಾರ್ಮಿಕರು ದಿಗ್ಮೂಢರಾದರು. ಆಶ್ಚರ್ಯಚಕಿತರಾದರು.

''ಸಹೋದರ ಸಹೋದರಿಯರೇ" ಎಂದು ತಮ್ಮ ಭಾಷಣ ಪ್ರಾರಂಭಿಸುತ್ತಲೇ ಗುಂಪು ನಿಶ್ಶಬ್ಧವಾಗಿ ಆಲಿಸತೊಡಗಿತು. ತಮ್ಮ ನಿಲುವಿನಿಂದ ಸಹಸ್ರಾರು ಕಾರ್ಮಿಕರು

ನಿರುದ್ಯೋಗಿಗಳಾಗಿ ತೊಂದರೆಗೆ ಈಡಾಗಿರುವುದಕ್ಕೆ ತಮ್ಮ ಸಹಾನುಭೂತಿ ವ್ಯಕ್ತಪಡಿಸಿದರು. ಕರ್ತವ್ಯ ಪಾಲನೆಯ ದೃಷ್ಟಿಯಿಂದ ಬಹಿಷ್ಕಾರದ ಕಾರ್ಯ ಕೈಗೊಳ್ಳಬೇಕಾಗಿ ಬಂದ ಕಾರಣ ವಿವರಿಸಿದರು. ''ನಿಮ್ಮ ಜವಳಿ ಆಮದು ಮಾಡಿಕೊಳ್ಳುತ್ತಿರುವುದರಿಂದ ಜವಳಿ ಉದ್ಯಮದಲ್ಲಿ ತೊಡಗಿದ್ದ ನನ್ನ ದೇಶದ ಸಾವಿರಾರು ಕುಟುಂಬಗಳು ನಿರುದ್ಯೋಗಿಗಳೂ, ನಿರ್ಗತಿಕರೂ ಆಗಿದ್ದಾರೆ. ನಿಮಗಾದರೂ ನಿಮ್ಮ ಸರ್ಕಾರ ಅರೆ ಹೊಟ್ಟೆಯ ಭತ್ಯ ನೀಡುತ್ತದೆ. ಈ ಪರಿಪಾಠ ಭಾರತದಲ್ಲಿ ಇಲ್ಲ. ನನ್ನ ಪರಿಸ್ಥಿತಿಯಲ್ಲಿ ನೀವಿದ್ದರೆ ಏನು ಮಾಡುತ್ತಿದ್ದೀರಿ'' ಎಂದು ಪ್ರಶ್ನಿಸಿದರು. ಕಾರ್ಮಿಕರ ಮನ ಒಲಿಸಿಕೊಂಡರು.

ವಂದನಾರ್ಪಣೆ ಮಾಡುತ್ತ ಕಾರ್ಮಿಕ ನಾಯಕರು ಮಹಾತ್ಮರ ನಿಲುವು ಸರಿಯಾದುದು ಎಂದು ಒಪ್ಪಿಕೊಂಡರು. ಮಹಿಳಾ ಕಾರ್ಮಿಕರು ಮುಂದೆ ಬಂದು ಮಹಾತ್ಮರ ಕೈಹಿಡಿದು ಮುದುಕನಿಗೆ ಜಯವಾಗಲಿ ಎಂಬ ಆಂಗ್ಲ ಗೀತೆ ಹಾಡುತ್ತ ಕುಣಿಯ ತೊಡಗಿದರು. ಗಾಂಧೀಜಿ ಅಂಗರಕ್ಷಕರು ನೆಮ್ಮದಿಯ ನಿಟ್ಟುಸಿರುಬಿಟ್ಟರು. ಮಹಾತ್ಮರ ಮೇಲೆರಗಿ ಕುಪಿತ ಕಾರ್ಮಿಕರು ಏನು ಮಾಡಿಯಾರೊ ಎಂಬ ಭಯ ಅಂಗರಕ್ಷಕರಿಗೆ.

ಬದನವಾಳದ ಖಾದಿ ಕೇಂದ್ರ ಕುರಿತು ವಿಶೇಷ ಸಂಚಿಕೆಗೆ ಲೇಖನ ಬರೆದು ಕೊಡುವಂತೆ ವೃದ್ಧರಾದ ರಂಗಶೆಟ್ಟರು ನಮ್ಮ ವಾಸದ ಮನೆ ಹುಡುಕಿಕೊಂಡು ವೈಯಾಳಿಕಾವಲಿಗೆ ಬಂದರು. ಈ ಕೇಂದ್ರದಲ್ಲಿ ಪ್ರಾರಂಭದಿಂದಲೂ ಕಾರ್ಯನಿರತರಾಗಿದ್ದವರು, ಬದನವಾಳ ಖಾದಿ ಉತ್ಪನ್ನ ಕೇಂದ್ರವನ್ನು ಹೆಚ್ಚು ಬಲ್ಲವರು ಅನ್ಯಥಾ ಇರಲಾರರು. ಕೇಂದ್ರದ ಬಗ್ಗೆ ನನ್ನ ಅರಿವು ಶೂನ್ಯ. ಅಲ್ಲದೆ ಕೇಂದ್ರವನ್ನು ಕುರಿತು ಬಲ್ಲವರು ಲೇಖನ ಬರೆದು ಕೊಟ್ಟಿರುವುದರಿಂದ ನಾನು ಅನ್ಯ ವಿಷಯದ ಪ್ರಸ್ತಾಪ ಮಾಡಿರುತ್ತೇನೆ.

ಬದನವಾಳು ಕೇಂದ್ರ ರೂಪಿತವಾದದ್ದು ಮಹಾತ್ಮರ ಮೆಚ್ಚುಗೆ ಗಳಿಸಲು ಎಂಬುದರಲ್ಲಿ ಸಂಶಯವಿಲ್ಲ. ಮಿರ್ಜಿ ಅವರಿಗೆ ಖಾದಿಯಲ್ಲಿ ನಂಬಿಕೆ ಇತ್ತು ಎಂದು ಹೇಳುವಂತಿಲ್ಲ. ಆದರೂ ಅವರು ತೆಗೆದುಕೊಂಡದು ದಿಟ್ಟ ಹೆಜ್ಜೆಯೇ. ಖಾದಿ ಧಾರಿಗಳು ಬ್ರಿಟಿಷ್ ಪ್ರಭುತ್ವದ ವಿರೋಧಿಗಳು ಎಂಬ ಭಾವನೆ ಬಲವಾಗಿದ್ದ ಕಾಲ ಅದು. ಖಾದಿ ಧಾರಿಗಳ ಮೇಲೆ ಪೋಲೀಸರ ಗುಪ್ತದಳದ ನಿಗಾ ಸದಾ ಇರುತ್ತಿತ್ತು.

ಬದನವಾಳು ಖಾದಿ ಕೇಂದ್ರ ಸ್ಥಾಪಿತವಾದುದು ಸೆಪ್ಟೆಂಬರ್ 1927ರಲ್ಲಿ. ಇದಕ್ಕೆ ಒಂದು ವರ್ಷದ ಪೂರ್ವಭಾವಿಯಾಗಿ ರಾಮಚಂದ್ರರಾಯರು ತಗಡೂರಿನಲ್ಲಿ

ನೂಲುವ ಕೆಲಸ ಪ್ರಾರಂಭಿಸಿದ್ದರು. ಬದನವಾಳು ಗ್ರಾಮವು ನಂಜನಗೂಡಿನಿಂದ ಆರು ಮೈಲಿ, ತಗಡೂರಿನಿಂದ ಐದು ಮೈಲಿಗಳ ಅಂತರದಲ್ಲಿದೆ. ಆದಕಾರಣ ಕಾರ್ಮಿಕರು ಎರಡು ಕೇಂದ್ರಗಳ ಪ್ರಯೋಜನ ಪಡೆಯುತ್ತಿದ್ದರು. ಇದರಿಂದ ಉಭಯ ಕೇಂದ್ರಗಳ ಸಂಚಾಲಕರಿಗೆ ತೊಂದರೆ ಆಗದೆ ಇರುತ್ತಿರಲಿಲ್ಲ.


ಶ್ರೀಯುತ ರಾಜಾರಾಮಯ್ಯಂಗಾರ್ ಬದನವಾಳು ಕೇಂದ್ರದ ಮೊದಲ ವ್ಯವಸ್ಥಾಪಕರು. ಇವರು ಬೆಂಗಳೂರಿನ ತಾತಾ ವಿಜ್ಞಾನ ಸಂಸ್ಥೆ ಎಂದು ಜನಪ್ರಿಯ ವಾಗಿರುವ ಭಾರತೀಯ ವಿಜ್ಞಾನ ಸಂಸ್ಥೆಗೆ ಸೇರಿದ್ದರು. ಆದರೆ ಮಹಾತ್ಮರ ಕರೆಗೆ ಓಗೊಟ್ಟು ತಮ್ಮ ಸಂಶೋಧನೆಯ ಕೆಲಸ ತೊರೆದು ಖಾದಿ ತಯಾರಿಕೆಯ ಕೆಲಸ ಕೈಗೊಂಡು ಬದನವಾಳಿಗೆ ಬಂದರು. ಮುಂದೆ ದೊಡ್ಡ ಹುದ್ದೆಗೆ ಏರಿ ಸಾವಿರಾರು ರೂಪಾಯಿ ಗಳಿಸಬಹುದಾದ ಅವಕಾಶ ಕೈಬಿಟ್ಟು ಖಾದಿ ಉದ್ಯಮಕ್ಕೆ ಇಳಿದುದು ಇವರ ತ್ಯಾಗ ಮತ್ತು ದೇಶಭಕ್ತಿಯನ್ನು ನಿದರ್ಶಿಸುತ್ತದೆ. ಮಹಾತ್ಮರ ಮೋಡಿ ಅಂಥದು. ಮೋಡಿ ಎಂದರೆ ಮಂತ್ರ ಮಾಯೆ, ಯಕ್ಷಿಣಿ ವಿದ್ಯೆ ಅಲ್ಲ, ತರ್ಕಬದ್ಧ ವಾದ ಬುದ್ಧಿವಂತರ ಮನ ಒಲಿಸಿಕೊಳ್ಳುವ ಸಾಮರ್ಥ್ಯ. ಸಾವಿರಾರು ವಿದ್ಯಾರ್ಥಿ ಗಳೂ, ವಕೀಲರೂ, ಸರ್ಕಾರದ ನೌಕರರೂ ತಮ್ಮ ಉದ್ಯೋಗಗಳಿಗೆ ರಾಜೀನಾಮೆ ಯಿತ್ತು ಹೊರಬಂದ ಕಾಲವದು. ಇದರಿಂದ ಬದನವಾಳ ಖಾದಿಗೆ ಬೇಡಿಕೆ ಬೆಳೆಯಿತು.

ಆದರೆ ಒಂದು ವಿಷಯ ಇತರರಿಗೆ ನೋವಾದರೂ ಚಿಂತೆ ಇಲ್ಲವೆಂದು ನಿಸ್ಸಂಕೋಚವಾಗಿ ಹೇಳಬೇಕಾಗಿದೆ. ಸತ್ಯ ಸದಾ ಸಿಹಿಯಾಗಿಯೇ ಇರಬೇಕಾಗಿಲ್ಲ. ಬದನವಾಳು, ತಗಡೂರು ಕೇಂದ್ರದ ನೂಲುವವರೂ, ನೇಕಾರರೂ, ಸೋಮಾರಿಜನ, ಅಲ್ಪತೃಪ್ತರು. ಇಲ್ಲಿನ ಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿಲ್ಲ. ಮುಂದುವರೆ ಯುತ್ತಿಲ್ಲ. ಪ್ರಗತಿಗೆ ವಿರುದ್ಧವಾಗಿದೆ. ಎಂದು ಸರಿಹೋದೀತು ?

* * * *

ಸೂಕ್ತಿ ಸುಧೆ

ರಾಷ್ಟ್ರವೊಂದರ ಅಭ್ಯುದಯವು ಅದರ ಬೊಕ್ಕಸದಲ್ಲಿ ತುಳುಕುತ್ತಿರುವ ಸಂಪತ್ತನ್ನೋ ಅದರ ಕೋಟೆ ಕೊತ್ತಲಗಳ ಬಲಾಢ್ಯತೆಯನ್ನೋ ಅದರ ಸಾರ್ವಜನಿಕ ಸೌಧಗಳ ಅನುಪಮ ಸೌಂದರ್ಯವನ್ನೋ ಅವಲಂಬಿಸಿಲ್ಲ. ಬದಲಿಗೆ ಆ ನಾಡಿನ ಸುಸಂಸ್ಕೃತ ಪ್ರಜಾಸಂಖ್ಯೆಯನ್ನು ವಿದ್ಯೆ, ತಿಳಿವಳಿಕೆ, ನಡವಳಿಕೆಗಳಲ್ಲಿ ಸಂಪನ್ನರೆನ್ನಿಸಿಕೊಂಡವರನ್ನು ಅವಲಂಬಿಸಿದೆ. ಅದರ ನಿಜವಾದ ಹಿತ ಮುಖ್ಯ. ಮುಖ್ಯ ಶಕ್ತಿ, ನೈಜ ಬಲಗಳಿರುವುದು ಇದರಲ್ಲೇ.



ಶ್ರೀ ಗಂಗಾಧರ ದೇಶಪಾಂಡೆಯವರೊಂದಿಗೆ (ಟೋಪಿ ಹಾಕಿಕೊಂಡು ಕುಳಿತಿರುವವರು) ಸರ್ವಶ್ರೀ ವೆಂಕಟರಮಣ ಅಯ್ಯರ್, ಆರ್. ವಿ. ಒಡವಿ, ವೆಂಕಟರಾಮಯ್ಯ, ಎಂ. ಆರ್. ನಂಜುಂಡರಾವ್ ಮುಂತಾದ ಖಾದಿ ಕಾರ್ಯಕರ್ತರು.

ಖಾದಿ ಉದ್ದಿಮೆ ಹಾಗೂ ಕಬ್ಬಳ್ಳಿ ಗ್ರಾಮದ ಸಾಮರಸ್ಯ

ಶ್ರೀ ಡಿ. ರಂಗಶೆಟ್ಟರು

ಕಬ್ಬಳ್ಳಿ, ಗುಂಡ್ಲುಪೇಟೆ ತಾಲ್ಲೂಕಿನ ಒಂದು ದೊಡ್ಡ ಗ್ರಾಮ. ಈ ಗ್ರಾಮದ ಸುತ್ತ ಮುತ್ತ ಕೆಲವು ಸಣ್ಣ ಗ್ರಾಮಗಳೂ ಇದ್ದುವು. ಸುಮಾರು 1500 ರಿಂದ 2000 ಚರಖಾಗಳು ಕೆಲಸ ಮಾಡುತ್ತಿದ್ದುವು. ಕಬ್ಬಳ್ಳಿ ಗ್ರಾಮವು ಈ ಸುತ್ತಲಿನ ಗ್ರಾಮಗಳಿಗೆ ಕೇಂದ್ರವಾಗಿತ್ತು. ನೂಲುಗರಿಂದ ನೂಲು ಖರೀದಿ ಮಾಡಲಾಗುತ್ತಿತ್ತು. ಅನೇಕ ಸಂದರ್ಭಗಳಲ್ಲಿ ಸರ್ಕಾರದಿಂದ ಸಕಾಲದಲ್ಲಿ ಒದಗಬೇಕಾಗಿದ್ದ ಹಣ ಬರುವುದು ತಡವಾಗುತ್ತಿತ್ತು. ಈ ಪರಿಸ್ಥಿತಿಯಲ್ಲಿ ಕಬ್ಬಳ್ಳಿಯಲ್ಲಿದ್ದ ಶ್ರೀ ಸಾಹುಕಾರ್ ಕೆ. ಸಿ. ಸುಬ್ಬಣ್ಣನವರು ಮತ್ತು ಸಾಹುಕಾರ್ ಸಿರಿಯಪ್ಪನವರು ಕೈ ಸಾಲವಾಗಿ ಹಣ ವನ್ನು ಐನೂರು ರೂಪಾಯಿಗಳವರೆಗೂ ವ್ಯಕ್ತಿಗತ ನಂಬಿಕೆ ಮೇಲೆ ಕೊಡುತ್ತಿದ್ದರು. ಆಗ ಕೇಂದ್ರದಲ್ಲಿ ಕಾರ್ಯಕರ್ತರಾಗಿದ್ದ ಶ್ರೀ ಡಿ. ರಂಗಶೆಟ್ಟರು ಕೇಳಿದ ತಕ್ಷಣವೇ ಹಣ ವನ್ನು ಕೊಟ್ಟು ನೂಲುಗರಿಗೆ ಸಂತೈಸುವಂತೆ ಹೇಳುತ್ತಿದ್ದರು ಮತ್ತು ಸರ್ಕಾರದಿಂದ ಹಣ ಬಂದೊಡನೆಯೇ ವಾಪಸ್ಸು ಪಡೆಯುತ್ತಿದ್ದರು.

ಸುಬ್ಬಣ್ಣನವರ ಮಾತೃಶ್ರೀ ಮಲ್ಲಮ್ಮನವರು. ಗುಂಡ್ಲುಪೇಟೆ ಪ್ರಾಂತ್ಯದಲ್ಲಿ ಅವರ ಯಜಮಾನರು ಮಾನ್ಯಶ್ರೀ ಸಾಹುಕಾರ್ ಚನ್ನಬಸಪ್ಪನವರು ಧರ್ಮ ಪ್ರವರ್ತಕರು. ಮೈಸೂರಲ್ಲಿ ಒಂದು ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿ ನಡೆಸಿಕೊಂಡು ಬಂದರು. ಒಂದಾನೊಂದು ಸಮಯ ನಾನೂ ಮತ್ತು ಚನ್ನಬಸಪ್ಪನವರು ನಂಜನಗೂಡು ಪ್ರೌಢಶಾಲೆಯ ವಿದ್ಯಾರ್ಥಿಗಳಾಗಿದ್ದವರು. ಸಾಹುಕಾರರು ನನಗಿಂತ ಎರಡು ಮೂರು ವರ್ಷ ಕಿರಿಯರಿರಬಹುದು. ಆದರೂ "ಸ್ಕೂಲ್ ಮೇಟ್ಸ್ ಆಗಿದ್ದೆವು". ಈ ಪರಿಚಯವೂ ಸಹ ಖಾದಿ ಕೆಲಸಕ್ಕೆ ಆದಷ್ಟು ಸಹಾಯವೇ ಆಯಿತು. ಪೂಜ್ಯರಾದ ಶ್ರೀ ಮಲ್ಲಮ್ಮನವರಂತೂ ನನ್ನನ್ನು ಕಂಡರೆ ಬಹಳ ವಾತ್ಸಲ್ಯ ದಿಂದ ನಡೆದುಕೊಳ್ಳುತ್ತಿದ್ದರು. ಅವರು ಮೈಸೂರಿಗೆ ಓಡಾಡುತ್ತಲೇ ಇದ್ದರು. ಬೇಕಾದಷ್ಟು ತರಕಾರಿಯನ್ನು ಅಲ್ಲಿಂದ ತರುತ್ತಿದ್ದರು. ಹಾಗೆಯೇ ನನಗೂ ಸಹ ತರ್ಕಾರಿ ಉಪಯೋಗಿಸುವ ಚಟ ಅಂಟಿಸಿದರು. ನನಗಾಗಿ ಪ್ರತಿ ತಿಂಗಳೂ ಅವರ ಮನೆಯಿಂದ ಶುದ್ಧಿ ಮಾಡಿದ ಅಕ್ಕಿಯನ್ನೂ ಸಹ 10–12 ಸೇರುಗಳಷ್ಟು ಕೊಡು

ತ್ತಿದ್ದರು. ಇದರ ಬೆಲೆಯನ್ನು ಆಗಿನ ಧಾರಣೆಯಂತೆ ಪಾವತಿ ಮಾಡುತ್ತಿದ್ದೆ. ಕಬ್ಬಳ್ಳಿ ಗ್ರಾಮಸ್ಥರೂ ಆಸ್ಥೆಯಿಂದ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.

ಕಬ್ಬಳ್ಳಿ ಕೇಂದ್ರದಲ್ಲಿ ಶ್ರೀಮಾನ್ ಕೆ. ನಾರಾಯಣಯ್ಯಂಗಾರ್‌ರವರು ಅರಳೆ ಎಕ್ಕುವ ಯಂತ್ರವನ್ನು ತಯಾರಿಸಿದ್ದರು. ಇದು ಮಾನವ ಶಕ್ತಿಯಿಂದಲೇ ನಡೆಯುವಂತೆ ನಿರ್ಮಾಣವಾಗಿ 5 ಯಂತ್ರಗಳು ಕೇಂದ್ರದಲ್ಲಿ ಕೆಲಸ ಮಾಡುತ್ತಿದ್ದುವು. ಇದನ್ನು ನಿರ್ವಹಿಸಲು ತಕ್ಕ ಸಿಬ್ಬಂದಿಗಳೂ ಇದ್ದರು. ಇದರಿಂದ ನೂಲುವವರಿಗೆ ಬಹಳ ಅನುಕೂಲವಾಗಿತ್ತು. ಆಗಿನ ನೂಲಿನ ಬೆಲೆ 3600 ಗಜಕ್ಕೆ ಮೂರು ಆಣೆಯಿಂದ ನಾಲ್ಕಾಣೆವರೆಗೆ ಇತ್ತು. ಅರಳೆ ಬೆಲೆ 1 ಪೌಂಡಿಗೆ ನಾಲ್ಕಾಣೆಗಿಂತ ಹೆಚ್ಚಿರಲಿಲ್ಲ. ಈಗ ಅರಳೆ ಬೆಲೆ 1 ಕೆ.ಜಿ.ಗೆ 17 ರೂಪಾಯಿಗಳು. ಮಾನ್ಯಶ್ರೀ ಡಿ. ರಾಜಗೋಪಾಲ್ ಎಂಬುವರು ಕೈಯಿಂದ ನೂಲುವ ಹೊಸ ಮಾದರಿ ಚರಕ ನಿರ್ಮಿಸಿದ್ದರು. ಅದಕ್ಕೆ ಸುದರ್ಶನ ಚರಕ ಎಂದು ಹೆಸರಿಟ್ಟಿದ್ದರು. ಅಂತಹ ಚರಕ ಕಂಡುಹಿಡಿದವರಿಗೆ 1 ಲಕ್ಷ ರೂ ಬಹುಮಾನ ಕೊಡುವುದಾಗಿ ಮಹಾತ್ಮಾಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಪ್ರಕಟಿಸಿದ್ದರು. ಅದರಂತೆ ಆ ಚರಕವನ್ನು ನಿರ್ಮಿಸಿದ ಶ್ರೀ ರಾಜಗೋಪಾಲ್‌ರವರು ಸಬರ್ಮತಿ ಆಶ್ರಮಕ್ಕೆ ತೆಗೆದುಕೊಂಡು ಹೋಗಿ ಮಹಾತ್ಮರ ಮುಂದೆ ಪ್ರದರ್ಶನ ಮಾಡಿದ್ದರು, ಬಹುಮಾನದ ಅಪೇಕ್ಷೆಯಿಂದ. ಆದರೆ ಮಹಾತ್ಮರು ಒಪ್ಪಲಿಲ್ಲ. ಅದನ್ನು ಮೈಸೂರು ಸರ್ಕಾರದ ಕೈಗಾರಿಕೆ ಇಲಾಖೆಯ ಡೈರೆಕ್ಟರವರೂ ಸಹ ಪುಷ್ಟೀಕರಿಸಿ ಕಬ್ಬಳ್ಳಿ ಕೇಂದ್ರದಲ್ಲಿ ಆ ರಾಟೆಯಿಂದ ನೂಲು ತಯಾರಿಸಲು ಆಜ್ಞಾಪಿಸಿದರು. ಮತ್ತು ಮಹಾತ್ಮರ ಆದೇಶವೂ ಸಹ ಬದನವಾಳ ಕೇಂದ್ರದಲ್ಲಿ ಪ್ರಯೋಗ ನಡೆಸುವಂತೆ ಆದೇಶವಿತ್ತಿದ್ದರು. ಆ ರಾಟೆಯನ್ನು ಕಬ್ಬಳ್ಳಿಯಲ್ಲಿಟ್ಟು ಸುಮಾರು ಆರು ತಿಂಗಳ ಕಾಲ ಒಬ್ಬ ಹೆಣ್ಣುಮಗಳು ತಮ್ಮಡಿಹಟ್ಟಿ ಕೆಂಪಮ್ಮ ಎಂಬವಳಿಂದ ಪ್ರಯೋಗ ನಡೆಸಲಾಯ್ತು. ಆದರೆ ಅದು ತೃಪ್ತಿಕರವಾಗಲಿಲ್ಲವೆಂತ ಚರಕಾ ಸಂಘದ ಆಫೀಸಿನವರು ಅದಕ್ಕೆ ಮನ್ನಣೆ ಕೊಡಲಿಲ್ಲ. ಈ ಕೇಂದ್ರಕ್ಕೆ ಅಖಿಲ ಭಾರತ ಚರಖಾ ಸಂಘದ ಕಾರ್ಯದರ್ಶಿಗಳಾದ ಶ್ರೀ ಶಂಕರ್‌ಲಾಲ್ ಬ್ಯಾಂಕರ್, ಅಹಮ್ಮದಾಬಾದ್ ಇವರು ಭೇಟಿಕೊಟ್ಟಿದ್ದರು. ಆ ಸಮಯದಲ್ಲಿ ಅವರ ಸಮಕ್ಷಮದಲ್ಲಿ ಒಂದು ದೊಡ್ಡ ನೂಲುವವರ ಪ್ರದರ್ಶನ ಏರ್ಪಡಿಸಲಾಗಿತ್ತು. ಅದರಲ್ಲಿ ಸುಬ್ಬಣ್ಣನವರು ಆಗ ತಾನೆ ನಿರ್ಮಿಸಿದ್ದ 12 ಪೆಟ್ಟಿಗೆ ಚರಖಾವನ್ನು ನೂಲುವವರಿಗೆ ಬಹುಮಾನವಾಗಿ ಕೊಟ್ಟರು. ಶ್ರೀ ಶಂಕರ್‌ಲಾಲ್ ಬ್ಯಾಂಕರ್‌ರವರು ತಮ್ಮ ಕಾರ್ಯದರ್ಶಿ ಹುದ್ದೆಯಲ್ಲಿ ವರ್ಷಕ್ಕೊಮ್ಮೆಯಾದರೂ ಬದನವಾಳು ನೂಲುವ ಪ್ರಾಂತ್ಯಕ್ಕೆ ಭೇಟಿ ನೀಡಿ ಒಂದು ದಿನವಿದ್ದು ವಾಪಸ್ಸಾಗುತ್ತಿದ್ದರು. ಅವರು ನೀಲಗಿರಿಯಿಂದ ವಾಪಸ್ಸಾಗುವಾಗ ಗುಂಡ್ಲುಪೇಟೆ ಹತ್ತಿರವಿರುವ ಮಾದ್ರಹಳ್ಳಿ ಖಾದಿ ಕೇಂದ್ರಕ್ಕೆ ಒಮ್ಮೊಮ್ಮೆ ಭೇಟಿಕೊಟ್ಟು ಕೆಲಸಗಳನ್ನು

ವೀಕ್ಷಿಸುತ್ತಿದ್ದರು. ಅವರೊಡನೆ ಶ್ರೀ ಅಂಬಾಲಾಲ್ ಸಾರಾಬಾಯಿಯವರೂ ಸಹ ಬರುತ್ತಿದ್ದರು. ಹಾಗೆಯೇ ಹರಿಜನ ನೇಯ್ಗೆಯವರ ಮನೆಗಳಿಗೂ ಭೇಟಿಕೊಡುತ್ತಿದ್ದರು. ಮಾಡ್ರಹಳ್ಳಿ ಕೇಂದ್ರಕ್ಕೆ ಸುಪ್ರಸಿದ್ಧ ನ್ಯಾಯವಾದಿಗಳೂ ಕಾಂಗ್ರೆಸ್ ಧುರೀಣರೂ ಆದ ಶ್ರೀ ಬಲೂಭಾಯಿ ದೇಸಾಯಿಯವರು ಭೇಟಿಯಿತ್ತು ಮುಂದೆ ಮೈಸೂರು ಬೆಂಗಳೂರು ಕಡೆ ಪ್ರಯಾಣಿಸುತ್ತಿದ್ದರು.


ಬರ ಪರಿಹಾರ ಕೇಂದ್ರಗಳು

ಹೊಳೆನರಸೀಪುರ (ಹಾಸನ ಜಿಲ್ಲೆ) ಮತ್ತು ತುಮಕೂರು ಜಿಲ್ಲೆಯ ಚಿಕ್ಕನಾಯ್ಕನ ಹಳ್ಳಿಯಲ್ಲಿ ನೇಯ್ಗೆಯವರಿಗೆ ಮಾರುಕಟ್ಟೆಯಲ್ಲಿ ನೂಲು ದೊರಕುತ್ತಿರಲಿಲ್ಲ. ನೇಯ್ಗೆಯವರಿಗೆ ತುಂಬಾ ತೊಂದರೆಯಾಗಿ ಹಾಹಾಕಾರವೆದ್ದಿತು. ಸರ್ಕಾರದವರು ಮೊಳಕಾಲ್ಮುರುವಿಗೆ ಬಂದು ನೇಯ್ಗೆ ಕೇಂದ್ರವನ್ನೂ ಹೊಳೆನರಸೀಪುರಕ್ಕೆ ಮತ್ತು ಚಿಕ್ಕನಾಯ್ಕನ ಹಳ್ಳಿಗೆ ಒಂದು ನೇಯ್ಗೆ ಕೇಂದ್ರವನ್ನೂ ಹಾಗೂ ಇಟಗಿದಿಬ್ಬನ ಹಳ್ಳಿಯಲ್ಲಿ ಒಂದು ನೇಯ್ಗೆ ಕೇದ್ರವನ್ನೂ ಮಂಜೂರ್ಮಾಡಿಸಿದರು. ಹೊಳೆನರಸೀಪುರದಲ್ಲಿ ಶ್ರೀ ಕೆ. ಎನ್. ಸುಬ್ರಹ್ಮಣ್ಯಂರವರು ನೇಯ್ಗೆ ಕೇಂದ್ರದ ಮುಖ್ಯಸ್ತರಾಗಿ ಕೆಲಸಮಾಡಿ ಯಶಸ್ಸನ್ನು ಪಡೆದರು. ಶ್ರೀ ಡಿ. ರಂಗಶೆಟ್ಟರು ಚಿಕ್ಕನಾಯ್ಕನಹಳ್ಳಿ ಕೇಂದ್ರದಲ್ಲಿದ್ದರು. ಅವರ ವಾಸ್ತವ್ಯವು ಕೆಲದಿನಗಳಿದ್ದುದರಿಂದ ಏನನ್ನೂ ಸಾಧಿಸಲಾಗಲಿಲ್ಲ. ಶ್ರೀ ಟಿ. ಕೆ. ರಾಮಕೃಷ್ಣ ಇವರು ಮೊಳಕಾಲ್ಮುರು ಕೇಂದ್ರದಲ್ಲಿದ್ದು ಹೆಚ್ಚು ಕೆಲಸ ಸಾಧಿಸಲಾಗಲಿಲ್ಲ.

* * *

ಗಾಂಧಿವಾಣಿ

ಖಾದಿಯ ವಿಶಿಷ್ಟ ಪಂಥವನ್ನು ಇಪ್ಪತ್ತು ವರ್ಷಗಳಿಗೂ ಮೀರಿ ನನ್ನ ದೇಶ ಬಾಂಧವರಿಗೆ ಬೋಧಿಸಿದ್ದೇನೆ. ಸಾವಿನ ಅಂಚಿಗೆ ಬಂದಿರುವ ಈ ವಯಸ್ಸಿನಲ್ಲಿಯೂ ಇದನ್ನೇ ಬೋಧಿಸುವೆ. ಪ್ರಾರಂಭದಲ್ಲಿ ಜೀರ್ಣ ಚಿಂದಿಯಂತೆ ಕಾಣುತ್ತಿದ್ದ ಖಾದಿ ಈಗ ಬದಲಾಗಿದೆ. ಯವ್ವನದ ಶಕ್ತಿ, ಆರೋಗ್ಯ ಮತ್ತು ಸೌಂದರ್ಯದಿಂದ ಈಗ ಶೋಭಿಸುತ್ತಿದೆ. ಆದ್ದರಿಂದಲೇ ಇಮ್ಮಡಿ ಉತ್ಸಾಹದಿಂದ, ಸಂಪೂರ್ಣ ನಂಬಿಕೆಯಿಂದ ನಾನು ಈಗ ಖಾದಿ ಪಂಥವನ್ನು ಪ್ರತಿಪಾದಿಸಬಲ್ಲೆ. ಇದು ಸರಿ ಎಂದು ನನ್ನ ಅಂತರ್ವಾಣಿ ಸ್ಪಷ್ಟವಾಗಿ ಸಮರ್ಥಿಸುತ್ತದೆ. ನಮ್ಮ ದೇಶದ ಸ್ವರಾಜ್ಯ ಖಾದಿಯ ಅಭಿವೃದ್ಧಿಯಲ್ಲಿ ಅಡಗಿದೆ ಎಂದು ನನಗೆ ಸುಸ್ಪಷ್ಟ.



ಎಡದಿಂದ ಬಲಕ್ಕೆ : ಎಂ. ಎಸ್. ಸುಬ್ಬಲಕ್ಷ್ಮಿ, ಟಿ. ಸದಾಶಿವಮ್, ರಾಜಾರಾಮಯ್ಯಂಗಾರ್, ಹೆಚ್. ಆರ್. ವೆಂಕಟರಮಣಯ್ಯ.

ಖಾದಿ ಅಳಿದರೆ ಭಾರತ ಉಳಿಯದು

ಶ್ರೀ ಕೆ. ಪಟ್ಟಾಭಿರಾಮನ್
ಸ್ವಾತಂತ್ರ್ಯ ಹೋರಾಟಗಾರರು

ಒಮ್ಮೆ ವಿನೋಬಾಜೀ ಆಡಿದ ಒಂದು ನುಡಿಯನ್ನು ಇದೀಗ ನೆನೆಯುತ್ತೇನೆ. ಭಾರತದ ಭವಿಷ್ಯ ಖಾದಿಯಲ್ಲೂ ಖಾದಿ ಕಾರ್ಯಕರ್ತರಲ್ಲೂ ಅಡಗಿದೆ ಎಂದಿದ್ದಾರೆ. ಅಂದಮೇಲೆ ಈ ಒಕ್ಕಣೆಯನ್ನು ಅವರದೊಂದು ಉದ್ಗಾರ ಎತ್ತಿತೋರಿ ಆರಂಭಿಸುತ್ತಿದ್ದೇನೆ.

ಗಾಂಧೀ ರಾಜ್ಯಕ್ಕೆ ಸೂತ್ರ

ಖಾದಿ ಉದ್ಯಮ ನವಭಾರತದ ಸೃಷ್ಟಿಗೆ ಅಂದರೆ ಗಾಂಧೀ ರಾಜ್ಯಕ್ಕೆ ಸಚೇತನ ಸೂತ್ರವೆಂದು ಗ್ರಹಿಸಿ ಅದರ ಸಂವರ್ಧನೆಗೆ ಹಲವಾರು ಪ್ರಯೋಗಗಳನ್ನು ಹುಟ್ಟುಹಾಕಿ ರಾಷ್ಟ್ರಕ್ಕೇ ಮಾರ್ಗಸೂಚನೆ ನೀಡಿರುವ ಕೀರ್ತಿ ವಿನೋಬಾಜೀದು. ಮೇಲಾಗಿ ಗಾಂಧೀಪ್ರಜ್ಞೆ ಜೀವಂತವಾಗಿ ಉಳಿಯಬೇಕಾದರೆ ಬೆಳೆಯಬೇಕಾದರೆ ಖಾದಿಯಿಂದ ಮಾತ್ರ ಸಾಧ್ಯವೆಂದು ಬೋಧಿಸಿದ್ದಾರೆ. ಖಾದಿ ವ್ಯಕ್ತಿಯನ್ನು ಗಾಂಧೀಮಾರ್ಗಕ್ಕೆ ಕೊಂಡೊಯ್ಯುತ್ತದೆ. ಪರಿವರ್ತನ ವ್ಯಕ್ತಿಯ ಸೃಷ್ಟಿಯೇ ಗಾಂಧೀಜಿಯ ಸದಾಶಯವೆನ್ನುವುದಾದರೆ ಅದು ಖಾದಿಯಿಂದ ಸಾಧಿಸಬಹುದೆಂದು ಹೇಳಲಾಗಿದೆ. ಖಾದಿ ಒಂದು ಜೀವನ ವಿಧಾನವನ್ನು ಎತ್ತಿಹಿಡಿಯುತ್ತದೆ. ವಸ್ತು ಬಳಕೆಯಲ್ಲಿ ಒಂದು ಆಧ್ಯಾತ್ಮಿಕ ವರ್ಚಸ್ಸನ್ನು ಹೊಂದಿಸಿ ವ್ಯಕ್ತಿಯನ್ನು ಪರಿವರ್ತಿಸಿ ಅವನೊಬ್ಬ ಅರ್ಹ ರಾಷ್ಟ್ರಕನನ್ನಾಗುವಂತೆ ಮಾಡುವ ಶಕ್ತಿ ಕೌಶಲ ಖಾದಿಗಿದೆ.

ಖಾದಿ ಗ್ರಾಮಾಭಿಮುಖ

ಇದೇ ಹಿನ್ನೆಲೆಯಲ್ಲಿ ಗಾಂಧೀಜಿಯ ಹಲವು ಹಿತನುಡಿಗಳನ್ನು ಸ್ಮರಿಸಬಹುದು. ಗ್ರಾಮಾಭಿವೃದ್ಧಿ ಆಗುವವರೆಗೂ ರಾಷ್ಟ್ರಾಭಿವೃದ್ಧಿ ಆಗದು. ಗ್ರಾಮಾಭಿವೃದ್ಧಿ ಆದಷ್ಟು ಬೇಗನೆ ಉಂಟುಮಾಡುವುದೇ ಗಾಂಧೀಜಿಯ ರಚನಾತ್ಮಕ ಯೋಜನೆಯ ಗುರಿ ಮತ್ತು ಗ್ರಾಮಕೈಗಾರಿಕೆಗಳು ಯೋಜನೆಯ ಅವಿಭಾಜ್ಯ ಅಂಶಗಳೇ ಆಗಿವೆ. ಬಡತನ ನಿವಾರಣೆಗೂ ಅವೇ ಮೂಲಾಧಾರ. ಖಾದಿ ಗ್ರಾಮ ಕೈಗಾರಿಕೆಗಳ ಅನುಸರಣೆಯಿಂದ ಮಾತ್ರ ಗ್ರಾಮವಾಸಿಗಳ ಜೀವನಮಟ್ಟ ಸುಧಾರಿಸಬಹುದೆಂದು ಗಾಂಧೀಜಿ ಕಂಡು

ಕೊಂಡಿದ್ದರು. ಅಂದಮೇಲೆ ಗ್ರಾಮಪ್ರಾಂತಕ್ಕೆ ಖಾದಿ ಸಂದೇಶವನ್ನು ಮುಟ್ಟಿಸುವ ಅಗತ್ಯತೆ ಹೆಚ್ಚಾಗಿದೆ. ಅಂತೂ ಖಾದಿ ಉದ್ಯಮ ರಾಷ್ಟ್ರವ್ಯಾಪಕವಾಗಬೇಕಾಗಿದೆ. ಖಾದಿಯಿಂದ ಜನಶಕ್ತಿಯನ್ನುಂಟುಮಾಡಬಹುದೆಂದು ವಿನೋಬಾಜಿ ಉಪದೇಶ ಮಾಡಿದ್ದಾರೆ.

ವಿಕೇಂದ್ರೀಕರಣದತ್ತ

ವಿಕೇಂದ್ರೀಕರಣ – ಸಾಮಾಜಿಕವಾಗಿ ಆರ್ಥಿಕವಾಗಿ ರಾಜಕೀಯವಾಗಿ – ನಮ್ಮ ಗುರಿಯಷ್ಟೆ. ಅದರ ಸ್ಥಾಪನೆಗೆ ಖಾದಿ ಗ್ರಾಮೋದ್ಯೋಗ ಅತ್ಯಂತ ಸಹಾಯಕ ವೆಂಬುದು ಸಿದ್ಧಪಟ್ಟಿದೆ.

ಆಂದೋಳನ


ಗ್ರಾಮಸ್ವರಾಜ್ಯಕ್ಕಾಗಿ ಚಳವಳಿ ಸನ್ನಿಹಿತವಾಗಿದೆ. ಅದರ ಜೊತೆಯಲ್ಲೇ ಖಾದಿ ಆಂದೋಳನವೂ ಆರಂಭವಾಗುವುದು ಅತ್ಯಗತ್ಯ. ಬಡತನ ಸುಧಾರಣೆ, ನಿರುದ್ಯೋಗ ನಿವಾರಣೆ ಇವುಗಳೇ ಇಂದಿನ ಮುಖ್ಯ ಸಮಸ್ಯೆಗಳಾಗಿವೆ. ಆ ಹಿನ್ನೆಲೆಯಲ್ಲಿ ಖಾದಿ ಉದ್ಯಮಕ್ಕೆ ಮಹತ್ವ ಉಂಟಾಗುತ್ತೆ. ಸರ್ವತಂತ್ರ ಸ್ವತಂತ್ರ ಶೋಷಣೆ ರಹಿತ ಸಮಾಜ ರಚನೆಯಿಂದ ರಾಷ್ಟ್ರ ಮುಕ್ತಿ ಬಯಸುವಾಗ ಗ್ರಾಮಸ್ವರಾಜ್ಯ ಹಾಗೂ ಖಾದಿ ಆಂದೋಳನ ಆದ್ಯತೆ ಪಡೆಯುವುದು ಅನಿವಾರ್ಯ.

ಶಾಂತಿ ಕಡೆ

ರಾಷ್ಟ್ರದಲ್ಲಿ ವ್ಯಾಪಕ ಹಿಂಸಾಚಾರ ಎದ್ದುಕಾಣುತ್ತಿದೆ. ಅಂದಮೇಲೆ ಪ್ರತಿ ರಾಷ್ಟ್ರಕನ ಮನಸ್ಸು ಶಾಂತಿ ಕಡೆ ಚಲಿಸುವಂತಾಗುವುದು ಅವಸರವಾಗಿದೆ. ಹಿಂಸಾಮಯ ವಾದ ಮನಸ್ಸನ್ನು ಪರಿವರ್ತಿಸುವುದು, ಪ್ರೇಮಮಯ ಮಾಡುವುದು ಈಗಂತೂ ಅತ್ಯಗತ್ಯವಾಗಿದೆ. ಈ ದಿಶೆಯಲ್ಲಿ ಚಿಂತಿಸುವಾಗ ಖಾದಿಯ ಉಪಯುಕ್ತತೆ ಅರ್ಥ ವತ್ತಾದೀತು. ಈ ಕಾರ್ಯದಲ್ಲಿ ಖಾದಿ ಕಾರ್ಯಕರ್ತರು ಯಶಸ್ವಿಯಾಗಲೆಂದು ಹಾರೈಸುತ್ತೇನೆ. ಅವರೆಲ್ಲರಿಗೂ ಯಶ ಕೋರುತ್ತೇನೆ.

ಜಯಜಗತ್

* * * *



ಕುರ್ಚಿಯಲ್ಲಿ ಕುಳಿತಿರುವವರು (ಎಡದಿಂದ ಬಲಕ್ಕೆ) : ಸರ್ವಶ್ರೀ ರಾಮರಾಜಯ್ಯಂಗಾರ್, ಟಿ. ಕೆ. ರಾಮಕೃಷ್ಣ, ಕೆ. ಎನ್. ಸುಬ್ರಹ್ಮಣ್ಯಂ, ರಾಜಾರಾಮಯ್ಯಂಗಾರ್, ಆಡಿಟರ್ ಶ್ರೀನಿವಾಸರಾವ್, ಕು॥ ಮುಕುಂದರಾಜು, ಡಿ. ಲಿಂಗಶೆಟ್ಟಿ, ಎಸ್. ಎನ್. ಶರ್ಮ.

ನಿಂತಿರುವವರು : ಅಬ್ದುಲ್ ರೆಹಮಾನ್, ವಿಶ್ವಕರ್ಮಾಚಾರ್ಯ, ಶ್ರೀನಿವಾಸ ಜೋಯಿಸ್, ಶ್ರೀನಿವಾಸ ನಾಯಕ್, ಎಸ್. ಗೋಪಾಲ ರಾವ್, ಎನ್. ಲಿಂಗಪ್ಪ, ಹನುಮಣ್ಣ.

ಕೆಳಗೆ ಕುಳಿತಿರುವವರು : ಲಿಂಗಪ್ಪ, ಪದ್ಮನಾಭ, ಎಸ್. ನಾರಾಯಣಸ್ವಾಮಿ, ರಾಮಚಂದ್ರಾಚಾರ್ಯ, ಕೇಶವಮೂರ್ತಿ, ತಿಪ್ಪೆಸ್ವಾಮಿ.

ಖಾದಿ ಇತಿಹಾಸ

ಕಾಮಾಕ್ಷಮ್ಮ
ಬೆಂಗಳೂರು

ನಮ್ಮ ದೇಶದಲ್ಲಿ ಅತಿ ಪುರಾತನ ಕಾಲದಿಂದಲೂ ನೂಲುವ ನೇಯುವ ಕಲೆಗೆ ಪುರಸ್ಕಾರವಿದ್ದಿತು. ಮನೆ ಮನೆಗಳಲ್ಲಿ ರಾಟೆಯ ಸುಮಧುರ ನಿನಾದ ಕೇಳಿ ಬರುತ್ತಿತ್ತು. ಆ ಕಾಲದಲ್ಲಿ ತವರು ಮನೆಯಿಂದ ಅತ್ತೆ ಮನೆಗೆ ಹೋಗುವ ಮದುಮಗಳಿಗೆ ಕೊಡುವ ಬಳುವಳಿಯಲ್ಲಿ ರಾಟೆ ಅವಶ್ಯವಾಗಿ ಇರುತ್ತಿತ್ತು. ಈಗ ಕೆಲವು ಕಡೆ ರಾಟೆಗೆ ಬದಲಾಗಿ ಹೊಲಿಗೆ ಯಂತ್ರ ಕೊಡುವರು. ಬ್ರಿಟಿಷರ ಎಲ್ಲ ಗೃಹ ಕೈಗಾರಿಕೆಗಳು ಮೂಲೆ ಗುಂಪಾದಂತೆ ನೇಯ್ಗೆ ಕಸಬು ಮೂಲೆ ಗುಂಪಾಯಿತು. ಬಂಗಾಳದ ''ಢಾಕಾಮಲ್'' ಸುಪ್ರಸಿದ್ಧವಾದ್ದು. ಅದನ್ನು ನೇಯುತ್ತಿದ್ದ ನೇಕಾರರ ಬೆರಳನ್ನು ಆಂಗ್ಲ ಸರ್ಕಾರ ಕತ್ತರಿಸಿ ಹಾಕಿದ್ದು ಇತಿಹಾಸ ಪ್ರಸಿದ್ಧವಾದ ಮಾತು. ನಮ್ಮ ದೇಶದ ಕಸಬುಗಳೆಲ್ಲ ಕ್ಷೀಣಿಸಿದವು. ವಿದೇಶದಿಂದ ನಮಗೆ ಪೂರೈಕೆ ನಡೆಸಲಾಯಿತು. ಎರಡನೆ ಮಹಾಯುದ್ಧ ಆರಂಭ. ನಮ್ಮ ದೇಶಕ್ಕೆ ವಿದೇಶದಿಂದ ಆಮದಾಗುತ್ತಿದ್ದ ಬಟ್ಟೆಗಳು ನಿಂತವು ಭಾರತ ದೇಶ ಪರಾವಲಂಬಿ ಆದಮೇಲೆ ಬಟ್ಟೆ ತುಟ್ಟಿ ಆಯಿತು. ಬಡ ಜನರು ಅರಿವೆ ಅಂಗಡಿಗಾಗಿ ಹಾಹಾಕಾರ ಪಡಲಾರಂಭಿಸಿದರು. ಮಹಾತ್ಮರು 1917ರಲ್ಲಿ ಬಿಹಾರಿನಲ್ಲಿ ಅನ್ನ ಬಟ್ಟೆಗಾಗಿ ಗೋಳಾಡುವ ತಮ್ಮ ದೇಶದ ಜನರನ್ನು ಕಂಡರು. ಅವರ ಕರುಳು ಮರುಗಿತು. ನಮ್ಮ ತಾಯಿ ಭಾರತ ಮಾತೆ ನಗ್ನಳಾದಳು ಎಂದು ಕೊರಗಿದರು. ಒಂದು ಹಳ್ಳಿಯಲ್ಲಿ ಗುಡಿಸಲಲ್ಲಿದ್ದ 3-4 ಮಂದಿ ಹೆಂಗಸರಿಗೆ ಸೇರಿ ಉಡಲು ಯೋಗ್ಯವಾದ ಒಂದೇ ಸೀರೆ. ಗುಡಿಸಲಿನಿಂದ ಅದನ್ನು ಸರದಿವರೆಗೆ ಉಟ್ಟು ಹೊರಬರುವಳು. ಆಗ ಉಳಿದ ಹೆಂಗಳೆಯರು ಚಿಂದಿ ಪಂದಿ ಉಟ್ಟು ಮನೆ ಕೆಲಸ ಮಾಡಿಕೊಳ್ಳುವರು. ಭಾರತ ಮಾತೆ, ಅನ್ನ ಅನ್ನ, ಬಟ್ಟೆ ಬಟ್ಟೆ ಎಂದು ಗೋಳಿಡುತ್ತಿರುವ ಕರುಣಾಜನಕ ದೃಶ್ಯ, ಗಾಂಧೀಜಿ ಕಂಡು ನೊಂದರು. ಪರಿಹಾರ ಹುಡುಕಿದರು. ಅದರು ಬೆಳಕು ಕಂಡ ಆ ಖಾದಿ ಇತಿಹಾಸ ಬರೆದರೆ ಬಹುದೊಡ್ಡ ಕಥೆ ಆದೀತು. ಗಂಗಾಬಹನ್ ಎಂಬಾಕೆ ಅಟ್ಟದ ಮೇಲೆ ಹಾಕಿದ್ದ ತನ್ನ ಚರಕಾ ಕೆಳಗೆ ಇಳಿಸಿ ಮಹಾತ್ಮನ ಮುಂದೆ ತನ್ನ ನೂಲುವಿಕೆಯ ಪ್ರದರ್ಶನ ಕೊಟ್ಟಳು.

ಮಹಾತ್ಮ ಕ್ಷೀಣಿಸಿ ಹೋಗಿದ್ದ ಉದ್ಯಮಕ್ಕೆ ಜೀವ ತುಂಬಿದರು. ನೂಲುವ ನೇಯ್ಗೆಯ ಕಲೆಗೆ ಪುನಃ ಚೇತನ ಬಂತು. "ಖಾದಿ" ಎಂಬ ಹೆಸರಾಯಿತು. ಸ್ವದೇಶಿ ಉದ್ಯಮ, ಖಾದಿ ದೀಕ್ಷೆ ಸ್ವಾತಂತ್ರ್ಯ ಯೋಧರಿಗೆ ಕೊಟ್ಟರು.

ಮಹಾತ್ಮರು ಹೇಳಿದ್ದನ್ನ ಮಾಡುವರು, ಮಾಡುವುದನ್ನೇ ಹೇಳುವರು. ತಮ್ಮ ಜೀವಮಾನದಲ್ಲಿ ಬಿಡುವೆಂಬುದೇ ಇರಲಿಲ್ಲ. ತಪ್ಪದೆ ಪ್ರಾರ್ಥನೆ ಮಾಡುವಂತೆ ತಪ್ಪದೆ ಪ್ರತಿದಿನ ಚರಕಾದಲ್ಲಿ ನೂಲುತ್ತಿದ್ದರು. ದೇಶ ವಿದೇಶದಿಂದ ಬರುವ ರಾಜದೂತರು, ರಾಜಕಾರಣಿಗಳು, ರಾಜ ಮಹಾರಾಜರು ಭೇಟಿಗಾಗಿ ಬಂದರೆ ನೂಲನ್ನು ನೂಲುತ್ತಲೇ ಅವರೊಂದಿಗೆ ಸಂಭಾಷಿಸುತಲಿದ್ದರು.

ಒಮ್ಮೆ ಒಬ್ಬ ವಿದೇಶಿ ಮೇಧಾವಿ ಕೇಳಿದ "ಗಾಂಧೀಜಿ ಓಬಿರಾಯನ ಕಾಲದ ಈ ಚರಕಾದಲ್ಲಿ ನೂಲುತ್ತ ಕುಳಿತರೆ ಸಮಯ ವ್ಯಯವಾಗುವುದಲ್ಲವೇ ? ಸಮಯ ಉಳಿತಾಯ ಮಾಡಲು ವಿಮಾನದಲ್ಲಿ ಪ್ರಯಾಣ ಮಾಡುವರು. ಚರಕಾ ತಿರುವುತ್ತಾ ಕೂಡುವುದು ಏನು ಜಾಣತನ". ಗಾಂಧೀಜಿ ಅಂದರು "ನಮ್ಮಲ್ಲಿ ಮನುಷ್ಯಬಲ ಅಧಿಕವಾಗಿದೆ. ಉಪಯೋಗಿಸಲು ವ್ಯಕ್ತಿ ಸ್ವಾತಂತ್ರ್ಯಬೇಕು. ಖಾದಿ ಉದ್ಯಮ ಮನುಷ್ಯ ಶಕ್ತಿಗೆ ಗೌರವ ಕೊಡುತ್ತೆ. ನಮ್ಮ ರೈತನ ಹಣ ನಮ್ಮಲ್ಲಿ ಉಳಿಯುತ್ತೆ, ಅರ್ಥ ಕೇಂದ್ರೀಕೃತ ಆಗುವುದಿಲ್ಲ, ಹಣ ಹಂಚಿ ಹೋಗಬೇಕು. ಇದೇ ಜೀವನದ ಮೌಲ್ಯ. ಇಂಗ್ಲೆಂಡ್ ದೇಶದ ಅರ್ಥಶಾಸ್ತ್ರ ನಮಗೆ ಹೊಂದಾಣಿಕೆ ಆಗದು" ಅಂದರು.


"ಖಾದಿ, ಸೂರ್ಯನಂತೆ. ಮಿಕ್ಕ ಉದ್ಯಮಗಳು ಸೂರ್ಯನ ಸುತ್ತಲೂ ಸುತ್ತುವ ಉಪಗ್ರಹಗಳಂತೆ" ಅಂದರು ಗಾಂಧೀಜಿ. ಹಣ ವಿಕೇಂದ್ರೀಕೃತ ಆಗಬೇಕು. ಈ ಪುಟ್ಟ ಯಂತ್ರ ಹಳ್ಳಿಗಳಲ್ಲಿ ಯಾರಿಗೂ ಕೆಡಕು ಉಂಟುಮಾಡದು. ಅವರ ಶ್ರಮಕ್ಕೆ ಪ್ರತಿಫಲ ಉಂಟಾಗುವ ಅಂಬರ್ ಚರಕ ಈಗ ಸಿದ್ಧವಾಗಿದೆ. ನಾಲ್ವತ್ತು ಐವತ್ತು ವರುಷಗಳ ನಂತರ ಚರಕ ವಿವಿಧ ಪ್ರಯೋಗಗಳಾಗಿ ಈ ರೂಪ ತಳೆದಿದೆ.

ದಿನಕ್ಕೆ ಅರ್ಧ ಗಂಟೆ ಕಾಲ ಕೂತರೆ ಒಬ್ಬರಿಗೆ ಇಡಿ ವರ್ಷದ ಅರಿವೆ ಪೂರೈಕೆ ಆಗುತ್ತೆ. ರೈತ ತನ್ನ ಬೆಳೆಯನ್ನು ಬೆಳೆಸಿಕೊಳ್ಳುವನು. ಹೊಲದಲ್ಲಿ ಹತ್ತಿ ಬೆಳೆದು ಅರಿವೆಯನ್ನೂ ತಯಾರಿಸಿಕೊಳ್ಳಬಹುದು. ಇದನ್ನೇ ಗಾಂಧೀಜಿ ಮತ್ತು ವಿನೋಬಾ ರವರು ಗ್ರಾಮಸ್ವರಾಜ್ಯವೆಂದರು.

ಸ್ವರಾಜ್ಯ ಬಂತಲ್ಲ ಈಗೇಕೆ ಖಾದಿ ಉಡಬೇಕು ಎಂಬುವ ಮಂದಿ ಇದ್ದಾರೆ. "ಕೆಟ್ಟು ಪಟ್ಟಣ ಸೇರು" ಎಂಬ ಗಾದೆ. ಹಳ್ಳಿ ತೊರೆದು ಪಟ್ಟಣಕ್ಕೆ ಬಂದ ಜನ ಕಾರ್ಖಾನೆಗಳಿಗೆ ಸೇರಿ (ಈಗ ಅಲ್ಲೂ ಕೆಲಸ ಸಿಗದು) ತಮ್ಮ ಸಂಪಾದನೆಯೂ ಸಾಲದೆ ದುಶ್ಚಟಗಳಿಗೆ ಬಲಿ ಆಗುತ್ತಿರುವ ಕರುಣಾಜನಕ ಕಥೆಗಳು ಅನೇಕವಾಗಿವೆ.

ಮನುಷ್ಯ ಶಕ್ತಿಗೆ ಪುರಸ್ಕಾರ ಎಲ್ಲಿದೆ–ಕೈತುಂಬಾ ಕೆಲಸ ಎಲ್ಲಿದೆ ? ಈ ಕೊರತೆ ಈಗಲೂ ನೀಗಿಲ್ಲ. ಆದ್ದರಿಂದ ಖಾದಿ ಪ್ರಚಾರ ಬೇಕು, ಸ್ವರಾಜ್ಯ ಬಂದನಂತರ ಖಾದಿ ಮಾರುಕಟ್ಟೆಗೆ ಬಂತು, ಎಲ್ಲರೂ ಕೊಳ್ಳಲು ಅವಕಾಶ ಉಂಟಾಯಿತು.

* * *



ಬದನವಾಳು ಖಾದಿ ಕೇಂದ್ರದ ಪ್ರಾರಂಭದ ಪ್ರಥಮ ಕಾರ್ಯಕರ್ತರು :
ಸರ್ವಶ್ರೀ ಡಿ. ರಂಗಶೆಟ್ಟಿ, ರಾಜಾರಾಮಯ್ಯಂಗಾರ್, ವೆಂಕಟಗಿರಿರಾಯರು,
ಪುಟ್ಟಸ್ವಾಮಿ, ಎ. ಎಸ್. ಭೀಮಣ್ಣನವರು



ಶ್ರೀ ಕೆ.ಎಸ್. ಸುಬ್ರಹ್ಮಣ್ಯಂರವರು ರಿಲೀಫ್ ನೇಯ್ಗೆ ಕೇಂದ್ರದಲ್ಲಿ ತರಬೇತಿ ಕೊಡುತ್ತಿರುವುದು

ಸ್ವಾತಂತ್ರ್ಯ ಪೂರ್ವ ಖಾದಿ ಬೆಳವಣಿಗೆ
(ಪರಿಸರ—ಕಾರ್ಯಕರ್ತರ ಅವಲಂಬನ)

ಶ್ರೀ ಎಸ್. ಎಸ್. ಶರ್ಮ



ಖಾದಿ ನಾಮಕರಣ ಮಾಡಿದವರು ಗಾಂಧಿ. ಖಾದಿ ಬಟ್ಟೆ ಅನ್ವರ್ಥ ಗಾಂಧಿ ಬಟ್ಟೆ. ಖಾದಿ ಕೆಲಸಗಾರರು ಎಂದರೆ ಹಳ್ಳಿಗರ ಭಾಷೆಯಲ್ಲಿ ಗಾಂಧಿಯವರು.

ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾವಲಂಬನೆಯನ್ನು ಪ್ರತಿಪಾದಿಸಲು ಮಹಾತ್ಮಾ ಗಾಂಧಿಯವರು ಖಾದಿಯನ್ನು ಅ ಹಿ ಂ ಸೆ ಯ ಪ್ರತೀಕ ಎಂದು ಗುರುತಿಸಿದರು. ಇದು ಸ್ವಾತಂತ್ರ್ಯಕ್ಕೆ ದಾರಿದೀಪವಾಯಿತು.

ರಾ ಟೆ ಯ ಲ್ಲಿ ನೂಲು ಮಾಡಿ ತನ್ನ ಊರಿನಲ್ಲಿರುವ ಮಗ್ಗದವನಿಂದ ಹಚ್ಚಡ (ಬೆಡ್‌ಷೀಟು) ನೇನೆ ಬಟ್ಟೆ (ಮಗುವಿನ ತೊಟ್ಟಿಲ ಜೋಲಿ) ಮಾಡಿಸಿ ಕೊಳ್ಳುವುದು ಪ್ರತಿ ಹಳ್ಳಿಯಲ್ಲೂ ಇದ್ದ ರೂಢಿ. ಇದೇ ಪದ್ಧತಿಯನ್ನು ವಿಷವೀಕರಿಸಿ ವಾಪಕ ರೀತಿಯಲ್ಲಿ ಸ್ವಾವಲಂಬನ ನೀತಿಯನ್ನು ಖಾದಿ ಕೇಂದ್ರಗಳ ಮೂಲಕ ಪ್ರಚುರ ಪಡಿಸಿದವರು ಗಾಂಧೀಜಿ.

ಮೂವತ್ತರ ದಶಕದಲ್ಲಿ ನಾನು ಇದ್ದ ಊರು ಹಾಗೂ ಸುತ್ತಮುತ್ತ ಈ ಪರಿಸರವಿದ್ದಿತು. ಆಗ ಸ್ವರಾಜ್ಯ ಪಡೆಯಲು ವಿದೇಶೀ ವಸ್ತ್ರದ ಬಹಿಷ್ಕಾರ, ಸ್ವಾವಲಂಬನೆ ಚಳವಳಿ, ಖಾದಿ ಬೆಳವಣಿಗೆಗೆ ಸ್ಫೂರ್ತಿ ನೀಡಿತು. ನನ್ನ ವಿದ್ಯಾರ್ಥಿ ಜೀವನ ದೆಶೆಯಲ್ಲಿ ಇವೆಲ್ಲದರ ಪರಿಣಾಮ ಖಾದಿ ಕೆಲಸದಲ್ಲಿ ಪಾಲುಗೊಳ್ಳಲು ಪ್ರಭಾವ ಬೀರಿತು.

ಹಾಗೂ ನಾನು ಆರಿಸಿಕೊಂಡ ಕ್ಷೇತ್ರ, ಅಲ್ಲಿನ ಪರಿಸರ, ಪ್ರತಿಭಾನ್ವಿತ ಕೆಲಸಗಾರರ ಆದರ್ಶ ಸ್ನೇಹಪರ ಮಾರ್ಗದರ್ಶನ ಇವೆಲ್ಲಾ ನನ್ನನ್ನು ಜೀವನ ಪರ್ಯಂತ ಖಾದಿ ಕೆಲಸದಲ್ಲಿ ಸಮರ್ಪಿಸಿಕೊಳ್ಳಲು ದಾರಿದೀಪವಾಯಿತು. ಇದೇ ದುಡಿಮೆಯ ಜೀವನ ಪೂರ್ತ ಬದನವಾಳ ಖಾದಿ ಕಾರ್ಯಕರ್ತನೆನಿಸಿಕೊಂಡು ವಿಶ್ರಾಂತಿ ಪಡೆದೆ.

ಅಂದಿನ ಕೆಲವು ನೆನಪುಗಳು

1938ರಲ್ಲಿ ಸ್ವಾತಂತ್ರ್ಯ ಚಳವಳಿಯ ಉಚ್ಛ್ರಾಯ ಕಾಲ, ಖಾದಿ ಉದ್ಯಮಿಯ ವಿಸ್ತರಣ ಕಾಲವೂ ಆಗಿದ್ದಿತು. ಮೈಸೂರು ಸರ್ಕಾರ ತನ್ನ ಕೈಗಾರಿಕಾ ಇಲಾಖೆ ವತಿಯಿಂದ ಚಿತ್ರದುರ್ಗ ಜಿಲ್ಲೆಯಲ್ಲಿ ಹೊಸದಾಗಿ ಖಾದಿ ಕೇಂದ್ರ ತೆರೆಯುತ್ತಿದ್ದರು. ಅಲ್ಲಿನ ಕಾರ್ಯಕರ್ತನಾಗಿ ಹೋಗುವ ಸರದಿ ನನ್ನದಾಗಿತ್ತು. ಬದನವಾಳದಿಂದ ಚಿತ್ರದುರ್ಗಕ್ಕೆ ರೈಲು ಪ್ರಯಾಣ ಮಾಡುವಾಗ ಚಿಕ್ಕ ಜಾಜೂರಿನಲ್ಲಿ ನಾನು ಪೋಲೀಸರ ಅತಿಥಿಯಾಗಬೇಕಾಯ್ತು. ಕಾರಣ ಚಿತ್ರದುರ್ಗ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ, ಸೇಂದಿ ಅಂಗಡಿ ಪಿಕೆಟಿಂಗ್ ನಡೆಯುತ್ತಿತ್ತು. ನಾನು ಖಾದಿ ಜುಬ್ಬ ಖಾದಿ ಪಂಚೆ ಉಡುಪಿನಲ್ಲಿದ್ದುದರಿಂದ ಪೋಲಿಸಿನವರು ನಾನೊಬ್ಬ ಚಳವಳಿಕಾರನೆಂದು ಸಂದೇಹಿಸಿದರು, ನಾನು ಖಾದಿ ಕೆಲಸಗಾರ. ಖಾದಿ ಕೆಲಸ ಸರ್ಕಾರವೇ ನಡೆಸುತ್ತಿದೆ. ಅದರಿಂದ ನಾನೊಬ್ಬ ಸರ್ಕಾರಿ ಕೆಲಸಗಾರ ಎಂದು ಮನವರಿಕೆ ಮಾಡಿಕೊಟ್ಟಾಗ ಅವರು ನನ್ನನ್ನು ಬಿಟ್ಟರು.

ಹಳ್ಳಿಗಳಲ್ಲಿ ಜನರಿಗಾಗಿ ಅವರಿದ್ದಲ್ಲೇ ಬಿಡುವಿನ ಕಾಲದಲ್ಲಿ ಉದ್ಯೋಗ ಒದಗಿಸಿ ಕೊಡಬಲ್ಲ ಕೈಗಾರಿಕೆ ಖಾದಿ ಒಂದೇ ಎಂಬುದು ಅಂದಿನ ಮೈಸೂರು ಸರ್ಕಾರಕ್ಕೂ ಮನದಟ್ಟಾಗಿದ್ದಿತು. ಇದರ ಪರಿಣಾಮವಾಗಿ ದೇಶದ ಎಲ್ಲ ಜಿಲ್ಲೆಗಳಲ್ಲಿಯೂ ಖಾದಿ ಕೇಂದ್ರಗಳನ್ನು ಸ್ಥಾಪಿಸಿ ಜನರಿಗೆ ಬಿಡುವಿನ ಕಾಲದ ಉದ್ಯೋಗಾವಕಾಶ ಒದಗಿಸಿ ಕೊಟ್ಟಿತ್ತು. ಆದರೆ ಕೆಲವು ಸರ್ಕಾರಿ ನೌಕರರಿಗೆ ಇದರ ಮಾಹಿತಿಯೇ ಇರಲಿಲ್ಲ. ಇದು ಸ್ವಾತಂತ್ರ್ಯ ಚಳವಳಿಯ ಒಂದು ಭಾಗ ಎಂದಿದ್ದರು.

1938ರಲ್ಲಿ ಪ್ಲೇಗ್ ಸೋಂಕು ರೋಗದ ಹಾವಳಿ ಎಲ್ಲೆಡೆಯೂ ಇತ್ತು. ಈ ರೋಗ ಬಂದೊಡನೆ ಊರಿನ ಜನರೆಲ್ಲ ಮನೆಬಿಟ್ಟು ಊರ ಹೊರಗಡೆ ಶುಭ್ರ ವಾತಾವರಣದಲ್ಲಿ ಹೊಸದಾಗಿ ನಿರ್ಮಿತವಾದ ಗುಡಿಸಲಲ್ಲಿ 3–4 ತಿಂಗಳ ಕಾಲ ಸೋಂಕು ಕಳೆಯುವವರೆಗೆ ವಾಸಿಸುತ್ತಿದ್ದರು. ನಾವಿದ್ದ ನೂಲುವ ಕೇಂದ್ರದಲ್ಲಿಯೂ ಈ ಸೋಂಕು ಇದ್ದಿತು. ಅವರೆಲ್ಲಾ ಗುಡಿಸಲು ಕಟ್ಟಿ ವಾಸ ಮಾಡುತ್ತಿದ್ದರು. ನಮ್ಮ ನೂಲುವ ಕೇಂದ್ರದ ಸಿಬ್ಬಂದಿಗಳನ್ನು ಬೇರೆ ಊರಿಗೆ ಹೋಗಿ ವಾಸ ಮಾಡುವುದನ್ನು

ನಿಷೇಧಿಸಿ ನಮಗಾಗಿ ಹಾಗೂ ನೂಲು ಕೇಂದ್ರಕ್ಕಾಗಿ ಒಂದು ಗುಡಿಸಲು ನಿರ್ಮಿಸಿದರು. ನಾವು ಅವರೊಂದಿಗೆ ಒಂದಾಗಿ ವಾಸ ಮಾಡತೊಡಗಿದೆವು. ಅಂದಿನ ಜನ ತಾವು ಮತ್ತು ಖಾದಿ ಜನ ಬೇರೆ ಎಂದು ಕಾಣುತ್ತಿರಲಿಲ್ಲ. ಅಂದಿನ ಜನರ ಸಹಕಾರ, ಸೌಜನ್ಯ, ಆತಿಥ್ಯ ಎಂಬುದೇ ನನ್ನ ಮನವರಿಕೆ. ಇಂದು ಅಗೋಚರ.

1946ರಲ್ಲಿ ಚಿತ್ರದುರ್ಗ ಜಿಲ್ಲೆ ಕ್ಷಾಮಪೀಡಿತ. ರೈತರೆಲ್ಲಾ ಬೇರೆ ಊರಿಗೆ ಕೆಲಸಕ್ಕಾಗಿ ವಲಸೆ ಹೋಗದಂತೆ ಅವರ ಊರ ಮನೆ ಮುಂದೆ ಕೆಲಸ ದೊರಕಿಸಲು ಸರ್ಕಾರ ಯೋಚಿಸಿತು. ಚರಕದಲ್ಲಿ ನೂಲು ತೆಗೆಯುವುದು, ಮಗ್ಗದಲ್ಲಿ ಬಟ್ಟೆ ನೇಯುವದು ಯೋಜನೆಯ ಕಾರ್ಯಕ್ರಮದಲ್ಲಿ ಒಂದಾಗಿದ್ದಿತು. ಜನಸಾಮಾನ್ಯರಿಗೆ ಈ ಸೌಲಭ್ಯ ಒದಗಿಸುವುದೇ ಯೋಜನೆಯ ಒಂದಂಶ.

ಬೆಂಗಳೂರು, ಬಳ್ಳಾರಿ ರಸ್ತೆ ಪಕ್ಕದ ಹಳ್ಳಿ. ಸುಮಾರು 2000 ಜನಸಂಖ್ಯೆ. ಅಲ್ಲಿ ಒಂದು ಚರಕಾ ಕೇಂದ್ರ ತೆರೆದಿದ್ದೆವು. ಮೈಸೂರು ಸರ್ಕಾರದ ಅಂದಿನ ದಿವಾನ ರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು, ಕ್ಷಾಮ ನಿವಾರಣಾ ಪರಿಹಾರ ವ್ಯವಸ್ಥೆಯ ಪರಿಶೀಲನೆಗಾಗಿ ಪ್ರವಾಸ ಬಂದಿದ್ದರು. ಅಂದು ಚರಕಾ ಕೇಂದ್ರದ ಜನರೆಲ್ಲ ಹಳ್ಳಿ ರಸ್ತೆಯ ಎಡ ಬಲದಲ್ಲಿ ಅವರವರ ಮನೆ ಮುಂದೆ ಕುಳಿತು ಚರಕಾದಿಂದ ನೂಲುವ ಪ್ರದರ್ಶನ ಮಾಡಿದರು. ಅಂದಿನ ಸರ್ಕಾರಿ ಮುಖ್ಯಸ್ಥರಾದ ದಿವಾನರು ಚರಕಾ ಕೇಂದ್ರಕ್ಕೆ ಭೇಟಿಯಿತ್ತು, ಚರಕ ನೂಲುವಿಕೆಯಿಂದ ಜನರ ಜೀವನ ಸ್ಥಿತಿ ಉತ್ತಮವಾಗಿದೆ ಎಂಬುದನ್ನು ವಿಚಾರಿಸಿ ಮನವರಿಕೆ ಮಾಡಿಕೊಂಡು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು. ವಿಷಯ ಇಲ್ಲಿ ಖಾದಿ ಸ್ವಾತಂತ್ರ್ಯ ಯೋಧರ ಮುಖ್ಯ ಉಡುಪಾಗಿದ್ದಿತು. ಅಂದಿನ ಸ್ವಾತಂತ್ರ್ಯ ಪೂರ್ವ ಸರ್ಕಾರದ ಮುಖ್ಯಸ್ಥರು ಖಾದಿ ಯಲ್ಲಿ ಗೌರವ, ಪ್ರೀತಿ ಇಟ್ಟಿದ್ದ ಕಾರಣ. ಖಾದಿ ಸಿದ್ಧಾಂತ ಜನಸಾಮಾನ್ಯರ ಸ್ವಾವಲಂಬನೆಯ ಹಾಗೂ ಆರ್ಥಿಕೋನ್ನತಿಯ ಹೆದ್ದಾರಿ ಎಂದು ಇದಕ್ಕೆ ಜನತೆಯ ಸ್ಪಂದನೆಯೂ ಇತ್ತು.

* * * *

ಆದರ್ಶ ಇಟ್ಟುಕೊಳ್ಳದ ಮಾನವನು ಚುಕ್ಕಾಣಿ ಇಲ್ಲದ ಹಡಗದಂತೆ.

ವರ್ಗರಹಿತ ಸಮಾಜವೆಂಬುದು ಕೊನೆಯವರೆಗೂ ಆದರ್ಶವಾಗಿಯೇ ಉಳಿಯು ಬಾರದು. ಅದು ಕಾರ್ಯಗತವಾದಾಗಲೇ ಅದರ ನಿಜಾರ್ಥವಾದಂತೆ.

ದಾನ ಧರ್ಮಗಳು ಮನೆಯಿಂದಲೇ ಪ್ರಾರಂಭವಾಗುವಂತೆ, ಅಹಿಂಸೆಯು ಮನೆಯಿಂದಲೇ ಪ್ರಾರಂಭವಾಗಬೇಕು.

—ಗಾಂಧೀಜಿ

ಖಾದಿಗೆ ಹೊಸ ತಿರುವು

ಶ್ರೀ ವೆಂಕಟೇಶ ಮಾಗಡಿ
ಸ್ವಾತಂತ್ರ್ಯ ಹೋರಾಟಗಾರರು

ಭಾರತದಲ್ಲಿ ಖಾದಿ ಕಾರ್ಯಕ್ರಮ ಪ್ರಾರಂಭವಾಗಿ ಆರು ದಶಕಗಳ ಮೇಲಾಯ್ತು. ಗಾಂಧೀಜಿ ಅದರ ಜನಕರು. ಇದರ ಪ್ರಾರಂಭ ಪರಂಪರಾಗತ ಚರಖದಿಂದ. ಗಾಂಧೀಜಿ ಭಾರತದ ಬಡತನ, ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಬಿಡಿಸಲು ನೆರವಾಗಬಲ್ಲ ಸಾಮರ್ಥ್ಯ ಈ ಚರಖ ಮತ್ತು ಖಾದಿಯಲ್ಲಿ ನೋಡಿದರು. ಆಗ ನೂಲುಗನ ಗಳಿಕೆ ತೀರ ಕಡಿಮೆ ಇತ್ತು. ಜೀವನ ವೇತನ ಕೊಡಬೇಕೆಂದು ಅವರು ಹೆಣಗಾಡಿದರು. ಅವರೇ ಹೇಳಿದ್ದು ಹೀಗೆ :

"ಲಕ್ಷಾವಧಿ ನಿರುದ್ಯೋಗಿಗಳಿಗೆ ಉದ್ಯೋಗ ಕೊಡಬಲ್ಲ ಬೇರೊಂದು ಸಾಧನವನ್ನು ತೋರಿಸಿಕೊಟ್ಟರೆ, ನನ್ನ ಚರಖವನ್ನು ರದ್ದೀಖಾತೆಗೆ ಸೇರಿಸಬಹುದು". ಪರಂಪರಾಗತ ಚರಖ ಹೋಗಿ ಅಂಬರ ಚರಖಾ ಬಂದು ಮೂವತ್ತು ವರ್ಷಗಳಾದವು. ಜೀವನ ವೇತನ ದೊರೆಯುತ್ತದೆ. ಸಾಮಾನ್ಯ ನೂಲುಗನ ನಿತ್ಯ ಗಳಿಕೆ ರೂಪಾಯಿ ಐದು. ಹೀಗಿದ್ದರೂ ನಮ್ಮ ಮೂಲ ಸಮಸ್ಯೆ ಬಿಟ್ಟಿಲ್ಲ. ನಾವು ಕುರುಡರಾಗಿದ್ದೇವೆಯೇ ? ಕಳೆದ ಮಹಾಯುದ್ಧದಲ್ಲಿ ಪೂರ್ತಿ ಧ್ವಂಸವಾದ ರಾಷ್ಟ್ರಗಳು ಈ ಚಿಕ್ಕ ಉದ್ಯೋಗಗಳಿಗೆ ಮೊರೆ ಹೊಕ್ಕು, ತುಂಬಾ ಮುಂದೆ ಬರುತ್ತಲಿವೆ. ಇದಕ್ಕೆ ಜಪಾನ, ಜರ್ಮನಿ ದೇಶಗಳೇ ಸಾಕ್ಷಿ. ಒಟ್ಟು ದೇಶದಲ್ಲಿಯ ನೂಲಿನ, ಉತ್ಪಾದನೆಯ ವಿಶ್ಲೇಷಣೆ ಮಾಡಿದರೆ 99% ನೂಲು ಗಿರಣಿಗಳಿಂದ ಸಿದ್ಧವಾದರೆ ಕೇವಲ 1% ಖಾದಿಯಿಂದ. ಒಟ್ಟು ಬಟ್ಟೆಯಲ್ಲಿ 60% ಗಿರಣಿ ಬಟ್ಟೆ 29% ಕೈಮಗ್ಗದ್ದು, ಕೇವಲ 1% ಖಾದಿಯದು. ಬಟ್ಟೆ ಉತ್ಪಾದನೆಯಲ್ಲಿ ಈ ಮೂರು ಕ್ಷೇತ್ರಗಳ:–ಗಿರಣಿಗಳು ಹತ್ತು ಲಕ್ಷ ಜನರಿಗೆ ಉದ್ಯೋಗ ಕೊಟ್ಟರೆ, ಕೈಮಗ್ಗ ಸುಮಾರು 80 ಲಕ್ಷ ಜನರಿಗೆ ಮತ್ತು ಖಾದಿ 12 ಲಕ್ಷ ಜನರಿಗೆ ಉದ್ಯೋಗ ಕೊಟ್ಟಿದೆ. ಅಂದ ಬಳಿಕ ಖಾದಿ ಕಾರ್ಯಕ್ರಮದಲ್ಲಿ ಬಹಳ ಜನರಿಗೆ ಉದ್ಯೋಗ ಕೊಡುವ ಸಾಮರ್ಥ್ಯ ಇದೆ ಎಂಬುದು ಸೂರ್ಯ ಪ್ರಕಾಶದಷ್ಟು ಸ್ಪಷ್ಟ. ಖಾದಿ ಮತ್ತು ಕೈಮಗ್ಗ ಈ ಎರಡೂ ಸೇರಿ ಒಂದಾದರೆ ಅದೊಂದು ಬಲಾಢ್ಯ ಸಂಘಟನೆಯಾದೀತು. ಮತ್ತು ಅದು ಖಂಡಿತ ನಮ್ಮ ಇಂದಿನ ಸಮಸ್ಯೆ ಬಿಡಿಸಬಲ್ಲದೆಂದು ನಮ್ಮ ಆತ್ಮ ವಿಶ್ವಾಸ. ಅಂದ ಬಳಿಕ ಅದು ಈ ಸಮಸ್ಯೆಯನ್ನು ಏಕೆ ಬಿಡಿಸಿಲ್ಲ ಎಂಬುದೇ ನಮ್ಮ ಮುಂದೆ ಇರುವ ಇಂದಿನ ಸಮಸ್ಯೆ ಅದರಲ್ಲಿಯೂ ಕೆಲ ಅಡಚಣೆ

ಗಳಿವೆಯೆಂಬುದನ್ನು ನಾವು ವಿಶ್ಲೇಷಿಸಿದರೆ ಅರಿವಾಗುವುದು. ಅಂಬರದ ಮೇಲೆ ನೂಲುವವರು ಸಾಮಾನ್ಯ ಸ್ತ್ರೀಯರು. ಅದರಲ್ಲಿ ಸುಮಾರು 50% ಲಗ್ನವಾಗದ ಚಿಕ್ಕವರು. 25% ಮಧ್ಯಮ ವಯಸ್ಕರು ಮತ್ತು 25% ವಯಸ್ಸಾದವರು ಎಂದು ವರ್ಗೀಕರಣ ಮಾಡಬಹುದು. ಇದನ್ನು ನೂಲಲು ಖಂಡಿತ ಹೆಚ್ಚು ಶಕ್ತಿ ಬೇಕು. ಹೆಚ್ಚು ನೂತರೆ ದಣಿವಾಗುವುದು. ಈ ದಣಿವನ್ನು ನಮ್ಮ ತಾಂತ್ರಿಕ ಜ್ಞಾನದಿಂದ ಕಡಿಮೆ ಮಾಡಲು ಸಾಧ್ಯವಿದ್ದರೆ ಏಕೆ ಮಾಡಬಾರದೆಂಬುದೇ ನಮ್ಮ ವಾದ. ಸುದೈವದಿಂದ ಇಂದು ಖಾದಿ ಜಗತ್ತು ನೂಲುವ ಪ್ರಕ್ರಿಯವರೆಗೆ ವಿದ್ಯುತ್ ಬಳಕೆಯನ್ನು ಒಪ್ಪಿಕೊಂಡಿದೆ. ನೇರ ಹೇಳಬೇಕೆಂದರೆ ಇಂದಿನ ಅಂಬರ ಚರಖದಲ್ಲಿ ತುಸು ಪರಿವರ್ತನೆ ಮಾಡಿ, ಅದಕ್ಕೆ ವಿದ್ಯುತ್ ಜೋಡಿಸಬೇಕೆಂಬುದೇ ನಮ್ಮ ಸಿದ್ಧಾಂತ. ಇದರಲ್ಲಿ ಬರಬಹುದಾದ ಇನ್ನೊಂದು ತೊಂದರೆಯೆಂದರೆ ಈ ಚರಖಗಳ ಉತ್ಪತ್ತಿ ಶೀಘ್ರ ಗತಿಯಿಂದ ಆಗುವುದಿಲ್ಲ. ಇದನ್ನು ಸರಕಾರವೇ ತನ್ನ ಕೈಯಲ್ಲಿ ತೆಗೆದುಕೊಂಡು ಎಚ್.ಎಮ್.ಟಿ.ಯಂಥ ಸಂಘಟನೆಗೆ ಒಪ್ಪಿಸಬೇಕು. ಇದರಲ್ಲಿಯೂ ಸುಧಾರಣೆಯಾಗಿ ಮಿಲ್ ಮಾದರಿಯದಾದರೆ ಇನ್ನೂ ಒಳ್ಳೆಯದು. ಏಕೆಂದರೆ ಸುಲಭವಾಗಿ ಬಿಡಿ ಭಾಗ ದೊರೆಯಬಹುದು. ಹಳ್ಳಿ ಹಳ್ಳಿಗಳಲ್ಲಿ ವಿದ್ಯುತ್ ದೊರೆಯಬಹುದೇ ? ಎಂಬುದು ಇನ್ನೊಂದು ಶಂಕೆ. ಈಗ ವಿದ್ಯುತ್ ಹಳ್ಳಿ ಪ್ರವೇಶಿಸಿದೆ. ಇನ್ನು 10–15 ವರ್ಷಗಳಲ್ಲಿ ಅದು ಖಂಡಿತವಾಗಿ ಎಲ್ಲ ಹಳ್ಳಿಗಳ ವರೆಗೆ ಹರಿಯಬಲ್ಲದು. ಇನ್ನೂ ಒಂದು ಅಡೆತಡೆಯೆಂದರೆ ಈ ನೂಲಿನ ಉತ್ಪಾದನೆ ಹೆಚ್ಚಾದರೆ ಅದನ್ನು ನುರಿಸುವುದು ಹೇಗೆ ? ನಮ್ಮ ದೇಶದಲ್ಲಿ 35 ಲಕ್ಷ ಕೈಮಗ್ಗಗಳಿವೆ. ಅವುಗಳಿಗೆ ಇಂದು ಸರಾಗವಾಗಿ ನೂಲು ಪೂರೈಕೆಯಾಗುತ್ತಿಲ್ಲವೆಂದು ನೇಕಾರರ ಕೂಗು. ಇಂಥ ಸಮಯದಲ್ಲಿ, ಹೀಗೆ ಉತ್ಪನ್ನವಾಗಬಹುದಾದಂಥ ನೂಲನ್ನು ಆ ನೇಕಾರರಿಗೆ ಏಕೆ ಕೊಡಬಾರದು ? ಈ ಕ್ರಿಯೆಯಿಂದ ನೂಲಿನ ಸಮಾನತೆ, ಶಕ್ತಿ ಖಂಡಿತ ಬೆಳೆಯುತ್ತವೆ. ಹೀಗಾದಲ್ಲಿ ಖಾದಿ ಕ್ಷೇತ್ರ ವಿಶಾಲವಾಗಿ ಖಾದಿ ಕೈಮಗ್ಗಗಳ ಸಮ್ಮಿಲನವಾಗಬಹುದು. ಅದು ಆಗಲೂಬೇಕು. ಒಂದು ವೇಳೆ ಕೈ ಮಗ್ಗದವರು ಯಾವುದೇ ಕಾರಣದಿಂದ ನಿರಾಕರಿಸಿದರೆ ಅಥವಾ ಇನ್ನೂ ಹೆಚ್ಚು ಉತ್ಪಾದನೆ ಮಾಡುವ ಪ್ರಶ್ನೆ ಬಂದಾಗ ನಾವು ದೇಶದಲ್ಲಿ ಲಕ್ಷಾವಧಿ ಮಗ್ಗಗಳನ್ನು ನಿರ್ಮಿಸಿ, ಈ ಕಾರ್ಯಕ್ಕೆ ಹೆಚ್ಚಿನ ಚಾಲನೆ ಕೊಟ್ಟು, ಇಲ್ಲಿ ಹೆಚ್ಚು ಜನರಿಗೆ ಉದ್ಯೋಗ ಕೊಡಬಹುದು. ಇನ್ನೂ ಒಂದು ಶಂಕೆ ಎಂದರೆ, ಅಂಬರ ಚರಕಕ್ಕೆ ವಿದ್ಯುತ್ ಜೋಡಣೆ ವಿಚಾರವಿದ್ದರೆ, ಗಿರಣಿಗಳಲ್ಲಿಯೇ ಏಕೆ ಉತ್ಪತ್ತಿ ಮಾಡಬಾರದು ? ಇದೂ ಸಹ ನಮ್ಮ ಮೂಲ ಪ್ರಶ್ನೆ ಬಿಡಿಸಿದರೆ ನಮ್ಮ ಆಕ್ಷೇಪವಿಲ್ಲ. ಆದರೆ ಅದರಲ್ಲಿ ಆ ಸಾಮರ್ಥ್ಯ ಇಲ್ಲವೇ ಇಲ್ಲ. ಎಂಟು ಕೋಟಿ ರೂಪಾಯಿ ಬಂಡವಾಳ ಹಾಕಿ 25 ಸಾವಿರ ಕದರಿನ ಒಂದು ಗಿರಣಿಯನ್ನು ಪ್ರಾರಂಭಿಸಿದರೆ, ಅಲ್ಲಿ ನಾವು ಕೇವಲ 400 ಜನರಿಗೆ ಮಾತ್ರ ಉದ್ಯೋಗ ಕೊಡಬಹುದು. ಅಷ್ಟೇ ಹಣ ಹಾಕಿ ಮನೆ ಮನೆಗೆ ಈ ವಿದ್ಯುತ್ ಚರಖಾ ಹಂಚಿದರೆ ಅದು 3200 ಜನರಿಗೆ ಪೂರ್ತಿ ಉದ್ಯೋಗ

ಕೊಡಬಲ್ಲದು. ಒಟ್ಟಾರೆ ಈ ಕಾರ್ಯಕ್ರಮವನ್ನು ನಾವು ಅನುಷ್ಠಾನಕ್ಕೆ ತಂದರೆ ದೊಡ್ಡ ಪ್ರಮಾಣದಲ್ಲಿ ನಿರುದ್ಯೋಗ ಸಮಸ್ಯೆ ಬಿಡಿಸಲು ನೆರವಾದಂತಾಗುವುದು· ತುಂಬಾ ಸಮಾನವಾದ ಹೆಚ್ಚು ಶಕ್ತಿಶಾಲಿ ನೂಲು ಉತ್ಪಾದನೆಯಾಗಿ ಕೈಮಗ್ಗಗಳಿಗೆ ಪೂರೈಸಬಹುದು. ಕೈಮಗ್ಗ–ಖಾದಿ ಕ್ಷೇತ್ರಗಳು ಒಂದಾಗಬಹುದು. ಗಾಂಧೀಜಿ ಹೇಳಿದಂತೆ ಮನೆಗಳೇ ಕಾರಖಾನೆಗಳಾಗಿ ಪರಿವರ್ತಿಸಿದಂತಾಗುತ್ತದೆ. ಕೋಟ್ಯಾವಧಿ ಜನರಿಗೆ ಉದ್ಯೋಗ ದೊರೆಯುತ್ತದೆ.

ಇನ್ನೂ ಒಂದು ಸಮಸ್ಯೆಯೆಂದರೆ ಇಂದು ದೇಶದಲ್ಲೆಲ್ಲ ತುಂಬಿಕೊಂಡ ಬಟ್ಟೆ ಗಿರಣಿಗಳ ಗತಿ ಏನು? ಎಂಬುದು. ಸದ್ಯ ಈ ಗಿರಣಿಗಳನ್ನು ಬಂದು ಮಾಡಲು ನಾವು ಹೇಳುವುದಿಲ್ಲ. ಈ ಗಿರಣಿಗಳಿಗೆ 40 ನಂಬರ ಮೇಲಿನ ಬಟ್ಟೆ ಉತ್ಪಾದನೆ ಮಾಡಲು ಬಿಟ್ಟು 40 ನಂಬರ ವರೆಗೆ ಖಾದಿಗೆ ಮೀಸಲಾಗಿಡಬೇಕು. ಅಂದರೆ ಈ ಸಮಸ್ಯೆಯು ಬಗೆಹರಿಯುವುದು.

ಕೊನೆಯದಾಗಿ ಈ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಕೆಲವು ವಿಧಿ ವಿಧಾನಗಳು ಬೇಕೇ ಬೇಕು :

1) ಮನೆಗೊಂದರಂತೆ ಈ ವಿದ್ಯುತ್ ಚರಖ ಹಂಚಲ್ಪಡಬೇಕು.
2) ಸಾಮಾನ್ಯ ಪ್ರತಿ ಚರಖದಲ್ಲಿ 25 ಕದಿರು ಇರಬೇಕು. ಯಾವುದೇ ಪರಿಸ್ಥಿತಿಯಲ್ಲಿ ಕದಿರುಗಳ ಸಂಖ್ಯೆ 50ಕ್ಕೆ ಮಿಕ್ಕಬಾರದು.
3) ಒಬ್ಬರಿಗೇ ಹೆಚ್ಚು ಚರಖಾ ಕೊಟ್ಟು ಶೋಷಣೆಗೆ ಆಸ್ಪದವೀಯಬಾರದು.
4) ಗಿರಣಿ ಬಟ್ಟೆ ಮತ್ತು ಈ ಬಟ್ಟೆ ದರದಲ್ಲಿ ವಿಶೇಷ ವ್ಯತ್ಯಾಸವಾಗಬಾರದು. ಅಂದರೆ ಇದರಲ್ಲಿ ಮೇಲಾಟಕ್ಕೆ ಆಸ್ಪದವಿರಬಾರದು.

ಈ ಕಾರ್ಯಕ್ಕೆ ಸಹ ಸರಕಾರ, ಜನತೆ, ಕಸಬುದಾರ ಮತ್ತು ಕಾರ್ಯಕರ್ತರು ಇವರೆಲ್ಲರ ಸಕ್ರಿಯ ಸಹಕಾರ ಅತ್ಯಂತ ಅವಶ್ಯವೆಂದು ಬೇರೆ ಹೇಳಬೇಕಾಗಿಲ್ಲ. ಅಂದರೆ ಮಾತ್ರ ನಾವು ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವಲ್ಲಿ ಒಂದು ತ್ರಿವಿಕ್ರಮ ಹೆಜ್ಜೆ ಇಟ್ಟಂತಾಗುವುದು.

ನಾವು ಇದರಲ್ಲಿ ಕೆಲಮಟ್ಟಿಗೆ ತಾಂತ್ರಿಕ ನೆರವನ್ನೂ, ವಿದ್ಯುತ್ತನ್ನೂ ಉಪಯೋಗಿಸುವುದರಿಂದ, ಇದು ಗಾಂಧಿ ಕಾರ್ಯಕ್ರಮವಲ್ಲವೆಂದು ಕೆಲವರು ಮೂಗು ಮುರಿಯಬಹುದು. ಗಾಂಧೀಜಿ ಇದಕ್ಕೆ ಖಂಡಿತ ಒಪ್ಪುತ್ತಿದ್ದರೆಂದು ಕೆಳಗಿನ ಅವರ ಹೇಳಿಕೆಯಿಂದಲೇ ಸುಸ್ಪಷ್ಟವಾಗುತ್ತದೆ.

“ನಾನು ಯಂತ್ರ ವಿರೋಧಿಯಲ್ಲ. ವಿದ್ಯುತ್ ವಿರೋಧಿಯೂ ಅಲ್ಲ. ಆದರೆ ಇವು ನಮ್ಮ ಮೇಲೆ ಸವಾರಿ ಮಾಡುವುದನ್ನು ಮಾತ್ರ ನಾನು ಬಲವಾಗಿ ವಿರೋಧಿಸುತ್ತೇನೆ. ವಿದ್ಯುತ್ತು ಪ್ರತಿಯೊಂದು ಹಳ್ಳಿಯ ಗುಡಿಸಲುಗಳಿಗೆ ಹರಿದರೆ ಹಳ್ಳಿಗರು ಸುಧಾರಿಸಿದ ಸಾಧನಗಳಿಂದ ವಿದ್ಯುತ್ತನ್ನು ಬಳಸಬಹುದು”.

* * * *

ತಗಡೂರು ರಾಮಚಂದ್ರರಾವ್

ತಗಡೂರಲ್ಲಿ ಕೈರಾಟೆಗಳು, ರಾಟೆಗಳು ಇವುಗಳ ಮೆರವಣಿಗೆಯ ಪರಿಣಾಮದಿಂದ ಅಲ್ಲಲ್ಲಿ ಒಬ್ಬರು ಹಣ್ಣು–ಹಣ್ಣು ಮುದುಕರು ನೂಲುವುದನ್ನು ಕಂಡೆವು. ಅದನ್ನು ಕೊಳ್ಳಲು ಆರಂಭಿಸಿದೆವು. ನೂಲು ಸಾಮಾನ್ಯವಾಗಿ ಬರಲು ಆರಂಭವಾಯಿತು. ಅದನ್ನು ಕೊಳ್ಳಲು ವ್ಯವಸ್ಥೆ ಮಾಡಿದೆವು. 1925ರಲ್ಲಿ ಉತ್ಪತ್ತಿಗಾಗಿ ಒಂದು ಕರ್ನಾಟಕ ಖದ್ದರ್ ಕೋ–ಆಪರೇಟಿವ್ ಸೊಸೈಟಿಯನ್ನೂ, ಮೈಸೂರಲ್ಲಿ ಮಾರಾಟಕ್ಕಾಗಿ ಲ್ಯಾನ್ಸ್ ಡೌನ್ ಬಜಾರಿನಲ್ಲಿ ಶ್ರೀ ವೆಂಕಟಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಖದ್ದರ್ ಕೋ ಆಪರೇಟಿವ್ ಸೊಸೈಟಿಯನ್ನೂ ಸ್ಥಾಪಿಸಿದೆವು. ಅಂದಿನಿಂದ ಇಂದಿನ ವರೆಗೂ ಮೈಸೂರ ಸೊಸೈಟಿಯಲ್ಲಿ ತಗಡೂರ ಜನರೇ ಮ್ಯಾನೇಜರುಗಳಾಗಿ ನಡೆಸಿಕೊಂಡು ಬಂದಿದ್ದಾರೆ. 1927ರಲ್ಲಿ ಮಹಾತ್ಮಾ ಗಾಂಧಿಯವರು ಖಾದಿ ಟೂರ್‌ನಲ್ಲಿ ಮೈಸೂರಿಗೆ ದಯಮಾಡಿಸಿದರು. ಆವಾಗ ಶ್ರೀಮನ್ಮಹಾರಾಜರವರು ಈ ಖಾದಿ ಕೈಗಾರಿಕೆಯನ್ನು ತಮ್ಮ ಸರ್ಕಾರದಿಂದ ಸ್ಥಾಪಿಸಲು ಒಪ್ಪಿಕೊಂಡು ನಮ್ಮ ಕ್ಷೇತ್ರದ ಏರಿಯಾದಲ್ಲಿದ್ದ ಬದನವಾಳಿನಲ್ಲಿ ಕಾರ್ಯಾರಂಭ ಮಾಡಿದರು. ಅಲ್ಲಿಗೆ ನಮ್ಮ ಕ್ಷೇತ್ರದಿಂದ ತರಪೇತಾಗಿದ್ದ ಕೆಲಸಗಾರರನ್ನು ಕಳಿಸಿದ್ದೇನೆ. ಅಲ್ಲಿ, ರಿಟೈರ್ ಆಗುವವರೆಗೂ ಇದ್ದು ಕೆಲಸ ಮಾಡಿದ್ದಾರೆ. ಹಿಂದೂಸ್ಥಾನದ 565 ರಾಜರುಗಳಲ್ಲಿ ನಮ್ಮ ಶ್ರೀಮನ್ಮಹಾರಾಜರೇ ಮೊಟ್ಟ ಮೊದಲು ಧೈರ್ಯ ಮಾಡಿ ಖಾದಿ ಕೇಂದ್ರವನ್ನು ಪ್ರಾರಂಭಿಸಿದರು. 1934ರಲ್ಲಿ ಮಹಾತ್ಮಾಗಾಂಧೀಯವರು ಹರಿಜನರ ಟೂರಿನಲ್ಲಿ ತಗಡೂರು ಮತ್ತು ಬದನವಾಳಿಗೆ ಭೇಟಿ ಇತ್ತು ಆಶೀರ್ವದಿಸಿದರು. ಅಸ್ಪೃಶ್ಯತೆ ನಿವಾರಣೆಗಾಗಿ ತಗಡೂರು ಸತ್ಯಾಗ್ರಹಾಶ್ರಮದಲ್ಲಿ ಒಂದು ಹರಿಜನರ ಹಾಸ್ಟೆಲ್ ನಿರ್ಮಾಣವಾಯಿತು. ಅದರ ಅಂಗವಾಗಿ ಸುತ್ತ ಮುತ್ತಲು ಸರ್ಕಾರಿ ಸ್ಕೂಲುಗಳಲ್ಲಿ ಹರಿಜನ ಮಕ್ಕಳನ್ನು ಸ್ಕೂಲಿಗೆ ಸೇರಿಸಲು ನಾನಾ ಕಡೆ ಸತ್ಯಾಗ್ರಹ ಹೂಡಿ ಹರಿಜನ ಮಕ್ಕಳು ಸವರ್ಣರ ಮಕ್ಕಳ ಜೊತೆಯಲ್ಲಿ ಸಹಕರಿಸಿ ಕುಳಿತು ಓದಲು ಅವಕಾಶವಾಯಿತು. ಹರಿಜನ ವಿದ್ಯಾವಂತರನ್ನು ಮಂತ್ರಿಮಂಡಲಕ್ಕೆ ಸೇರಿಸಬೇಕೆಂಬ ಚಳವಳಿಯನ್ನು ಬಹಳವಾಗಿ ಮಾಡಲಾಯಿತು. ಅದು ಯಶಸ್ವಿಯಾಯಿತು. ದೇವಾಲಯಗಳ ಧರ್ಮದರ್ಶಿಗಳಾಗಿ ತೆಗೆದುಕೊಳ್ಳುವ ಚಳವಳಿಯೂ ಯಶಸ್ವಿಯಾಯಿತು. ಈ ಚಳವಳಿಗೆ ನಮ್ಮ ಪೂಜ್ಯರು ಅವರ ಪತ್ರಿಕೆಗಳಲ್ಲಿ ಬಹಳ ಬೆಂಬಲಕೊಟ್ಟಿದ್ದಾರೆ. ನಾನು 1919ರ ಏಪ್ರಿಲ್‌ನಲ್ಲಿ ತಗಡೂರಲ್ಲಿ ಸ್ವರಾಜ್ಯ ಆಶ್ರಮ ನಿರ್ಮಾಣಮಾಡಿ ಚಳವಳಿಯನ್ನು ಆರಂಭಿಸಿದ್ದು, 1933ರಲ್ಲಿ ಪೂಜ್ಯರು ಪರಂಧಾಮವನ್ನೈದಿದರು. ಅದು ವರೆಗೂ ಸತತವಾಗಿ ನನಗೆ ಮತ್ತು ದೇಶಕ್ಕೆ ಪೂರ್ಣ ಬೆಂಬಲಕೊಟ್ಟಿದ್ದಾರೆ.

ಹಿಂದೂಸ್ಥಾನದಲ್ಲಿ ಮಹಾತ್ಮಾ ಗಾಂಧಿಯವರ ನಾಯಕತ್ವದಲ್ಲಿ ಏನೇನು ಚಳವಳಿ ಆರಂಭವಾಯಿತೋ ಅದೆಲ್ಲವನ್ನೂ ಪೂಜ್ಯರು ಬಹಳ ದಿವಸದ ಹಿಂದೆಯೇ ಹಳೇ ಮೈಸೂರಲ್ಲಿ ಪ್ರಾರಂಭಿಸಿ ಜಾರಿಗೆ ತಂದಿದ್ದಾರೆ. ಇಂಥಾ ಮಹಾನುಭಾವರ ಚಿರಸ್ಮರಣೀಯವಾದ ಶಿಲಾ ಪ್ರತಿಮೆಯನ್ನು ಸ್ಥಾಪಿಸಬೇಕೆಂದು ಆಪ್ತ ಸ್ನೇಹಿತರುಗಳು ಮತ್ತು ಮಹಾಜನರು ಸಹಕರಿಸಿ ಈ ನನ್ನ ಮರಣ ಬಯಕೆಯನ್ನು ಪೂರ್ಣಗೊಳಿಸಿ ಕೊಟ್ಟರು. ಈ ಗ್ರಾಮ ಕೈಗಾರಿಕೆ ಹೀಗೆ ಮುಂದುವರಿದಿರುವಾಗ 1927ರಲ್ಲಿ ಪೂಜ್ಯ ಮಹಾತ್ಮಾ ಗಾಂಧಿಯವರು ಅಖಿಲ ಭಾರತ ಚರಕಾ ಸಂಘದ ಪ್ರಚಾರಕ್ಕಾಗಿ ಪ್ರವಾಸ ಮಾಡುವಾಗ ಮೈಸೂರಿಗೆ ದಯಮಾಡಿಸಿದರು. ಮೈಸೂರು ದೇಶದಲ್ಲಿ ನೂಲುವ ಕೇಂದ್ರವೊಂದನ್ನು ಸ್ಥಾಪಿಸುವ ಯೋಜನೆಯನ್ನು ಅವರು ಕೈಗೆತ್ತಿಕೊಂಡಾಗ ಅವರ ಕಣ್ಣಿಗೆ ಬಿದ್ದವರು ಎಂದರೆ ತಗಡೂರು. ಕಾರಣವೆಂದರೆ ಈ ಕ್ಷೇತ್ರದಲ್ಲಿ ಈ ಕೈಗಾರಿಕೆಗೆ ವಾತಾವರಣ ಈ ಮೊದಲೇ ಸಿದ್ಧವಾಗಿತ್ತು. ಅಲ್ಲದೆ ಅಂತಹ ಕೇಂದ್ರದ ಸ್ಥಾಪನೆಗೆ ಮೈಸೂರು ಮಹಾರಾಜರವರ ಸರ್ಕಾರ ತಮ್ಮ ಒಪ್ಪಿಗೆಯನ್ನು ಕೊಟ್ಟಿತ್ತು. ಆದ್ದರಿಂದ ರೈಲು ನಿಲ್ದಾಣವಿರುವ ಬದನವಾಳವನ್ನು ನೂಲುವ ಕೇಂದ್ರವನ್ನಾಗಿ ಮಾಡಲಾಯಿತು. ಈ ಕಾರ್ಯ ನಿರ್ವಹಣೆಗಾಗಿ ಹುಬ್ಬಳ್ಳಿ ಚರಕಾ ಸಂಘದಿಂದ ಶ್ರೀ ಸಿದ್ದೂರಾವ ಪೂಜಾರಿಯವರನ್ನು ನೇಮಿಸಲಾಯಿತು. ತಗಡೂರಿನಿಂದ ಖಾದಿ ಕೆಲಸಗಾರರಾದ ಶ್ರೀ ವೆಂಕಟನಾರಣಪ್ಪ ಮತ್ತು ಶ್ರೀ ವೆಂಕಟಗಿರಿಯಪ್ಪನವರುಗಳನ್ನು ಬದನವಾಳು ಕೇಂದ್ರಕ್ಕೆ ಕಳಿಸಲಾಯಿತು. ಹೀಗೆ ಖಾದಿ ಕಾರ್ಯದ ಶ್ರೀ ಗಣೇಶಾಯ ನಮಃ ಆಯಿತು.

* * *

ನಾವು ಈಗ ಅನುಸರಿಸುತ್ತಿರುವ ಸ್ವಾತಂತ್ರ್ಯ ಸರಣಿಯು ಕೇವಲ ನಮ್ಮ ದೇಶಕ್ಕಷ್ಟೇ ಮತ್ತು ನಿರ್ದಿಷ್ಟ ಜನಾಂಗಕ್ಕಷ್ಟೇ ಅನ್ವಯಿಸಲಾಗದು. ಅದು ಇಡೀ ಮಾನವಕುಲಕ್ಕೇ ಅನ್ವಯಿಸುವಂತಾಗಬೇಕು. ಅಂತಹ ವಿಶ್ವವ್ಯಾಪೀ ಸ್ವಾತಂತ್ರ್ಯ ಯಾವುದಾದರೊಂದು ವಿಶೇಷ ವರ್ಗದ ಮೇಲ್ಮೆಯ ಮೇಲಷ್ಟೇ ನಿಂತಿರಬಾರದು, ಅದು ಎಲ್ಲೆಲ್ಲಿಯೂ ಸಾಮಾನ್ಯ ಮನುಷ್ಯನ ಸ್ವಾತಂತ್ರ್ಯವಾಗಬೇಕಲ್ಲದೆ, ಅದು ಆತನ ವಿಕಾಸಕ್ಕೆ ಆಸ್ಪದವೀಯುವಂತಿರಬೇಕು.

—ಜವಾಹರಲಾಲ ನೆಹರು

ಮಹಾತ್ಮಾ ಗಾಂಧಿಯವರ ಆದೇಶ

'ದುಡಿಮೆಯೇ ಧನ'—ಚರಕದ ಸಂದೇಶ

ಭಾರತದ ಜನಕೋಟಿಗೆ ತಗುಲಿರುವ ರೋಗ ಹಣದ ಬರವಲ್ಲ. ಸಾರ್ಥಕ ದುಡಿಮೆಯ ಬರ. ಜನಕೋಟಿಗೆ ಅವರ ಕುಟೀರಗಳಲ್ಲೇ ಗೌರವಪೂರ್ಣ ದುಡಿಮೆಯ ವ್ಯವಸ್ಥೆಯಾಗದೆ ಅನ್ನ, ಬಟ್ಟೆ, ವಸತಿಗಳು ತಾನಾಗಿಯೇ ಒದಗುತ್ತವೆ. ಅದು ಹಣ ಕೊಟ್ಟಂತೆಯೇ ಸರಿ. ಚರಕ ಅಂತ ದುಡಿಮೆ ನೀಡುತ್ತದೆ. ಇದಕ್ಕೂ ಉತ್ತಮತರ ಸಾಧನೆ ಸಿಗುವವರೆಗೆ ಇದೇ ಇರಬೇಕು.

ಖಾದಿ ಉದ್ಯಮ ಏಕೆ ಬೇಕು ?

1 ವಿರಾಮವಿದ್ದು ನಾಲ್ಕು ಕಾಸು ಬೇಕೆನ್ನುವವರಿಗೆ ಸಿದ್ಧ ಉದ್ಯೋಗ ಕೊಡುತ್ತದೆ.
2 ಸಾವಿರಾರು ಜನಕ್ಕೆ ಈ ಉದ್ಯೋಗ ಗೊತ್ತಿದೆ.
3 ಕಲಿಯಲು ಸುಲಭ.
4 ಹೆಚ್ಚು ಹಣದ ಬಂಡವಾಳದ ಅಗತ್ಯವಿಲ್ಲ.
5 ರಾಟೆಯನ್ನು ಸುಲಭವಾಗಿ ತಯಾರಿಸಬಹುದು. ಅತ್ಯಂತ ಅಗ್ಗವಾದ ಉಪಕರಣ, ಹೆಂಚಿನ ಬಿಲ್ಲೆ ಮತ್ತು ಬಿದಿರುಕಡ್ಡಿಗಳಿಂದಲೂ ನೂಲಬಹುದೆಂದು ನಮ್ಮಲ್ಲಿ ಎಷ್ಟೋ ಜನಕ್ಕೆ ತಿಳಿಯದು.
6 ಜನರಿಗೆ ತಿರಸ್ಕಾರವಿಲ್ಲದ ಕೆಲಸ.
7 ಬರಗಾಲದ, ಅಭಾವದ ವೇಳೆಗಳಲ್ಲಿ ತಕ್ಷಣ ಪರಿಹಾರ ನೀಡಬಲ್ಲುದು.
8 ವಿದೇಶಿ ಬಟ್ಟೆ ಕೊಳ್ಳುವುದರಿಂದ ಭಾರತದಾಚೆಗೆ ಹರಿಯುತ್ತಿರುವ ಅಗಾಧ ಹಣವನ್ನು ಗ್ರಾಮದಲ್ಲಿ ಉಳಿಸುವ ಮಾರ್ಗ ಇದೊಂದೇ.
9 ಜನತೆಯ ಕೈಯಲ್ಲೇ ಉಳಿಯುವ ಕೋಟಿಗಟ್ಟಲೆ ಹಣವನ್ನು ಅರ್ಹರಾದ ಬಡವರಲ್ಲಿ ಸಹಜವಾಗಿ ಹಂಚುತ್ತದೆ.
10 ಎಷ್ಟೋ ಅಲ್ಪ ಪ್ರಮಾಣದಲ್ಲಿ ಮಾಡಿದರೂ ಲಾಭವುಂಟು.
11 ಜನರಲ್ಲಿ ಪರಸ್ಪರ ಸಹಕಾರ ಸಾಧಿಸುವ ಅತಿ ಪ್ರಬಲ ಸಾಧನ.

ಚರಕ ನಮ್ಮ ಜನಕೋಟಿಯ ಆಶಾಕಿರಣದ ಸಂಕೇತ. ಚರಕವನ್ನು ಕಳೆದು ಕೊಂಡಾಗ ನಮ್ಮ ಜನ ಸ್ವಾತಂತ್ರ್ಯವನ್ನು ಕಳೆದು ಕೊಂಡರು. ಚರಕ ಬೇಸಾಯಕ್ಕೆ ಪೂರಕವಾಗಿ ಅದಕ್ಕೆ ಗೌರವ ತಂದಿತ್ತು.

ವಿಧವೆಗದು ಸಂಗಾತಿ : ಶಾಂತಿದಾತ ಹಳ್ಳಿಗರನ್ನು ಆಲಸ್ಯದಿಂದ ಅದು ರಕ್ಷಿಸಿತ್ತು. ರಾಟೆ ಎಂದರೆ ಅದಕ್ಕೆ ಸಂಬಂಧಿಸಿದ ಹಿಂಜುವುದು, ಹಂಜಿ ಮಾಡುವುದು, ಉನಿಕೆ ಮಾಡುವುದು, ಬಣ್ಣ ಹಾಕುವುದು, ನೇಯ್ಗೆ ಈ ಎಲ್ಲ ಹಿರಿದು ಮುಂದಿನ

ಕೆಲಸಗಳನ್ನೆಲ್ಲ ಒಳಗೊಂಡಿದೆ. ಇವು ಹಳ್ಳಿಯ ಬಡಗಿ, ಕಮ್ಮಾರರಿಗೆ ಕೈತುಂಬ ಕೆಲಸ ಕೊಡುತ್ತಿದ್ದವು. ಏಳು ಲಕ್ಷ ಹಳ್ಳಿಗಳನ್ನು ಸ್ವಯಂಪೂರ್ಣಗೊಳಿಸಿತ್ತು. ರಾಟೆ ಮಾಯವಾದ ಮೇಲೆ ಹಳ್ಳಿಯ ಉದ್ಯೋಗಗಳೆಲ್ಲ ಹೋಗಿಬಿಟ್ಟವು. ಹಳ್ಳಿಯ ವಿವಿಧ ಕಸುಬುಗಳು ಸೂರೆಯಾದವು. ಹಳ್ಳಿಗಳವರಲ್ಲಿದ್ದ ನಿರ್ಮಾಣ ಪ್ರತಿಭೆ ಅದು ತರುತ್ತಿದ್ದ ಅಲ್ಪವಾದರೂ ಸಂಪತ್ಸಮೃದ್ಧಿ ಎಲ್ಲವೂ ಕಾಣೆಯಾದವು. ಇತರ ದೇಶಗಳ ಉದಾಹರಣೆ ಇಲ್ಲಿ ಉಪಯೋಗವಾಗದು. ಅಲ್ಲಿಯವರಿಗೆ ಬೇರೆ ಪರಿಹಾರ ರೂಪದ ಅನುಕೂಲಗಳು ಒದಗಿದವು. ಭಾರತದ ಹಳ್ಳಿಗಳಿಗೆ ಅದಿಲ್ಲ. ಯಂತ್ರೋದ್ಯಮ ರಾಷ್ಟ್ರಗಳು ಇತರ ದೇಶಗಳನ್ನು ಶೋಷಿಸುತ್ತವೆ. ಭಾರತ ತಾನೇ ಶೋಷಿತ ರಾಷ್ಟ್ರ. ಆದುದರಿಂದ ಚರಕದ ಪುನರುಜ್ಜೀವನ ಅತ್ಯಂತ ಸಹಜ ಪರಿಹಾರ. ಅದರಿಂದಲೇ ನಾಡಿನ ಅಭ್ಯುದಯ.

ಕಳೆದ ವರ್ಷ ನನ್ನ ವಿಸ್ತೃತ ಹರಿಜನ ಯಾತ್ರೆಯ ಸಮಯದಲ್ಲಿ ನಾವು ನಡೆಸುತ್ತಿರುವ ರೀತಿಯಲ್ಲಿ ಖಾದಿಯನ್ನು ಸಾರ್ವತ್ರಿಕಗೊಳಿಸುವುದು ಸಾಧ್ಯವಾಗದು, ಹಳ್ಳಿಗಳನ್ನು ಪುನರುಜ್ಜೀವನಗೊಳಿಸಲು ಅದು ಸಾಲದು ಎನಿಸಿತು. ಖಾದಿ ಧರಿಸುವವರು ತಾವು ಇನ್ನು ಏನನ್ನೂ ಮಾಡಬೇಕಾಗಿಲ್ಲ. ಬೇರೆ ವಸ್ತುಗಳು ಎಲ್ಲಿಂದ ಬಂದರೂ ಸರಿ ಅವನ್ನು ಬಳಸಬಹುದು ಎಂಬ ಧೋರಣೆ ಎದ್ದು ಕಾಣುತ್ತಿತ್ತು. ಇದರಿಂದ ಖಾದಿಯ ಸಂಕೇತ ನಿರ್ಜೀವವಾಗುತ್ತಿತ್ತು. ನೂಲುವವರಿಗಿಂತ ಖಾದಿಧಾರಿಗಳೇನೋ ಸಂಖ್ಯೆಯಲ್ಲಿ ಹೆಚ್ಚಾಗಿದ್ದರು. ಉಳಿದವರು ಸೋಮಾರಿಗಳಾಗಿಯೇ ಇದ್ದರು. ಅಸಂಖ್ಯ ಜನರಿಗೆ ಒತ್ತಾಯದ ಬಿಡುವು ಇತ್ತು. ಇದು ಘಾತಕ ಪರಿಸ್ಥಿತಿ ಎನಿಸಿತು. ಈ ಜನ ಎಂದೂ ಸ್ವರಾಜ್ಯ ಗಳಿಸಲಾರರು ಎಂದುಕೊಂಡೆ.

ಖಾದಿ : ಪ್ರತಿಯೊಬ್ಬ ಭಾರತೀಯನೂ ಖಾದಿ ಬೆಳವಣಿಗೆಗೆ ಏನು ಮಾಡಬಹುದೆಂದು ಇಲ್ಲಿ ಹೇಳುತ್ತೇನೆ. ಖಾದಿ ಎಂದರೆ ದೇಶದಲ್ಲಿ ಸರ್ವಸಮಾನತೆ. ಆರ್ಥಿಕ ಸ್ವಾತಂತ್ರ್ಯದ ಪ್ರಾರಂಭ. ಖಾದಿ ಎಂದರೆ ಸಂಪೂರ್ಣ ಸ್ವದೇಶಿ. ನಮ್ಮ ಜೀವನಾವಶ್ಯಕ ವಸ್ತುಗಳನ್ನೆಲ್ಲ ನಮ್ಮ ದೇಶದಲ್ಲೇ ಅದರಲ್ಲೂ ಹಳ್ಳಿಯ ಜನರ ಬುದ್ಧಿ ಪರಿಶ್ರಮಗಳಿಂದಲೇ ಉತ್ಪಾದನೆ ಮಾಡುವ ಧೃಡ ಸಂಕಲ್ಪ. ಅದಕ್ಕಾಗಿ ಈಗಿನ ಉತ್ಪಾದನಾ ಕ್ರಮ ಬದಲಾಗಬೇಕು. ಹಿಂದೂಸ್ಥಾನದ ಏಳು ಲಕ್ಷ ಹಳ್ಳಿಗಳನ್ನು ಹಿಂಡಿ ಇಲ್ಲಿನ ಮತ್ತು ಇಂಗ್ಲೆಂಡಿನ ಹತ್ತಾರು ನಗರಗಳು ಬೆಳೆಯುವ ಬದಲು ಹಳ್ಳಿಗಳು ಸ್ವಾವಲಂಬಿಗಳಾದಾವು. ನಗರಗಳನ್ನೂ ಪೋಷಿಸಿಯಾವು.

ಇದಕ್ಕೆ ಅನೇಕರ ಮನೋಧರ್ಮ, ಅಭಿರುಚಿಗಳು ಬದಲಾಗಬೇಕು. ಅಹಿಂಸೆಯ ದಾರಿ ಕೆಲವು ವಿಷಯಗಳಲ್ಲಿ ಸುಲಭ, ಕೆಲವರಲ್ಲಿ ಬಹಳ ಕಠಿಣ. ಖಾದಿ ಮನೋಧರ್ಮ ಪ್ರತಿಯೊಬ್ಬ ಭಾರತೀಯನ ಬಾಳಿಗೂ ಪುಟಕೊಟ್ಟು ಅವನಲ್ಲಿನ ಸೃಜನಶಕ್ತಿಯ ಅರಿವಿನಿಂದ ಬಾಳು ಪ್ರಜ್ವಲಿಸುವಂತೆ ಮಾಡುತ್ತದೆ. ಅಖಂಡ ಜನತಾ ಸಾಗರದ ಹನಿಹನಿಗೂ

ಆತ್ಮ ವಿಶ್ವಾಸದ ಹೆಮ್ಮೆ ನೀಡುತ್ತದೆ. ಅಹಿಂಸೆ ಎಂದರೆ ಶೂನ್ಯ ಸ್ಥಿತಿಯಲ್ಲ. ಮಾನವ ಲೋಕಕ್ಕೆ ಆಧಾರಭೂತವಾದ ಮಹಾಶಕ್ತಿ. ಅದಕ್ಕಿಂತ ಹೆಚ್ಚಿನ ಶಕ್ತಿ ಲೋಕಕ್ಕೆ ಗೊತ್ತಿಲ್ಲ. ಕಾಂಗ್ರೆಸ್ಸಿಗೆ ತನ್ಮೂಲಕ ಲೋಕಕ್ಕೆ ನಾನು ಅರ್ಪಿಸಿದ ಕಾಣಿಕೆ ಅದು. ನನ್ನ ಮಟ್ಟಿಗೆ ಖಾದಿ ಭಾರತೀಯ ಜನತೆಯ ಐಕಮತ್ಯದ, ಅವರ ಆರ್ಥಿಕ ಸ್ವಾತಂತ್ರ್ಯ ಸಮಾನತೆಗಳ ಸಂಕೇತವಾಗಿದೆ. ಜವಹರಲಾಲರೆಂದಂತೆ ಅದು ನಮ್ಮ ಸ್ವಾತಂತ್ರ್ಯದ ದೀಕ್ಷಾವಸ್ತ್ರ.

ಖಾದಿಶಾಸ್ತ್ರ ಎಂದರೆ ಬಾಳು ಬದುಕಿಗೆ ಬೇಕಾದ ಪದಾರ್ಥಗಳನ್ನು ಎಲ್ಲ ಕಡೆಯಲ್ಲೂ ಉತ್ಪಾದಿಸಿ ಅಲ್ಲಲ್ಲೆ ಹಂಚುವ ವಿಕೇಂದ್ರೀಕರಣ. ಆಯಾ ಹಳ್ಳಿಯಲ್ಲೇ ಬೇಕಾದ ವಸ್ತುಗಳನ್ನು ಉತ್ಪತ್ತಿ ಮಾಡಿ ಬಳಸುವುದು ಹೆಚ್ಚಾದುದನ್ನು ನಗರಗಳಿಗೆ ಸರಬರಾಜು ಮಾಡುವುದು, ಇದು ಈ ವ್ಯವಸ್ಥೆಯ ಸೂತ್ರ.

ದೊಡ್ಡ ಗಿರಣಿಗಳ ಕೈಗಾರಿಕೆಯೆಲ್ಲಾ ಕೇಂದ್ರಿತವಾಗಿ ರಾಷ್ಟ್ರದ ಸಾಮೂಹಿಕ ಒಡೆತನಕ್ಕೆ ಸೇರಬೇಕು. ಆದರೆ ನಮ್ಮ ಹಳ್ಳಿಗಳು ಪೂರ್ಣ ಉದ್ಯೋಗ ಬೆಳೆಸಿಕೊಂಡಾಗ ಆಗುವ ಅತ್ಯಗಾಧ ರಾಷ್ಟ್ರೀಯ ಸಂಪತ್ತಿನಲ್ಲಿ ಗಿರಣಿಗಳದು ಎಲ್ಲೋ ಒಂದು ಚುಕ್ಕೆಯಂತಿದ್ದೀತು. (ಸಂಗ್ರಹ)

* * * *

ರಾಮು—ಸೀತೆ

ನನ್ನ ಏಳನೇ ವರ್ಷದಲ್ಲಿ ಹಿರಿಯೂರಿನಲ್ಲಿ ಪ್ರೈಮರಿ ಸ್ಕೂಲಿಗೆ ಸೇರಿದಾಗ ಪಂಕಜಮ್ಮ ಅಂತ ಹೆಸರು ಕೊಟ್ರೂ ಸ್ನೇಹಿತೆಯೊಬ್ಬಳಿಗೆ ನನ್ನ ಹೆಸರು ಸೀತಮ್ಮಾಂತ ಹೇಳಿದ್ದೆ. ಬದನವಾಳಿಗೆ ನನ್ನವರೊಡನೆ ಬಂದಾಗ ಅಲ್ಲಿ ನಮ್ಮ ಗುಡಿಸಲಿಗೆ ಕಾಲಿಡುತ್ತಿದ್ದಂತೆಯೇ ಪೂಜಾರಿಯವರು ನನ್ನವರನ್ನು ಕುರಿತು ಏನಪ್ಪಾ ದೊರೆ 'ಸೀತಮ್ಮನವರನ್ನು ಕಾಡಿಗೆ ಕರೆತಂದಂತಾಗಿದೆಯಲ್ಲಾ' ಎಂದು ಅಂತಃಕರಣದಿಂದ ಹೇಳಿದ್ದು ನನಗಿಂದೂ ನೆನಪಿದೆ. ನಂತರ ಅದೇ ಗುಡಿಸಲಿಗೆ ಶ್ರೀ ರಾಜಾಜಿಯವರೂ, ಶ್ರೀ ರಂಗನಾಥ ಸಾಹೇಬರೂ ಬಂದು ಊಟ ಮಾಡಿದ್ರು. ನನ್ನವರಿಗೆ ಬುದ್ಧಿವಾದ ಹೇಳಿ, "ತುಂಬ ಚಿಕ್ಕ ವಯಸ್ಸು ಒಬ್ಬಳನ್ನೇ ಬಿಟ್ಟು ಹೋಗಬೇಡ, ನಿನ್ನದು ಸುತ್ತಾಟದ ಕೆಲಸ. ನೀನೆಲ್ಲೇ ಹೋದರೂ ನಿನ್ನವಳನ್ನೂ ಜೊತೆಯಲ್ಲೇ ಕರೆದುಕೊಂಡು ಹೋಗು" ಎಂದು ಹೇಳಿದರು. ಅದನ್ನು ನನ್ನವರು ಅಕ್ಷರಸಹಾ ಪಾಲಿಸಿದ್ರು. ಆದರೆ ಮೊದಲೆರಡು ಬಾರಿ ಸೀತೆಯಾದವಳು ಕೊನೆಯಲ್ಲಿ ಸೀತೆಯಾಗಲಿಲ್ಲ ನಾನು. ರಾಮು ಸೀತೆಯರಂತೆ ನಡೆದ್ರೂನೂ ಅವರೇ ಮುಂದಾಗಿ ಬಿಟ್ಟರಲ್ಲಾ ನಾನು ಸೀತೆಯಲ್ಲವಲ್ಲಾ ಅನಿಸುತ್ತದೆ.

—ಪಂಕಜಮ್ಮ

(ದಿವಂಗತ ರಾಜಾರಾಮಯ್ಯಂಗಾರರ ಪತ್ನಿ)

ನನ್ನ ಕಡೆಯ ಕೆಲವು ಮಾತುಗಳು

ಈ ಪುಸ್ತಕವನ್ನು ಪ್ರಾರಂಭಮಾಡಿದ್ದೇ ಒಂದು ಆಕ್ಷೇಪಣೆಯ ಮೂಲ. ಶ್ರೀ ವಡವಿಯವರು ವಿದ್ವಾಂಸರು. ಅವರು ಬರೆದಿರುವ 'ಖಾದಿ ದರ್ಶನ' ಎಂಬ ಹೊತ್ತಿಗೆಯು ಪರಿಪೂರ್ಣವಾಗಿದೆ. ಆದರೆ 30 ವರ್ಷ ಅಖಂಡವಾಗಿ ರಾಜರ ಆಶ್ರಯದಲ್ಲಿ ಬೆಳೆದು ದೇಶವಿದೇಶಗಳಲ್ಲೂ ಖ್ಯಾತಿ ಪಡೆದು ಬಂದ ಬದನವಾಳ ಖಾದಿ ವಿಷಯದಲ್ಲಿ ತಾತ್ಸಾರ ಮಾಡಿ ಬಹಳ ಸಂಕ್ಷೇಪವಾಗಿ ಒಂದೆರಡು ಪಂಕ್ತಿಗಳಲ್ಲೇ ಮುಗಿಸಿಬಿಟ್ಟಿರುತ್ತಾರೆ. ಇದನ್ನು ಓದಿ ನನಗೆ ಮನೋವೇದನೆಯಾಯಿತು. ಅಂತೆಯೇ ಈ ಪುಸ್ತಕವನ್ನು ಹೊರತರಬೇಕೆಂದು ಆಲೋಚಿಸಿ ಕೊನೆಗೆ ನನ್ನ ಸ್ನೇಹಿತರಾದ ಶ್ರೀ ಟಿ. ಕೇಶವಮೂರ್ತಿ ಹಾಗೂ ಶ್ರೀ ಶರ್ಮ ಮೊದಲಾದವರ ಅದರಲ್ಲೂ ಮುಖ್ಯವಾಗಿ ಶ್ರೀ ಗೊರೂರು ಶ್ರೀನಿವಾಸ ಅಯ್ಯಂಗಾರರ ಸಹಯೋಗದಿಂದ ಈ ಪುಸ್ತಕವನ್ನು ಬರೆಸಲಾಯ್ತು. ನನಗೂ ಸಹ ಕೈ ನಿಂತುಹೋಗಿದೆ. ನಾನು ಈ ಸಂದರ್ಭದಲ್ಲಿ ಮಹನೀಯರಾದ ಮೈಸೂರಿನ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ ಶ್ರೀಮಾನ್ ನಿಟ್ಟೂರು ಶ್ರೀನಿವಾಸರಾಯರನ್ನು ಸ್ಮರಿಸಬೇಕಾದುದು ನನ್ನ ಕರ್ತವ್ಯವಾಗಿದೆ. ಅವರನ್ನು ಭೇಟಿಯಾಗಿ ಪುಸ್ತಕದ ವಿಚಾರವನ್ನು ಅರುಹಿದಾಗ ಅದರ ಹಸ್ತಪ್ರತಿಯನ್ನು ಪೂರ್ತಿ ಪರಿಶೀಲಿಸಿ ಅಮೋಘವಾದ ಮುನ್ನುಡಿಯನ್ನು ಬರೆದುಕೊಟ್ಟಿರುತ್ತಾರೆ. ಅದಕ್ಕಾಗಿ ನಾನು ಎಷ್ಟು ಕೃತಜ್ಞನಾಗಿದ್ದರೂ ಸಾಲದು. ಪ್ರಾತಃಸ್ಮರಣೀಯರಾದ ಅವರಿಗೆ ಭಗವಂತನು ದೀರ್ಘಾಯುರಾರೋಗ್ಯವನ್ನೂ ದಯಪಾಲಿಸಲೆಂದು ಪ್ರಾರ್ಥನೆ.

ಈ ಪುಸ್ತಕ ಹೊರತರಲು ನನಗೆ ಧನಸಹಾಯಮಾಡಿದ—ಸರ್ವಶ್ರೀ ಎನ್. ಎಂ. ಚೆನ್ನಬಸಪ್ಪನವರು (301), ಎಚ್. ಆರ್. ವೆಂಕಟರಮಣ ಅಯ್ಯರವರು (101), ಎಸ್. ರಾಮಣ್ಣನವರು (51). ಎಸ್. ಎಂ. ಜೋಶಿಯವರು (51), ನಾಡಿಗೇರರು (25), ಪೂಜ್ಯ ಶ್ರೀ ಲೇ॥ ರಾಜಾರಾಮಯ್ಯಂಗಾರರವರ ಸಂಸಾರದವರು– ಚಿ॥ ಸೌ॥ ಕಸ್ತೂರಿವಲ್ಲಿ (501), ಚಿ॥ ಸೌ॥ ಕುಮುದಮ್ಮನವರು (501), ಪೂಜ್ಯ ಶ್ರೀ ಪಂಕಜಮ್ಮನವರು (ರಾಜಾರಾಮಯ್ಯಂಗಾರವರ ಪತ್ನಿ) (501), ಎಸ್. ಆರ್. ರಾಜಗೋಪಾಲ್ (1001), ಚಿ॥ಸೌ॥ ಕನಕವಲ್ಲಿ (501), ಚಿ॥ಸೌ॥ ವೈದೇಹಿ (501) ಬೊಮ್ಮಯ್ಯನವರು (101), ಲೇ॥ ಸಂಜೀವಶೆಟ್ಟಿ [ಅವರ ಮಗ ಎಸ್. ರಮೇಶ್ ರವರಿಂದ] (501), ಎನ್.ಆರ್. ಮುಕುಂದರಾಜು (501), ಹರಿದಾಸರು (201), ಶ್ರೀನಿವಾಸಯ್ಯಂಗಾರ್‌ರವರು (251), ಜಿ. ಕೆ. ನರಸಿಂಹಾಚಾರ್ಯರು (251), ಎಸ್. ಎನ್. ಶರ್ಮ (101)—ಈ ಎಲ್ಲಾ ಮಹನೀಯರುಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತೇನೆ.

ಡಿ. ರಂಗಶೆಟ್ಟಿ



ನೌಖಾಲಿಯಲ್ಲಿ ಗಾಂಧೀಜೀ